ಮುಸ್ಲಿಮರ

ಒಗ್ಗಟ್ಟು - ಬಿಕ್ಕಟ್ಟು

ಲೇಖಕರು

ಮೌ| ರಿಯಾಝ್ ಅಹ್ಮದ್ ಖಾನ್, ಮುಂಬೈ

ಅನುವಾದಕರು

ಎಂ. ಸಾದುಲ್ಲ

ಪರಮ ದಯಾಮಯನೂ ಕರುಣಾ ನಿಧಿಯೂ ಆದ ಅಲ್ಲಾಹನ ನಾಮದಿಂದ

ಪ್ರಕಾಶಕರ ಮಾತು

ಮುಸ್ಲಿಮ್ ಸಮುದಾಯವು ಇಂದು ತೀವ್ರ ಬಿಕ್ಕಟ್ಟಿಗೆ ಸಿಲುಕಿದೆ. ಸಮುದಾಯದಲ್ಲಿ ಒಗ್ಗಟ್ಟು ಮೂಡಿಸಬೇಕಾದುದು ಅತೀ ಅಗತ್ಯದ ಮತ್ತು ತುರ್ತು ಹೊಣೆಗಾರಿಕೆಯಾಗಿದೆ. ಇಸ್ಲಾಮಿನ ಮೂಲಭೂತ ವಿಶ್ವಾಸ ಶ್ರದ್ಧೆಗಳು, ಆಚಾರ-ಸಂಸ್ಕೃತಿಯೆಲ್ಲ ಒಂದೇ ಆಗಿದ್ದರೂ ಕರ್ಮಶಾಸ್ತ್ರೀಯವಾದ ಆಂಶಿಕ ಭಿನ್ನಾಭಿಪ್ರಾಯಗಳಿಂದಾಗಿ ಇಂದು ಸಮುದಾಯವು ವಿವಿಧ ಬಣಗಳಲ್ಲಿ ಹರಿಹಂಚಿ ಹೋಗಿದೆ. ಸಮುದಾಯದ ಈ ದುರವಸ್ಥೆಯಿಂದ ಹಲುಬುವ ಬುದ್ಧಿಜೀವಿಗಳು ಅದರಿಂದ ಪಾರಾಗುವುದು ಹೇಗೆಂಬುದೇ ತಿಳಿಯದ ಪರಿಸ್ಥಿತಿ ಯುಂಟಾಗಿದೆ.

ಈ ನಿಟ್ಟಿನಲ್ಲಿ ಮುಂಬೈಯ 'ಇದಾರಯೇ ದಅ್‌ವತುಲ್ ಕುರ್‌ಆನ್' ಸಂಸ್ಥೆಯ ಅಧ್ಯಕ್ಷ ಮೌ| ರಿಯಾಝ್ ಅಹ್ಮದ್ ಖಾನ್ ಅವರು 'ಮುಸ್ಲಿಮ್ ಐಕ್ಯ'ದ ಕುರಿತಾಗಿ ಬರೆದ ಲೇಖನ ಮಾಲೆಯೇ 'ಮುಸ್ಲಿಮರ ಒಗ್ಗಟ್ಟು-ಬಿಕ್ಕಟ್ಟು' ಎಂಬ ಈ ಕೃತಿ. ಇದರಲ್ಲಿ ಲೇಖಕರು ಸಮುದಾಯದೊಳಗಿನ ಬಿಕ್ಕಟ್ಟಿಗಿರುವ ಕಾರಣಗಳು, ಒಗ್ಗಟ್ಟಿನ ಅಗತ್ಯ, ಮಹತ್ವ ಮತ್ತು ಸೂತ್ರಗಳು ಎಂಬಿತ್ಯಾದಿ ವಿಷಯಗಳನ್ನು ಸಮುದಾಯದ ನೇತಾರರ ಆತ್ಮಸಾಕ್ಷಿಯನ್ನು ಬಡಿದೆಬ್ಬಿಸುವ ರೀತಿಯಲ್ಲಿ ಮಾರ್ಮಿಕವಾಗಿ ಬರೆದಿದ್ದಾರೆ. ಸಮುದಾಯದಲ್ಲಿ ಐಕ್ಯ ಮೂಡಿಸುವುದೇ ಈ ಕೃತಿ ರಚನೆಯ ಉದ್ದೇಶ.

ಮೌಲಾನಾರ ಈ ಉರ್ದು ಲೇಖನ ಮಾಲೆಯು 'ಇತ್ತಿಹಾದೆ ಮಿಲ್ಲತ್' ಎಂಬ ಹೆಸರಿನಿಂದ ಪುಸ್ತಕ ರೂಪದಲ್ಲಿ ಪ್ರಕಟವಾಗಿದೆ. ಅದರ ಕನ್ನಡಾನುವಾದವೇ ಈ ಕೃತಿ. ಇದರ ಅಧ್ಯಯನದಿಂದ ಸಮುದಾಯದ ಕೆಲವರಿಗಾದರೂ ಜ್ಞಾನೋದಯವಾದರೆ ಮೌಲಾನಾರ ಪ್ರಯತ್ನ ಸಾರ್ಥಕ. ಮುಸ್ಲಿಮ್ ವಿದ್ವಾಂಸರಿಗೂ ಬುದ್ಧಿ ಜೀವಿಗಳಿಗೂ ಜನಸಾಮಾನ್ಯರಿಗೂ ಇದೊಂದು ದಾರಿದೀಪವಾಗಲೆಂದು ಹಾರೈಸುತ್ತೇವೆ.

ಶಾಂತಿ ಪ್ರಕಾಶನ

ಮುನ್ನುಡಿ

ಅಲ್ಲಾಹನು ಈ ಲೋಕದಲ್ಲಿ ಒಳಿತು-ಕೆಡುಕು ಮತ್ತು ಸತ್ಯ-ಅಸತ್ಯವನ್ನು ಒಟ್ಟೊಟ್ಟಿಗೆ ಸೃಷ್ಟಿಸಿದ್ದಾನೆ. ಆದುದರಿಂದ ಸತ್ಯ ಮತ್ತು ಮಿಥ್ಯದ ವಾಹಕರ ಪರಸ್ಪರ ಸಂಘರ್ಷ ಅನಿವಾರ್ಯವಾಗಿದೆ. ಅದರಲ್ಲಿ ಅಚ್ಚರಿ ಪಡಬೇಕಾದುದಿಲ್ಲ. ಮಿಥ್ಯದ ವಾಹಕರು ಸತ್ಯವನ್ನು ಅಳಿಸಲಿಕ್ಕಾಗಿ ಸಂಘಟಿತ ಶ್ರಮ ನಡೆಸದಿರುತ್ತಿದ್ದರೆ ನಮಗೆ ಅಚ್ಚರಿಯಾಗುತ್ತಿತ್ತು. ಅದನ್ನು ಸತ್ಯದ ವಾಹಕರಿಗೆ ಅಲ್ಲಾಹನು ಈ ರೀತಿ ತಿಳಿಯ ಪಡಿಸಿದ್ದಾನೆ-

"ಅವರಂತೂ ನಿಮ್ಮೊಂದಿಗೆ ಕಾದಾಡುತ್ತಲೇ ಇರುವರು. ಅವರಿಂದ ಸಾಧ್ಯವೆನಿಸಿದರೆ ನಿಮ್ಮನ್ನು ನಿಮ್ಮ ಧರ್ಮದಿಂದ ಹಿಂದಿರುಗಿಸುವರು" (ಕುರ್‌ಆನ್, 2: 217)

ಆದರೆ ಅಲ್ಲಾಹನು ಮುಸ್ಲಿಮ್ ಸಮುದಾಯಕ್ಕೆ ಒಗ್ಗಟ್ಟಿನಿಂದಿರಬೇಕೆಂಬ ಆಜ್ಞೆ ನೀಡಿರುವ ಹೊರತಾಗಿಯೂ ಇಂದು ಒಬ್ಬನೇ ದೇವ, ಒಬ್ಬ ಪ್ರವಾದಿ, ಒಂದೇ ಗ್ರಂಥ ಮತ್ತು ಒಂದು ಧರ್ಮವನ್ನು ನಂಬುವ ಅವರು ಆಂಶಿಕ ಮತ್ತು ಕ್ಷುಲ್ಲಕ ವಿಷಯಗಳ ಭಿನ್ನಾಭಿಪ್ರಾಯಗಳಿಂದಾಗಿ ಪರಸ್ಪರ ಹೊಡೆದಾಡಿಕೊಳ್ಳುವುದು ಎಷ್ಟೊಂದು ವಿಚಿತ್ರ! ಪರಸ್ಪರ ಸಹೋದರತೆಯನ್ನು ತನ್ನ ಅನುಗ್ರಹವೆಂದೂ ಅದು ವಿಜಯದ ಸಂಕೇತವೆಂದೂ ಹೇಳಿರುವ ಅಲ್ಲಾಹನು ಒಡಕಿನಿಂದ ಸಮುದಾಯವನ್ನು ತಡೆದಿರುವನು. ಪರಸ್ಪರ ಸಂಘರ್ಷ ಮತ್ತು ಹೋರಾಟವನ್ನು ದೌರ್ಬಲ್ಯ ಮತ್ತು ಹೇಡಿತನದ ಮುನ್ನುಡಿಯೆಂದು ಸಾರಿದ್ದಾನೆ.

"ಅಲ್ಲಾಹ್ ಮತ್ತು ಅವನ ರಸೂಲರನ್ನು ಅನುಸರಿಸಿರಿ. ಪರಸ್ಪರ ಜಗಳಾಡ ಬೇಡಿರಿ. ಅನ್ಯಥಾ ನಿಮ್ಮಲ್ಲಿ ದೌರ್ಬಲ್ಯವುಂಟಾಗುವುದು ಮತ್ತು ನೀವು ಹೇಡಿಗಳಾಗಿ ಬಿಡುವಿರಿ" (ಕುರ್‌ಆನ್, 8: 46)

ಇಸ್ಲಾಮಿನ ಸೇವೆ, ಪ್ರಚಾರ, ಉತ್ಥಾನ ಮತ್ತು ಸಂಸ್ಥಾಪನೆಯ ಕಾರ್ಯವು ಇಡೀ ಸಮುದಾಯದ ಸಾಮೂಹಿಕ ಕರ್ತವ್ಯವಾಗಿದೆಯೇ ಹೊರತು ಅದು ಯಾವುದೇ ಒಂದು ಸಂಘಟನೆಯ ಅಥವಾ ವರ್ಗದ ಗುತ್ತಿಗೆಯಲ್ಲವೆಂದು ಎಲ್ಲ ವಿಚಾರವಂತರಿಗೂ ಚೆನ್ನಾಗಿ ಗೊತ್ತು. ಆದುದರಿಂದ ಈ ಹೊಣೆಗಾರಿಕೆಯ ನಿರ್ವಹಣೆಗೆ ಸಮುದಾಯದಲ್ಲಿ ಅನೇಕ ಬೇರೆ ಬೇರೆ ಸಂಘಟನೆ ಗಳಿರಬಹುದು. ಆದರೆ ಪ್ರತಿಯೊಂದು ಸಂಘಟನೆಯು ತನ್ನ ಮೇರೆ ಹಾಗೂ ಕಾರ್ಯವಿಧಾನದಂತೆ ಕೆಲಸ ಮಾಡುತ್ತಾ ಇನ್ನೊಂದು ಸಂಘಟನೆಯ ಕೆಲಸಗಳಿಗೆ ಮಹತ್ವ ನೀಡಿ ಅದನ್ನು ಗೌರವಿಸಿ ಒಳಿತಿನ ಕಾರ್ಯಗಳಲ್ಲಿ ಪರಸ್ಪರ ಸಹಕರಿಸುವ ಮೂಲಕ ಒಂದು ಸಂಘಟನೆಯ ಕೆಲಸಗಳು ಮತ್ತು ಶಕ್ತಿ ಇತರ ಸಂಘನೆಯ ಕೆಲಸ ಕಾರ್ಯಗಳಿಗೆ ಬಲ ನೀಡುವಂತಾಗಬೇಕು, ಅದನ್ನು ಪರಿಪೂರ್ಣತೆಗೆ ತಲಪಿಸುವಂತಾಗಬೇಕು. ಈ ರೀತಿ ಇಸ್ಲಾಮಿನ ಉತ್ಥಾನ ಮತ್ತು ಪ್ರಚಾರದ ಸಮಾನ ಉದ್ದೇಶಕ್ಕಾಗಿ ಕೆಲಸ ಮಾಡುವ

ಸಂಘಟನೆಗಳು ಬೇರೆ ಬೇರೆಯಾದರೂ ಅವು ಅಲ್ಲಾಹನ ಮೆಚ್ಚುಗೆಯ ಸಂಘಟನೆಯಂತೆ, ಸೀಸ ಎರಕ ಹೊಯ್ದ ಗೋಡೆಯಂತೆ ಪರಸ್ಪರ ಒಂದಾಗ ಬೇಕಾದುದು ಅಗತ್ಯ.

(ಕುರ್‌ಆನ್, 61: 4)

ಆದರೆ ಇಂದು ಇಸ್ಲಾಮಿನ ಉತ್ಥಾನ ಮತ್ತು ಪ್ರಚಾರಕ್ಕಾಗಿ ಕೆಲಸ ಮಾಡುವ ವಿವಿಧ ಸಂಘಟನೆಗಳು ಪರಸ್ಪರ ಸಹಕರಿಸುವುದರ ಬದಲು ಪರಸ್ಪರ ವೈರಿಗಳಾಗುತ್ತಿರುವುದನ್ನು ನೋಡುವಾಗ ಹೃದಯ ಒಡೆಯುತ್ತದೆ. ಪರಸ್ಪರ ದ್ವೇಷ ಮತ್ತು ಶತ್ರುತ್ವ ಸಾಮಾನ್ಯವಾಗಿದೆ. ಇಸ್ಲಾಮಿನ ಪ್ರಚಾರವೆಂಬ ಸಾಮಾನ್ಯ ಐಕ್ಯ ಬಿಂದು ಹೊಂದಿರುವುದರ ಹೊರತಾಗಿಯೂ ಪ್ರತಿಯೊಂದು ಸಂಘಟನೆಯ ದೃಷ್ಟಿ ಆಂಶಿಕ ವಿಷಯಗಳಲ್ಲಿ ಕೇಂದ್ರೀಕೃತವಾಗಿದೆ. ಪ್ರತಿಯೊಂದು ಸಂಘಟನೆಯೂ ತನ್ನ ವಿಚಾರ, ದೃಷ್ಟಿಕೋನ ಮತ್ತು ಕಾರ್ಯ ವಿಧಾನವು ಪವಿತ್ರವೂ ಪಾವನವೂ ಆಗಿದೆಯೆಂದೂ ಇತರ ಸಂಘಟನೆಗಳದ್ದು ತಪ್ಪಾಗಿವೆಯೆಂದೂ ಭಾವಿಸಿಕೊಂಡಿದೆ.

ವಸ್ತುತಃ ಆಂಶಿಕ ಮತ್ತು ಸಂಶೋಧನಾತ್ಮಕ ವಿಷಯಗಳು ಹಾಗೂ ತಾತ್ವಿಕವಲ್ಲದ ವಿಷಯಗಳಲ್ಲಿ ಭಿನ್ನಾಭಿಪ್ರಾಯ ಹೊಂದಿರುವುದು ಅಪಾಯಕಾರಿಯಲ್ಲ ವೆಂಬುದೇ ಸರಿ. ಏಕೆಂದರೆ ಇಂತಹ ಭಿನ್ನಾಭಿಪ್ರಾಯಗಳು ಸಹಾಬಿಗಳ, ತಾಬಈಗಳ ಮತ್ತು ಇಮಾಮರುಗಳ ಕಾಲದಲ್ಲೂ ಇತ್ತು. ಆದರೆ ಅದರಿಂದಾಗಿ ಅವರೊಳಗೆ ಗುಂಪುಗಾರಿಕೆ ಉಂಟಾಗಲಿಲ್ಲ. ವಾಸ್ತವದಲ್ಲಿ ಈ ಆಂಶಿಕ ವಿಷಯಗಳಿಂದಾಗಿ ಸಮುದಾಯದೊಳಗೆ ದ್ವೇಷ-ಹಗೆತನ ವುಂಟಾಗುವುದು ಬಹಳ ಅಪಾಯಕಾರಿಯಾಗಿದೆ. ಅಲ್ಲಾಹನೂ ಆತನ ಪ್ರವಾದಿಯೂ ಅದರಿಂದ ತಡೆದಿದ್ದಾರೆ. (ಕುರ್‌ಆನ್, 3: 105)

ನಮ್ಮ ದೃಷ್ಟಿಯಲ್ಲಿ ಮುಸ್ಲಿಮ್ ಸಮುದಾಯದ ಈ ಅವಸ್ಥೆಗೆ ಕಾರಣ, ಇಸ್ಲಾಮಿನಲ್ಲಿ ಭಿನ್ನಾಭಿಪ್ರಾಯಗಳ ವೈಚಾರಿಕ ಮತ್ತು ನೈತಿಕ ಮಿತಿಮೇರೆಗಳೇನೆಂಬುದು ಮುಸ್ಲಿಮ್ ಜನಸಾಮಾನ್ಯರಿಗೆ ತಿಳಿಯದಿರುವುದೇ ಆಗಿದೆ. ಈ ಕಿರು ಪ್ರಯತ್ನವು ಅದನ್ನೇ ದೂರೀಕರಿಸಲಿಕ್ಕಾಗಿದೆ. ಅದರಲ್ಲಿರುವ ಒಳಿತು ಮತ್ತು ಸತ್ಯವೆಲ್ಲವೂ ಅಲ್ಲಾಹನ ವತಿಯಿಂದಾಗಿದೆ. ಕುಂದುಕೊರತೆಗಳೆಲ್ಲವೂ ನನ್ನದಾಗಿದ್ದು ನಾನೇ ಅದರ ಹೊಣೆಗಾರನಾಗಿದ್ದೇನೆ.

ಓ ಅಲ್ಲಾಹ್! ಅಂಧಕಾರಗಳಲ್ಲಿ ನೇರಮಾರ್ಗದ ಕಡೆಗೆ ಮಾರ್ಗದರ್ಶನ ಮಾಡುವಂತಹ ಜ್ಯೋತಿಯನ್ನು ನಮಗೆ ದಯಪಾಲಿಸು. ನಮಗೆ ಸತ್ಯವನ್ನು ಮಿಥ್ಯದಿಂದ ಬೇರ್ಪಡಿಸಿ ತೋರಿಸುವಂತಹ ಒರೆಗಲ್ಲನ್ನು ದಯಪಾಲಿಸು. ನಮ್ಮನ್ನು ಎಲ್ಲ ರೀತಿಯ ಅತಿರೇಕಗಳಿಂದ ರಕ್ಷಿಸಬಲ್ಲಂತಹ ಸಮತೋಲನವನ್ನು ದಯಪಾಲಿಸು

ಮಿಲ್ಲತ್ ನಗರ್, ಮುಂಬೈ
26 ಜುಲೈ 2000

ರಿಯಾಝ್ ಅಹ್ಮದ್

ಅನುಕ್ರಮಣಿಕೆ

~~~~~~
~~~~~~

ಮುಸ್ಲಿಮ್ ಐಕ್ಯ
ಅಗತ್ಯ, ಮಹತ್ವ ಮತ್ತು ಅದರ ಪರಿಹಾರ

ಅಲ್ಲಾಹನೂ ಆತನ ಪ್ರವಾದಿಯವರೂ(ಸ) ಮುಸ್ಲಿಮ್ ಸಮುದಾಯದಲ್ಲಿ ಐಕ್ಯ, ಪರಸ್ಪರ ಪ್ರೀತಿ, ಸಹೋದರತೆ ಹಾಗೂ ಪರಸ್ಪರ ಸಹಾಯ, ಸಹಕಾರಗಳನ್ನು ಉನ್ನತಿಯ ಸೋಪಾನವೆಂದೂ ಧಾರ್ಮಿಕ ಸಂಕೇತವೆಂದೂ ಹೇಳಿದ್ದಾರೆ. ಸಮುದಾಯದಲ್ಲಿ ಅನೈಕ್ಯ, ಛಿದ್ರತೆ ಮತ್ತು ಭಿನ್ನಾಭಿಪ್ರಾಯಗಳು ಅಲ್ಲಾಹನ ಕೋಪದ ಚಿಹ್ನೆ ಎಂದೂ ಅಧಾರ್ಮಿಕತೆ, ಅವನತಿ ಮತ್ತು ನಿಂದ್ಯತೆಗೆ ಕಾರಣಗಳಾಗಿವೆಯೆಂದೂ ಹೇಳಿದ್ದಾರೆ. ಅಲ್ಲಾಹನು ಹೀಗೆ ಹೇಳುತ್ತಾನೆ,

"ಓ ಸತ್ಯವಿಶ್ವಾಸಿಗಳೇ, ಅಲ್ಲಾಹನನ್ನು ಭಯಪಡಬೇಕಾದ ರೀತಿಯಲ್ಲೇ ಭಯಪಡಿರಿ. ನೀವು ಮುಸ್ಲಿಮರಾಗಿರುವ ಸ್ಥಿತಿಯಲ್ಲಿಯೇ ವಿನಾ ನಿಮಗೆ ಮರಣ ಬಾರದಿರಲಿ. ನೀವೆಲ್ಲರೂ ಒಟ್ಟಾಗಿ ಅಲ್ಲಾಹನ ಪಾಶವನ್ನು ಬಿಗಿಯಾಗಿ ಹಿಡಿಯಿರಿ ಮತ್ತು ಭಿನ್ನಭಿನ್ನರಾಗದಿರಿ. ನಿಮ್ಮ ಮೇಲೆ ಅಲ್ಲಾಹನು ಮಾಡಿದ್ದ ಆ ಉಪಕಾರವನ್ನು ಸ್ಮರಿಸಿರಿ. ನೀವು ಪರಸ್ಪರ ಶತ್ರುಗಳಾಗಿದ್ದಿರಿ. ಅವನು ನಿಮ್ಮ ಹೃದಯಗಳನ್ನು ಜೋಡಿಸಿದನು ಮತ್ತು ಅವನ ಅನುಗ್ರಹದಿಂದ ನೀವು ಪರಸ್ಪರ ಸಹೋದರರಾದಿರಿ. ನೀವು ಅಗ್ನಿ ಕುಂಡದ ಒಂದು ಅಂಚಿನಲ್ಲಿ ನಿಂತಿದ್ದಿರಿ. ಅಲ್ಲಾಹನು ನಿಮ್ಮನ್ನು ಅದರಿಂದ ರಕ್ಷಿಸಿದನು. ಈ ದೃಷ್ಟಾಂತಗಳಿಂದ ನಿಮಗೆ ನಿಮ್ಮ ಶಾಶ್ವತ ವಿಜಯದ ನೇರಮಾರ್ಗ ಕಾಣಬಹುದೆಂದು ನಿರೀಕ್ಷಿಸಿ ಅಲ್ಲಾಹ್ ತನ್ನ ನಿದರ್ಶನಗಳನ್ನು ನಿಮಗೆ ಪ್ರಕಾಶಗೊಳಿಸುತ್ತಾನೆ. ನಿಮ್ಮಲ್ಲಿ ಸತ್ಕರ್ಮದ ಕಡೆಗೆ ಆಹ್ವಾನಿಸುವ, ಒಳಿತನ್ನು ಆಜ್ಞಾಪಿಸುವ ಮತ್ತು ಕೆಡುಕುಗಳಿಂದ ತಡೆಯುವಂತಹ ಜನ ಕೂಟವೊಂದು ಇರಬೇಕಾದುದು ಅತ್ಯಗತ್ಯ. ಈ ಕಾರ್ಯವೆಸಗುವವರೇ ನಿಶ್ಚಯವಾಗಿಯೂ ಕೃತಾರ್ಥರಾಗುವವರು. ಸುವ್ಯಕ್ತ ನಿದರ್ಶನಗಳು ಪ್ರಾಪ್ತಿಯಾದ ಮೇಲೆ ಭಿನ್ನಾಭಿಪ್ರಾಯಗಳಲ್ಲಿ ಸಿಲುಕಿ ವಿಭಿನ್ನ ಪಕ್ಷ ಪಂಗಡಗಳಲ್ಲಿ ಹರಿ ಹಂಚಿ ಹೋದವರಂತೆ ನೀವಾಗಬಾರದು. ಹೀಗೆ ಮಾಡಿದವರು ಘೋರ ಯಾತನೆಯನ್ನನುಭವಿಸುವರು." (ಆಲಿ ಇಮ್ರಾನ್: 102-105)

ಪ್ರಸ್ತುತ ಕುರ್‌ಆನ್ ಸೂಕ್ತಗಳ ಆಧಾರದಲ್ಲಿ ಮುಸ್ಲಿಮರಲ್ಲಿ ಸಂಘಟನೆ ಮತ್ತು ಒಗ್ಗಟ್ಟಿಗೆ ನೀಡಲಾಗಿರುವ ಮಹಾನ್ ಕರೆಯ ಕೆಲವು ಮುಖ್ಯ ಪರಿಚ್ಛೇದಗಳು ಈ ಕೆಳಗಿನಂತಿವೆ:

1. ಸತ್ಯನಿಷೇಧಿಗಳನ್ನು ಅನುಸರಿಸಬಾರದೆಂದೂ ಅವರ ಯೋಜನೆಗಳನ್ನೂ ಗೂಢ ತಂತ್ರಗಳನ್ನೂ ಅರಿತಿರಬೇಕೆಂದೂ ಮುಸ್ಲಿಮರನ್ನು ಎಚ್ಚರಿಸಲಾಗಿದೆ. ಅನ್ಯಥಾ ಅವರು ಷಡ್ಯಂತ್ರಗಳಿಂದ ನಿಮ್ಮನ್ನು ಸತ್ಯವಿಶ್ವಾಸ ಮತ್ತು ಸಹೋದರತೆಯಿಂದ ಸತ್ಯನಿಷೇಧ ಮತ್ತು ಒಡಕಿನ ಕಡೆಗೆ ಒಯ್ಯುವರೆಂದು ಹೇಳಲಾಗಿದೆ.

2. ಎಲ್ಲ ಸತ್ಯವಿಶ್ವಾಸಿಗಳು ಒಂದಾಗಿ ಅಲ್ಲಾಹನ ಹಗ್ಗ ಅರ್ಥಾತ್ ಕುರ್‌ಆನನ್ನು ಬಲವಾಗಿ ಹಿಡಿಯಬೇಕು ಮತ್ತು ಈ ಕಾರ್ಯದಲ್ಲಿ ಭಿನ್ನತೆಗೆ ಸಿಲುಕಬಾರದು. ಇದು ಮುಸ್ಲಿಮರ ಸಂಘಟನೆ ಮತ್ತು ಒಗ್ಗಟ್ಟಿಗೆ ಅತ್ಯಗತ್ಯವಾಗಿದೆ.

3. ಅಜ್ಞಾನ ಕಾಲದಲ್ಲಿ ನಿಮ್ಮೊಳಗಿದ್ದ ಪರಸ್ಪರ ದ್ವೇಷ, ಹಗೆತನ ಮತ್ತು ಕಲಹಗಳು ಅಳಿದು ನೀವು ಪರಸ್ಪರ ಭ್ರಾತೃಪ್ರೇಮದಲ್ಲಿ ಪೋಣಿಸಲ್ಪಟ್ಟಿರುವುದು, ಸತ್ಯವಿಶ್ವಾಸದ ಬಳಿಕ ನಿಮಗೆ ಸಿಕ್ಕಿದ ಅತಿದೊಡ್ಡ ಅನುಗ್ರಹವಾಗಿದೆ. ಆದುದರಿಂದ ಈ ಅನುಗ್ರಹವನ್ನು ಗೌರವಿಸಿ ಅದನ್ನು ರಕ್ಷಿಸಬೇಕಾದುದು ನಿಮ್ಮ ಕರ್ತವ್ಯವೆಂದು ಮುಸ್ಲಿಮರಿಗೆ ನೆನಪಿಸಲಾಗಿದೆ. ಏಕೆಂದರೆ ಅದನ್ನು ಗಳಿಸಲು ಇಡೀ ಭೂಮಿಯ ಸಂಪತ್ತನ್ನು ವ್ಯಯಿಸಿದರೂ ನಿಮ್ಮ ಹೃದಯಗಳು ಹೀಗೆ ಪರಸ್ಪರ ಬೆಸೆಯುತ್ತಿರಲಿಲ್ಲ. ಅದನ್ನು ಅಲ್ಲಾಹನೇ ತನ್ನ ಧರ್ಮ ಮತ್ತು ಕುರ್‌ಆನ್‌ನ ಮೂಲಕ ನಿಮ್ಮ ಮನಸ್ಸುಗಳನ್ನು ಪರಸ್ಪರ ಸಹೋದರ ಸಂಬಂಧದಲ್ಲಿ ಜೋಡಿಸಿದನು.

"ಓ ಪ್ರವಾದಿ! ನೀವು ಭೂಮಿಯಲ್ಲಿರುವ ಸಕಲ ಸಂಪತ್ತನ್ನು ಖರ್ಚು ಮಾಡಿದರೂ ಇವರ ಹೃದಯಗಳನ್ನು ಜೋಡಿಸಲಾಗುತ್ತಿರಲಿಲ್ಲ. ಇವರ ಹೃದಯಗಳನ್ನು ಜೋಡಿಸಿದವನು ಅಲ್ಲಾಹನೇ ಆಗಿದ್ದಾನೆ." (ಅನ್‌ಫಾಲ್: 63)

4. ಜೀವನದ ಒಂದು ಉನ್ನತ ಧ್ಯೇಯ ಮತ್ತು ಸಕಲ ಮಾನವರಿಗೂ ತಲಪಿಸಲಿಕ್ಕಾಗಿ ಒಂದು ಉನ್ನತ ಸಂದೇಶ ಕೈಯಲ್ಲಿರುವಾಗ ಮಾತ್ರ ಲೋಕದಲ್ಲಿ ಜನಸಮುದಾಯಗಳೊಳಗೆ ಐಕ್ಯ ಮತ್ತು ಒಗ್ಗಟ್ಟುಂಟಾಗುವುದು. ಅಲ್ಲಾಹನು ಮುಸ್ಲಿಮ್ ಸಮುದಾಯಕ್ಕೆ ಒಳಿತಿನತ್ತ ಕರೆಕೊಡುವ ಮತ್ತು ಮಾನವರ ಮುಂದೆ ಸತ್ಯದಸಾಕ್ಷ್ಯ ವಹಿಸುವ ಉನ್ನತ ಧ್ಯೇಯವನ್ನು ದಯಪಾಲಿಸಿದ್ದಾನೆ. ವರ್ಗ, ವರ್ಣ, ದೇಶ, ಭಾಷೆ ಮತ್ತು ಕುಲಗೋತ್ರಗಳ ಭಿನ್ನತೆಯ ಹೊರತಾಗಿಯೂ ನೀವು ಒಂದೇ ಸಮುದಾಯವಾಗಿದ್ದೀರಿ. ಸುಮಧ್ಯ ಮತ್ತು ಉತ್ತಮ ಸಮುದಾಯವಾಗಿದ್ದೀರಿ. ನಾನು ನಿಮ್ಮನ್ನು ಸಕಲ ಮಾನವರ ಮುಂದೆ ಮಾತು ಕೃತಿಗಳ ಮೂಲಕ ನನ್ನ ಧರ್ಮದ (ಇಸ್ಲಾಮ್) ಸಾಕ್ಷ್ಯ ವಹಿಸಲಿಕ್ಕಾಗಿ ಆರಿಸಿರುವೆನು. ನೀವು ಪರಸ್ಪರ ಒಗ್ಗಟ್ಟಿನಿಂದ ಒಳಿತಿನ ಆಜ್ಞೆ ನೀಡಬೇಕು ಮತ್ತು ಕೆಡುಕಿನಿಂದ ತಡೆಯಬೇಕು. ಇದು ನಿಮ್ಮ ಘನ ಕರ್ತವ್ಯವಾಗಿದೆ ಎಂದು ಅಲ್ಲಾಹನು ಒತ್ತಿ ಹೇಳಿದ್ದಾನೆ.

"ಈ ನಿಮ್ಮ ಸಮುದಾಯವು ವಾಸ್ತವದಲ್ಲಿ ಒಂದೇ ಸಮುದಾಯವಾಗಿದೆ ಮತ್ತು ನಾನು ನಿಮ್ಮ ಪ್ರಭುವಾಗಿದ್ದೇನೆ. ಆದುದರಿಂದ ನೀವು ನನ್ನ ದಾಸ್ಯ- ಆರಾಧನೆ ಮಾಡಿರಿ."

(ಅಲ್ ಅಂಬಿಯಾ: 92)

"ಮತ್ತು ಇದೇ ರೀತಿಯಲ್ಲಿ ನೀವು ಜಗತ್ತಿನ ಮಾನವರ ಬಗ್ಗೆ ಸಾಕ್ಷಿಯಾಗಿರಲಿಕ್ಕೂ ಸಂದೇಶವಾಹಕರು ನಿಮ್ಮ ಬಗ್ಗೆ ಸಾಕ್ಷಿಯಾಗಿರಲಿಕ್ಕೂ ನಾವು ನಿಮ್ಮನ್ನು ಒಂದು ಸುಮಧ್ಯ ಸಮುದಾಯವನ್ನಾಗಿ ಮಾಡಿದ್ದೇವೆ." (ಅಲ್ ಬಕರ: 143)

ಮಾನವರ ಸನ್ಮಾರ್ಗದರ್ಶನ ಮತ್ತು ಸಂಸ್ಕಾರಗಳಿಗಾಗಿ ನಿಯೋಗಿಸಲಾಗಿರುವ ಅತ್ಯುತ್ತಮ ಜನಕೂಟವು ನಿಮ್ಮದಾಗಿರುತ್ತದೆ. ನೀವು ಒಳಿತಿನ ಆದೇಶವನ್ನೀಯುತ್ತೀರಿ, ಪಾಪ ಕಾರ್ಯಗಳಿಂದ ತಡೆಯುತ್ತೀರಿ ಮತ್ತು ಅಲ್ಲಾಹನ ಮೇಲೆ ವಿಶ್ವಾಸವಿಡುತ್ತೀರಿ. (ಆಲಿ ಇಮ್ರಾನ್: 110)

ಜೊತೆಗೆ ಪವಿತ್ರ ಕುರ್‌ಆನ್, ಮುಸ್ಲಿಮರ ಸಂಘಟನೆಗಳ ಮಧ್ಯೆ ಬಲಿಷ್ಠವಾದ ಸಹೋದರತೆಯ ಸಂಬಂಧವು ಸತ್ಯವಿಶ್ವಾಸದಿಂದಾಗಿ ಉಂಟಾಗುವ ಪವಿತ್ರ ಸಂಬಂಧವಾಗಿದೆಯೆಂದು ಸಾರುತ್ತದೆ. ಅದನ್ನು ಕುರ್‌ಆನ್ ಈ ರೀತಿ ವಿವರಿಸುತ್ತದೆ-

"ಸತ್ಯವಿಶ್ವಾಸಿಗಳಂತು ಪರಸ್ಪರ ಸಹೋದರರು. ಆದುದರಿಂದ ನಿಮ್ಮ ಸಹೋದರರ ನಡುವೆ ಸಂಬಂಧಗಳನ್ನು ಸರಿಪಡಿಸಿರಿ ಮತ್ತು ಅಲ್ಲಾಹನನ್ನು ಭಯಪಡಿರಿ ನಿಮ್ಮ ಮೇಲೆ ಕೃಪೆತೋರಲಾಗುವುದೆಂದು ನಿರೀಕ್ಷಿಸ ಬಹುದು." (ಅಲ್ ಹುಜುರಾತ್: 10)

ಈ ಸೂಕ್ತದ ನಂತರ ಪರಿಹಾಸ್ಯ, ಮೂದಲಿಕೆ, ಅಡ್ಡಹೆಸರಿನಿಂದ ಕರೆಯುವುದು, ಕೆಟ್ಟಗುಮಾನಿ, ದೋಷಾನ್ವೇಷಣೆ ಹಾಗೂ ಪರದೂಷಣೆಗಳಂತಹ ದೋಷಗಳಿಂದ ವಿಶ್ವಾಸವನ್ನು ರಕ್ಷಿಸುವಂತಹ ನೈತಿಕ ಮೌಲ್ಯಗಳನ್ನೂ ಶಿಷ್ಟಾಚಾರಗಳನ್ನೂ ಕಲಿಸುವಂತಹ ಸೂಕ್ತಗಳಿವೆ.

"ಸತ್ಯ ವಿಶ್ವಾಸಿಗಳೇ, ಪುರುಷರು ಇತರ ಪುರುಷರನ್ನು ಪರಿಹಾಸ್ಯ ಮಾಡಬಾರದು. ಅವರು ಇವರಿಗಿಂತ ಉತ್ತಮರಿರಲೂ ಬಹುದು ಮತ್ತು ಸ್ತ್ರೀಯರೂ ಇತರ ಸ್ತ್ರೀಯರನ್ನು ಪರಿಹಾಸ್ಯ ಮಾಡಬಾರದು- ಅವರು ಇವರಿಗಿಂತ ಉತ್ತಮರಿರಲೂ ಬಹುದು. ಪರಸ್ಪರರನ್ನು ನಿಂದಿಸಬೇಡಿರಿ ಮತ್ತು ಒಬ್ಬರು ಇನ್ನೊಬ್ಬರನ್ನು ಅಡ್ಡ ಹೆಸರಿನಿಂದ ಕರೆಯಬೇಡಿರಿ. ಸತ್ಯವಿಶ್ವಾಸ ಸ್ವೀಕರಿಸಿದ ಬಳಿಕ ಕರ್ಮ ಭ್ರಷ್ಟತೆಯಲ್ಲಿ ಹೆಸರು ಗಳಿಸುವುದು ಬಹಳ ಕೆಟ್ಟದು. ಈ ನಿಲುಮೆಯನ್ನು ತೊರೆಯದವರು ಅಕ್ರಮಿಗಳಾಗಿರುವರು. ಸತ್ಯವಿಶ್ವಾಸಿಗಳೇ! ಹೆಚ್ಚಿನ ಗುಮಾನಿಗಳಿಂದ ದೂರವಿರಿ. ನಿಶ್ಚಯವಾಗಿಯೂ ಕೆಲವು ಗುಮಾನಿಗಳು ಪಾಪವಾಗಿವೆ. ದೋಷಾನ್ವೇಷಣೆ ಮಾಡದಿರಿ. ನಿಮ್ಮಲ್ಲಿ ಯಾರ ಬಗ್ಗೆಯೂ ಪರದೂಷಣೆ ಮಾಡಬಾರದು ನಿಮ್ಮಲ್ಲಿ ಯಾರಾದರೂ ತನ್ನ ಮೃತ ಸಹೋದರನ ಮಾಂಸ ತಿನ್ನುವುದನ್ನು ಇಷ್ಟಪಡುವನೆ? ನೀವು ಸ್ವತಃ ಇದನ್ನು ಅಸಹ್ಯ ಪಡುತ್ತೀರಿ. ಅಲ್ಲಾಹನನ್ನು ಭಯಪಡಿರಿ. ಅಲ್ಲಾಹನು ಪಶ್ಚಾತ್ತಾಪ ಸ್ವೀಕರಿಸುವವನೂ ಕರುಣಾನಿಧಿಯೂ ಆಗಿರುತ್ತಾನೆ." (ಅಲ್ ಹುಜುರಾತ್: 11-12)

ಮುಸ್ಲಿಮ್ ಸಮುದಾಯದಲ್ಲಿ ಒಡಕು ಮತ್ತು ಭಿನ್ನಾಭಿಪ್ರಾಯಗಳಾಗುವುದರ ಕುರಿತು ಕುರ್‌ಆನ್ ಉಗ್ರವಾಗಿ ಎಚ್ಚರಿಸಿದೆ. ಈ ಅಪರಾಧ ಮಾಡುವವರಿಗೆ ಕಠಿಣ ಶಿಕ್ಷೆಯಿದೆಯೆಂದು ಸಾರಿದೆ-

"ಪ್ರವಾದಿವರ್ಯರೆ ತಮ್ಮ ಧರ್ಮವನ್ನು ಭಿನ್ನಭಿನ್ನಗೊಳಿಸಿ ಗುಂಪು ಗುಂಪುಗಳಾಗಿ ಬಿಟ್ಟವರ ಜೊತೆ ನಿಮಗೆ ಯಾವ ಸಂಬಂಧವೂ ಇಲ್ಲ." (ಅಲ್ ಅನ್‌ಆಮ್: 159)

ಪ್ರವಾದಿ(ಸ) ಅವರು ಆಯಿಶಾರೊಂದಿಗೆ ಈ ಸೂಕ್ತದಲ್ಲಿ ಹೇಳಿರುವ ವ್ಯಕ್ತಿಗಳು ಯಾರು? ಎಂದು ಕೇಳಿದ ನಂತರ ತಾನೇ ಅದಕ್ಕೆ ಹೀಗೆ ಉತ್ತರಿಸಿದರು- "ಅದು ಸಮುದಾಯದೊಳಗೆ ಒಡಕುಂಟು ಮಾಡುವ ಪಥಭ್ರಷ್ಟರು, ನವೀನಾಚಾರಗಳನ್ನು ಕೈಗೊಂಡವರು ಮತ್ತು ತಮ್ಮ ದೇಹೇಚ್ಛೆಯ ದಾಸರಾಗಿದ್ದಾರೆ. ಆಯಿಶಾ! ನನಗೂ ಅವರಿಗೂ ಸಂಬಂಧವಿಲ್ಲ. ಅವರು ನನ್ನಿಂದ ದೂರವಾದವರೆಂದು ನಾನು ಘೋಷಿಸುತ್ತೇನೆ."

(ಅಲ್ ಇಲ್‌ತಿಸಾಮ್, ಭಾಗ-1, ಪುಟ: 38)

ಅಲ್ಲಾಮಾ ಇಬ್ನು ಕಸೀರ್ ಹೇಳುತ್ತಾರೆ- ಈ ಸೂಕ್ತದ ಅಭಿಸಂಬೋಧಿತರು ಇಸ್ಲಾಮ್ ಧರ್ಮದಲ್ಲಿ ಒಡಕು ಮತ್ತು ಭಿನ್ನಾಭಿಪ್ರಾಯಗಳನ್ನುಂಟು ಮಾಡುವ ಪ್ರತಿಯೊಬ್ಬ ವ್ಯಕ್ತಿ ಅಥವಾ ವರ್ಗವೂ ಆಗಿದ್ದಾರೆ. ಏಕೆಂದರೆ ಅಲ್ಲಾಹನು ತನ್ನ ಪ್ರವಾದಿಯನ್ನು ಸನ್ಮಾರ್ಗ ಮತ್ತು ಸತ್ಯಧರ್ಮದೊಂದಿಗೆ ಅದನ್ನು ಇತರೆಲ್ಲ ಮತ ಧರ್ಮಗಳ ಮೇಲೆ ಪ್ರಬಲಗೊಳಿಸಲಿಕ್ಕಾಗಿ

ಕಳಿಸಿದ್ದಾನೆ. ಈ ಧರ್ಮಕ್ಕೆ ಒಂದು ವಿಧಾನವಿದೆ. ಅದರಲ್ಲಿ ಯಾವುದೇ ಒಡಕು ಅಥವಾ ಭಿನ್ನಭಿಪ್ರಾಯವಿಲ್ಲ. ಯಾರು ಈ ಧರ್ಮವಿಧಾನದಲ್ಲಿ ಭಿನ್ನಾಭಿಪ್ರಾಯ ಉಂಟು ಮಾಡುವರೋ ಅವರು ಒಡಕಿಗೆ ಬಲಿಯಾದರು. ಈ ಸೂಕ್ತಕ್ಕೆ ಸಮಾನವಾದೊಂದು ಸೂಕ್ತ ಅಶ್ಶೂರಾ ಅಧ್ಯಾಯದಲ್ಲೂ ಇದೆ- "ಧರ್ಮ ಸಂಸ್ಥಾಪನೆ ಮಾಡಿರಿ, ಅದರಲ್ಲಿ ಭಿನ್ನರಾಗದಿರಿ."

(13ನೇ ಸೂಕ್ತ)

ಗ್ರಂಥದವರು (ಕ್ರೈಸ್ತರು ಮತ್ತು ಯಹೂದಿಯರು) ಧರ್ಮದಲ್ಲಿ ಒಡಕು ಮತ್ತು ಭಿನ್ನಾಭಿಪ್ರಾಯಗಳನ್ನುಂಟು ಮಾಡಿದರು. ಕುರ್‌ಆನ್‌ನ ಅನೇಕ ಕಡೆಗಳಲ್ಲಿ ಅವರ ಈ ಕೃತ್ಯವನ್ನು ಖಂಡಿಸಲಾಗಿದೆ. ಕುರ್‌ಆನ್‌ನ ಪ್ರಸ್ತುತ ಸೂಕ್ತ (6: 159) ಕೂಡಾ ಯಹೂದಿ-ಕ್ರೈಸ್ತರ ಬಗ್ಗೆಯೇ ಅವತೀರ್ಣಗೊಂಡಿತೆಂದು ಇಬ್ನು ಅಬ್ಬಾಸ್(ರ) ಹೇಳುತ್ತಾರೆ.

ಪ್ರವಾದಿ ವಚನಗಳಲ್ಲಿ - ಸಮುದಾಯದ ಒಡಕು ಮತ್ತು ಭಿನ್ನಾಭಿಪ್ರಾಯಗಳ ಖಂಡನೆ

ಯಾವ ರೀತಿ ಕುರ್‌ಆನ್‌ನಲ್ಲಿ ಮುಸ್ಲಿಮ್ ಸಮುದಾಯಕ್ಕೆ ಒಗ್ಗಟ್ಟಿನ ಆಜ್ಞೆ ನೀಡಲಾಗಿದೆಯೋ ಮತ್ತು ಒಡಕು ಭಿನ್ನಾಭಿಪ್ರಾಯಗಳಿಂದ ದೂರವಿರುವಂತೆ ಎಚ್ಚರಿಸಲಾಗಿದೆಯೋ ಅದೇ ಧಾಟಿಯಲ್ಲಿ ಪ್ರವಾದಿವಚನಗಳಲ್ಲೂ ಸಂಘಟನೆ, ಒಗ್ಗಟ್ಟು, ಪ್ರೀತಿ ಮತ್ತು ಭ್ರಾತೃತ್ವದ ಆಜ್ಞೆ ನೀಡಲಾಗಿದೆ. ಕೋಪ, ದ್ವೇಷ ಮತ್ತು ಹಗೆತನ ಹಾಗೂ ಪರಸ್ಪರ ಒಡಕಿಗೆ ಕಾರಣವಾಗುವಂತಹ ಕೃತ್ಯಗಳಿಂದ ದೂರವುಳಿಯುವಂತೆ ಆಜ್ಞಾಪಿಸಲಾಗಿದೆ. ಪ್ರವಾದಿ(ಸ) ಹೀಗೆ ಹೇಳಿದರು-

'ನೀವು ಒಡಕಿನಿಂದ ದೂರವಿದ್ದು ಸಂಘಟನೆಗೆ ಅಂಟಿ ಕೊಂಡಿರಬೇಕಾದುದು ನಿಮ್ಮ ಮೇಲೆ ಕಡ್ಡಾಯ. ಏಕೆಂದರೆ ಒಂಟಿ ಮನುಷ್ಯನ ಜೊತೆ ಸೈತಾನನಿರುತ್ತಾನೆ. ಇಬ್ಬರಿದ್ದರೆ ಅವನು ಓಡಿ ಹೋಗಿತ್ತಾನೆ. ಆದುದರಿಂದ ಸ್ವರ್ಗದ ಪರಿಮಳ ಮತ್ತು ಪ್ರಕಾಶವನ್ನು ಯಾರು ಬಯಸುತ್ತಾರೋ ಅವರು ಕಡ್ಡಾಯವಾಗಿ ಸಂಘಟನೆಯೊಂದಿಗೆ ಅಂಟಿಕೊಂಡಿರಬೇಕು.'

(ತಿರ್ಮಿದಿ)

ಪ್ರವಾದಿ(ಸ) ಹೇಳಿದರು- "ಅಲ್ಲಾಹನು ನನ್ನ ಸಮುದಾಯವನ್ನು ಅಥವಾ ಮುಹಮ್ಮದ್‌ರ ಸಮುದಾಯವನ್ನು ಪಥಭ್ರಷ್ಟತೆಯಲ್ಲಿ ಒಂದುಗೂಡಿಸಲಾರನು. ಅಲ್ಲಾಹನ ಕೈಯು (ಅರ್ಥಾತ್ ಬೆಂಬಲ) ಸಂಘಟನೆಯೊಂದಿಗಿದೆ. ಸಂಘಟನೆಯಿಂದ ದೂರವಾದವನು ನರಕಕ್ಕೆ ಹೋದನು."

(ತಿರ್ಮಿದಿ)

"ಒಬ್ಬ ಮುಸ್ಲಿಮನು ಇನ್ನೊಬ್ಬ ಮುಸ್ಲಿಮನ ಸಹೋದರನಾಗಿದ್ದಾನೆ. ತನ್ನ ಸಹೋದರನ ಅಗತ್ಯವನ್ನು ಪೂರೈಸುವುದರಲ್ಲಿ ಮಗ್ನನಾಗಿರುವವನ ಅಗತ್ಯವನ್ನು ಅಲ್ಲಾಹನು ಪೂರೈಸುವನು."

(ಮುತ್ತಫಕುನ್ ಅಲೈಹಿ, ವರದಿ: ಇಬ್ನು ಉಮರ್)

"ನಿಮ್ಮ ಪೈಕಿ ಯಾರೂ ತನಗಾಗಿ ಬಯಸುವುದನ್ನೇ ತನ್ನ ಸಹೋದರನಿಗೂ ಬಯಸುವ ತನಕ ಸತ್ಯವಿಶ್ವಾಸಿಯಾಗಲಾರ." (ಬುಖಾರಿ, ಮುಸ್ಲಿಮ್, ವರದಿ: ಹ. ಅನಸ್)

"ನನ್ನ ಪ್ರಾಣ ಯಾರ ಕೈಯಲ್ಲಿದೆಯೋ ಆ ದೇವನಾಣೆ! ನೀವು ಸತ್ಯವಿಶ್ವಾಸದ ಹೊರತು ಸ್ವರ್ಗ ಪ್ರವೇಶಿಸಲಾರಿರಿ. ಪರಸ್ಪರ ಪ್ರೀತಿಸುವ ತನಕ ನೀವು ಸತ್ಯವಿಶ್ವಾಸಿಗಳಾಗಲಾರಿರಿ. ನೀವು ಪರಸ್ಪರ ಪ್ರೀತಿಸುವಂತಹ ಒಂದು ಕ್ರಿಯೆಯನ್ನು ನಾನು ನಿಮಗೆ ತೋರಿಸಿಕೊಡಲೇ? ಪರಸ್ಪರ ಸಲಾಮ್ ಹೇಳುವುದನ್ನು ರೂಢಿಸಿಕೊಳ್ಳಿ." (ಮುಸ್ಲಿಮ್: ಅಬೂ ಹುರೈರಾ)

"ನೀವು ಪರಸ್ಪರ ಕೋಪಿಸಿಕೊಳ್ಳದಿರಿ. ಮತ್ಸರ ತೋರದಿರಿ. ಪರಸ್ಪರ ಹಗೆತನವಿರಿಸಿಕೊಳ್ಳದಿರಿ. ಅಲ್ಲಾಹನ ದಾಸರೆ! ಪರಸ್ಪರ ಸಹೋದರರಾಗಿ ಬಾಳಿರಿ. ಯಾವ ಮುಸ್ಲಿಮನಿಗೂ ತನ್ನ ಸಹೋದರನೊಂದಿಗೆ ಮೂರು ದಿನಗಳಿಗಿಂತ ಅಧಿಕ ಕಾಲ ಮಾತು ನಿಲ್ಲಿಸುವುದು ಧರ್ಮ ಸಮ್ಮತವಲ್ಲ." (ಮುತ್ತಫಕುನ್ ಅಲೈಹಿ, ವರದಿ: ಅನಸ್)

"ಒಬ್ಬ ವ್ಯಕ್ತಿಯು ಒಂದು ವರ್ಷದ ತನಕ ತನ್ನ ಸಹೋದರನೊಂದಿಗೆ ಸಂಬಂಧ ಕಡಿದಿದ್ದರೆ ಅವನು ಅವನ ರಕ್ತ ಹರಿಸಿದನು." (ಅಬೂ ದಾವೂದ್)

"ಅರೇಬಿಯಾದ ಜನರು ಇನ್ನು ತನ್ನನ್ನು ಪೂಜಿಸುವರೆಂಬ ಬಗ್ಗೆ ಸೈತಾನನು ಹತಾಶನಾಗಿದ್ದಾನೆ. ಆದರೆ ತಾನು ಮುಸ್ಲಿಮರಲ್ಲಿ ಒಬ್ಬರ ವಿರುದ್ಧ ಇನ್ನೊಬ್ಬರನ್ನು ಎತ್ತಿ ಕಟ್ಟಿ ಅವರನ್ನು ಹೊಡೆದಾಡಿಸುವೆನೆಂಬ ನಿರೀಕ್ಷೆಯನ್ನು ಅವನು ಕೈ ಬಿಟ್ಟಿಲ್ಲ." (ಮುಸ್ಲಿಮ್: ಇಬ್ನು ಮಾಜಃ)

ಒಡಕು ಅರೋಚಕ ಕೃತ್ಯವಾಗಿದೆ

ಪ್ರವಾದಿವರ್ಯರು(ಸ) ಒಡಕು ಮತ್ತು ಭಿನ್ನಾಭಿಪ್ರಾಯವುಂಟಾಗುವ ಭೀತಿಯಿಂದ ಸಹಾಬಿಗಳು ಒಟ್ಟಿಗೆ ಕುಳಿತು ಕುರ್‌ಆನ್ ಪಠಿಸುವುದರಿಂದ ತಡೆದಿರುವರು. ಏಕೆಂದರೆ ಕುರ್‌ಆನ್ ಪಠನದ ಶೈಲಿಯಲ್ಲಿ ಅವರ ಮಧ್ಯೆ ಭಿನ್ನಾಭಿಪ್ರಾಯ ತಲೆದೋರಿತು. ಇದರಿಂದ ಇಸ್ಲಾಮಿನಲ್ಲಿ ಒಡಕು- ಭಿನ್ನಾಭಿಪ್ರಾಯಗಳು ಎಷ್ಟು ಖಂಡನೀಯವೆಂದು ಅಂದಾಜಿಸಬಹುದು. ಈ ಭಿನ್ನಾಭಿಪ್ರಾಯಗಳು ಸಮುದಾಯದೊಳಗೆ ಒಡಕಿಗೆ ಕಾರಣವಾಗಬಾರದೆಂಬ ಉದ್ದೇಶದಿಂದ ಸಹಾಬಿಗಳಿಗೆ ತಂತಮ್ಮ ಶೈಲಿಯಲ್ಲಿ ಕುರ್‌ಆನ್ ಪಠಿಸುವ ಅನುಮತಿಯನ್ನು ಪ್ರವಾದಿ(ಸ) ನೀಡಿದ್ದರು.

ಪ್ರವಾದಿ(ಸ) ಹೇಳಿದರು: "ನಿಮ್ಮ ಮನಸ್ಸುಗಳು ಕುರ್‌ಆನ್ ಪಾರಾಯಣದ ಶೈಲಿ ಮತ್ತು ಅರ್ಥ ಗ್ರಹಿಕೆಯಲ್ಲಿ ಪರಸ್ಪರ ಸಾಮ್ಯತೆ ಮತ್ತು ಒಮ್ಮತವಿರುವ ವರೆಗೆ ನೀವು ಪರಸ್ಪರ ಸೇರಿ ಕುರ್‌ಆನ್ ಪಠಿಸಿ ಗ್ರಹಿಸಿರಿ. ಆದರೆ ನಿಮ್ಮ ಮಧ್ಯೆ ಪಾರಾಯಣದಲ್ಲಿ (ಶೈಲಿ ಮತ್ತು ಅರ್ಥಗ್ರಹಿಕೆ) ಭಿನ್ನಾಭಿಪ್ರಾಯ ತಲೆದೋರಿದರೆ, ಈ ಭಿನ್ನಾಭಿಪ್ರಾಯದಿಂದಾಗಿ ನೀವು ಕೆಡುಕಿಗೆ ಮತ್ತು ಒಡಕಿಗೆ ಒಳಗಾಗದಂತಾಗಲು, ಕೂಡಲೇ ಅದನ್ನು ಬಿಟ್ಟು ಎದ್ದೇಳಿರಿ."

ಅಮ್ರ್ ಬಿನ್ ಹಿಶಾಮ್, ಅಬ್ದುಲ್ಲಾ ಬಿನ್ ಮಸ್‌ಊದ್ ಮತ್ತಿತರ ಸಹಾಬಿಗಳ ನಡುವೆಯೂ ಪಾರಾಯಣದ ಶೈಲಿಯಲ್ಲಿ ವ್ಯತ್ಯಾಸಗಳಿದ್ದುವು. ಆದರೆ ಪ್ರವಾದಿ(ಸ) ಎಲ್ಲರನ್ನೂ ಪ್ರಶಂಸಿಸಿದ್ದಾರೆ.

ಕುರ್‌ಆನ್‌ನ ಅರ್ಥಗ್ರಹಿಕೆಯ ಬಗ್ಗೆ ಹೇಳುವುದಾದರೆ, ಪ್ರವಾದಿವರ್ಯರು 'ಮುಹ್ಕಮಾತ್'

ಸೂಕ್ತಗಳ ಬಗ್ಗೆ ವಿಚಾರ-ಮಂಥನ ನಡೆಸಲು ಮತ್ತು ಅವುಗಳನ್ನು ಭದ್ರವಾಗಿ ಹಿಡಿಯಲು ಆದೇಶಿಸಿರುವರು. ಅಲ್ಲಾಹನು ಉಮ್ಮುಲ್ ಕಿತಾಬ್ (ಗ್ರಂಥದ ಜನನಿ) ಎಂದು ಕರೆದಿರುವ ಜನರನ್ನು ಒಗ್ಗಟ್ಟಿಗೆ ಪ್ರೇರೇಪಿಸುವಂತಹ ಕುರ್‌ಆನ್‌ನ ಮೂಲಾಧಾರವಾಗಿರುವ ಸೂಕ್ತಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆಯೂ ಆದೇಶಿಸಿದ್ದಾರೆ. ಅದೇ ರೀತಿ 'ಮುತಶಾಬಿಹಾತ್' ಸೂಕ್ತಗಳ ಚರ್ಚೆ-ಶೋಧನೆ ನಡೆಸಬಾರದೆಂದು ಪ್ರವಾದಿ(ಸ) ಆದೇಶಿಸಿದ್ದಾರೆ. ಜನರು ಕುರ್‌ಆನ್‌ನ ಮುತಶಾಬಿಹಾತ್ ಸೂಕ್ತಗಳನ್ನು ಅನುಸರಿಸುವುದನ್ನು ಕಂಡರೆ ಅವರಿಂದ ದೂರವಿರಿ. (ಮುತ್ತಫಕುನ್ ಅಲೈಹಿ) ಕುರ್‌ಆನ್‌ನಲ್ಲಿ ಐದು ವಿಧದ ಸೂಕ್ತಗಳಿವೆ. ಹಲಾಲ್, ಹರಾಮ್, ಮುಹ್ಕಮ್, ಮುತಶಾಬಿಹ್ ಮತ್ತು ಅಮ್ಸಾಲ್.* ಆದುದರಿಂದ ನೀವು ಹಲಾಲನ್ನು ಹಲಾಲೆಂದು ಪರಿಗಣಿಸಿರಿ, ಹರಾಮನ್ನು ಹರಾಮೆಂದು ಒಪ್ಪಿಕೊಳ್ಳಿರಿ, ಮುಹ್ಕಮ್‌ನಂತೆ ನಡೆಯಿರಿ. ಮುತಶಾಬಿಹ್‌ನ ಮೇಲೆ ನಂಬಿಕೆಯಿಡಿರಿ ಮತ್ತು ಅಮ್ಸಾಲ್‌ಗಳಿಂದ ಪಾಠ ಕಲಿಯಿರಿ.

ಸಮುದಾಯದಲ್ಲಿ ಒಗ್ಗಟ್ಟಿರಬೇಕೆಂದು ಪ್ರವಾದಿ(ಸ) ಒತ್ತಿ ಹೇಳಿರುವರು. ಏಕೆಂದರೆ ಒಗ್ಗಟ್ಟು ಶಕ್ತಿಯ ಸಂಕೇತವಾದರೆ, ಒಡಕು ದೌರ್ಬಲ್ಯದ ಸೂಚನೆಯಾಗಿದೆ. ಒಗ್ಗಟ್ಟಿನಿಂದ ದುರ್ಬಲ ಜನಾಂಗವೂ ಬಲಿಷ್ಠವಾಗುತ್ತದೆ. ಶಕ್ತ ಜನಾಂಗವು ಇನ್ನಷ್ಟು ಪ್ರಬಲವಾಗುತ್ತದೆ. ಈ ರೀತಿ ಅದು ವಿನಾಶದಿಂದ ಪಾರಾಗುತ್ತದೆ. ಒಬ್ಬೊಬ್ಬರಾದರೆ ಬೀಳಬಲ್ಲರು, ದಾರಿ ತಪ್ಪಬಲ್ಲರು, ಅಳಿದು ಹೋಗಬಲ್ಲರು ಹಾಗೂ ಮಾನವ ಮತ್ತು ಯಕ್ಷ ಸೈತಾನರು ಅವರನ್ನು ಸುಲಭದಲ್ಲಿ ಕಬಳಿಸಬಲ್ಲರು. ಆದರೆ ಸಂಘಟನೆಯಲ್ಲಿ ಸೇರಿ ಅದರ ಆಶ್ರಯ ಪಡೆದಿರುವವನು ಮಂದೆಯ ಮಧ್ಯದಲ್ಲಿರುವ ಕುರಿಯಂತಾಗುತ್ತಾನೆ. ಅದನ್ನು ತೋಳವು ಸುಲಭದಲ್ಲಿ ಆಕ್ರಮಿಸುವಂತಿಲ್ಲ. ಆದರೆ ಮಂದೆಯನ್ನು ಬಿಟ್ಟು ದೂರ ಹೋಗಿರುವ ಕುರಿಯನ್ನು ತೋಳವು ಸುಲಭದಲ್ಲಿ ಹಿಡಿಯಬಲ್ಲುದು. ಈ ಕೆಳಗಿನ ಪ್ರವಾದಿವಚನಗಳು ಅದೇ ಒಗ್ಗಟ್ಟಿಗೆ ಕರೆ ನೀಡುವವುಗಳಾಗಿವೆ.

ವಾಸ್ತವದಲ್ಲಿ ಸೈತಾನನು ಮಾನವನ ಮಟ್ಟಿಗೆ ತೋಳದಂತಿರುತ್ತಾನೆ. ತೋಳವು ಒಂಟಿ ಕುರಿಯನ್ನು ಸುಲಭದಲ್ಲಿ ತಿನ್ನಬಹುದು. (ತಿರ್ಮಿದಿ)

ಸಂಘಟಿತರಾಗಿರಬೇಕಾದುದು ನಿಮ್ಮ ಮೇಲೆ ಕಡ್ಡಾಯ. ಏಕೆಂದರೆ ಒಂಟಿ ಮನುಷ್ಯನೊಂದಿಗೆ ಸೈತಾನನಿರುತ್ತಾನೆ. ಇಬ್ಬರಾದರೆ ಆತ ಅವರಿಂದ ದೂರ ಓಡುತ್ತಾನೆ. (ತಿರ್ಮಿದಿ)

ಒಬ್ಬ ಸತ್ಯವಿಶ್ವಾಸಿಯು ಇನ್ನೊಬ್ಬನ ಮಟ್ಟಿಗೆ ಕಟ್ಟಡದಂತಿದ್ದಾನೆ. ಅದರ ಒಂದು ಭಾಗವು ಇನ್ನೊಂದು ಭಾಗಕ್ಕೆ ಶಕ್ತಿ ನೀಡುತ್ತದೆ. ಪ್ರವಾದಿವರ್ಯರು ತಮ್ಮ ಎರಡೂ ಕೈಗಳ ಬೆರಳುಗಳನ್ನು ಪರಸ್ಪರ ಪೋಣಿಸಿ ತೋರಿಸಿದರು. (ಮುತ್ತಫಕುನ್ ಅಲೈಹಿ)

---

*ಹಲಾಲ್= ಧರ್ಮಬದ್ಧ, ಹರಾಮ್= ನಿಷಿದ್ಧ, ಮುಹ್ಕಮ್= ಸ್ಪಷ್ಟೋಕ್ತಿ, ಮುತಶಾಬಿಹ್= ಸ್ಪಷ್ಟವಾಗಿ ಗ್ರಹಿಸಲಾಗದ, ಅಮ್ಸಾಲ್= ಉಪಮೆಗಳು. (ಅನು.)

ಸಮುದಾಯದ ಬಿಕ್ಕಟ್ಟು ಶಾಶ್ವತವಲ್ಲ

ಒಂದೆಡೆ ಸಮುದಾಯ ಒಗ್ಗಟ್ಟಿನಿಂದಿರಬೇಕೆಂಬುದಕ್ಕೆ ಪೂರಕವಾದ ಕುರ್‌ಆನ್ ಸೂಕ್ತಗಳು ಮತ್ತು ಪ್ರವಾದಿಯ ಬೋಧನೆಗಳಿದ್ದರೆ, ಇನ್ನೊಂದೆಡೆ ಸಮುದಾಯವನ್ನು ಒಡಕಿನಿಂದ ರಕ್ಷಿಸಲಿಕ್ಕಾಗಿ ಪ್ರವಾದಿ(ಸ) ಮಾಡಿದ, ಆದರೆ ಅಲ್ಲಾಹನು ಸ್ವೀಕರಿಸದೆ ತಿರಸ್ಕರಿಸಿದ ಪ್ರಾರ್ಥನೆಗಳಿವೆ. ಅದೇ ರೀತಿ ಮುಸ್ಲಿಮ್ ಸಮುದಾಯವು 73 ಪಂಗಡಗಳಾಗಿ ಒಡೆಯಲಿದ್ದು, ಒಂದರ ಹೊರತು ಇತರೆಲ್ಲವೂ ನರಕವಾಸಿಯೆಂದು ಹೇಳಲಾದ ಪ್ರವಾದಿ ವಚನಗಳಿವೆ.

ಇದೇ ರೀತಿಯ ಇತರ ಪ್ರವಾದಿ ವಚನಗಳನ್ನೂ ನೋಡಿ ಸಮುದಾಯದ ಕೆಲವರಿಗೆ ತಪ್ಪು ಕಲ್ಪನೆಯುಂಟಾಗಿದೆ. ಸಮುದಾಯದ ಈ ಅನೈಕ್ಯವು ದೇವನ ದಿಟ್ಟ ತೀರ್ಮಾನದ ಅನಿವಾರ್ಯ ಫಲವೆಂದೂ ಅದರಿಂದ ಮುಕ್ತಿ ಸಾಧ್ಯವೇ ಇಲ್ಲದ ಕಾರಣ ಸಮುದಾಯದ ಒಗ್ಗಟ್ಟಿನ ಕುರಿತು ಮಾತಾಡುವುದೇ ವ್ಯರ್ಥವೆಂದೂ ಅವರು ಭಾವಿಸುತ್ತಾರೆ. ಈ ತಪ್ಪುಕಲ್ಪನೆ ನೀಗಬೇಕಾದುದು ಅತ್ಯಗತ್ಯ. ಪ್ರವಾದಿ(ಸ) ಅವರ ಪ್ರಾರ್ಥನೆಯ ಕುರಿತಾದ ಹದೀಸ್‌ಗಳು ಕೆಲವೊಂದು ಪದ ವ್ಯತ್ಯಾಸಗಳೊಂದಿಗೆ ಉನ್ನತ ಸಹಾಬಿಗಳಿಂದ ವರದಿಯಾಗಿದೆ. ಆದರೆ ಅವೆಲ್ಲವೂ ಸಮುದಾಯದ ಅನೈಕ್ಯಕ್ಕೆ ಪುರಾವೆಯಲ್ಲ. ಬದಲಾಗಿ ಅಲ್ಲಾಹನು ಸಮುದಾಯದ ಕುರಿತಾಗಿ ಪ್ರವಾದಿವರ್ಯರ ಮೂರು ಪ್ರಾರ್ಥನೆಗಳ ಪೈಕಿ ಎರಡನ್ನು ಸ್ವೀಕರಿಸಿದನು ಎಂಬುದಕ್ಕೆ ಪುರಾವೆಯಾಗಿದೆ. ಅದೇನೆಂದರೆ ಈ ಸಮುದಾಯವನ್ನು ಪ್ರಕೃತಿ ವಿಕೋಪಗಳ ಮೂಲಕ ನಾಶಮಾಡಲಾಗದು ಮತ್ತು ಸಮುದಾಯದ ಅಸ್ತಿತ್ವವನ್ನು ಅಳಿಸಿ ಹಾಕುವಂತೆ ಅದರ ಮೇಲೆ ವೈರಿಗಳು ಪ್ರಾಬಲ್ಯ ಸಾಧಿಸಲಾರರು.

ಆದರೆ ನನ್ನ ಸಮುದಾಯವನ್ನು ಗುಂಪುಗಾರಿಕೆ ಮತ್ತು ಆಂತರಿಕ ಕಲಹದಿಂದ ರಕ್ಷಿಸಬೇಕೆಂಬ ಪ್ರವಾದಿವರ್ಯರ ಪ್ರಾರ್ಥನೆಯನ್ನು ಅಲ್ಲಾಹನು ಸ್ವೀಕರಿಸಲಿಲ್ಲ. ಈ ವಿಷಯದಲ್ಲಿ ಸಮುದಾಯವನ್ನು ಕಾರ್ಯಕಾರಣದ ಸ್ವಾಭಾವಿಕ ಕಾನೂನಿಗೆ ಅಧೀನಗೊಳಿಸಲಾಯಿತು. ಅದರಲ್ಲಿ ಯಾವುದೇ ಬಲಾತ್ಕಾರದ ನೀತಿಯನ್ನು ಅನುಸರಿಸದೆ, ಅಲ್ಲಾಹನು ವಿಷಯವನ್ನು ಸಮುದಾಯದ ಆಯ್ಕೆಗೆ ಬಿಟ್ಟು ಕೊಟ್ಟಿದ್ದಾನೆ. ಅದು ಬಯಸಿದರೆ ಅಲ್ಲಾಹನನ್ನೂ ಪ್ರವಾದಿಯನ್ನೂ ಅಂಗೀಕರಿಸಿ ಕುರ್‌ಆನ್‌ನ ಶಿಕ್ಷಣ-ಬೋಧನೆಗಳಂತೆ ನಡೆದು ಐಕ್ಯ ಮತ್ತು ಭ್ರಾತೃತ್ವ ಸಾಧಿಸಿ ಒಂದೇ ಸಮುದಾಯವಾಗಬಹುದು ಮತ್ತು ಅಲ್ಲಾಹನ ಸಹಾಯಕ್ಕೆ ಅರ್ಹವಾಗಿ ತನ್ನ ವೈರಿಗಳ ವಿರುದ್ಧ ಪ್ರಾಬಲ್ಯ ಸಾಧಿಸಬಹುದು. ಅನ್ಯಥಾ ಸೈತಾನನ ಮತ್ತು ತನ್ನ ಚಿತ್ತದ ಕರೆಗೆ ಓಗೊಟ್ಟು, ಒಡೆದು ಚೂರಾಗಿ ತನ್ನ ಮೇಲೆ ತನ್ನ ವೈರಿಗಳು ಅಕ್ರಮಣ ನಡೆಸಲು, ತನ್ಮೂಲಕ ಅವರು ಅದರ ದುರ್ಲಾಭ ಪಡೆಯಲು ಮತ್ತು ಒಂದು ಗುಂಪನ್ನು ಇನ್ನೊಂದರ ಮೇಲೆ ಎತ್ತಿ ಕಟ್ಟಿ, ಅವರು ಪರಸ್ಪರ ಜಗಳಾಡಿ ನಾಶವಾಗಿ ಹೋಗುವಂತಹ ಅವಕಾಶವನ್ನೂ ಕೊಡಬಹುದು.

ಪ್ರಸ್ತುತ ಹದೀಸ್‌ನ ತಾತ್ಪರ್ಯವನ್ನು, ಮುಸ್ಲಿಮ್ ಸಮುದಾಯದ ಒಡಕಿಗೆ ಅಲ್ಲಾಹನ ವಿಧಿಯೇ ಕಾರಣವೆಂದು ನಂಬಿದರೆ, ಐಕ್ಯ ಮತ್ತು ಸಹೋದರತೆಯೊಂದಿಗೆ ಬಾಳಬೇಕು

ಮತ್ತು ಭಿನ್ನಾಭಿಪ್ರಾಯವನ್ನು ಬಿಡಬೇಕು ಎಂಬ ಅಲ್ಲಾಹನ ಮತ್ತು ಪ್ರವಾದಿಯವರ ಆಜ್ಞೆಗಳೆಲ್ಲ ವ್ಯರ್ಥವಾದೀತು. ಅದಕ್ಕೆ ಅರ್ಥವೇ ಇರಲಾರದು. ಹಾಗೆಂದಾದರೆ ಅಂತಹ ಪರಿಸ್ಥಿತಿಯಲ್ಲಿ ಒಗ್ಗಟ್ಟಿನಿಂದ ಬಾಳಬೇಕೆಂಬ ಅಲ್ಲಾಹನ ಆಜ್ಞೆಯನ್ನು ಪಾಲಿಸುವುದು ಸಮುದಾಯದ ಪಾಲಿಗೆ ಕಷ್ಟ. ಅದೇ ರೀತಿ ಯಾವ ಅನೈಕ್ಯವನ್ನು ಬಿಡಬೇಕೆಂದು ಆಜ್ಞಾಪಿಸಲಾಗಿದೆಯೋ ಅದರಿಂದ ದೂರವಿರುವುದೂ ಕಷ್ಟ. ಆದುದರಿಂದ ಸಮುದಾಯದ ಅನೈಕ್ಯ ಅನಿವಾರ್ಯವೆಂಬ ಮಾತು ತಪ್ಪು. ಏಕೆಂದರೆ ಇದು ಅಲ್ಲಾಹ್ ಹಾಗೂ ಪ್ರವಾದಿಯ ಇತರ ಆಜ್ಞೆಗಳಿಗೆ ವಿರುದ್ಧವಾಗಿದೆ. ಅಲ್ಲಾಹನ ಮತ್ತು ಪ್ರವಾದಿಯ ಇತರ ಆಜ್ಞೆಗಳಿಂದ ಪರಸ್ಪರ ಸೌಹಾರ್ದ ಉಂಟಾಗುತ್ತದೆ. ಸಂಘರ್ಷಕ್ಕೆ ಆಸ್ಪದವೇ ಇರುವುದಿಲ್ಲ. ಅದಕ್ಕೆ ಕುರ್‌ಆನ್ ಮತ್ತು ಹದೀಸ್‌ಗಳು ಸಾಕ್ಷಿಯಾಗಿವೆ.

ಇವರೇನು ಕುರ್‌ಆನ್‌ನ ಬಗ್ಗೆ ಚಿಂತನೆ ನಡೆಸುವುದಿಲ್ಲವೇ? ಇದು ಅಲ್ಲಾಹನ ಹೊರತು ಇನ್ನಾರ ಕಡೆಯಿಂದಾದರೂ ಆಗಿರುತ್ತಿದ್ದರೆ ಇದರಲ್ಲಿ ಅನೇಕ ವಿರೋಧಾಭಾಸಗಳು ಕಂಡು ಬರುತ್ತಿದ್ದವು. (ಅನ್ನಿಸಾ: 82)

ಪ್ರವಾದಿ(ಸ) ಕೆಲವು ಮಂದಿ ಚರ್ಚಿಸುವುದನ್ನು ಮತ್ತು ಅದರಲ್ಲಿ ಕುರ್‌ಆನ್‌ನ ಒಂದು ಸೂಕ್ತದ ವಿರುದ್ಧ ಇನ್ನೊಂದು ಸೂಕ್ತವನ್ನು ಪುರಾವೆಯಾಗಿ ಮಂಡಿಸುತ್ತಿರುವುದನ್ನು ಕಂಡಾಗ ಅವರೊಂದಿಗೆ ಹೀಗೆಂದರು:

ಅಲ್ಲಾಹನ ಗ್ರಂಥದ ಒಂದು ಭಾಗವನ್ನು ಇನ್ನೊಂದರ ವಿರುದ್ಧ ಪುರಾವೆಯಾಗಿ ಮಾಡುತ್ತಿದ್ದುದರಿಂದಲೇ ನಿಮಗಿಂತ ಮುಂಚಿನ ಸಮುದಾಯಗಳು ನಾಶವಾದವು. ವಾಸ್ತವದಲ್ಲಿ ಅಲ್ಲಾಹನ ಗ್ರಂಥದ ಒಂದು ಭಾಗವು ಇನ್ನೊಂದನ್ನು ದೃಢೀಕರಿಸಲಿಕ್ಕಾಗಿ ಅವತೀರ್ಣಗೊಂಡಿದೆ. ಆದುದರಿಂದ ಗ್ರಂಥದ ಒಂದು ಭಾಗದಿಂದ ಇನ್ನೊಂದನ್ನು ಸುಳ್ಳಾಗಿಸಬೇಡಿರಿ. (ಅಹ್ಮದ್)

ಇನ್ನೊಂದು ವಿಷಯ ಗಮನಿಸತಕ್ಕದ್ದೆಂದರೆ, ಅನೈಕ್ಯದ ಕುರಿತು ಹದೀಸ್‌ಗಳು ಎರಡು ವಿಧವಿದೆ. ಹ. ಅಬೂ ಹುರೈರಾ(ರ) ವರದಿ ಮಾಡಿರುವ ಹದೀಸ್‌ನಲ್ಲಿ- ಯಹೂದಿಯರು ಮತ್ತು ಕ್ರೈಸ್ತರು 71 ಅಥವಾ 72 ಗುಂಪುಗಳಾಗಿ ಒಡೆದಿದ್ದಾರೆ, ನನ್ನ ಸಮುದಾಯವು 73 ಗುಂಪುಗಳಾಗಿ ಒಡೆಯುವುದು ಎಂದಿದೆ. ಇದನ್ನು ಅಬೂ ದಾವೂದ್, ತಿರ್ಮಿದಿ, ಇಬ್ನುಮಾಜಃ, ಇಬ್ನು ಹಿಬ್ಬಾನ್ ಮತ್ತು ಹಾಕಿಮ್ ವರದಿ ಮಾಡಿದ್ದಾರೆ. ಇದನ್ನು ತಿರ್ಮಿದಿಯವರು ಹಸನ್ (ಸಹೀಹ್) ಎಂದು ಹೇಳಿರುವರು. ಇಬ್ನು ಹಿಬ್ಬಾನ್ ಮತ್ತು ಹಾಕಿಮ್ ಕೂಡಾ 'ಸಹೀಹ್' ಎಂದೇ ಹೇಳಿರುವರಾದರೂ ಹಾಫಿಝ್ ದಹಬಿಯವರು, ಈ ಇಬ್ಬರೂ ಸತ್ಯಸಂಧರಾಗಿದ್ದಾರೆ, ಆದರೆ ಅವರಿಗೆ ಈ ಹದೀಸ್ 'ಸಹೀಹ್' ಎಂಬ ಬಗ್ಗೆ ಭ್ರಮೆಯುಂಟಾಗಿದೆಯೆಂದು ಹೇಳಿದ್ದಾರೆ. ಆದರೆ ಈ ವರದಿಯಲ್ಲಿ, "ಒಂದರ ಹೊರತು ಇತರೆಲ್ಲ ಗುಂಪುಗಳು ನರಕಕ್ಕೆ ಹೋಗುವವು" ಎಂದಿಲ್ಲ. ಈ ಭಾಗ ವರದಿಯಾಗಿರುವ ಹದೀಸ್‌ನ ವರದಿಗಾರರು ಇಬ್ನು ಉಮರ್, ಮುಆವಿಯಾ ಮತ್ತು ಅನಸ್(ರ) ಆಗಿದ್ದಾರೆ. ಇದರ ಎಲ್ಲ ಪರಂಪರೆಗಳೂ ದುರ್ಬಲವಾಗಿವೆ. ಕೆಲವು ಹದೀಸ್ ಪಂಡಿತರು ಕೆಲವು ಪರಂಪರೆಗಳನ್ನು ಇನ್ನು ಕೆಲವುಗಳೊಂದಿಗೆ ಸೇರಿಸಿ ಅದನ್ನು ಪ್ರಬಲವೆಂದು ಹೇಳಿದ್ದಾರೆ.

ಅವು ದುರ್ಬಲ, ಸುಳ್ಳು ಅಥವಾ ಅಧಿಕೃತ (ಸಹೀಹ್) ಎಂಬ ಚರ್ಚೆಯು ಪ್ರಸ್ತುತ ತುಣುಕಿನ ಬಗ್ಗೆ ಮಾತ್ರವಿರುವುದು. ಏಕೆಂದರೆ ಅದರ ಪ್ರಕಾರ ಒಂದರ ಹೊರತು ಇತರೆಲ್ಲ ವರ್ಗಗಳು ನರಕವಾಸಿಗಳಾಗಿವೆ. ಈ ತುಣುಕಿನ ಆಧಾರದಲ್ಲೇ ಪ್ರತಿಯೊಂದು ವರ್ಗ, ತಾನು ಮಾತ್ರ ವಿಜಯಿ ಇತರೆಲ್ಲರೂ ನರಕವಾಸಿಗಳೆಂದು ಹೇಳುತ್ತಿದೆ. ಇದು ಸಮುದಾಯದ ಏಕತೆಯನ್ನು ಛಿದ್ರ ಛಿದ್ರ ಗೊಳಿಸುವುದರಲ್ಲಿ ಪ್ರಮುಖ ಪಾತ್ರವಹಿಸಿತು. ಇಡೀ ಸಮುದಾಯವೇ ಬಿಕ್ಕಟ್ಟಿಗೆ ಸಿಲುಕಿ ಅದು ದುರ್ಬಲವಾಯಿತು. ಈ ದೌರ್ಬಲ್ಯದಿಂದಾಗಿ ವೈರಿಗಳಿಗೆ ಎರೆಯಾಯಿತು. ವೈರಿಗಳು ಮನಬಂದಂತೆ ಸಮುದಾಯವನ್ನು ಬಳಸಿಕೊಂಡರು.

ಅಲ್ಲಾಮಾ ಇಬ್ನುಲ್ ವಝೀರ್ (ಮರಣ ಹಿ.ಶ. 840) ಅವರು ಈ ಹದೀಸ್‌ನ ಬಗ್ಗೆ ಸಮುದಾಯವನ್ನು ಎಚ್ಚರಿಸುತ್ತಾ ಹೀಗೆಂದಿದ್ದಾರೆ- ನಿಮ್ಮ ಹೊರತು ಇತರೆಲ್ಲರೂ ನರಕವಾಸಿಗಳೆಂಬ ಮೋಸಕ್ಕೊಳಗಾಗಬೇಡಿರಿ. ಏಕೆಂದರೆ ಈ ಹೆಚ್ಚಳವು ಸರಿಯಲ್ಲ. ಪ್ರತ್ಯೇಕತೆಯು ಗೂಢತಂತ್ರದ ಪರಿಣಾಮವಾಗಿದೆ.

ಅಲ್ಲಾಮಾ ಇಬ್ನು ಹಝುಮ್ ಈ ಹೆಚ್ಚಳವನ್ನು ಕೃತ್ರಿಮ (ಸ್ವಯಂ ಸೃಷ್ಟಿ) ಎಂದು ವರ್ಣಿಸಿದ್ದಾರೆ. ಎರಡೂ ಹದೀಸ್‌ಗಳ ಬಾಕಿ ಅಂಶಗಳ ಬಗ್ಗೆ ಅವರು, "ಎರಡೂ ಹದೀಸ್‌ಗಳು ಸರಣಿಯ ರೀತಿಯ ಆಧಾರದಲ್ಲಿ ಸರಿಯಾದುದಲ್ಲ" ಎಂದು ಹೇಳುತ್ತಾರೆ.

(ಅಲ್‌ಮಿಲಲ್‌ವನ್ನಹಲ್- ಡಾ| ಇಬ್ರಾಹೀಮ್ ನಸರ್, ಭಾಗ-3, ಪುಟ: 292)

ಇಬ್ನು ಮಾಜಃ ಹೇಳುತ್ತಾರೆ, "ಈ ಹದೀಸ್ ಸಹೀಹ್ ಎಂಬುದಕ್ಕೆ ಶರ್ತಗಳು ಒಪ್ಪುವುದಿಲ್ಲ. ಆದುದರಿಂದಲೇ ಬುಖಾರಿ ಮತ್ತು ಮುಸ್ಲಿಮ್ ಅವರು ಇದನ್ನು ಉಲ್ಲೇಖಿಸಲಿಲ್ಲ." (ಅಲ್‌ಅವಾಸಿಮ್ ವಲ್‌ಕವಾಸಿಮ್- ಇಬ್ನುಲ್‌ವಝೀರ್) ಆದರೆ ಹಾಫಿಝ್ ಇಬ್ನುಹಜರ್‌ರವರು, ಪರಂಪರೆಗಳ ಆಧಿಕ್ಯದಿಂದಾಗಿ ಅದನ್ನು ಹಸನ್ (ಸರಿಯಾದುದು) ಎಂದೂ ಇಬ್ನು ತೀಮಿಯ್ಯರು ಸಹೀಹ್ ಎಂದೂ ಹೇಳಿರುವರು.

ಪ್ರಾಚೀನ ಮತ್ತು ಆಧುನಿಕ ಹದೀಸ್ ವಿದ್ವಾಂಸರ ಪೈಕಿ ಕೆಲವರು ಪರಂಪರೆಯ ಆಧಾರದಲ್ಲೂ ಇನ್ನು ಕೆಲವರು ವಿಷಯದ ಆಧಾರದಲ್ಲೂ ಈ ಹದೀಸ್‌ಗಳನ್ನು ನಿರಾಕರಿಸಿದ್ದಾರೆ. ಅವರು ಅದಕ್ಕೆ ನೀಡುವ ಪುರಾವೆಗಳು ಹೀಗಿವೆ:

ಈ ಹದೀಸ್ ಸಂದೇಹಾಸ್ಪದವೆನ್ನಲು ಕಾರಣವೇನೆಂದರೆ, ಸಕಲ ಮಾನವರಿಗಾಗಿ ಅಲ್ಲಾಹನಿಂದ ನೇಮಕಗೊಂಡ, ಪ್ರವಾದಿಗಳ ಸ್ಥಾನದಲ್ಲಿ ಅಂತ್ಯದಿನದವರೆಗೆ ಮಾನವಕೋಟಿಯ ಮುಂದೆ ಸತ್ಯದ ಸಾಕ್ಷ್ಯವಹಿಸುವ ಉತ್ತಮ ಸಮುದಾಯವೆಂಬ ಬಿರುದಿಗೆ ಪಾತ್ರವಾದ ಒಂದು ಸಮುದಾಯವು ಅನೈಕ್ಯದಲ್ಲಿ ಯಹೂದಿ- ಕ್ರೈಸ್ತರಿಗಿಂತಲೂ ಕಡೆಯಾದೀತೆ. ಗುಂಪುಗಳಾಗಿ ಒಡೆಯುವುದರಲ್ಲೂ ಅವರನ್ನು ಮೀರಿಸೀತೆ?

ಯಹೂದಿ-ಕ್ರೈಸ್ತರ ಪರಸ್ಪರ ದ್ವೇಷ, ಹಗೆತನ, ಅನೈಕ್ಯ ಮತ್ತು ಭಿನ್ನಾಭಿಪ್ರಾಯಗಳ ಕುರಿತು ಅಲ್ಲಾಹನು ಹೇಳಿರುವುದೇನೆಂದರೆ, ಅವರ ಮಧ್ಯೆ ಹಗೆತನವನ್ನು ನಾವು ಉಂಟು ಮಾಡಿದ್ದೇವೆ ಮತ್ತು ಅವರನ್ನು ಗುಂಪುಗಳಾಗಿ ಎಂದೆಂದಿಗೂ ನಾವೇ ಒಡೆದಿದ್ದೇವೆ. ಏಕೆಂದರೆ ಅವರು ನನ್ನ ಧರ್ಮವನ್ನು ಮತ್ತು ಮಾರ್ಗದರ್ಶಕ ಗ್ರಂಥವನ್ನು ಕಡೆಗಣಿಸಿದರು.

ಅದರ ವಿರುದ್ಧ ಅನ್ಯಾಯ ಮತ್ತು ಉದ್ಧಟತನ ತೋರಿದರು. ಅದರ ಒಂದು ಭಾಗವನ್ನು ಅಂಗೀಕರಿಸಿ ಇನ್ನೊಂದು ಭಾಗವನ್ನು ನಿರಾಕರಿಸುತ್ತಿದ್ದರು.

ಕ್ರೈಸ್ತರ ಬಗ್ಗೆ ಅಲ್ಲಾಹನು ಹೀಗೆ ಹೇಳುತ್ತಾನೆ-

"ಇದೇ ರೀತಿಯಲ್ಲಿ ನಾವು ನಸಾರಾ (ಕ್ರೈಸ್ತರು)ಗಳೆಂದು ಹೇಳಿಕೊಂಡಿದ್ದ ಜನರಿಂದಲೂ ಬಲವಾದ ಕರಾರನ್ನು ಪಡೆದಿದ್ದೆವು. ಆದರೆ ಅವರಿಗೂ ಕಲಿಸಿಕೊಡಲಾಗಿದ್ದ ಪಾಠದ ಒಂದು ದೊಡ್ಡ ಭಾಗವನ್ನು ಅವರು ಮರೆತು ಬಿಟ್ಟರು. ಕೊನೆಗೆ ನಾವು ಅವರ ನಡುವೆ ಅಂತಿಮ ದಿವಸದ ತನಕವೂ ಹಗೆತನ ಮತ್ತು ಆಂತರಿಕ ದ್ವೇಷದ ಬೀಜವನ್ನು ಬಿತ್ತಿ ಬಿಟ್ಟೆವು."

(ಅಲ್‌ಮಾಇದ -14)

"ನಿಮ್ಮ ಮೇಲೆ ಅವತೀರ್ಣಗೊಂಡಿರುವ ವಾಣಿಯು ಅವರ ಪೈಕಿ ಹೆಚ್ಚಿನವರ ಉದ್ಧಟತನ ಮತ್ತು ಮಿಥ್ಯಾರಾಧನೆಯಲ್ಲಿ ಇನ್ನಷ್ಟು ವೃದ್ಧಿಗೆ ಕಾರಣವಾಗಿ ಬಿಟ್ಟಿದೆ. ಮತ್ತು (ಅದರ ಫಲವಾಗಿ) ನಾವು ಅವರ ನಡುವೆ ನಿರ್ಣಾಯಕ ದಿನದವರೆಗೆ ವೈರ- ವಿದ್ವೇಷಗಳನ್ನಿರಿಸಿ ಬಿಟ್ಟಿದ್ದೇವೆ."

(ಅಲ್ ಮಾಇದ: 64)

ಮುಸ್ಲಿಮ್ ಸಮುದಾಯದ ಬಗ್ಗೆ, ನಾವು ಅವರನ್ನು ಅನೈಕ್ಯದಲ್ಲಿ ಸಿಲುಕಿಸುವೆವು ಎಂದು ಕುರ್‌ಆನ್‌ನಲ್ಲಿ ಎಲ್ಲೂ ಹೇಳಿಲ್ಲ. ಅದಕ್ಕೆ ವ್ಯತಿರಿಕ್ತವಾಗಿ ನೀವು ಯಹೂದಿ ಕ್ರೈಸ್ತರಂತೆ ಪರಸ್ಪರ ದ್ವೇಷ, ಅಸೂಯೆ ಮತ್ತು ಅನೈಕ್ಯಕ್ಕೆ ಗುರಿಯಾಗಬಾರದೆಂದು ಅವರನ್ನು ಎಚ್ಚರಿಸಲಾಗಿದೆ.

ಇನ್ನೊಂದು ವಿಷಯವೂ ಇಲ್ಲಿ ಗಮನಾರ್ಹವಾಗಿದೆ. ಈ ಹದೀಸ್ ಪ್ರಕಾರ ಮುಸ್ಲಿಮ್ ಸಮುದಾಯದ ಒಂದು ಗುಂಪಿನ ಹೊರತು ಉಳಿದೆಲ್ಲವೂ ನರಕವಾಸಿಗಳಾಗಿದ್ದಾರೆ. ಆದರೆ ಇದರ ಮೇಲೆ ಅಲ್ಲಾಹನು ಕೃಪೆ ತೋರಿರುವನೆಂದೂ, ಸ್ವರ್ಗದ ಕಾಲು ಭಾಗ ಅಥವಾ ಅರ್ಧ ಭಾಗವು ಈ ಅನುಗ್ರಹೀತ ಸಮುದಾಯದಿಂದ ತುಂಬಿರುವುದೆಂದೂ ಹೇಳಲಾಗಿದೆ. ಇದು ಸಮುದಾಯದ ಶ್ರೇಷ್ಠತೆಯಾಗಿದೆ.

ಕೊನೆಯದಾಗಿ, ಈ ಹದೀಸ್‌ನಲ್ಲಿ 'ಉಮ್ಮತೀ' ಎಂಬ ಪದ ಬಳಕೆಯಾಗಿದೆ. 'ನನ್ನ ಸಮುದಾಯ' ಎಂಬುದು ಅದರ ಅರ್ಥ. ಇದರಿಂದ ಸ್ಪಷ್ಟವಾಗುವುದೇನೆಂದರೆ, ತಮ್ಮೆಲ್ಲಾ ದೌರ್ಬಲ್ಯಗಳ ಹೊರತಾಗಿಯೂ ಈ ಎಲ್ಲ ಗುಂಪುಗಳು ಮುಸ್ಲಿಮ್ ಸಮುದಾಯದ ಅಂಗ ಭಾಗಗಳಾಗಿದ್ದು ಅದರ ದೇಹದಿಂದ ಅವುಗಳನ್ನು ಬೇರ್ಪಡಿಸುವುದು ಸಾಧ್ಯವಿಲ್ಲ. ಅವು ತಮ್ಮ ಕೆಡುಕುಗಳಿಂದಾಗಿ ಸತ್ಯನಿಷೇಧಿಗಳಂತೆ ಶಾಶ್ವತ ನರಕ ಶಿಕ್ಷೆಗೆ ಗುರಿಯಾಗಲಾರರು. ಬದಲಾಗಿ ಅವರ ಅಂತ್ಯವು ಪಾಪಿಗಳಾದ ಸತ್ಯವಿಶ್ವಾಸಿಗಳಂತಿರುವುದು.

ಈ ವರೆಗಿನ ಚರ್ಚೆಯಿಂದ ಸ್ಪಷ್ಟವಾಗುವುದೇನೆಂದರೆ ಸಮುದಾಯದೊಳಗೆ ಐಕ್ಯ, ಒಗ್ಗಟ್ಟು ಮತ್ತು ಪರಸ್ಪರ ಸೌಹಾರ್ದವನ್ನು ಬೆಳೆಸುವುದು ಮತ್ತು ಸಾಧ್ಯವಿರುವಷ್ಟು ಅನೈಕ್ಯ ಮತ್ತು ಭಿನ್ನತೆಗಳಿಂದ ಸಮುದಾಯವನ್ನು ರಕ್ಷಿಸುವುದು ಪ್ರತಿಯೊಬ್ಬ ಮುಸ್ಲಿಮನ ಕಡ್ಡಾಯ ಕರ್ತವ್ಯವಾಗಿದೆ. ಸಮುದಾಯದ ಅನೈಕ್ಯವು ದೇವ ವಿಧಿಯ ಅನಿವಾರ್ಯ ಫಲವೇನೂ ಅಲ್ಲ. ಏಕೆಂದರೆ ಅಲ್ಲಾಹನು ಈ ಲೋಕದಲ್ಲಿ ಪರೀಕ್ಷೆಯ ರೂಪದಲ್ಲಿ ಪ್ರತಿಯೊಬ್ಬನಿಗೂ ಕರ್ಮ

ಸ್ವಾತಂತ್ರ್ಯವನ್ನು ನೀಡಿದ್ದಾನೆ. ಒಳಿತು-ಕೆಡುಕುಗಳನ್ನು ಯಾರಿಂದಲೂ ಬಲವಂತವಾಗಿ ಆತನು ಮಾಡಿಸುವುದಿಲ್ಲ. ಪ್ರತಿಯೊಬ್ಬ ಮುಸ್ಲಿಮನೂ ಮುಸ್ಲಿಮ್ ಗುಂಪುಗಳೂ ಬಯಸಿದರೆ ಅಲ್ಲಾಹನ ಮತ್ತು ಆತನ ಸಂದೇಶವಾಹಕರ ಆಜ್ಞೆಗಳನ್ನು ಪಾಲಿಸಿ ತಮ್ಮ ಸಾಲುಗಳನ್ನು ಸರಿಪಡಿಸುವ ಮೂಲಕ ಬಲಿಷ್ಠವಾದ ಕಟ್ಟಡ ಹಾಗೂ ಏಕ ಸಮುದಾಯವಾಗಿ ಬಾಳಬಹುದು. ಅನ್ಯಥಾ ಈ ಆಯ್ಕೆಯ ಸ್ವಾತಂತ್ರ್ಯವನ್ನು ದುರುಪಯೋಗ ಪಡಿಸಿ ಅಲ್ಲಾಹನ ಮತ್ತು ಸಂದೇಶವಾಹಕರ ಆಜ್ಞೆಗಳನ್ನು ಧಿಕ್ಕರಿಸಿ- ಶೈತಾನನನ್ನೂ ಸ್ವಚಿತ್ತವನ್ನೂ ಅನುಸರಿಸಿ ಜೀವಿಸುವ ಮೂಲಕ ಭಿನ್ನಾಭಿಪ್ರಾಯ ಮತ್ತು ಒಡಕಿಗೂ ಗುರಿಯಾಗಬಹುದು.

ಐಕ್ಯ ಮತ್ತು ಭಿನ್ನಾಭಿಪ್ರಾಯದ ಮೇರೆಗಳ ಅರಿವು

ಮುಸ್ಲಿಮ್ ಸಮುದಾಯವು ಈ ಕೆಳಗೆ ಸೂಚಿಸಿದ ವೈಚಾರಿಕ ಗುಣಗಳನ್ನು ಆದರ್ಶವಾಗಿ ಅಂಗೀಕರಿಸಿ ಅವುಗಳನ್ನು ಪ್ರಾಮಾಣಿಕವಾಗಿ ಕಾರ್ಯಗತಗೊಳಿಸುವ ತನಕ ಅನೈಕ್ಯದಿಂದ ಪಾರಾಗಿ ಐಕ್ಯ ಸಾಧಿಸಲಾರದು:

1. ಧರ್ಮದಲ್ಲಿ ಐಕ್ಯದ ಮತ್ತು ಭಿನ್ನಾಭಿಪ್ರಾಯದ ಮೇರೆಗಳೇನೆಂಬುದರ ಅರಿವು.

2. ಭಿನ್ನಾಭಿಪ್ರಾಯಗಳ ವಿಷಯದಲ್ಲಿ ಸಮತೋಲನ ಕಾಪಾಡುವುದು ಮತ್ತು ಉಗ್ರ ನಿಲುವನ್ನು ಕೈ ಬಿಡುವುದು.

3. ಮುಹ್ಕಮಾತ್ (ಸ್ಪಷ್ಟ ವಿಷಯ)ಗಳನ್ನು ಅರಿತು ಪಾಲನೆ ಮಾಡುವುದು ಮತ್ತು ಮುತಶಾಬಿಹಾತ್ (ಅಸ್ಪಷ್ಟ ವಿಷಯ)ಗಳಿಂದ ದೂರವಿರುವುದು.

4. ಇಜ್ತಿಹಾದ್ (ಸಂಶೋಧನೆ)ಗೆ ಸಂಬಂಧಿಸಿದ ವಿಷಯಗಳಲ್ಲಿ ಪರಸ್ಪರ ವಿರೋಧಿಸುವುದರಲ್ಲಿ ಉಗ್ರ ನಿಲುವು ತಳೆಯದಿರುವುದು.

5. ಆಂಶಿಕ ವಿಷಯಗಳಲ್ಲಿ ಪ್ರಾಚೀನ ವಿದ್ವಾಂಸರ ಮಧ್ಯೆಯಿರುವ ಭಿನ್ನಾಭಿಪ್ರಾಯಗಳ ತಿಳುವಳಿಕೆ.

6. ಪದಗಳು ಮತ್ತು ಪಾರಿಭಾಷಿಕಗಳ ವ್ಯಾಖ್ಯಾನದ ಸ್ಪಷ್ಟೀಕರಣ.

7. ವರ್ಗೀಯ ಹಿತಾಸಕ್ತಿಗಳಿಗಿಂತ ಮುಸ್ಲಿಮ್ ಸಮುದಾಯದ ಹಿತಾಸಕ್ತಿಗೆ ಪ್ರಾಶಸ್ತ್ಯ ನೀಡುವುದು.

8. ಒಮ್ಮತದ ವಿಷಯಗಳಲ್ಲಿ ಪರಸ್ಪರ ಸಹಾಯ- ಸಹಕಾರ.

9. ಭಿನ್ನಾಭಿಪ್ರಾಯವಿರುವ ವಿಷಯಗಳಲ್ಲಿ ಸಹಿಷ್ಣುತೆ, ಮೃದು ಧೋರಣೆ ಮತ್ತು ಔದಾರ್ಯ.

10. ಮುಸ್ಲಿಮರನ್ನು ಕಾಫಿರರೆಂದು ಸಾರುವುದರಿಂದ ದೂರವಿರುವುದು.

ಐಕ್ಯ ಮತ್ತು ಭಿನ್ನಾಭಿಪ್ರಾಯದ ಮೇರೆಗಳೇನೆಂಬುದರ ಅರಿವು

ಅಲ್ಲಾಹನು ಈ ಲೋಕದಲ್ಲಿ ತನ್ನ ಸೃಷ್ಟಿಗಳನ್ನು ವಿವಿಧತೆಯಲ್ಲಿ ಏಕತೆಯೆಂಬ ಪ್ರಾಕೃತಿಕ ನಿಯಮದಂತೆ ಸೃಷ್ಟಿಸಿದ್ದಾನೆ. ಈ ಪ್ರಪಂಚದಲ್ಲಿ ಯಾವ ವಸ್ತುವೂ ಇನ್ನೊಂದು

ವಸ್ತುವಿಗೆ ಸಮಾನವಾಗಿ ಸೃಷ್ಟಿಸಲ್ಪಟ್ಟಿಲ್ಲ. ಬದಲಾಗಿ ಇಲ್ಲಿ ಸೃಷ್ಟಿಗಳೂ ಭಿನ್ನಭಿನ್ನವಾಗಿರುವ ಜೊತೆಗೇ ಏಕತೆಯ ಸುಂದರ ದೃಶ್ಯ ಗೋಚರಿಸುತ್ತಿದೆ. ಒಂದೆಡೆ ಪ್ರತಿಯೊಂದು ಜೀವಿಯೂ ತನ್ನ ವೈವಿಧ್ಯತೆಯಲ್ಲಿ ಬೇರೆ ಬೇರೆಯಾದರೆ ಇನ್ನೊಂದೆಡೆ ಮೂಲಭೂತವಾಗಿ ಅವೆಲ್ಲವೂ ಪರಸ್ಪರ ಒಂದೇ ಆಗಿರುವುದನ್ನು ನಾವು ಕಾಣುತ್ತೇವೆ.

ಉದಾ: ಮಾವಿನ ಹಣ್ಣು- ಅದರ ಗಾತ್ರ, ರೂಪ, ಬಣ್ಣ, ವಾಸನೆ ಮತ್ತು ರುಚಿಯಲ್ಲಿ ಪ್ರತಿಯೊಂದು ಹಣ್ಣು ಬೇರೆ ಬೇರೆಯಾಗಿದ್ದರೂ ಒಟ್ಟು ಹಣ್ಣುಗಳು ಮೂಲಭೂತವಾಗಿ ಒಂದೇ ಆಗಿ ತೋರುತ್ತವೆ. ದೂರದಿಂದ ನೋಡುವವನು ಅದನ್ನು ಮಾವಿನ ಹಣ್ಣೆಂದೇ ಹೇಳುವನು. ಅದೇ ರೀತಿ ಇಸ್ಲಾಮ್ ಯಾರ ಮಾರ್ಗದರ್ಶನಕ್ಕಾಗಿ ಬಂದಿದೆಯೋ ಆ ಮಾನವನು ತನ್ನ ಮೂಲಭೂತ ವೈಶಿಷ್ಟ್ಯ,ಗಾತ್ರ ಮತ್ತು ರೂಪದಲ್ಲಿ ಪರಸ್ಪರ ಏಕರೂಪದಲ್ಲಿದ್ದರೂ ಆಂಶಿಕ ವಿಷಯಗಳಲ್ಲಿ ಒಬ್ಬನು ಇನ್ನೊಬ್ಬನಿಗಿಂತ ಭಿನ್ನವಾಗಿರುತ್ತಾನೆ- ಅವನ ಕುಲ, ಗೋತ್ರ, ಬಣ್ಣ ಒಂದೇ ಆಗಿದ್ದರೂ ಸರಿ. ಲೋಕದಲ್ಲಿ ಎಲ್ಲ ಆಂಶಿಕ ವಿಷಯಗಳಲ್ಲಿ ಸಮಾನವಾಗಿರುವ ಇಬ್ಬರು ವ್ಯಕ್ತಿಗಳೂ ಸಿಗಲಾರರು. ಆದರೆ ಈ ಭಿನ್ನತೆಯ ಹೊರತಾಗಿಯೂ ಎಲ್ಲರೂ ಮನುಷ್ಯರೇ ಆಗಿದ್ದಾರೆ. ಏಕೆಂದರೆ ಪ್ರತಿಯೊಬ್ಬನೂ ಮೂಲಭೂತ ವೈಶಿಷ್ಟ್ಯಗಳಲ್ಲಿ ಒಂದೇ ಆಗಿದ್ದಾನೆ.

ಇದು ಅಲ್ಲಾಹನು ನಿಶ್ಚಯಿಸಿದ ಪ್ರಕೃತಿಯಾಗಿದ್ದು ಅದರಂತೆಯೇ ಅವನು ಎಲ್ಲ ಮಾನವರನ್ನೂ ಸೃಷ್ಟಿಸಿದ್ದಾನೆ. ಅಲ್ಲಾಹನ ಪ್ರಕೃತಿಯಲ್ಲಿ ಯಾವುದೇ ಬದಲಾವಣೆ ಸಾಧ್ಯವಿಲ್ಲ.

"ಅಲ್ಲಾಹನು ಮಾನವನನ್ನು ಸೃಷ್ಟಿಸಿದ ಪ್ರಕೃತಿಯಲ್ಲೆ ಸ್ಥಿರವಾಗಿರಿ. ಅಲ್ಲಾಹನು ಮಾಡಿದ ರಚನೆಯನ್ನು ಬದಲಾಯಿಸಲಾಗದು." (ಅರ್ರೂಮ್: 30)

ಮಾನವರ ಈ ಪ್ರಕೃತಿಯನುಸಾರವೇ ಅಲ್ಲಾಹನು ಧರ್ಮದ ವಿಧಿ ಕರ್ಮಗಳನ್ನು ಎರಡು ಭಾಗಗಳಾಗಿ ವಿಂಗಡಿಸಿದ್ದಾನೆ. ಅದರ ಒಂದು ಭಾಗವು ಮೂಲಭೂತ, ತಾತ್ವಿಕ ಮತ್ತು ಸ್ಥಾಯಿಯಾದುದು. ಈ ಭಾಗದಲ್ಲಿ ಯಾವುದೇ ಭಿನ್ನತೆಯು ನಿಷಿದ್ಧವಾಗಿದೆ. ಅದರಲ್ಲಿ ಮೂಲಭೂತ ವಿಶ್ವಾಸ, ಕಡ್ಡಾಯ ಕರ್ಮಗಳು, ಹಲಾಲ್ ಹರಾಮ್‌ಗಳು ಹಾಗೂ ತಾತ್ವಿಕ ನಿಯಮ ನಿಬಂಧನೆಗಳು ಸೇರಿವೆ. ಅವು ಧರ್ಮದ ಬುನಾದಿಗಳಾಗಿವೆ. ಅದರಲ್ಲಿ ಭಿನ್ನತೆಯು ಪಥಭ್ರಷ್ಟತೆಯಾಗಿದ್ದು, ಅದು ಧರ್ಮದಲ್ಲೇ ಭಿನ್ನತೆಯೆನಿಸುತ್ತದೆ. ಇದು ಹದೀಸ್ ವರದಿಗಳಿಂದಲೂ ಇಸ್ಲಾಮೀ ಪರಂಪರೆಯಿಂದಲೂ ಸ್ಪಷ್ಟವಾಗಿ ಸಾಬೀತುಗೊಂಡಿರುವ ಸತ್ಯವಾಗಿದೆ. ಅದನ್ನು ಕುರ್‌ಆನ್‌ನಲ್ಲಿ ಅಲ್‌ಇಲ್ಮ್, ಬಯ್ಯಿನಾತ್ ಮತ್ತು ಮಹ್ಕಮಾತ್ (ಖಚಿತ ಜ್ಞಾನ, ಸ್ಪಷ್ಟಜ್ಞಾನ ಮತ್ತು ಸುವ್ಯಕ್ತ ಆದೇಶಗಳು) ಎಂಬಿತ್ಯಾದಿಯಾಗಿ ಹೇಳಲಾಗಿದೆ. ಕಾಲ ಮತ್ತು ಪರಿಸ್ಥಿತಿಯ ಬದಲಾವಣೆಯಿಂದ ಇದರಲ್ಲಿ ಯಾವ ಬದಲಾವಣೆಯೂ ಆಗುವುದಿಲ್ಲ. ಬದಲಾವಣೆಗೆ ಅವಕಾಶವೂ ಇಲ್ಲ. ಅದನ್ನು ಸಾಬೀತು ಪಡಿಸಲು ಸಂಶೋಧಕರ ಸಂಶೋಧನೆಯ ಅಗತ್ಯವೂ ಇಲ್ಲ. ಅದಕ್ಕೆ ಅವಕಾಶವೂ ಇಲ್ಲ. ಅವುಗಳನ್ನು ನಂಬಬೇಕಾದುದು ಕಡ್ಡಾಯ. ಅದು ವಿಶ್ವಾಸಿ ಮತ್ತು ಅವಿಶ್ವಾಸಿಯನ್ನು ಗುರುತಿಸುವ ಮಾನದಂಡವಾಗಿದೆ. ಅವನ್ನು ನಿರಾಕರಿಸುವವನು ಸತ್ಯನಿಷೇಧಿಯೂ (ಕಾಫಿರ್) ಇಸ್ಲಾಮಿನ ವೃತ್ತದಿಂದ

ಹೊರನಡೆದವನೂ ಆಗಿದ್ದಾನೆ. ಉದಾ: ಮೂಲಭೂತ ವಿಶ್ವಾಸಗಳಲ್ಲಿ ತೌಹೀದ್, ರಿಸಾಲತ್, ಆಖಿರತ್ (ಏಕದೇವತ್ವ, ಪ್ರವಾದಿತ್ವ, ಪರಲೋಕ), ಪ್ರವಾದಿವರ್ಯರ(ಸ) ಮೇಲೆ ಕುರ್‌ಆನ್‌ನ ಅವತರಣ, ಅಂತ್ಯ ಪ್ರವಾದಿತ್ವ, ಮರಣಾನಂತರ ಜೀವನ, ಪರಲೋಕದಲ್ಲಿ ಕರ್ಮಗಳ ವಿಚಾರಣೆ ಮತ್ತು ಪುರಸ್ಕಾರ- ಶಿಕ್ಷೆಗಳು ಹಾಗೂ ಪ್ರವಾದಿಗಳ ಪಾಪ ಮುಕ್ತತೆ ಇತ್ಯಾದಿ. ಎರಡನೆಯದಾಗಿ, ಕಡ್ಡಾಯ ಕರ್ಮಗಳು. ಅವುಗಳ ಬಗ್ಗೆ ಶರೀಅತ್‌ನ ಸ್ಪಷ್ಟ ಆದೇಶಗಳಿವೆ. ಉದಾ: ನಮಾಝ್, ಉಪವಾಸ ವ್ರತ, ಝಕಾತ್, ಹಜ್ಜ್, ದಿನದ ಐದು ಹೊತ್ತಿನ ಸಾಮೂಹಿಕ ನಮಾಝ್‌ನ ಸಂಸ್ಥಾಪನೆ, ನಮಾಝ್‌ನ ರಕಅತ್‌ಗಳ ಸಂಖ್ಯೆ, ಉಪವಾಸ, ಝಕಾತ್, ಹಜ್ಜ್‌ಗಳ ನಿಶ್ಚಿತ ಶರ್ತಗಳು ಮತ್ತು ಅವುಗಳ ಸಮಯ. ಮತ್ತಿತರ ಆಜ್ಞೆಗಳು- ಉದಾ: ಕೊಲೆ, ವ್ಯಭಿಚಾರ, ವ್ಯಭಿಚಾರದ ಆರೋಪ ಮತ್ತು ಅನುಚಿತ ರೀತಿಯಲ್ಲಿ ಜನರ ಸೊತ್ತನ್ನು ಕಬಳಿಸುವುದು ಇತ್ಯಾದಿಗಳಲ್ಲಿ ಭಿನ್ನಾಭಿಪ್ರಾಯವನ್ನು ನಿಷೇಧಿಸಲಾಗಿದೆ. ಮೂರನೆಯದಾಗಿ, ಸ್ಪಷ್ಟ ಮೂಲದಿಂದ ಉದ್ಭವಿಸಿದ ತಾತ್ವಿಕ ನಿಯಮಗಳು. ಅದರಲ್ಲಿ ಯಾವುದೇ ವಿರೋಧಾಭಾಸವಿಲ್ಲ. ಶರೀಅತ್ ತನ್ನ ಆದೇಶಗಳನ್ನು ನಿಶ್ಚಯಿಸಲು ಅವುಗಳನ್ನು ಬುನಾದಿಯೆಂದು ಪರಿಗಣಿಸಿದೆ. ಅವುಗಳಲ್ಲಿ ಭಿನ್ನಾಭಿಪ್ರಾಯ ಧರ್ಮಸಮ್ಮತವಲ್ಲ. ಉದಾ: ಜನರಿಗೆ ತೊಂದರೆ ಮಾಡಲೂ ಬಾರದು, ತೊಂದರೆಗೆ ಒಳಗಾಗಲೂ ಬಾರದು ಮತ್ತು ಧರ್ಮದಲ್ಲಿ ನಿಮಗೇನೂ ಸಂಕೀರ್ಣತೆಯನ್ನಿರಿಸಿಲ್ಲ.

ಮುಸ್ಲಿಮ್ ಸಮುದಾಯವನ್ನು ಒಡಕು ಮತ್ತು ಅನೈಕ್ಯದಿಂದ ತಡೆಯುವ, ಅನೈಕ್ಯವನ್ನು ಪಥಭ್ರಷ್ಟತೆ ಎಂದು ಸಾರಿ ನರಕದ ಎಚ್ಚರಿಕೆ ನೀಡಿದ, ಸ್ಪಷ್ಟ ಜ್ಞಾನ ಸಿಕ್ಕಿದ ಬಳಿಕವೂ ಪರಸ್ಪರರ ಮೇಲೆ ಅತಿಕ್ರಮವೆಸಗುತ್ತಿದ್ದ ಕಾರಣ ಪಕ್ಷ ಪಂಗಡಗಳಲ್ಲಿ ಹಂಚಿ ಹೋಗಿರುವ ಯಹೂದಿ ಕ್ರೈಸ್ತರ ಉದಾಹರಣೆಗಳನ್ನು ಕೊಟ್ಟು ಎಚ್ಚರಿಸಿರುವ ಕುರ್‌ಆನ್‌ನ ಎಲ್ಲ ಸೂಕ್ತಗಳೂ ಧರ್ಮದ ಮೂಲಭೂತ ತಾತ್ವಿಕ ಮತ್ತು ಸ್ಥಾಯೀ ಆದೇಶಗಳಲ್ಲಿ ಭಿನ್ನಾಭಿಪ್ರಾಯ ತಾಳುವುದರ ಬಗೆಗಾಗಿವೆ. ಧರ್ಮದ ಈ ರಂಗದಲ್ಲಿ ಭಿನ್ನಾಭಿಪ್ರಾಯವನ್ನು ನಿಷೇಧಿಸಲಾಗಿದೆ. ಈ ಬಗ್ಗೆ ಕೆಲವು ಸೂಕ್ತಗಳನ್ನು ನೋಡಿರಿ-

"ಸುವ್ಯಕ್ತ ನಿದರ್ಶನಗಳು ಪ್ರಾಪ್ತಿಯಾದ ಮೇಲೆ ಭಿನ್ನಾಭಿಪ್ರಾಯಗಳಲ್ಲಿ ಸಿಲುಕಿ ವಿಭಿನ್ನ ಪಕ್ಷ ಪಂಗಡಗಳಲ್ಲಿ ಹರಿಹಂಚಿ ಹೋದವರಂತೆ ನೀವಾಗಬಾರದು. ಹೀಗೆ ಮಾಡಿದವರು ಘೋರ ಯಾತನೆಯನ್ನು ಅನುಭವಿಸುವರು." (3:105)

"ನೀವು ಪರಸ್ಪರ ಜಗಳಾಡಬೇಡಿರಿ. ಅನ್ಯಥಾ ನಿಮ್ಮಲ್ಲಿ ದೌರ್ಬಲ್ಯವುಂಟಾಗುವುದು ಮತ್ತು ನೀವು ಹೇಡಿಗಳಾಗಿ ಬಿಡುವಿರಿ" (8: 46)

"ತಮ್ಮ ಧರ್ಮವನ್ನು ಛಿನ್ನವಿಚ್ಛಿನ್ನಗೊಳಿಸಿ ಗುಂಪುಗುಂಪುಗಳಾಗಿ ಬಿಟ್ಟವರ ಜೊತೆ ನಿಮಗೆ ಯಾವ ಸಂಬಂಧವೂ ಇಲ್ಲ." (6: 159)

"ತಮ್ಮ ಬಳಿಗೆ ಜ್ಞಾನ ಬಂದ ಬಳಿಕವೂ ಅವರು ಪರಸ್ಪರರ ಮೇಲೆ ಅತಿರೇಕವೆಸಗುತ್ತಿದ್ದುದರಿಂದಾಗಿ ಅವರು ಪಕ್ಷ ಪಂಗಡಗಳಾಗಿ ಒಡೆದರು." (42: 14)

ಇಂತಹ ಭಿನ್ನಾಭಿಪ್ರಾಯಗಳ ಕುರಿತಾಗಿಯೇ ಪ್ರವಾದಿ(ಸ) ಈ ರೀತಿ ಎಚ್ಚರಿಕೆ

ನೀಡಿದ್ದಾರೆ, "ನೀವು ಪರಸ್ಪರ ಭಿನ್ನಾಭಿಪ್ರಾಯ ತಾಳಬೇಡಿರಿ. ಏಕೆಂದರೆ ನಿಮಗೆ ಮುಂಚೆ ಯಾರೆಲ್ಲ ಭಿನ್ನಾಭಿಪ್ರಾಯ ತಾಳಿದ್ದರೋ ಅವರು ನಾಶವಾಗಿ ಹೋದರು."

ಧರ್ಮದಲ್ಲಿ ಇನ್ನೊಂದು ವಿಧದ ಆಜ್ಞಾ ವಿಧಿಗಳಿವೆ. ಅವುಗಳಲ್ಲಿ ಭಿನ್ನಾಭಿಪ್ರಾಯ ಸ್ವಾಭಾವಿಕ ಮತ್ತು ಅನಿವಾರ್ಯ. ಏಕೆಂದರೆ ಶರೀಅತ್‌ನಲ್ಲಿ ಅವುಗಳಿಗೆ ಸ್ಪಷ್ಟ ಅರ್ಥ ನೀಡಲಾಗಿಲ್ಲ. ಅವು ಆಧಾರ ಪ್ರಮಾಣಗಳಿಂದ ಸಾಬೀತುಗೊಳ್ಳುತ್ತವೆ. ಅವುಗಳಲ್ಲಿ ವೈಚಾರಿಕ ಭಿನ್ನತೆ, ಗುಣ ವಿಶೇಷಗಳಲ್ಲಿ ಅಂತರ ಮತ್ತು ವರದಿಗಳ ಪರಸ್ಪರ ವೈರುಧ್ಯಗಳಿಂದಾಗಿ ಅರ್ಥ ಗ್ರಹಿಕೆ, ದೃಷ್ಟಿಕೋನ ಮತ್ತು ಪ್ರಾಶಸ್ತ್ಯಗಳಲ್ಲೂ ಭಿನ್ನತೆಯುಂಟಾಗುತ್ತದೆ. ಧರ್ಮದಲ್ಲಿ ಇಂತಹ ಸಂಶೋಧನಾತ್ಮಕ ವಿಧಿಗಳ ಉಪನಿಯಮಗಳನ್ನು ನಿರ್ಣಯಿಸುವಾಗ ಭಿನ್ನಾಭಿಪ್ರಾಯವುಂಟಾಗುವುದು. ಮುಸ್ಲಿಮ್ ಸಮುದಾಯದ ಎಲ್ಲ ವಿದ್ವಾಂಸರನ್ನೂ ಇಂತಹ ವಿಷಯಗಳಲ್ಲಿ ಒಂದು ಅಭಿಪ್ರಾಯಕ್ಕೆ ಬದ್ಧ ಗೊಳಿಸಲು ಸಾಧ್ಯವಿಲ್ಲ. ಇಂತಹ ವಿಧಿಗಳಲ್ಲಿ ಮೇರೆಯೊಳಗಿದ್ದು ಭಿನ್ನ ದೃಷ್ಟಿಕೋನವಿರಿಸುವುದು ಇಸ್ಲಾಮಿನಲ್ಲಿ ಆಕ್ಷೇಪಾರ್ಹವೂ ಅಲ್ಲ. ಪರಸ್ಪರ ಭಿನ್ನಾಭಿಪ್ರಾಯವಿರುವವರು ತಮ್ಮ ಸಂಶೋಧನೆಯಲ್ಲಿ ಪ್ರಾಮಾಣಿಕರೂ ವಿಶಾಲ ಮನಸ್ಕರೂ ಆಗಿದ್ದರೆ ಮತ್ತು ಅವರ ಸಂಶೋಧನೆಗಳ ಉದ್ದೇಶವು ಅಲ್ಲಾಹನ ಸಂಪ್ರೀತಿಗೋಸ್ಕರ ಸತ್ಯವನ್ನು ಕಂಡುಕೊಳ್ಳುವುದು ಮತ್ತು ಅದರಂತೆ ನಡೆಯುವುದಾಗಿದ್ದರೆ ಸಂಶೋಧನಾತ್ಮಕ ಮತ್ತು ಆಂಶಿಕ ವಿಷಯಗಳ ಭಿನ್ನಾಭಿಪ್ರಾಯಗಳಿಂದ ಚಿಂತನೆಯ ಮತ್ತು ಕರ್ಮದ ವ್ಯಾಪ್ತಿಯು ವಿಸ್ತಾರ ಗೊಳ್ಳುತ್ತದೆ. ಸಮುದಾಯದ ಸಾಮೂಹಿಕ ಜೀವನದಲ್ಲಿ ಸಂಕೀರ್ಣತೆ ಮತ್ತು ಸಂಕಷ್ಟಗಳು ದೂರವಾಗುತ್ತವೆ ಹಾಗೂ ಸಮುದಾಯದ ವೈಯಕ್ತಿಕ ಮತ್ತು ಸಾಮೂಹಿಕ ಅಗತ್ಯಗಳ ಪೂರೈಕೆಯು ಸುಲಭವಾಗುತ್ತದೆ.

ಸಹಾಬಿಗಳು ಮತ್ತು ತಾಬಈಗಳ ಮಧ್ಯೆ ಧರ್ಮದ ಆಂಶಿಕ ವಿಷಯಗಳಲ್ಲಿ ಭಿನ್ನಾಭಿಪ್ರಾಯಗಳಾಗಿವೆ. ಒಬ್ಬರು ಇನ್ನೊಬ್ಬರ ಅಭಿಪ್ರಾಯಕ್ಕಿಂತ ತನ್ನ ಅಭಿಪ್ರಾಯವೇ ಸರಿಯಾದುದೆಂದು ಪುರಾವೆಗಳ ಸಹಿತ ಸಮರ್ಥಿಸಲು ಪ್ರಯತ್ನಿಸಿದರು. ತಮ್ಮ ಸಂಶೋಧನೆಗಳನ್ನು ಸೂಕ್ತ ರೀತಿಯಲ್ಲಿ ಸಮರ್ಥಿಸಿದರು. ಯುಕ್ತಿ ಮತ್ತು ಸದುಪದೇಶದಿಂದ ತಮ್ಮ ಪ್ರಭುವಿನ ಮಾರ್ಗಕ್ಕೆ ಕರೆ ನೀಡುತ್ತಲೂ ಇದ್ದರು. ಆದರೆ ಅವರ ಈ ಭಿನ್ನಾಭಿಪ್ರಾಯಗಳು ಅವರ ಮಧ್ಯೆ ಎಂದೂ ದ್ವೇಷ ಅಸೂಯೆಗಳನ್ನು ಸೃಷ್ಟಿಸಲಿಲ್ಲ. ಅವರ ಪೈಕಿ ಯಾರೂ ಇನ್ನೊಬ್ಬರ ಉದ್ದೇಶದ ಬಗ್ಗೆ ಸಂಶಯ ತಾಳಲಿಲ್ಲ. ಯಾರ ಮೇಲೂ ಅಪವಾದ ಹೊರಿಸಲಿಲ್ಲ. ಅವರಾರೂ ತಮ್ಮ ಸಂಶೋಧಿತ ಅಭಿಪ್ರಾಯಗಳು ಶರೀಅತ್‌ನ ಮೂಲತತ್ವವೆಂದೋ ವಿಶ್ವಾಸಶ್ರದ್ಧೆಯ ನಿಯಮಗಳೆಂದೋ ವಾದಿಸಲಿಲ್ಲ. ತಮ್ಮ ಸಂಶೋಧಿತ ಅಭಿಪ್ರಾಯಗಳಿಗೆ ವಿರುದ್ಧ ಅಭಿಪ್ರಾಯ ಹೊಂದಿದವರನ್ನು ಕಾಫಿರರೆಂದೋ ಪಾಪಿಗಳೆಂದೋ ಪರಿಗಣಿಸಲಿಲ್ಲ. ಅವರು ನಿಜವಾಗಿ '*ಅಶಿದ್ದಾಉ ಅಲಲ್ ಕುಫ್ಫಾರಿ ರುಹಮಾಉ ಬೈನಹುಮ್*' (ಸತ್ಯನಿಷೇಧಿಗಳೊಂದಿಗೆ ಕಠೋರರೂ ಪರಸ್ಪರರ ಮಟ್ಟಿಗೆ ಕರುಣಾಳುಗಳೂ)ನ ಸಾಕಾರ ಮೂರ್ತಿಗಳಾಗಿದ್ದರು. ಏಕೆಂದರೆ ಧರ್ಮದ ಯಾವ ರಂಗದಲ್ಲಿ ಭಿನ್ನಾಭಿಪ್ರಾಯವು ವಿನಾಶಕಾರಿಯಾಗಿದೆ ಮತ್ತು ಯಾವ ರಂಗದಲ್ಲಿ ಅದು ಅಗತ್ಯವಾಗಿದೆ, ಅನುಗ್ರಹವಾಗಿದೆ ಎಂಬುದನ್ನು ಅವರು ಚೆನ್ನಾಗಿ

ಅರಿತಿದ್ದರು. ಅವರು ಸಮುದಾಯದ ಐಕ್ಯ, ಗೌರವ ಮತ್ತು ಪ್ರತಿಷ್ಠೆಯನ್ನು ಕಾಪಾಡಲು ಹಾಗೂ ಗೊಂದಲಗಳಿಂದ ಸಮುದಾಯವನ್ನು ರಕ್ಷಿಸಲು ಪ್ರವಾದಿವರ್ಯರ ಚರ್ಯೆ ಮತ್ತು ವಿಧಾನಗಳನ್ನು ಬಲವಾಗಿ ಹಿಡಿದುಕೊಂಡರು. ಅದರಿಂದಾಗಿ ಅವರಿಗೆ ಈ ಲೋಕದಲ್ಲೂ ಶಕ್ತಿ, ಗೌರವ ಮತ್ತು ಪ್ರತಿಷ್ಠೆಗಳು ಲಭ್ಯವಾದುವು.

ಆದರೆ ಇಂದು ಮುಸ್ಲಿಮ್ ಸಮುದಾಯವು ಸಹಾಬಿಗಳ ಮತ್ತು ಗತಿಸಿ ಹೋದ ಹಿರಿಯರ ವಿಧಾನಗಳಿಂದ ದೂರ ಸರಿದಿದೆ. ಆಂಶಿಕ ಭಿನ್ನಾಭಿಪ್ರಾಯಗಳ ಬಗ್ಗೆ ಹಠ, ಪಕ್ಷಪಾತ ಮತ್ತು ಗುಂಪುಗಾರಿಕೆಗೆ ಸಿಲುಕಿದೆ. ಈ ಕುರಿತು ಪರಸ್ಪರ ಸಮಾಲೋಚಿಸಲು, ಪರಸ್ಪರ ವಿಷಯಗಳನ್ನು ಮನವರಿಕೆ ಮಾಡಿ ಕೊಡಲು ಅವಕಾಶವೇ ಇಲ್ಲದಂತಹ ಪರಿಸ್ಥಿತಿಯುಂಟಾಗಿದೆ. ಬುದ್ಧಿ, ವಿವೇಕ ಮತ್ತು ಪುರಾವೆಗಳಿಗೂ ಯಾವುದೇ ಬೆಲೆಯಿಲ್ಲ. ಆಂಶಿಕ ಭಿನ್ನಾಭಿಪ್ರಾಯಗಳು ಧರ್ಮದ ಬುನಾದಿಗೆ ಸಾಟಿಯಾಗಿ ನಿಂತಿದೆ. ಇದರಿಂದ ಸಮುದಾಯದ ವಿವಿಧ ಗುಂಪುಗಳು ಪರಸ್ಪರ ದ್ವೇಷ, ಅಸೂಯೆ, ಹಗೆತನ, ಅಪವಾದ, ಮೂದಲಿಕೆ ಮತ್ತು ದುರ್ಭಾವನೆಗಳನ್ನು ಬಹಿರಂಗವಾಗಿ ವಿನಿಮಯ ಮಾಡಿಕೊಳ್ಳುತ್ತವೆ. ಕೆಲವೊಮ್ಮೆ ಇದು ಕೊಲೆ, ಹಿಂಸೆಯ ಮಟ್ಟಕ್ಕೂ ತಲಪುತ್ತದೆ. ಇದರಿಂದ ಸಮುದಾಯದ ಏಕತೆಯು ಛಿದ್ರಛಿದ್ರವಾಗಿ ಬಿಟ್ಟಿದೆ. ವೈರಿಗಳ ಮನಸ್ಸಿನಿಂದ ಅದರ ಬಗೆಗಿನ ಭಯ ಹೊರಟು ಹೋಗಿದೆ. ಇಂದು ಸಮುದಾಯವು ವೈರಿಗಳಿಗೆ ಅಧೀನವಾಗಿ ನೆರೆಯಲ್ಲಿ ತೇಲುವ ಕಸ ಕಡ್ಡಿಯಂತಾಗಿ ಬಹಳ ಹಗುರವಾಗಿ ಬಿಟ್ಟಿದೆ.

ಧರ್ಮದ ಮೇರೆಯೊಳಗಿನ ಭಿನ್ನಾಭಿಪ್ರಾಯಗಳು ಸಮುದಾಯದ ಪಾಲಿಗೆ ಅನುಗ್ರಹವೆಂದು ಪ್ರವಾದಿ(ಸ) ಸಾರಿದ್ದಾರೆ. ಅಲ್ಲಾಹನು, ಸಮುದಾಯಕ್ಕೆ ಕಾಲದ ಬದಲಾವಣೆಯಿಂದಾಗಿ ಧರ್ಮದ ಆಚರಣೆಯು ಕಷ್ಟವಾಗದಿರಲೆಂದು ಕೇವಲ ಮೂಲಭೂತ ಮತ್ತು ತಾತ್ವಿಕ ವಿಷಯಗಳಲ್ಲಿ ಹಲಾಲ್ ಮತ್ತು ಹರಾಮ್‌ನ ಆದೇಶಗಳನ್ನು ನೀಡಿದ್ದಾನೆ. ಇದು ಆತನ ಕರುಣೆಯಾಗಿದ್ದು ಎಲ್ಲ ಕಾಲಗಳಲ್ಲೂ ಎಲ್ಲ ಪರಿಸ್ಥಿತಿಗಳಲ್ಲೂ ಈ ತತ್ವಗಳ ಆಧಾರದ ಮೇರೆಯೊಳಗಿದ್ದುಕೊಂಡು ಆಚರಿಸಲಿಕ್ಕಾಗಿ ಸಂಶೋಧನೆಯ ಮೂಲಕ ಆಂಶಿಕ ವಿಷಯಗಳನ್ನು ನಿರ್ಣಯಿಸಲು ಅನುವು ಮಾಡಿ ಕೊಟ್ಟಿರುತ್ತಾನೆ. ಆದರೆ ಈ ಭಿನ್ನಾಭಿಪ್ರಾಯಗಳು ಪರಸ್ಪರ ದ್ವೇಷ, ಹಗೆತನ ಮತ್ತು ಗಲಾಟೆಗೆ ಕಾರಣವಾಗಿರುವುದು ವಿಷಾದನೀಯ.

ಆಂಶಿಕ ಮತ್ತು ಸಂಶೋಧಿತ ವಿಷಯಗಳಲ್ಲಿ ಒಡಕಿನಿಂದ ಮುಕ್ತವಾಗುವವರೆಗೆ ಮತ್ತು ಈ ಬಗ್ಗೆ ವಿಶಾಲ ಮನೋಭಾವ ಹೊಂದುವವರೆಗೆ ಸಮಾಜದ ಸುಧಾರಣೆ ಕಷ್ಟಸಾಧ್ಯ.

ಇಲ್ಲಿ ಇಸ್ಲಾಮೀ ಶರೀಅತ್‌ನಲ್ಲಿ ಈ ಎರಡೂ ವಿಧದ ಆದೇಶಗಳು ಅವತೀರ್ಣಗೊಳ್ಳುವುದರ ಹಿಂದಿರುವ ಯುಕ್ತಿ, ಉದ್ದೇಶ ಮತ್ತು ಅಗತ್ಯವಾದರೂ ಏನಿತ್ತು ಎಂಬ ಪ್ರಶ್ನೆ ಉದ್ಭವಿಸುವುದು ಸಹಜ. ಅದರ ಉತ್ತರವೇನೆಂದರೆ ಇಸ್ಲಾಮೀ ಶರೀಅತ್‌ನಲ್ಲಿ ಆಜ್ಞೆಗಳು ಒಂದೇ ವಿಧದಲ್ಲಿ ಅವತೀರ್ಣಗೊಳ್ಳುತ್ತಿದ್ದರೆ ಮಾನವನ ಸಮಸ್ಯೆಗಳು ಸುಧಾರಿಸುವ ಬದಲು ಕೆಡುತ್ತಿತ್ತು. ಉದಾ: ವಿಶ್ವಾಸ ನಂಬಿಕೆಗಳು, ಧರ್ಮದ ಮೂಲಭೂತ ತತ್ವಗಳು, ಕಡ್ಡಾಯ ಕರ್ಮಗಳು, ದಂಡನೆಯ ನಿಯಮಗಳು, ಹಲಾಲ್- ಹರಾಮ್ ಮತ್ತು ಆರಾಧನೆಯ ವಿಶಿಷ್ಟ ರೂಪಗಳು,

ಅವುಗಳ ಸಮಯ, ಸಂಖ್ಯೆ ಅಥವಾ ವ್ಯವಹಾರ ರಂಗಗಳು, ನಿಯಮಗಳು ಇತ್ಯಾದಿಗಳನ್ನು ಮಾನವನ ಬುದ್ಧಿ ಮತ್ತು ತೀರ್ಮಾನಕ್ಕೆ ಬಿಟ್ಟು ಬಿಡುತ್ತಿದ್ದರೆ ಗೊಂದಲ ಮತ್ತು ಒಡಕಿಗೆ ಆಹ್ವಾನ ನೀಡುವಂತಾಗುತ್ತಿತ್ತು. ಆದುದರಿಂದ ಅಲ್ಲಾಹನು ಮಾನವನ ಮೇಲೆ ಕರುಣೆ ತೋರಿ ಆ ರಂಗಗಳನ್ನು ಒಡಕು ಮತ್ತು ಭಿನ್ನಾಭಿಪ್ರಾಯಗಳಿಂದ ರಕ್ಷಿಸುವ ಸಲುವಾಗಿ ಸ್ಥಿರ ಮತ್ತು ಶಾಶ್ವತ ಆಜ್ಞೆಗಳನ್ನು ನೀಡಿದನು. ಏಕೆಂದರೆ ಆ ರಂಗಗಳ ಅಗತ್ಯ ಮತ್ತು ಯುಕ್ತಿಯನ್ನು ತನ್ನ ಸೀಮಿತ ಬುದ್ಧಿ ಸಾಮರ್ಥ್ಯ, ಜ್ಞಾನದಿಂದ ಸಂಪೂರ್ಣ ಗ್ರಹಿಸಿಕೊಳ್ಳಲು ಪ್ರತಿಯೊಬ್ಬನಿಗೂ ಸಾಧ್ಯವಿಲ್ಲ. ಕಾಲದ ಉರುಳಾಟ ದಿಂದ ಅವುಗಳಲ್ಲಿ ಯಾವುದೇ ಬದಲಾವಣೆಯೂ ಆಗುವುದಿಲ್ಲ. ಅದು ಸದಾ ಒಂದೇ ಸ್ಥಿತಿಯಲ್ಲಿ ಉಳಿಯುವಂತಹ ಶಾಶ್ವತ ಸತ್ಯಗಳಾಗಿವೆ.

ಅದಕ್ಕೆ ವ್ಯತಿರಿಕ್ತವಾಗಿ ಆಂಶಿಕ ವಿಷಯಗಳಲ್ಲಿ, ಅದು ವೈಚಾರಿಕವಾದರೂ ಕ್ರಿಯಾತ್ಮಕವಾದರೂ ಭಿನ್ನಾಭಿಪ್ರಾಯಗಳಿಂದ ಅಷ್ಟು ಹಾನಿಯಿಲ್ಲ. ಮಾತ್ರವಲ್ಲ ಈ ರಂಗಗಳಲ್ಲಿ ಏಕತೆಯನ್ನು ಮಾಡ ಹೊರಟರೆ ಜನರ ವ್ಯವಹಾರಗಳಲ್ಲಿ ಸಂಕೀರ್ಣತೆ, ಹಾನಿ ಮತ್ತು ಗೊಂದಲ ಸೃಷ್ಟಿಯಾದೀತು. ಕಾಲದ ಬದಲಾವಣೆ ಮತ್ತು ಆಗಾಗ ತಲೆದೋರುವ ಹೊಸ ಸಮಸ್ಯೆಗಳ ಅಸಂಖ್ಯಾತ ರೂಪಗಳಿಂದಾಗಿ ಇಸ್ಲಾಮೀ ಶರೀಅತ್ ಮತ್ತು ಮಾನವರ ಅಗತ್ಯಗಳ ಮಧ್ಯೆ ಸಂಘರ್ಷವೇರ್ಪಡುತ್ತಿತ್ತು. ಆದುದರಿಂದ ಆಂಶಿಕ ವಿಷಯಗಳನ್ನು ಗ್ರಹಿಸಲಿಕ್ಕಾಗಿ ಸಂಶೋಧನೆ ಅಗತ್ಯ ಮತ್ತು ಅಪೇಕ್ಷಣೀಯವಷ್ಟೇ ಅಲ್ಲ, ಅನಿವಾರ್ಯವೂ ಆಗಿದೆ. ಆದುದರಿಂದ ಧರ್ಮದ ಆಚರಣೆಯು ಸುಲಭ ಸಾಧ್ಯವಾಗುವಂತಾಗಲು ಆಂಶಿಕ ವಿಷಯಗಳಲ್ಲಿ ಮಾನವನ ಪ್ರತಿಯೊಂದು ಹೊಸ ಅಗತ್ಯವನ್ನು ಪರಿಗಣಿಸಬೇಕಾದುದು ಅಗತ್ಯ. ಇದು ನವ ನವೀನ ಸಂಶೋಧನೆಗಳಿಂದಲ್ಲದೆ ಸಾಧ್ಯವಿಲ್ಲ.

ಇದೇ ಉದ್ದೇಶಕ್ಕಾಗಿ ಅಲ್ಲಾಹನು ಆಂಶಿಕ ವಿಷಯಗಳಲ್ಲಿ ಶರೀಅತ್‌ನ ನಿಯಮಗಳಿಗೆ ಮತ್ತು ಮೇರೆಗಳಿಗೆ ಬದ್ಧವಾಗಿ ಇಜ್ತಿಹಾದ್ (ಸಂಶೋಧನೆ) ಮಾಡುವ ಮುಕ್ತ ಅವಕಾಶವನ್ನು ತೆರೆದಿಟ್ಟಿರುವುದು ಆತನ ಯುಕ್ತಿಯಾಗಿದೆ. ಅದರಿಂದ ಬಿಡಿಸಲಾಗದ ಕಷ್ಟಕರ ಸಮಸ್ಯೆಗಳಿಗೆ ಯಾವಾಗಲೂ ಮಾನವರಿಗೆ ಮಾರ್ಗದರ್ಶನ ದೊರೆಯುವಂತಾಯಿತು. ಎಲ್ಲ ಕಾಲಗಳಲ್ಲೂ ಎಲ್ಲ ಪರಿಸ್ಥಿತಿಯಲ್ಲೂ ಮಾನವನ ಅಗತ್ಯಗಳು ಪೂರ್ತಿಗೊಳ್ಳುವಂತಾಯಿತು. ಆದುದರಿಂದ ಸಂಶೋಧನಾತ್ಮಕ ಹಾಗೂ ಆಂಶಿಕ ವಿಷಯಗಳಲ್ಲೂ ಇಡೀ ಸಮುದಾಯವು ಒಂದೇ ವಿಧಾನವನ್ನನುಸರಿಸಬೇಕೆಂದು ಯಾರಾದರೂ ಬಯಸುವುದಾದರೆ, ಅದು ಅಸಾಧ್ಯದ ಮಾತು. ಏಕೆಂದರೆ ಆಂಶಿಕ ಮತ್ತು ಸಂಶೋಧನಾತ್ಮಕ ಭಿನ್ನಾಭಿಪ್ರಾಯಗಳು ಸ್ವಾಭಾವಿಕ. ಒಂದು ವೇಳೆ ಅಲ್ಲಾಹನು ಎಲ್ಲ ಕಾಲಗಳಿಗೂ ಎಲ್ಲ ಪರಿಸ್ಥಿತಿಗಳಿಗೂ ಮಾನವರನ್ನು ಒಂದೇ ಅಭಿಪ್ರಾಯದಲ್ಲಿರಿಸ ಬಯಸಿದ್ದರೆ, ವ್ಯಾಖ್ಯಾನದಲ್ಲಿ ಭಿನ್ನಾಭಿಪ್ರಾಯಕ್ಕೆ ಅವಕಾಶವೇ ಇಲ್ಲದಂತಹ ಒಂದೇ ಬಗೆಯ ಆಜ್ಞೆಗಳನ್ನು ಅವತೀರ್ಣಗೊಳಿಸುತ್ತಿದ್ದನು.

ಆದರೆ ಧರ್ಮದಲ್ಲಿ ಕೆಲವು 'ಮುಹ್ಕಮಾತ್'ಗಳಿದ್ದು, ಅವು ಧರ್ಮದ ತಳಹದಿಯಾಗಿವೆ. ಅದರ ಅರ್ಥ ತಾತ್ಪರ್ಯಗಳೂ ಸ್ಪಷ್ಟವಾಗಿದೆ. ಇನ್ನು ಕೆಲವು 'ಮುತಶಾಬಿಹಾತ್'ಗಳಾಗಿವೆ. ಅವುಗಳ ಅರ್ಥ ಅಸ್ಪಷ್ಟವಾಗಿದೆ. ಲೋಕದ ಎಲ್ಲ ಭಾಷೆಗಳಂತೆಯೇ ಅರಬಿ ಭಾಷೆಯಲ್ಲೂ

ವಿವಿಧ ಅರ್ಥಗಳಿರುವ ಕೆಲವು ಪದಗಳಿವೆ. ಒಂದೇ ಪದವು ಕೆಲವೆಡೆ ಅದರ ಮೂಲ ಅರ್ಥದಲ್ಲಿ ಬಳಸಲ್ಪಟ್ಟರೆ, ಇನ್ನು ಕೆಲವೆಡೆ ಅದನ್ನು ಸಾಂಕೇತಿಕ ಅರ್ಥದಲ್ಲಿ ಬಳಸಲಾಗುತ್ತದೆ. ಅದರ ಉದ್ದೇಶ ಒಂದೆಡೆ ವಿಶಿಷ್ಟವಾದರೆ, ಇನ್ನೊಂದೆಡೆ ಸಾಮಾನ್ಯವಾಗಿರುತ್ತದೆ. ಒಂದೆಡೆ ಅದರ ಅರ್ಥವು ವಿಶಾಲವಾಗಿದ್ದರೆ, ಇನ್ನೊಂದೆಡೆ ಸೀಮಿತವಾಗಿರುತ್ತದೆ. ಈ ಎಲ್ಲವುಗಳ ನಡುವೆಯೂ ಕೆಲವು ಪದಗಳು ಸ್ಪಷ್ಟ ಅರ್ಥಗಳಲ್ಲಿ ಬಳಸಲಾದರೆ, ಇನ್ನು ಕೆಲವು ಅಸ್ಪಷ್ಟವಾಗಿ ಬಳಸಲಾಗುತ್ತದೆ. ಒಂದು ಪದವು ಒಬ್ಬನ ದೃಷ್ಟಿಯಲ್ಲಿ ಸಮ್ಮತವಾದರೆ, ಇನ್ನೊಬ್ಬನ ದೃಷ್ಟಿಯಲ್ಲಿ ಅಸಮ್ಮತವಾಗಿದೆ. ಉದಾ: ತಯಮ್ಮುಮ್‌ನ ಕುರಿತು ಸೂಕ್ತದಲ್ಲಿರುವ 'ಸ್ತ್ರೀಯರನ್ನು ಸ್ಪರ್ಶಿಸಿದಾಗ' ಎಂದರೆ ಇಬ್ನು ಅಬ್ಬಾಸ್ ವಿವರಿಸಿದಂತೆ, ಕೇವಲ ಬಾಹ್ಯವಾಗಿ ಮುಟ್ಟುವುದೇ ಅಥವಾ ಸಂಸರ್ಗ ನಡೆಸುವುದರ ಸೂಚನೆಯೇ ಎಂಬುದು. ಅದೇ ರೀತಿ 'ಶುದ್ಧ ಮಣ್ಣಿನಿಂದ ತಯಮ್ಮುಮ್ ಮಾಡಿರಿ' ಎಂದರೆ ಕೇವಲ ಮಣ್ಣೇ ಅಥವಾ ಮಣ್ಣಿನಂತಹ ಯಾವುದೇ ವಸ್ತುವಾಗಿರುವುದೇ? ತಲಾಕ್‌ನ ಅವಧಿ ಮೂರು ಆರ್ತವ ಎಂಬುದನ್ನೇ ತೆಗೆದುಕೊಳ್ಳಿ.'ಮೂರು ಆರ್ತವ' ಎಂದರೆ ಮೂರು ಬಾರಿ ಋತುಸ್ರಾವವಾಗುವುದೇ ಅಥವಾ ಮೂರು ಬಾರಿ ಶುದ್ಧಿಯಾಗುವುದೇ? ಏಕೆಂದರೆ ಅರಬಿ ಭಾಷೆಯಲ್ಲಿ ಕುರೂಅ್ (ಆರ್ತವ) ಎಂಬ ಪದಕ್ಕೆ ಋತುಸ್ರಾವ ಮತ್ತು ಶುದ್ಧಿ ಎಂಬ ಎರಡೂ ಅರ್ಥಗಳಿವೆ.

ಅದೇ ರೀತಿ ಅಲ್ಲಾಹನು ಎಲ್ಲ ಮನುಷ್ಯರನ್ನು ವಿಭಿನ್ನ ರೀತಿಯಲ್ಲಿ ಸೃಷ್ಟಿಸಿದ್ದಾನೆ. ಒಬ್ಬೊಬ್ಬನಿಗೆ ಒಂದೊಂದು ಪ್ರತಿಭೆಯನ್ನು ನೀಡಿದ್ದಾನೆ. ರೂಪ, ಗುಣ, ಸ್ವರ ಮತ್ತು ಅಂಗಾಂಗಗಳ ರಚನೆಯಲ್ಲಿ ಒಬ್ಬನಂತೆ ಇನ್ನೊಬ್ಬನಿರುವುದಿಲ್ಲ. ಅದೆ ರೀತಿ ವಿಚಾರ, ವಿವೇಕ ಮತ್ತು ಒಲವುಗಳ ವಿಷಯದಲ್ಲೂ ಪ್ರತಿಯೊಬ್ಬನೂ ವಿಭಿನ್ನನಾಗಿರುತ್ತಾನೆ. ಈ ಪ್ರತ್ಯೇಕತೆಯಿಂದಾಗಿಯೇ ವಸ್ತು, ವ್ಯಕ್ತಿ ಮತ್ತು ಕ್ರಿಯೆಗಳ ವಿಷಯದಲ್ಲಿ ಪ್ರತಿಯೊಬ್ಬನ ನಿಲುವೂ ಇನ್ನೊಬ್ಬನಿಗಿಂತ ಭಿನ್ನವಾಗಿರುತ್ತದೆ.

ಯಾವ ರೀತಿಯಲ್ಲಿ ಎಲ್ಲ ಮಾನವರ ಎಲ್ಲ ವ್ಯವಹಾರಗಳಲ್ಲಿ ಎಲ್ಲ ಭಿನ್ನಾಭಿಪ್ರಾಯಗಳನ್ನು ಅಳಿಸಿ ಒಂದೇ ಅಭಿಪ್ರಾಯವನ್ನಾಗಿ ಮಾಡುವುದು ಸಾಧ್ಯವಿಲ್ಲವೋ, ಅದೇ ರೀತಿ ಧರ್ಮದಲ್ಲಿ ಸಂಶೋಧನಾತ್ಮಕ ಭಿನ್ನಾಭಿಪ್ರಾಯಗಳಲ್ಲೂ ಏಕತೆ ಸಾಧಿಸುವುದು ಸಾಧ್ಯವಿಲ್ಲ. ಏಕೆಂದರೆ ಅದು ಅಲ್ಲಾಹನು ಮಾನವನನ್ನು ಸೃಷ್ಟಿಸಿದ ಪ್ರಕೃತಿಗೆ ವಿರುದ್ಧವಾಗಿದೆ. ಯಾವ ರೀತಿ ರೂಪ, ಬುದ್ಧಿ ಮತ್ತು ಒಲವುಗಳ ಭಿನ್ನತೆಗಳು ವೈವಿಧ್ಯತೆಯ ಭಿನ್ನತೆಗಳಾಗಿವೆಯೇ ಹೊರತು ವೈರುಧ್ಯದ ಭಿನ್ನತೆಗಳಲ್ಲವೋ, ಅದೇ ರೀತಿ ಆಂಶಿಕ ವಿಷಯಗಳಲ್ಲಿ ಸಂಶೋಧನಾತ್ಮಕ ಭಿನ್ನತೆಗಳೂ ವೈವಿಧ್ಯತೆಯ ಭಿನ್ನಾಭಿಪ್ರಾಯಗಳೇ ಹೊರತು ಧರ್ಮದ ಭಿನ್ನತೆಯಲ್ಲ. ಮಾನವರ ಮಧ್ಯೆ ವೈವಿಧ್ಯತೆಯು ಯಾವಾಗಲೂ ಮಾನವರ ಅಭಿವೃದ್ಧಿ ಮತ್ತು ಕಲ್ಯಾಣದ ಹೇತುವಾಗಿರುವ ಸಂಪನ್ಮೂಲ (Assets) ಆಗಿರುವಂತೆಯೇ ಆಂಶಿಕ ಭಿನ್ನಾಭಿಪ್ರಾಯಗಳೂ ಇಸ್ಲಾಮಿನ ಮೇಲ್ಮೆ, ಶಕ್ತಿ ಮತ್ತು ಅಲ್ಲಾಹನ ಯುಕ್ತಿಯಾಗಿದೆ. ಅಲ್ಲಾಹನ ಈ ಯುಕ್ತಿಯಿಂದಲೇ ಇಸ್ಲಾಮ್ ಸಮಗ್ರ ಮತ್ತು ಶಾಶ್ವತ ಧರ್ಮವಾಗಿದೆ. ಈ ಶಕ್ತಿಯಿಂದಾಗಿಯೇ

ಕಾಲದ ಉರುಳಾಟದಲ್ಲಿ ಹುಟ್ಟುತ್ತಲಿರುವ ಹೊಸ ಹೊಸ ಸಮಸ್ಯೆಗಳನ್ನೂ ಪಂಥಾಹ್ವಾನಗಳನ್ನೂ ಇಸ್ಲಾಮ್ ಸಮರ್ಥವಾಗಿ ಪ್ರತಿರೋಧಿಸಿದೆ, ಮುಂದೆಯೂ ಪ್ರತಿರೋಧಿಸುವುದು.

ಮಾನವರಲ್ಲಿ ಕೆಲವರು ಕಠೋರರೂ ಇನ್ನು ಕೆಲವರು ಮೃದು ಸ್ವಭಾವದವರೂ ಇರುತ್ತಾರೆ. ಕೆಲವರು ಬಾಹ್ಯ ಪದಗಳಿಂದ ವಿಷಯಗಳನ್ನು ಗ್ರಹಿಸುತ್ತಾರೆ. ಇನ್ನು ಕೆಲವರ ದೃಷ್ಟಿಯು ಅದರ ಗೂಢಾರ್ಥ ಮತ್ತು ಸ್ಫೂರ್ತಿಯ ಮೇಲಿರುತ್ತದೆ. ಕೆಲವರು ವಿಶಾಲ ಮನಸ್ಕರಿದ್ದರೆ, ಇನ್ನು ಕೆಲವರು ಸಂಕುಚಿತ ಮನೋಭಾವ ಹೊಂದಿರುತ್ತಾರೆ. ಮನೋವಿಜ್ಞಾನದ ಪ್ರಕಾರ ಸ್ವಭಾವ ಗುಣಗಳ ಈ ಭಿನ್ನತೆಯ ಪ್ರಭಾವವು ಅವರ ತೀರ್ಮಾನಗಳ ಮೇಲೂ ಬೀಳುತ್ತದೆ. ಅದು ಕರ್ಮಶಾಸ್ತ್ರ ವಿಧಿಗಳಿಗೆ ಸಂಬಂಧಿಸಿದ್ದಿರಲಿ, ರಾಜಕೀಯ ವಿಷಯಕ್ಕೆ ಸಂಬಂಧಿಸಿದ್ದಿರಲಿ ಅಥವಾ ಮಾನವನ ದೈನಂದಿನ ಎದುರಾಗುವ ಸಮಸ್ಯೆಗಳಿಗೆ ಸಂಬಂಧಿಸಿದ್ದಿರಲಿ. ಮಾನವ ಸ್ವಭಾವದ ಭಿನ್ನತೆಗಳಿಗೆ ಸ್ಪಷ್ಟವಾದ ಉದಾಹರಣೆ ನಮಗೆ ಪ್ರವಾದಿ(ಸ) ಅವರ ಇಬ್ಬರು ಪ್ರಸಿದ್ಧ ಸಂಗಾತಿಗಳಾದ ಅಬ್ದುಲ್ಲಾ ಬಿನ್ ಉಮರ್ ಮತ್ತು ಅಬ್ದುಲ್ಲಾ ಬಿನ್ ಅಬ್ಬಾಸ್(ರ) ಅವರ ಸಂಶೋಧನೆಗಳಲ್ಲೂ ಅವರ ಅಭಿಪ್ರಾಯಗಳಲ್ಲೂ ಸಿಗುತ್ತದೆ.

ಇಬ್ನು ಉಮರ್(ರ) ಅವರು ಮೈಗೆ ಕೊಳಕು ತಾಗೀತೆಂಬ ಭೀತಿಯಿಂದ ಸಣ್ಣ ಮಕ್ಕಳನ್ನು ಹತ್ತಿರ ಬರಗೊಡುತ್ತಿರಲಿಲ್ಲ. ಆದರೆ ಇಬ್ನು ಅಬ್ಬಾಸ್(ರ) ಮಕ್ಕಳನ್ನು ಅಪ್ಪಿ ಮುದ್ದಾಡುತ್ತಿದ್ದರು. ಅವರ ಸುವಾಸನೆ ಎಷ್ಟು ಆನಂದದಾಯಕ ಎನ್ನುತ್ತಿದ್ದರು.

ಇಬ್ನು ಉಮರ್‌ರ ಅಭಿಪ್ರಾಯದಲ್ಲಿ ಸ್ತ್ರೀಯ ಮೈ ತಾಗಿದರೆ ವುಝೂ ಭಂಗಗೊಳ್ಳುತ್ತದೆ. ಆದರೆ ಇಬ್ನು ಅಬ್ಬಾಸ್‌ರ ಪ್ರಕಾರ ಭಂಗಗೊಳ್ಳುವುದಿಲ್ಲ. ಇಬ್ನು ಉಮರ್‌ರು ಹಜರುಲ್ ಅಸ್ವದನ್ನು ಮುಟ್ಟಲಿಕ್ಕಾಗಿ ಜನಸಾಗರದ ಮಧ್ಯೆ ನುಸುಳುವುದನ್ನು ಇಷ್ಟಪಡುತ್ತಿದ್ದರು. ಅದರಲ್ಲಿ ಅವರಿಗೆ ಪೆಟ್ಟಾದರೂ ಸರಿ. ಆದರೆ ಇಬ್ನು ಅಬ್ಬಾಸ್ ಈ ರೀತಿ ನುಸುಳುವುದನ್ನು ಮೆಚ್ಚುತ್ತಿರಲಿಲ್ಲ. ನೀವು ಯಾರಿಗೂ ತೊಂದರೆ ಕೊಡಬಾರದು. ನಿಮಗೂ ಯಾರೂ ತೊಂದರೆ ಕೊಡಬಾರದು ಎಂದವರು ಹೇಳುತ್ತಿದ್ದರು.

ಬದ್ರ್ ಯುದ್ಧದ ಕೈದಿಗಳನ್ನು ಪರಿಹಾರ ಧನ ಪಡೆದು ಬಿಡುಗಡೆ ಮಾಡಬೇಕೆಂಬ ಅಬೂಬಕರ್(ರ) ಅವರ ನಿಲುವು ಮತ್ತು ಅವರನ್ನು ವಧಿಸಬೇಕೆಂಬ ಉಮರ್(ರ) ಅವರ ನಿಲುವು ಆ ಇಬ್ಬರು ಹಿರಿಯ ಸಹಾಬಿಗಳ ಸ್ವಭಾವಗಳಲ್ಲಿದ್ದ ನೈಜ ಭಿನ್ನತೆಯನ್ನು ಸೂಚಿಸುತ್ತದೆ. ಹ.ಮೂಸಾ ಮತ್ತು ಹಾರೂನ್(ಅ) ಅವರು ತಮ್ಮ ಸಮುದಾಯದವರ ಗೋಪೂಜೆಯ ಸಂದರ್ಭದಲ್ಲಿ ತಳೆದಿದ್ದ ವಿಭಿನ್ನ ನಿಲುವು ಅವರ ಸ್ವಭಾವದ ಭಿನ್ನತೆಗೆ ಹಿಡಿದ ಕನ್ನಡಿಯಾಗಿದೆ.

ಭಿನ್ನಾಭಿಪ್ರಾಯವು ಮಾನವನ ಸ್ವಾಭಾವಿಕ ಗುಣವಾಗಿದೆ. ಆದ್ದರಿಂದಲೇ ಮೇರೆಯೊಳಗಿರುವ ಭಿನ್ನಾಭಿಪ್ರಾಯವನ್ನು ಸಮುದಾಯದ ಪಾಲಿಗೆ ಅನುಗ್ರಹ ಮತ್ತು ವೈಶಾಲ್ಯವೆನ್ನಲಾಗಿದೆ. ಮಾನವ ಜೀವನದ ಒಂದು ರಂಗದಲ್ಲಿ ಅಲ್ಲಾಹನು ಸಮುದಾಯದ ಮೇಲೆ ಕರುಣೆ ತೋರುವ ಉದ್ದೇಶದಿಂದ ಮೌನ ವಹಿಸಿದ್ದಾನೆ. ವಿವರವಾದ ಮಾರ್ಗದರ್ಶನವನ್ನು ನೀಡಲಿಲ್ಲ. ಅದೇ ರಂಗದಲ್ಲಿ ತತ್ವಗಳ ಆಧಾರದಲ್ಲಿ ಮೇರೆಯೊಳಗಿದ್ದುಕೊಂಡು ಸಂಶೋಧನೆ

ನಡೆಸಿ ಹೊಸ ವಿಧಾನಗಳನ್ನು ಹುಡುಕುವುದು ಅನುಗ್ರಹವಾಗಿದೆ. ಅದರಲ್ಲಿ ತಪ್ಪಾದರೂ ಒಂದು ಪುಣ್ಯವಿದೆಯೆಂದು ಪ್ರವಾದಿ(ಸ) ಹೇಳಿದ್ದಾರೆ.

ಪ್ರವಾದಿ(ಸ) ಹೇಳಿದರು, "ಅಲ್ಲಾಹನು ಕೆಲವು ಕರ್ಮಗಳನ್ನು ಕಡ್ಡಾಯಗೊಳಿಸಿರುವನು. ಅವುಗಳನ್ನು ವ್ಯರ್ಥಗೊಳಿಸಬೇಡಿರಿ. ಕೆಲವು ಮೇರೆಗಳನ್ನು ನಿಶ್ಚಯಿಸಿರುವನು. ಅವುಗಳನ್ನು ಉಲ್ಲಂಘಿಸಬೇಡಿರಿ. ಕೆಲವು ವಸ್ತುಗಳನ್ನು ನಿಷೇಧಿಸಿರುವನು. ಅವುಗಳ ಬಳಿಯೂ ಸುಳಿಯದಿರಿ. ಕೆಲವು ವಿಷಯಗಳ ಬಗ್ಗೆ ಮರೆತು ಹೋಗದೆ ನಿಮ್ಮ ಮೇಲಿನ ಕರುಣೆಯಿಂದ ಮೌನ ವಹಿಸಿರುವನು. ಅವುಗಳ ಬಗ್ಗೆ ತರ್ಕಿಸಬೇಡಿರಿ. ಅವುಗಳನ್ನು ಕೆದಕಬೇಡಿರಿ." (ದಾರುಕುತ್ನೀ)

"ಅಲ್ಲಾಹನು ತನ್ನ ಗ್ರಂಥದಲ್ಲಿ ಏನೆಲ್ಲ ಹಲಾಲ್‌ಗೊಳಿಸಿರುವನೋ ಅವೆಲ್ಲಾ ಹಲಾಲ್ ಆಗಿವೆ. ಯಾವುದನ್ನು ಹರಾಮ್ ಗೊಳಿಸಿರುವನೋ ಅದು ಹರಾಮ್ ಆಗಿದೆ. ಯಾವ ವಸ್ತುವಿನ ಬಗೆಗೆ ಮೌನ ವಹಿಸಿರುವನೋ ಅದು ಕೊಡುಗೆಯಾಗಿದೆ. ಅಲ್ಲಾಹನಿಂದ ಆ ಕೊಡುಗೆಯನ್ನು ಸ್ವೀಕರಿಸಿರಿ. ಏಕೆಂದರೆ ಅಲ್ಲಾಹನು ಯಾವುದನ್ನೂ ಮರೆಯವುದಿಲ್ಲ. ಅನಂತರ ಈ ಸೂಕ್ತ ಪಠಿಸಿದರು: ನಿನ್ನ ಪ್ರಭು ಮರೆಯುವವನಲ್ಲ." (ಹಾಕಿಮ್)

ಅಲ್ಲಾಹನು ಯಾವ ವಿಷಯಗಳ ಬಗ್ಗೆ ಸಮುದಾಯದ ಮೇಲೆ ಅನುಗ್ರಹ ತೋರುವ ಉದ್ದೇಶದಿಂದ ಮೌನ ವಹಿಸಿರುವನೋ ಅದೇ ಮೌನದ ವ್ಯಾಪ್ತಿಯೊಳಗೆ ಸಮುದಾಯದ ಕರ್ಮಶಾಸ್ತ್ರ ಪಂಡಿತರ ಮಧ್ಯೆ ಭಿನ್ನಾಭಿಪ್ರಾಯಗಳುಂಟಾಗಿವೆ. ಪ್ರತಿಯೊಬ್ಬ ಸಂಶೋಧಕನು ಈ ಮೌನದ ಖಾಲಿ ಸ್ಥಳವನ್ನು ತನ್ನ ಕರ್ಮಶಾಸ್ತ್ರೀಯ ನಿಯಮಗಳ ಮತ್ತು ತನ್ನ ಸ್ವಂತ ಅಭಿಪ್ರಾಯಗಳ ಮೂಲಕ ತುಂಬಿದ್ದಾರೆ. ಮೊದಲ ಹದೀಸ್‌ನಲ್ಲಿ 'ಅನುಗ್ರಹ' ವೆಂದಿರುವುದನ್ನು, ಎರಡನೆ ಹದೀಸ್‌ನಲ್ಲಿ ಕೊಡುಗೆಯೆನ್ನಲಾಗಿದೆ. ಇವೆರಡೂ ಸಮುದಾಯದ ಮೇಲೆ ಅಲ್ಲಾಹನ ಕರುಣೆ, ಔದಾರ್ಯ ಮತ್ತು ಸರಳತೆಯನ್ನು ಸೂಚಿಸುತ್ತದೆ. ಈ ಮೌನದ ಮತ್ತು ಕೊಡುಗೆಯ ರಂಗವೇ ಸಂಶೋಧನೆಯ ರಂಗವಾಗಿದೆ. ಅದರಲ್ಲಿ ಭಿನ್ನಾಭಿಪ್ರಾಯ ಅನಿವಾರ್ಯ.

ಕೆಲವು ಆಂಶಿಕ ವಿಷಯಗಳಲ್ಲಿ ನಸ್ಸ್ (ಸ್ಪಷ್ಟಪುರಾವೆ) ಇಲ್ಲದಿರುವುದು ಅಲ್ಲಾಹನು ಅವುಗಳ ಬಗ್ಗೆ ಸಮುದಾಯದ ಪಾಲಿಗೆ ಸುಲಭಗೊಳಿಸುವ ಮತ್ತು ಔದಾರ್ಯವನ್ನು ತೋರುವ ತೀರ್ಮಾನ ಮಾಡಿದ್ದಾನೆ ಎಂಬುದರ ಪುರಾವೆಯಾಗಿದೆ. ಈ ಸೌಲಭ್ಯವು ಅಲ್ಲಾಹನ ಕರುಣೆಯ ದ್ಯೋತಕವಾಗಿದೆ. ಇದನ್ನೇ ಎರಡನೆ ಉಮರ್ ಎಂದು ಖ್ಯಾತರಾದ ಉಮರ್ ಬಿನ್ ಅಬ್ದುಲ್ ಅಝೀಝ್ ಹೀಗೆ ಸ್ಪಷ್ಟಪಡಿಸಿದ್ದಾರೆ-

"ಸಹಾಬಿಗಳು ಸಂಶೋಧನಾತ್ಮಕ ವಿಷಯಗಳಲ್ಲಿ ಪರಸ್ಪರ ಭಿನ್ನಾಭಿಪ್ರಾಯ ತಾಳದಿರುತ್ತಿದ್ದರೆ ನನಗೆ ಖಂಡಿತ ಸಂತೋಷವಾಗುತ್ತಿರಲಿಲ್ಲ. ಏಕೆಂದರೆ ಸಹಾಬಿಗಳು ಪರಸ್ಪರ ಭಿನ್ನಾಭಿಪ್ರಾಯ ತಾಳದಿರುತ್ತಿದ್ದರೆ ನಮ್ಮ ಮಟ್ಟಿಗೆ ಧರ್ಮದಲ್ಲಿ ಸೌಲಭ್ಯ ದೊರಕುತ್ತಿರಲಿಲ್ಲ." (ಬೈಹಕೀ) ಅಂದರೆ ಸಹಾಬಿಗಳ ಭಿನ್ನಾಭಿಪ್ರಾಯಗಳಿಂದಾಗಿ ನಮಗೆ ಅವರ ಸಂಶೋಧನೆಗಳು ಮತ್ತು ಹೇಳಿಕೆಗಳಲ್ಲಿ ಆಯ್ಕೆ ಮಾಡುವ ಅವಕಾಶ ಲಭಿಸಿತು. ಅದೇ ರೀತಿ ಅವರು ಸಂಶೋಧನಾತ್ಮಕ ಆಂಶಿಕ ವಿಷಯಗಳ ಮೇರೆಗಳನ್ನು ನಿಶ್ಚಯಿಸಿರುವುದು ಮತ್ತು ಭಿನ್ನಾಭಿಪ್ರಾಯಗಳ ಹೊರತಾಗಿಯೂ ಅವರು ಪರಸ್ಪರರನ್ನು ಪ್ರೀತಿಸುವ ಸಹೋದರ

ರಾಗಿದ್ದರು ಎಂಬುದು ನಮಗೆ ತಿಳಿಯಿತು.

ಮದೀನಾದಲ್ಲಿ ತಾಬಈಗಳ ಕಾಲದಲ್ಲಿ ಕಾಸಿಮ್ ಬಿನ್ ಮುಹಮ್ಮದ್ ಎಂಬ ಕರ್ಮಶಾಸ್ತ್ರ ವಿದ್ವಾಂಸರಿದ್ದರು. ಅವರೊಡನೆ ಮೌನ ನಮಾಝ್‌ನಲ್ಲಿ ಇಮಾಮರ ಹಿಂದೆ 'ಸೂರಾ ಫಾತಿಹಾ' ಪಠಿಸುವ ಕುರಿತು ಕೇಳಿದಾಗ ಅವರು ಹೀಗೆ ಉತ್ತರಿಸಿದರು- ನೀವು ಪಠಿಸುವುದಾದರೆ ಸಹಾಬಿಗಳ ಅನುಕರಣೆ ಮಾಡಿದಿರಿ. ಪಠಿಸುವುದಿಲ್ಲವೆಂದಾದರೆ ಆಗಲೂ ಸಹಾಬಿಗಳ ಅನುಕರಣೆ ಮಾಡಿದಿರಿ. ಅರ್ಥಾತ್ ಸಹಾಬಿಗಳಿಂದ ಎರಡೂ ವಿಧಾನಗಳು ವರದಿಯಾಗಿವೆ.

ಇಬ್ನು ಅಬ್ದುಲ್ ಬರ್ರ್ ನಮ್ರಿಯವರು ಜಾಮಿಅ್ ಬಯಾನುಲ್ ಉಲೂಮ್ ಎಂಬ ಗ್ರಂಥದಲ್ಲಿ ಹೀಗೆ ಬರೆದಿದ್ದಾರೆ- ಫತ್ವಾ ನೀಡುವ ಮುಫ್ತಿಗಳು ಮೌನ ತಳೆಯಲಾದ ರಂಗದಲ್ಲಿ ಇದು ಹಲಾಲ್ ಮತ್ತು ಅದು ಹರಾಮ್ ಎಂದು ಜನರನ್ನು ಗೊಂದಲಕ್ಕೀಡು ಮಾಡುತ್ತಾರೆ. ಮೌನ ತಳೆಯಲಾದ ರಂಗದಲ್ಲಿ ಯಾವುದಾದರೊಂದು ಹಲಾಲ್ ಎಂದು ಪರಿಗಣಿಸಲ್ಪಟ್ಟರೆ ಅದನ್ನು ಹರಾಮ್ ಎಂದು ಬಗೆಯುವ ಇನ್ನೊಬ್ಬನು ಅದರಿಂದಾಗಿ ಹಾಳಾದನು ಎಂದರ್ಥವಲ್ಲ. ಅದೇ ರೀತಿ ಅದನ್ನು ಹರಾಮ್ ಎಂದು ಭಾವಿಸುವವನು ಹಲಾಲ್ ಎಂದು ವಿಧಿಸಿದವನ ಬಗ್ಗೆ ಅದರಿಂದಾಗಿ ಕೆಟ್ಟು ಹೋದನು ಎಂದೂ ಭಾವಿಸಬಾರದು. (ಭಾಗ-2, ಪುಟ: 80)

ಇದಕ್ಕೆ ಕಾರಣವೇನೆಂದರೆ ಯಾವ ವಿಷಯಗಳ ಬಗ್ಗೆ ಶರೀಅತ್ ಮೌನ ತಾಳಿದೆಯೋ ಅವುಗಳಲ್ಲಿ ಶರೀಅತ್ ವಿಧಿ ಪ್ರಕಾರ ಸಂಶೋಧನೆ ಮಾಡಬೇಕಾದುದು ಅಗತ್ಯ. ಸಂಶೋಧನೆಯ ವೇಳೆ ಭಿನ್ನಾಭಿಪ್ರಾಯಗಳುಂಟಾಗುವುದೂ ಸಹಜ. ಸಂಶೋಧನೆಯಲ್ಲಿ ತಪ್ಪು ಮಾಡುವವನನ್ನೂ ಶರೀಅತ್ ಪುಣ್ಯದಿಂದ ವಂಚಿತಗೊಳಿಸಲಿಲ್ಲ. ಆದುದರಿಂದ ಪ್ರತಿಯೊಬ್ಬ ಸಂಶೋಧಕನೂ ತನ್ನ ಸಂಶೋಧಿತ ಅಭಿಪ್ರಾಯದಂತೆ ಹರಾಮ್-ಹಲಾಲ್‌ಗಳನ್ನು ಸ್ವೀಕರಿಸುತ್ತಾನೆ. ಅದಕ್ಕಾಗಿ ಅವನಿಗೆ ಶಿಕ್ಷೆಯೂ ಆಗದು. ಒಂದೇ ವಸ್ತುವಿನ ಬಗ್ಗೆ ಅದು ಹರಾಮ್ ಅಥವಾ ಹಲಾಲ್ ಆಗಿದೆಯೆಂದು ಹೇಳುವ ಎಲ್ಲ ವರದಿಗಳೂ ಸರಿಯೇ ಆಗಿವೆಯೆಂದೂ ಇದರರ್ಥವಲ್ಲ. ಏಕೆಂದರೆ ಎರಡು ವಿರುದ್ಧ ಹೇಳಿಕೆಗಳಲ್ಲಿ ಒಂದು ಮಾತ್ರ ಸರಿಯಾಗಲು ಸಾಧ್ಯ. ಆದರೆ ಆ ಎಲ್ಲ ಹೇಳಿಕೆಗಳನ್ನು ಪ್ರತಿಪಾದಿಸುವವರಿಗೆ ಅಲ್ಲಾಹನ ವತಿಯಿಂದ ಪ್ರಶಂಸೆಯೂ ಪುಣ್ಯವೂ ಲಭಿಸುವುದು. ಏಕೆಂದರೆ ಸಂಶೋಧಕನ ಸಂಶೋಧನೆ ಸರಿಯಾದರೆ ಆತನಿಗೆ ಪುಣ್ಯವಿರುವಂತೆಯೇ ಅದರಲ್ಲಿ ತಪ್ಪಾದವರಿಗೂ ಒಂದು ಪುಣ್ಯ ಇದ್ದೇ ಇದೆ.

ಮೌನ ತಾಳಿರುವಂತಹ ವಿಷಯಗಳಲ್ಲಿ ನಡೆಸಿದ ಸಂಶೋಧನೆಯಿಂದ ಉಂಟಾಗುವ ಭಿನ್ನಾಭಿಪ್ರಾಯಗಳನ್ನು ಪ್ರವಾದಿವರ್ಯರು(ಸ) ಅಲ್ಲಾಹನ ಅನುಗ್ರಹ, ಔದಾರ್ಯವೆಂದಿದ್ದಾರೆ. ಎಲ್ಲ ಕಾಲದ ಕರ್ಮಶಾಸ್ತ್ರ ಪಂಡಿತರೂ ಈ ರಂಗದ ಸಂಶೋಧನಾತ್ಮಕ ಭಿನ್ನಾಭಿಪ್ರಾಯಗಳನ್ನು ಅನುಗ್ರಹ ಮತ್ತು ಔದಾರ್ಯವೆಂದು ಬರೆದಿದ್ದಾರೆ. ಎಲ್ಲಿಯವರೆಗೆಂದರೆ ಅನಂತರದ ಕಾಲದ ಕರ್ಮಶಾಸ್ತ್ರ ಪಂಡಿತರು 'ಇಮಾಮರುಗಳ ಭಿನ್ನಾಭಿಪ್ರಾಯಗಳು ಸಮುದಾಯದ ಪಾಲಿಗೆ ಅನುಗ್ರಹ' ಎಂಬ ವಿಷಯದಲ್ಲಿ ಗ್ರಂಥಗಳನ್ನೂ ರಚಿಸಿದ್ದಾರೆ. ಅಲ್ಲಾಮಾ ಶೇಖ್ ಮರಈ

ಹಂಬಲಿಯವರು 'ಫೀ ತನ್ವೀರಿ ಮಸಾಇಲಿಲ್ ಮುಕಲ್ಲಿದೀನ್' ಎಂಬ ಗ್ರಂಥದಲ್ಲಿ ಬರೆಯುತ್ತಾರೆ, "ಮುಸ್ಲಿಮ್ ಸಮುದಾಯದಲ್ಲಿ ಕರ್ಮಶಾಸ್ತ್ರೀಯ ಭಿನ್ನತೆಗಳು ಸಮುದಾಯದ ಪಾಲಿಗೆ ದೊಡ್ಡ ಅನುಗ್ರಹವೂ ಮಹತ್ವಪೂರ್ಣವೂ ಆಗಿದೆ. ಅದರ ಸರಿಯಾದ ವಿಶ್ಲೇಷಣೆಯನ್ನು ವಿದ್ವಾಂಸರೇ ಮಾಡಬಲ್ಲರು. ಪಾಮರರಿಗೆ ಈ ರಹಸ್ಯವನ್ನು ಭೇದಿಸಲು ಸಾಧ್ಯವಿಲ್ಲ. ಸಮುದಾಯದ ಈ ಭಿನ್ನತೆಯು ಅದರ ವಿಶೇಷತೆಯಾಗಿದೆ. ಸೌಲಭ್ಯವು ಶರೀಅತ್‌ನ ವೈಶಾಲ್ಯವಾಗಿದೆ." (ಉಮ್ಮತುತಫ್ಕೀಕ್ ಅಲ್‌ಬಾನಿ, ಪುಟ: 37)

ಈ ಚರ್ಚೆಯಲ್ಲಿ ಒಂದು ವಿಷಯವನ್ನು ಸೇರಿಸಬಯಸುತ್ತೇವೆ. ಆಂಶಿಕ ವಿಷಯಗಳಲ್ಲಿ ಭಿನ್ನಾಭಿಪ್ರಾಯವು ಒಂದೆಡೆ ಅಗತ್ಯವಾದರೆ, ಇನ್ನೊಂದೆಡೆ ಅನುಗ್ರಹವೂ ಆಗಿದೆ. ಮತ್ತೊಂದು ದಿಕ್ಕಿನಿಂದ ಅದು ಚರ್ಚೆಯ ವಸ್ತುವೂ ಆಗಿದೆ. ಏಕೆಂದರೆ ಸಂಶೋಧನಾತ್ಮಕ ಅಭಿಪ್ರಾಯಗಳಲ್ಲಿ ಭಿನ್ನತೆಯು-ಶರೀಅತ್ ಮತ್ತು ಫಿಕ್ಹ್- ಸಂಪತ್ತಿನಲ್ಲಿ ಆಧಿಕ್ಯ ಮತ್ತು ವೈಶಾಲ್ಯವುಂಟಾಗುತ್ತಲೇ ಇರುತ್ತದೆ. ಏಕೆಂದರೆ ಪ್ರತಿಯೊಂದು ಅಭಿಪ್ರಾಯದ ಹಿಂದೆ ಒಂದಲ್ಲೊಂದು ಶರಈ ಪುರಾವೆ ಇರುತ್ತದೆ. ಅದರ ಆಧಾರದಲ್ಲಿ ಓರ್ವ ಪಕ್ವಮತಿಯಾದ ಕರ್ಮಶಾಸ್ತ್ರಜ್ಞನು ಸಂಶೋಧನೆ, ಚಿಂತನೆ, ಊಹೆ, ತಾರತಮ್ಯ, ಪಠನ ಮತ್ತು ಪ್ರಾಶಸ್ತ್ಯದ ಮೂಲಕ ಅವುಗಳ ಕರ್ಮಶಾಸ್ತ್ರೀಯ ತತ್ವಗಳೊಂದಿಗೆ ಜೋಡಿಸಿ ಸಾಮಾನ್ಯ ರೂಢಿಯ ಒರೆಗೆ ಹಚ್ಚಿ ಅವುಗಳಿಂದ ಹೊಸ ಆಂಶಿಕ ವಿಷಯಗಳನ್ನು ಕಂಡು ಹಿಡಿಯುತ್ತಾನೆ. ಈ ಸಂಶೋಧಿತ ವಿಷಯಗಳೆಲ್ಲ ಸೇರಿ ಒಂದು ಮಹಾ ಜ್ಞಾನ ಸಂಪತ್ತಾಗುತ್ತದೆ. ಇದರ ಸರಿಯಾದ ಬೆಲೆಯನ್ನು ಬುದ್ಧಿ ಜೀವಿಗಳ ಹೊರತು ಇನ್ನಾರಿಗೂ ಗ್ರಹಿಸಲು ಸಾಧ್ಯವಿಲ್ಲ.

ಇಲ್ಲಿ ರಾಬಿತತುಲ್ ಆಲಮಿಲ್ ಇಸ್ಲಾಮಿಯ (ಮುಸ್ಲಿಮ್ ವರ್ಲ್ಡ್ ಲೀಗ್) ಮಜ್ಲಿಸುಲ್ ಮುಜಮ್ಮವುಲ್‌ಫಿಕ್ಹಿಲ್ ಇಸ್ಲಾಮಿಯು 1987ರ ಅಕ್ಟೋಬರ್ 17ರಂದು ಮಕ್ಕಾದಲ್ಲಿ ಜರಗಿದ ತನ್ನ 10ನೇ ಸಮಾವೇಶದಲ್ಲಿ 'ಸಮುದಾಯದ ಕರ್ಮಶಾಸ್ತ್ರ ವಿಭಾಗಗಳ ನಡುವಿನ ಭಿನ್ನಾಭಿಪ್ರಾಯಗಳ ನೆಲೆ' ಎಂಬ ವಿಷಯದಲ್ಲಿ ಅಂಗೀಕರಿಸಿದ ನಿರ್ಣಯದ ಸಾರಾಂಶವನ್ನು ಉದ್ಧರಿಸುವುದು ಸೂಕ್ತವೆನಿಸುತ್ತದೆ-

ಮುಸ್ಲಿಮ್ ರಾಷ್ಟ್ರಗಳಲ್ಲಿ ಪ್ರಚಲಿತವಿರುವ ವೈಚಾರಿಕ ಮತ್ತು ಕರ್ಮಶಾಸ್ತ್ರ ಗುಂಪುಗಳ ಭಿನ್ನಾಭಿಪ್ರಾಯಗಳಲ್ಲಿ ಎರಡು ವಿಧ. ಒಂದು ನಂಬಿಕೆಗೆ ಸಂಬಂಧಿಸಿದ್ದು, ಇನ್ನೊಂದು ಕರ್ಮಶಾಸ್ತ್ರಕ್ಕೆ ಸಂಬಂಧಿಸಿದ್ದು.

ನಂಬಿಕೆಗೆ ಸಂಬಂಧಿಸಿದ ಭಿನ್ನಾಭಿಪ್ರಾಯವು ಮುಸ್ಲಿಮ್ ರಾಷ್ಟ್ರಗಳಲ್ಲಿ ಒಂದು ಮಹಾಮಾರಿಯಾಗಿ ಬಿಟ್ಟಿದೆ. ಇದರಿಂದ ಮುಸ್ಲಿಮರ ಒಗ್ಗಟ್ಟು ಛಿದ್ರಛಿದ್ರವಾಗಿ ಬಿಟ್ಟಿದೆ. ಅವರ ಏಕತೆಯು ಒಡಕಿನಲ್ಲಿ ಬದಲಾಗಿದೆ. ಈ ಶೋಚನೀಯ ಅವಸ್ಥೆಯನ್ನು ಕೊನೆಗೊಳಿಸಬೇಕಾದುದು ಮತ್ತು ಸಮುದಾಯವನ್ನು ಪ್ರವಾದಿ(ಸ) ಮತ್ತು ಸತ್ಯಸಂಧರಾದ ಖಲೀಫರ ಕಾಲದ ನೈಜ 'ಅಹ್ಲುಸುನ್ನತ್ ವಲ್‌ಜಮಾಅತ್'ನ ವಿಚಾರಧಾರೆಯಲ್ಲಿ ಒಂದುಗೂಡಿಸಬೇಕಾದುದು ಅತ್ಯಗತ್ಯವಾಗಿದೆ. ಈ ಬಗ್ಗೆ ಪ್ರವಾದಿ(ಸ) ಅವರ ಘೋಷಣೆ ಹೀಗಿದೆ:

"ನನ್ನ ಮತ್ತು ನನ್ನ ಸನ್ಮಾರ್ಗಗಾಮಿಗಳಾದ ಸತ್ಯಸಂಧ ಖಲೀಫರ ಚರ್ಯೆಯನ್ನು ಅನುಸರಿಸಬೇಕಾದುದು ನಿಮ್ಮ ಮೇಲೆ ಕಡ್ಡಾಯ. ಅದರಲ್ಲೇ ಸ್ಥಿರವಾಗಿರಿ ಮತ್ತು ಅದನ್ನು ಹಲ್ಲಿನಿಂದ ಬಿಗಿ ಹಿಡಿಯಿರಿ. ಧರ್ಮದಲ್ಲಿ ನವೀನ ವಿಷಯಗಳಿಂದ ದೂರವಿರಿ. ಏಕೆಂದರೆ ಎಲ್ಲ ಹೊಸ ವಿಧಾನಗಳೂ ಬಿದ್‌ಅತ್‌ಗಳಾಗಿವೆ. ಎಲ್ಲ ಬಿದ್‌ಅತ್ (ನವೀನಾಚಾರ)ಗಳೂ ಪಥಭ್ರಷ್ಟತೆಯಾಗಿದೆ." (ಅಬೂ ದಾವೂದ್, ಅಹ್ಮದ್, ತಿರ್ಮಿದಿ, ಇಬ್ನುಮಾಜಃ)

ಎರಡನೆಯದಾಗಿ, ಆಂಶಿಕ ವಿಷಯಗಳಲ್ಲಿ ಕರ್ಮಶಾಸ್ತ್ರೀಯ ಭಿನ್ನಾಭಿಪ್ರಾಯಗಳಿಗೆ ಕೆಲವು ವೈಚಾರಿಕ ಕಾರಣಗಳಿವೆ. ಅದರಲ್ಲಿ ಅಲ್ಲಾಹನ ಅಪಾರ ಯುಕ್ತಿ ಅಡಗಿದೆ. ಅದರ ಮೂಲಕ ಅಲ್ಲಾಹನು ತನ್ನ ದಾಸರ ಮೇಲೆ ಕೃಪೆ ತೋರಿದ್ದಾನೆ. ನಸ್ಸ್ (ಸುವ್ಯಕ್ತ ಕುರ್‌ಆನ್ ಸೂಕ್ತ)ಗಳಿಂದ ಆಜ್ಞೆಗಳನ್ನು ಕಂಡು ಹಿಡಿಯುವ ರಂಗವನ್ನು ವಿಶಾಲಗೊಳಿಸಿದ್ದಾನೆ. ಇದೇ ಕರುಣೆ ಮತ್ತು ವೈಶಾಲ್ಯದೊಂದಿಗೆ ಅದು- ಕರ್ಮಶಾಸ್ತ್ರೀಯ ಭಿನ್ನತೆಯು- ಒಂದು ಅನುಗ್ರಹವೂ ಆಗಿದೆ. ಅದರಿಂದ ಮುಸ್ಲಿಮ್ ಸಮುದಾಯಕ್ಕೆ ಧರ್ಮಾಚರಣೆಯ ಒಂದು ವಿಶಾಲ ರಂಗವು ಕೈಸೇರುವುದರ ಜೊತೆಗೆ, ಒಂದೇ ಕರ್ಮಶಾಸ್ತ್ರೀಯ ಅಭಿಪ್ರಾಯಕ್ಕೆ ಅಂಟಿಕೊಂಡಿರಬೇಕೆಂಬ ನಿರ್ಬಂಧವೂ ಇಲ್ಲದಂತಾಯಿತು. ಅಷ್ಟೇ ಅಲ್ಲ, ಒಂದು ವಿಶಿಷ್ಟ ವಿಷಯದಲ್ಲಿ ಒಬ್ಬ ಕರ್ಮಶಾಸ್ತ್ರ ಪಂಡಿತನ ಅಭಿಪ್ರಾಯವನ್ನು ಅಂಗೀಕರಿಸಿ ಆಚರಿಸುವುದು ಕಷ್ಟವಾಗುತ್ತದೆ. ಅದೇ ಸಮಯದಲ್ಲಿ ಇನ್ನೋರ್ವ ಕರ್ಮಶಾಸ್ತ್ರ ಪಂಡಿತನ ಅಭಿಪ್ರಾಯದಲ್ಲಿ ಶರೀಅತ್‌ನ ಆಧಾರದಲ್ಲಿ ಸೌಲಭ್ಯ ಮತ್ತು ವೈಶಾಲ್ಯವನ್ನು ಕಾಣಬಹುದು. ಇದು ಆರಾಧನೆಗೆ ಸಂಬಂಧಿಸಿದ್ದೋ ವ್ಯವಹಾರ, ಕೌಟುಂಬಿಕ, ನ್ಯಾಯಾಲಯಕ್ಕೆ ಮತ್ತು ದಂಡ ಸಂಹಿತೆಗೆ ಸಂಬಂಧಿದ್ದೋ ಆಗಿರಬಹುದು.

ಆದುದರಿಂದ ಇಂತಹ ಕರ್ಮಶಾಸ್ತ್ರೀಯ ಭಿನ್ನಾಭಿಪ್ರಾಯಗಳು ನಮ್ಮ ಧರ್ಮದೊಂದಿಗೆ ಸಂಘರ್ಷಿಸುವುದಿಲ್ಲ. ಅದು ಧರ್ಮದಲ್ಲಿ ಯಾವ ನ್ಯೂನತೆಯೂ ಅಲ್ಲ. ಧರ್ಮದಲ್ಲಿ ಇಂತಹ ಆಂಶಿಕ ಭಿನ್ನಾಭಿಪ್ರಾಯಗಳಿಲ್ಲದಿರಲು ಸಾಧ್ಯವೇ ಇಲ್ಲ. ಏಕೆಂದರೆ ಕುರ್‌ಆನ್ ಮತ್ತು ಪ್ರವಾದಿಚರ್ಯೆಯಲ್ಲಿ ಒಂದಕ್ಕಿಂತ ಹೆಚ್ಚು ಅರ್ಥಕೊಡುವಂತಹ ಅನೇಕ ಸ್ಪಷ್ಟ ಸೂಕ್ತಗಳಿವೆ. ಅದೇ ರೀತಿ ಲೋಕದಲ್ಲಿ ಎಲ್ಲ ವಿಧದ ಪರಿಸ್ಥಿತಿಗಳಲ್ಲಿ ಎದುರಾಗುವ ಸಮಸ್ಯೆಗಳಿಗೂ ಅನ್ವಯಿಸುವಂತಹ ಯಾವುದಾದರೂ ಒಂದು ಸೂಕ್ತವು ಇರುವುದೂ ಅಸಂಭವನೀಯ. ಏಕೆಂದರೆ ವಿದ್ವಾಂಸರ ಒಂದು ಗುಂಪಿನ ಅಭಿಪ್ರಾಯದಂತೆ ಸಮಸ್ಯೆಗಳು ಮತ್ತು ಪರಿಸ್ಥಿತಿಗಳು ಅಪಾರವಾಗಿದೆ. ಆದರೆ ಸೂಕ್ತಗಳು ಸೀಮಿತವಾಗಿದೆ.

ಆದುದರಿಂದ ಚಿಂತನೆ ನಡೆಸಿ ಆಜ್ಞೆಗಳ ಕಾರಣ ಮತ್ತು ಶರೀಅತ್‌ನ ಉದ್ದೇಶಗಳನ್ನು ತಿಳಿದು ಹೊಸ ಸಮಸ್ಯೆಗಳಿಗೆ ಅನ್ವಯವಾಗುವ ನಿಯಮ ಮತ್ತು ಅದರ ಪರಿಹಾರವನ್ನು ಕಂಡುಕೊಳ್ಳಬೇಕಾದುದು ಅಗತ್ಯ. ಹೀಗೆ ಮಾಡುತ್ತಿರುವಾಗ ವಿದ್ವಾಂಸರ ಮಧ್ಯೆ ಪ್ರಾಶಸ್ತ್ಯ ಮತ್ತು ತಾತ್ಪರ್ಯಗಳಲ್ಲಿ ಭಿನ್ನಾಭಿಪ್ರಾಯಗಳುಂಟಾಗುವುದು ಸಹಜ. ಸತ್ಯದ ಶೋಧನೆಯ ಹೊರತಾಗಿಯೂ ಒಂದೇ ವಿಷಯದಲ್ಲಿ ಶರೀಅತ್ ವಿಧಿಯು ವಿಭಿನ್ನವಾಗುವುದು ಅಚ್ಚರಿದಾಯಕವೇನಲ್ಲ. ಸಂಶೋಧನೆಯಿಂದ ಸರಿಯಾದ ಉತ್ತರ ಕಂಡು ಕೊಂಡವನಿಗೆ

ಇಮ್ಮಡಿ ಪುಣ್ಯ ಸಿಗುವುದು, ಉತ್ತರ ತಪ್ಪಾದರೆ ಒಂದು ಪುಣ್ಯವಿರುವುದು. ಇದರಿಂದ ಶರೀಅತ್ ಸಂಕೀರ್ಣತೆಯು ಕೊನೆಗೊಂಡು ವಿಶಾಲತೆ ಮತ್ತು ಸೌಲಭ್ಯವು ಸದಾ ಜಾರಿಯಲ್ಲಿರುವುದು. ಆದುದರಿಂದ ಇಂತಹ ಆಂಶಿಕ ಭಿನ್ನಾಭಿಪ್ರಾಯಗಳು ಮುಸ್ಲಿಮರ ಪಾಲಿಗೆ ಅನುಗ್ರಹವಾಗಿದೆ ಮತ್ತು ಅದು ನಿಯಮಗಳ ನಿಧಿಯೂ ಆಗಿದೆ.

ಆದರೆ ವಿದೇಶಗಳಲ್ಲಿ ಕಲಿಯುತ್ತಿರುವ, ಇಸ್ಲಾಮಿ ಸಂಸ್ಕೃತಿಯ ಬಗ್ಗೆಯೂ ಅಲ್ಪಸ್ವಲ್ಪ ತಿಳುವಳಿಕೆಯಿರುವಂತಹ ಯುವಕರಿಗೆ ಅವರ ಅಧ್ಯಾಪಕರು ಆಂಶಿಕ ವಿಷಯಗಳ ಕರ್ಮಶಾಸ್ತ್ರೀಯ ಭಿನ್ನಾಭಿಪ್ರಾಯಗಳು ಮೂಲಭೂತವಿಶ್ವಾಸಕ್ಕೆ ಸಂಬಂಧಿಸಿದ ಭಿನ್ನಾಭಿಪ್ರಾಯವೆಂದು ಮನಗಾಣಿಸುತ್ತಿದ್ದಾರೆ. ವಸ್ತುತಃ ಶರೀಅತ್‌ನಲ್ಲಿ ಮೂಲಭೂತ ವಿಶ್ವಾಸ, ಆರಾಧನೆಗಳು, ಹರಾಮ್-ಹಲಾಲ್ ಮತ್ತು ಶಿಕ್ಷಾನಿಯಮಗಳು ಇತ್ಯಾದಿಗಳಲ್ಲಿ ಭಿನ್ನಾಭಿಪ್ರಾಯ ಹೊಂದುವುದನ್ನು ನಿಷೇಧಿಸಲಾಗಿದೆ. ಆದರೆ ಆಂಶಿಕ ವಿಷಯಗಳಲ್ಲಿ ಭಿನ್ನಾಭಿಪ್ರಾಯವು ಅಲ್ಲಾಹನ ಅನುಗ್ರಹವಾಗಿದೆಯೆಂಬುದನ್ನು ಸೂಚಿಸುತ್ತದೆ.

ಇನ್ನೊಂದು ವರ್ಗವು ಎಲ್ಲ ಕರ್ಮಶಾಸ್ತ್ರೀಯ ವಿಚಾರಧಾರೆಗಳನ್ನೂ ಅಳಿಸಿ ಸಮುದಾಯವನ್ನು ಒಂದು ನವೀನ ಕರ್ಮಶಾಸ್ತ್ರೀಯ ವಿಚಾರಧಾರೆಯಲ್ಲಿ ಒಂದುಗೂಡಿಸಲು ಮತ್ತು ಏಕ ಸಮುದಾಯವಾಗಿ ಮಾರ್ಪಡುವಂತೆ ಕರೆ ನೀಡತೊಡಗಿದೆ. ಪ್ರಚಲಿತ ಎಲ್ಲ ಕರ್ಮಶಾಸ್ತ್ರ ವಿಚಾರಗಳನ್ನೂ ಅವರ ಇಮಾಮರನ್ನೂ ಮೂದಲಿಸ ಹೊರಟಿದೆ. ನಾವು ಅವರಲ್ಲಿ ಭಿನ್ನವಿಸುವುದೇನೆಂದರೆ, ಜನರಲ್ಲಿ ಒಡಕುಂಟಾಗುವಂತಹ ಮತ್ತು ಅವರ ಒಗ್ಗಟ್ಟು ಛಿದ್ರವಾಗಲು ಕಾರಣವಾಗುವಂತಹ ಬಿಗು ಧೋರಣೆಯನ್ನು ಮದ್‌ಹಬ್‌ಗಳ ಬಗೆಗೆ ಅವರು ತಾಳಬಾರದು. ಇಸ್ಲಾಮಿನ ವೈರಿಗಳ ಅಪಾಯಕಾರಿ ಪಂಥಾಹ್ವಾನಗಳನ್ನು ಎದುರಿಸಲು ಮುಸ್ಲಿಮ್ ಸಮುದಾಯವು ಮೂಲಭೂತ ವಿಶ್ವಾಸದ ಆಧಾರದಲ್ಲಿ ಸೀಸ ಹೊಯ್ದ ಗೋಡೆಯಂತೆ ಒಂದಾಗ ಬೇಕಾದುದು ಕಡ್ಡಾಯವಾಗಿದೆ. ಸಮುದಾಯದಲ್ಲಿ ಒಡಕಿಗೆ ಕಾರಣವಾಗುವಂತಹ ಈ ರೀತಿಯ ಕರೆಯ ಅಗತ್ಯ ಇಂದೂ ಇಲ್ಲ. ಭವಿಷ್ಯದಲ್ಲಿಯೂ ಇಲ್ಲ.

(ಅಲ್ ಮುಜಮ್ಮ ಉಲ್ ಇಸ್ಲಾಮಿ 2ನೇ ವಾರ್ಷಿಕ ಸಂಚಿಕೆ ಮೂರನೇ ಭಾಗ- ಪು. 173)

ಆಂಶಿಕ ವಿಷಯಗಳಲ್ಲಿ ಭಿನ್ನಾಭಿಪ್ರಾಯಗಳು ಇಮಾಮ್ ಅಬೂ ಹನೀಫಾ, ಶಾಫಿಈ, ಮಾಲಿಕ್, ಅಹ್ಮದ್ ಬಿನ್ ಹಂಬಲ್, ಸೌರಿ, ಔಝಾಈ ಮೊದಲಾದವರ ಕಾಲದಲ್ಲೇ ಇತ್ತು. ಆದರೆ ಇವರಲ್ಲಿ ಅವರಿಗೇನೂ ಕೆಡುಕು ಕಂಡಿಲ್ಲ. ಅವರಲ್ಲಿ ಯಾರೂ ತಮ್ಮ ಅಭಿಪ್ರಾಯವನ್ನು ಇತರರೂ ಕಡ್ಡಾಯವಾಗಿ ಒಪ್ಪಬೇಕೆಂದು ಪಟ್ಟುಹಿಡಿಯಲಿಲ್ಲ. ತಮ್ಮ ಅಭಿಪ್ರಾಯಗಳಿಗೆ ವಿರುದ್ಧ ಅಭಿಪ್ರಾಯ ತಾಳಿದವರ ಧಾರ್ಮಿಕ ಜ್ಞಾನದಲ್ಲಿ ಲೋಪವನ್ನು ಅವರು ಎತ್ತಿ ತೋರಿಸಲಿಲ್ಲ. ಯಾರ ಮೇಲೂ ವೃಥಾ ಆರೋಪ ಹೊರಿಸಲಿಲ್ಲ. ತದ್ವಿರುದ್ಧವಾಗಿ ಈ ಮಹಾನ್ ಇಮಾಮರುಗಳು ಆಂಶಿಕ ಭಿನ್ನಾಭಿಪ್ರಾಯಗಳ ಹೊರತಾಗಿಯೂ ಪರಸ್ಪರ ಎಷ್ಟು ಗೌರವಿಸುತ್ತಿದ್ದರೆಂದರೆ, ಅದು ಇಡೀ ಸಮುದಾಯಕ್ಕೆ ಆದರ್ಶಪ್ರಾಯವಾಗಿದೆ.

ಇಮಾಮ್ ಅಹ್ಮದ್, ಮೂಗಿನಿಂದ ರಕ್ತ ಬಂದರೆ ವುಝೂ ಮುರಿಯುತ್ತದೆಂದು ಹೇಳುತ್ತಾರೆ. ಆದರೆ ಮೂಗಿನಿಂದ ರಕ್ತಬಂದ ನಂತರ ವುಝೂ ಮಾಡದೆ ನಮಾಝ್

ಮಾಡುವ ಇಮಾಮರ ಹಿಂದೆ ನೀವು ನಮಾಝ್ ಮಾಡುವಿರಾ ಎಂದು ಕೇಳಿದಾಗ ಅವರು ಹೇಳಿದರು- ನಾನೇನು ಇಮಾಮ್ ಮಾಲಿಕ್ ಮತ್ತು ಸಈದ್ ಬಿನ್ ಮುಸಯ್ಯಿಬ್‌ರ ಹಿಂದೆ ನಮಾಝ್ ಮಾಡಲಾರೆನೆ? ಏಕೆಂದರೆ ಅವರಿಬ್ಬರ ಅಭಿಪ್ರಾಯದಲ್ಲೂ ಮೂಗಿನಿಂದ ರಕ್ತ ಬಂದರೆ ವುಝೂ ಭಂಗವಾಗುವುದಿಲ್ಲ.

ಖಲೀಫಾ ಹಾರೂನ್ ರಶೀದ್, ಇಮಾಮ್ ಮಾಲಿಕ್‌ರ ಮೂತಾ ಗ್ರಂಥವನ್ನು ಇಡೀ ಇಸ್ಲಾಮಿ ಸಾಮ್ರಾಜ್ಯದ ಶಾಸನವಾಗಿ ಮಾಡಬಯಸಿದ್ದರು. ಈ ಕುರಿತು ಇಮಾಮರಲ್ಲಿ ಪ್ರಸ್ತಾಪಿಸಿದಾಗ ಅವರು ಅದನ್ನು ತಡೆದರು. ಅವರು ಹೀಗೆ ಹೇಳಿದರು- ಸಹಾಬಿಗಳು ಆಂಶಿಕ ವಿಷಯಗಳಲ್ಲಿ ಭಿನ್ನಾಭಿಪ್ರಾಯ ತಾಳುತ್ತಿದ್ದರು. ಅವರು (ಮದೀನಾದಿಂದ ಹೊರಟು) ವಿವಿಧ ನಾಡುಗಳಿಗೆ ಹೋಗಿ ಅನೇಕ ವರ್ಷಗಳೇ ಆಗಿವೆ. ಅವರು ಆಂಶಿಕ ವಿಷಯಗಳಲ್ಲಿ ತಂತಮ್ಮ ಜ್ಞಾನ ಮತ್ತು ಅಭಿಪ್ರಾಯದಂತೆ ನಡೆಯುತ್ತಿದ್ದಾರೆ. ಇಂತಹ ವಿಷಯಗಳಲ್ಲಿ ಎಲ್ಲರಿಗೂ ತಂತಮ್ಮ ಅಭಿಪ್ರಾಯದಂತೆ ಆಚರಣೆಯ ಸ್ವಾತಂತ್ರ್ಯವಿರಬೇಕಾದುದು ದೇವೇಚ್ಛೆಯಾಗಿದೆ.

ಶಾಹ್ ವಲಿಯುಲ್ಲಾಹ್ ದೆಹ್ಲವಿಯವರು ತಮ್ಮ 'ಹುಜ್ಜತುಲ್ಲಾಹಿಲ್ ಬಾಲಿಗ'ದಲ್ಲಿ ಹೀಗೆ ಬರೆಯುತ್ತಾರೆ: "ಭಿನ್ನಾಭಿಪ್ರಾಯಗಳ ಹೆಚ್ಚಿನ ವೇಳೆ ವಿಶೇಷವಾಗಿ ಆಂಶಿಕ ವಿಷಯಗಳಲ್ಲಿ ಪ್ರತಿಯೊಬ್ಬ ಕರ್ಮಶಾಸ್ತ್ರಜ್ಞನ ಬಳಿಯೂ ಯಾರಾದರೊಬ್ಬ ಸಹಾಬಿಯ ಹೇಳಿಕೆಯಿರುತ್ತಿತ್ತು. ಉದಾ: ಅಯ್ಯಾಮುತ್ತಶ್ರೀಕ್ (ಹಜ್ಜ್ ತಿಂಗಳ 10 ರಿಂದ 13ರ ವರೆಗಿನ ದಿನಗಳು) ತಕ್ಬೀರ್‌ಗಳ ಸಂಖ್ಯೆ, ಈದ್ ದಿನಗಳ ತಕ್ಬೀರ್‌ಗಳ ಸಂಖ್ಯೆ, ವಿವಾಹ ನಿಷಿದ್ಧರ ವಿವಾಹ, ಇಬ್ನು ಅಬ್ಬಾಸ್ ಮತ್ತು ಇಬ್ನು ಮಸ್‌ಊದ್‌ರ ತಶಹ್ಹುದ್ (ಅತ್ತಹಿಯ್ಯಾತ್), ಬಿಸ್ಮಿಲ್ಲಾಹ್ ಮತ್ತು ಆಮೀನ್ ಮೆಲ್ಲನೆ ಹೇಳುವುದು, ಇಕಾಮತ್‌ನಲ್ಲಿ ಪ್ರತಿಯೊಂದು ವಾಕ್ಯವನ್ನೂ ಎರಡೆರಡು ಬಾರಿ ಹೇಳುವುದು, ವಿತ್ರ್‌ನ ರಕಅತ್‌ಗಳ ಸಂಖ್ಯೆ ಇತ್ಯಾದಿ ವಿಷಯಗಳಲ್ಲಿ ಕರ್ಮಶಾಸ್ತ್ರ ಪಂಡಿತರು ಓರ್ವ ಸಹಾಬಿಯ ಅಭಿಪ್ರಾಯಕ್ಕಿಂತ ಹೆಚ್ಚಿನ ಪ್ರಾಶಸ್ತ್ಯವನ್ನು ಇನ್ನೋರ್ವ ಸಹಾಬಿಯ ಅಭಿಪ್ರಾಯಕ್ಕೆ ನೀಡುತ್ತಿದ್ದರು.ಆದರೂ ಅವರೆಲ್ಲರೂ ಸನ್ಮಾರ್ಗದಲ್ಲೇ ಇದ್ದರು."

ಸಹಾಬಿಗಳು ಮತ್ತು ತಾಬಈಗಳು ಹಾಗೂ ಅವರ ನಂತರವೂ ಕೆಲವರು ನಮಾಝ್‌ನಲ್ಲಿ ಕುರ್‌ಆನ್ ಪಠಿಸುವುದಕ್ಕಿಂತ ಮುಂಚೆ ಬಿಸ್ಮಿಲ್ಲಾಹ್ ಪಠಿಸುತ್ತಿದ್ದರು. ಕೆಲವರು ಪಠಿಸುತ್ತಿರಲಿಲ್ಲ. ಕೆಲವರು ಉಚ್ಚ ಸ್ವರದಲ್ಲಿ ಪಠಿಸುತ್ತಿದ್ದರೆ, ಇನ್ನು ಕೆಲವರು ಮೆಲುದನಿಯಲ್ಲಿ ಪಠಿಸುತ್ತಿದ್ದರು. ಅವರಲ್ಲಿ ಫಜ್ರ್ ನಮಾಝ್‌ನಲ್ಲಿ ಕುನೂತ್ ಓದುವವರೂ ಇದ್ದರು. ಓದದವರೂ ಇದ್ದರು. ಕೆಲವರು ಸೂಜಿ ಚಿಕಿತ್ಸೆ, ವಾಂತಿ ಮತ್ತು ಮೂಗಿನಿಂದ ರಕ್ತ ಬಂದಾಗ ವುಝೂ ಮಾಡುತ್ತಿದ್ದರು. ಕೆಲವರು ಮಾಡುತ್ತಿರಲಿಲ್ಲ. ಕೆಲವರು ಸ್ತ್ರೀಯರನ್ನು ಮತ್ತು ತಮ್ಮ ಗುಪ್ತಾಂಗವನ್ನು ಮುಟ್ಟಿದರೆ ವುಝೂ ಮುರಿಯುತ್ತದೆಂದು ಭಾವಿಸಿ ವುಝೂ ಮಾಡುತ್ತಿದ್ದರು. ಕೆಲವರು ಹಾಗೆ ಮಾಡುತ್ತಿರಲಿಲ್ಲ. ಒಂಟೆಯ ಮಾಂಸ ಮತ್ತು ಬೇಯಿಸಿದ ಆಹಾರ ಪದಾರ್ಥಗಳನ್ನು ಸೇವಿಸಿದರೆ ವುಝೂ ಮಾಡಬೇಕೆನ್ನುವವರೂ ಇದ್ದರು. ವುಝೂ ಮಾಡುವ ಅಗತ್ಯವಿಲ್ಲವೆಂದು ಹೇಳುವವರೂ ಇದ್ದರು.

ಖಲೀಫಾ ಹಾರೂನ್ ರಶೀದ್ ರಕ್ತ ತೆಗೆಸಿದ ನಂತರ ವುಝೂ ಮಾಡದೆಯೆ ನಮಾಝ್ ಮಾಡಿದರು. ಅವರ ಹಿಂದೆ ಇಮಾಮ್ ಅಬೂ ಯೂಸುಫ್ ನಮಾಝ್ ಮಾಡಿದರು. ಅದನ್ನು ಪುನರಾವರ್ತಿಸಲಿಲ್ಲ. ಇಮಾಮ್ ಶಾಫಿಈಯವರು ಇಮಾಮ್ ಅಬೂಹನೀಫಾರ ಸಮಾಧಿಯ ಬಳಿ ಫಜ್ರ್ ನಮಾಝ್ ಮಾಡಿದಾಗ, ಅಬೂ ಹನೀಫಾರೊಂದಿಗಿನ ಗೌರವ ಭಾವದಿಂದ ಕುನೂತ್ ಪಠಿಸಲಿಲ್ಲ.

ಇಮಾಮ್ ಅಬೂ ಯೂಸುಫ್ ಅವರು ಶುಕ್ರವಾರ ದಿವಸ ಒಂದು ಬಾವಿಯ ನೀರಿನಿಂದ ಸ್ನಾನ ಮಾಡಿದರು. ಅದರಲ್ಲಿ ಇಲಿ ಬಿದ್ದಿತ್ತು. ಸ್ನಾನ ಮಾಡಿಯಾದ ನಂತರ ಇದು ಅವರಿಗೆ ತಿಳಿಯಿತು. ಆದರೆ ಅವರು ಪುನಃ ಸ್ನಾನ ಮಾಡಲಿಲ್ಲ. 'ನಾನೀಗ ಇಮಾಮ್ ಮಾಲಿಕ್‌ರ ಮದ್‌ಹಬ್‌ನಲ್ಲಿದ್ದೇನೆ' ಎಂದವರು ಹೇಳಿದರು. ಸಾಮಿರೀ ರಚಿಸಿದ ಕರುವಿನ ಆರಾಧನೆಯ ವಿಷಯದಲ್ಲಿ ಮೂಸಾ ಮತ್ತು ಹಾರೂನ್(ರ) ಅವರ ನಡುವೆ ಭಿನ್ನಾಭಿಪ್ರಾಯವುಂಟಾಯಿತು. ಇಬ್ಬರೂ ಒಂದೇ ಸಮಸ್ಯೆಯನ್ನು ಎರಡು ದೃಷ್ಟಿಕೋನದಿಂದ ನೋಡಿ ಎರಡು ಅಭಿಪ್ರಾಯ ತಾಳಿದರು. ಹಾರೂನ್(ರ) ಸಮುದಾಯದಲ್ಲಿ ಒಡಕುಂಟಾದೀತೆಂಬ ಭಯದಿಂದ ಬನೀ ಇಸ್ರಾಈಲರನ್ನು ಕರುವಿನ ಪೂಜೆಯಿಂದ ತಡೆಯಲಿಲ್ಲ. ಆದರೆ ಮೂಸಾ(ಅ) ಅವರು ಅವರ ಗಡ್ಡ ಹಿಡಿದೆಳೆದರು. ಅವರ ತಲೆಯನ್ನು ಹಿಡಿದು ಎಚ್ಚರಿಕೆ ನೀಡಿದರು. ಆಜ್ಞೋಲ್ಲಂಘನೆ ಮಾಡಿದ ಅಪರಾಧಿಯೆಂದು ಸಾರಿದರು.

(ತಾಹಾ : 92-94)

ಹ. ದಾವೂದ್ ಮತ್ತು ಸುಲೈಮಾನ್(ಅ) ಅವರ ಮಧ್ಯೆ ಕುರಿಗಳು ಮೇಯುವ ವಿಷಯದಲ್ಲಿ ಭಿನ್ನಾಭಿಪ್ರಾಯವುಂಟಾಗಿ ತೀರ್ಪಿನಲ್ಲಿ ಭಿನ್ನತೆಯುಂಟಾಯಿತು. ಕುರ್‌ಆನ್ ಸುಲೈಮಾನ್(ಅ) ಅವರ ತೀರ್ಪನ್ನು ಸಮರ್ಥಿಸಿತು. ಆದರೆ ಇಬ್ಬರನ್ನೂ ಶ್ಲಾಘಿಸಿತು.

(ಅಲ್‌ಅಂಬಿಯಾ:79)

ಶಿಕ್ಷೆಯ ಮತ್ತು ಅನುಗ್ರಹದ ದೇವಚರರು ನೂರು ಕೊಲೆಗಳನ್ನು ಮಾಡಿ ಸತ್ತವನ ಬಗ್ಗೆ ಭಿನ್ನಾಭಿಪ್ರಾಯ ತಾಳಿದುವು. ಆತ ಅಕ್ರಮಿ ನಾಡಿನಿಂದ ಪಶ್ಚಾತ್ತಾಪಪಟ್ಟು ಸಜ್ಜನರ ನಾಡಿಗೆ ಹೋಗುತ್ತಿದ್ದ. ದಾರಿ ಮಧ್ಯೆ ಆತ ಮರಣ ಹೊಂದಿದ. ಅವನ ಬಗ್ಗೆ ಅವನ ಕರ್ಮಗಳನುಸಾರ ತೀರ್ಮಾನ ಮಾಡುವುದೋ ಅಥವಾ ಅವನು ಪಶ್ಚಾತ್ತಾಪದ ಬಳಿಕ ಮಾಡಿದ ಸತ್‌ಸಂಕಲ್ಪಕ್ಕೆ ಅನುಗುಣವಾಗಿಯೋ ಎಂದು ದೇವಚರರಿಬ್ಬರೂ ಜಗಳಾಡಿದರು. ಅಲ್ಲಾಹನು ಮೂರನೆಯ ದೇವಚರನನ್ನು ತೀರ್ಮಾನ ಮಾಡಲು ಕಳಿಸಿದನು. ಆ ದೇವಚರನು ನೆಲವನ್ನು ಅಳೆದು, ಮೃತ ಶರೀರವು ಸಜ್ಜನರ ನಾಡಿಗೆ ಹತ್ತಿರವಾಗಿದ್ದರೆ ಅನುಗ್ರಹದ ದೇವಚರರು ಕೊಂಡು ಹೋಗಲೆಂದೂ ಅಕ್ರಮಿ ನಾಡಿಗೆ ಹತ್ತಿರವಾಗಿದ್ದರೆ ಶಿಕ್ಷೆಯ ದೇವಚರರು ಕೊಂಡೊಯ್ಯಲೆಂದೂ ತೀರ್ಪು ನೀಡಿತು. ನೆಲವನ್ನು ಅಳೆದಾಗ ಆತ ಸಜ್ಜನರ ನಾಡಿಗೆ ಹತ್ತಿರವಾಗಿದ್ದ. ಅಕ್ರಮಿಗಳ ನಾಡಿನಿಂದ ದೂರವಾಗಿದ್ದ. ಆದುದರಿಂದ ಆತನನ್ನು ಅನುಗ್ರಹದ ದೇವಚರರ ವಶಕ್ಕೊಪ್ಪಿಸಲಾಯಿತು. ಇದು ಪ್ರಾಮಾಣಿಕ ಹದೀಸ್‌ಗಳಲ್ಲಿ ಬಂದಿರುವ ಕಥೆಯಾಗಿದೆ.

ಬುಖಾರಿ ಮತ್ತು ಮುಸ್ಲಿಮ್ ಹದೀಸ್‌ನಲ್ಲಿ ಉಲ್ಲೇಖಗೊಂಡಿರುವ ಒಂದು ಘಟನೆ ಹೀಗಿದೆ- ದಾವೂದ್ ಮತ್ತು ಸುಲೈಮಾನ್(ಅ) ಅವರ ಮಧ್ಯೆ ಇಬ್ಬರು ಹೆಂಗಸರ ವ್ಯಾಜ್ಯದಲ್ಲಿ ಭಿನ್ನಾಭಿಪ್ರಾಯವುಂಟಾಯಿತು. ಆ ಇಬ್ಬರು ಮಹಿಳೆಯರು ತಂತಮ್ಮ ಪುಟ್ಟ ಮಗುವಿನೊಂದಿಗೆ ಪ್ರಯಾಣಿಸುತ್ತಿದ್ದರು. ರಾತ್ರಿ ಹೊತ್ತಿನಲ್ಲಿ ಒಂದೆಡೆ ತಂಗಿದ್ದಾಗ ಒಂದು ಮಗುವನ್ನು ತೋಳ ಎತ್ತಿಕೊಂಡು ಹೋಯಿತು. ಈಗ ಇಬ್ಬರು ಹೆಂಗಸರಲ್ಲಿ ತೋಳ ತಿಂದ ಮಗು ಯಾರದೆಂಬ ಬಗ್ಗೆ ಜಗಳವುಂಟಾಯಿತು. ಹಿರಿಯ ಹೆಂಗಸು ಜೀವಂತ ಮಗು ತನ್ನದೆಂದೂ ಕಿರಿಯವಳು ತನ್ನದೆಂದೂ ವಾದಿಸತೊಡಗಿದರು. ಕೊನೆಗೆ ಇಬ್ಬರೂ ದಾವೂದ್(ಅ) ಅವರ ಬಳಿಗೆ ತೀರ್ಮಾನಕ್ಕಾಗಿ ಬಂದರು. ಹಿರಿಯ ಹೆಂಗಸಿನ ಪರವಾಗಿ ದಾವೂದ್, ತೀರ್ಪು ನೀಡಿದರು. ಅಲ್ಲಿಂದ ಅವರಿಬ್ಬರೂ ಸುಲೈಮಾನ್‌ರ ಬಳಿಗೆ ಹೋದರು. ಸುಲೈಮಾನ್ ಎರಡೂ ಕಡೆಯ ವಾದ ಆಲಿಸಿದ ನಂತರ ಒಂದು ಕಠಾರಿ ತರಿಸಿ ಆ ಮಗುವನ್ನು ಎರಡು ತುಂಡು ಮಾಡಿ ಇಬ್ಬರಿಗೂ ಹಂಚುತ್ತೇನೆಂದು ಹೇಳಿದರು. ಈ ತೀರ್ಪನ್ನು ಕೇಳಿದ ಕಿರಿಯ ಹೆಂಗಸು ಚೀತ್ಕರಿಸುತ್ತಾ ಹೀಗೆಂದರು-"ಅಲ್ಲಾಹನು ತಮ್ಮ ಮೇಲೆ ದಯೆ ತೋರಲಿ. ಮಗುವನ್ನು ಕಡಿಯ ಬೇಡಿರಿ. ಅವಳಿಗೇ ನೀಡಿರಿ." ಈ ಪ್ರಯೋಗದಿಂದ ಮಗು ಕಿರಿಯ ಹೆಂಗಸಿನದ್ದೆಂದು ಸಾಬೀತಾಯಿತು. ಅದನ್ನು ಅವಳಿಗೆ ಒಪ್ಪಿಸಲಾಯಿತು.

ಪ್ರಸ್ತುತ ಉದಾಹರಣೆಗಳಿಂದ ನಿಷ್ಪಾಪಿಗಳಾದ ಪ್ರವಾದಿಗಳು ಮತ್ತು ದೇವಚರರು ಕೂಡಾ ಒಂದೇ ಘಟನೆಯನ್ನು ಎರಡು ವಿಭಿನ್ನ ದೃಷ್ಟಿಕೋನದಿಂದ ನೋಡಿ ಅವರ ಮಧ್ಯೆ ಭಿನ್ನಾಪ್ರಾಯವುಂಟಾಗಿದೆಯೆಂದು ಸಾಬೀತಾಯಿತು. ಹಾಗಿರುವಾಗ ಪಾಪಗಳನ್ನು ಮಾಡಲು ಅವಕಾಶವಿರುವಂತಹ ಮಾನವರ ಮಧ್ಯೆ ಆಂಶಿಕ ಮತ್ತು ಸಂಶೋಧನಾತ್ಮಕ ವಿಷಯಗಳಲ್ಲಿ ಭಿನ್ನಾಭಿಪ್ರಾಯವುಂಟಾಗದೆಂದು, ಕಡ್ಡಾಯ ಕರ್ಮಗಳ ರಂಗದಂತೆಯೇ ಆಂಶಿಕ ವಿಭಾಗಗಳ ರಂಗದಲ್ಲೂ ಈ ಸಮುದಾಯವು ಒಂದೇ ಆಗಿರಬಹುದೆಂದು ನಿರೀಕ್ಷಿಸುವುದಾದರೂ ಹೇಗೆ?

ಇಲ್ಲಿ ಆಂಶಿಕ ಮತ್ತು ಸಂಶೋಧನಾತ್ಮಕ ವಿಷಯಗಳಲ್ಲಿ ಭಿನ್ನಾಭಿಪ್ರಾಯವು ಅಗತ್ಯವೂ ಅನುಗ್ರಹವೂ ವೈಶಾಲ್ಯವೂ ಆಗಿರುವಾಗ ಕುರ್‌ಆನ್ ಮತ್ತು ಹದೀಸ್‌ಗಳು ಖಂಡಿಸಿರುವ ಭಿನ್ನತೆಯ ಅರ್ಥವೇನೆಂಬ ಪ್ರಶ್ನೆ ಉದ್ಭವಿಸಬಹುದು.

ವಾಸ್ತವದಲ್ಲಿ ಇಸ್ಲಾಮಿನ ಮೂಲಭೂತ ವಿಶ್ವಾಸಗಳು, ಕಡ್ಡಾಯ ಕರ್ಮಗಳು, ತತ್ವಸಿದ್ಧಾಂತಗಳು, ಮೇರೆಗಳು ಹಾಗೂ ಹರಾಮ್-ಹಲಾಲ್‌ಗಳ ವಿಷಯದಲ್ಲಿ ಉಂಟಾಗುವ ಭಿನ್ನಾಭಿಪ್ರಾಯ ಖಂಡನೀಯವಾಗಿದೆ. ಏಕೆಂದರೆ ಅವು ಧರ್ಮದ ತಳಪಾಯವೂ ಸ್ಥಂಭವೂ ಆಗಿದೆ. ಅವುಗಳಲ್ಲಿ ಯಾವುದೇ ರೀತಿ ಭಿನ್ನತೆಯೂ ಖಂಡನಾರ್ಹವಾಗಿದೆ. ಅದು ಪಥಭ್ರಷ್ಟತೆಯಾಗಿದೆ.

ಆಂಶಿಕ ಭಿನ್ನಾಭಿಪ್ರಾಯವಾಗಿದ್ದರೂ ಅದು ಪರಸ್ಪರ ದ್ವೇಷ, ಹಗೆತನ, ಆತ್ಮಪ್ರಶಂಸೆ, ಅಕ್ರಮ, ಅನ್ಯಾಯ, ಲೌಕಿಕ ಮೋಹ ಹಾಗೂ ಸ್ವಚಿತ್ತದ ಅನುಸರಣೆಗೆ ಎಡೆ ಕೊಡುವಂಥದ್ದಾಗಿದ್ದರೆ ಹಾಗೂ ಸ್ಪಷ್ಟಜ್ಞಾನ ಮತ್ತು ಮಾರ್ಗದರ್ಶನ ಲಭಿಸಿದ ನಂತರವಾಗಿದ್ದರೆ ಅದು ಕೂಡಾ ಖಂಡನೀಯವಾಗಿದೆ. ಅಲ್ ಬಕರ : 213, ಆಲಿ ಇಮ್ರಾನ್ : 19 ಮತ್ತು ಜಾಸಿಯ: 16-

17ರಲ್ಲಿ ಅಲ್ಲಾಹನು ಇದನ್ನು ಸ್ಪಷ್ಟಪಡಿಸಿದ್ದಾನೆ.

ಇನ್ನೂ ಒಂದು ವಿಧದ ಭಿನ್ನಾಭಿಪ್ರಾಯವಿದೆ. ಅದು ಆಂಶಿಕವಾಗಿದ್ದರೂ ಸರಿ, ಅದರ ಪರಿಣಾಮ ಸಮುದಾಯದಲ್ಲಿ ಒಡಕು, ವಿಚ್ಛಿದ್ರತೆ, ದ್ವೇಷವಾಗಿದ್ದರೆ, ಅದು ಸಮುದಾಯವನ್ನು ಪರಸ್ಪರ ಹೊಡೆದಾಡುವ ಗುಂಪುಗಳಾಗಿ ಒಡೆಯುವಂತಾಗಿದ್ದರೆ ಅದು ಕೂಡಾ ಖಂಡನಾರ್ಹವೆ. ಅಲ್ಲಾಹನು ಈ ಕೆಳಗಿನ ಸೂಕ್ತಗಳಲ್ಲಿ ಅದನ್ನು ಖಂಡಿಸಿದ್ದಾನೆ. ಆಲಿ ಇಮ್ರಾನ್: 19 ಮತ್ತು 105, ಅನ್‌ಫಾಲ್: 46, ರೂಮ್: 32, ಅನ್‌ಆಮ್: 159, ಅಂಬಿಯಾ: 92-93 ಅಲ್ ಮೂಮಿನೂನ್: 53-54.

ಭಿನ್ನಾಭಿಪ್ರಾಯದ ವಿಷಯಗಳಲ್ಲಿ ಸಂತುಲಿತ ನಿಲುವು

ಮುಸ್ಲಿಮ್ ಸಮುದಾಯದಲ್ಲಿ ಐಕ್ಯವಿರಬೇಕೆಂದು ಬಯಸುವ, ಕನಿಷ್ಟ ಒಡೆದು ಹೋದ ಹೃದಯಗಳನ್ನು ಜೋಡಿಸಬಯಸುವ ಹಾಗೂ ಸಮುದಾಯಕ್ಕೆ ಈ ವರೆಗೆ ಉಂಟಾಗಿರುವ ನಷ್ಟವನ್ನು ನಿವಾರಿಸಬಯಸುವ ಪ್ರತಿಯೊಬ್ಬನೂ ಸಂತುಲಿತ ಮಾರ್ಗವನ್ನು ಅವಲಂಬಿಸಬೇಕಾದುದು ಮತ್ತು ಅತಿರೇಕದ ಧೋರಣೆಯನ್ನು ಬಿಟ್ಟು ಬಿಡಬೇಕಾದುದು ಅನಿವಾರ್ಯ. ಸಹಾಬಿಗಳು ಮತ್ತು ಹಿಂಗಾಮಿಗಳ ಮಾತುಗಳಿಂದ ಇದು ಸ್ಪಷ್ಟವಾಗುತ್ತದೆ. ಹ. ಅಲೀ(ರ) ಈ ರೀತಿ ಉಪದೇಶಿಸಿದ್ದಾರೆ-

"ಸಂತುಲಿತ ಮಾರ್ಗವನ್ನು ಅವಲಂಬಿಸಬೇಕಾದುದು ನಿಮ್ಮ ಮೇಲೆ ಕಡ್ಡಾಯ. ನಡೆಯುವವರು ಅದೇ ಮಾರ್ಗದಲ್ಲಿ ನಡೆಯಬೇಕು. ಅತಿರೇಕವೆಸಗುವವರು ಅದರತ್ತಲೇ ಮರಳಬೇಕು."

ಸಂತುಲಿತತೆಯು ಕರ್ಮರಂಗದ ಕೇಂದ್ರ ಬಿಂದುವಾಗಿದೆ. ಅದರತ್ತಲೇ ಜನ ನಾಲ್ದೆಸೆಯಿಂದಲೂ ಬರಬೇಕು. ಬೇರೆ ಮಾತಿನಲ್ಲಿ ಹೇಳುವುದಾದರೆ ಅದು ಸನ್ಮಾರ್ಗದಂತಿದೆ. ಅದನ್ನು ಅನುಸರಿಸಲು ಅಲ್ಲಾಹನು ಕಟ್ಟಪ್ಪಣೆ ಮಾಡಿದ್ದಾನೆ. ನಾವು ಒಂದಾಗಬೇಕು. ಐಕ್ಯದಿಂದಿರಬೇಕು. ಪೂರ್ವ ಪಶ್ಚಿಮಗಳ ಮಾನವ ಮತ್ತು ಜಿನ್ನ್ ಶೈತಾನರು ನಮ್ಮನ್ನು ವಿವಿಧ ಮಾರ್ಗಗಳೆಡೆಗೆ ಕರೆಯುತ್ತಿದ್ದಾರೆ. ಅವುಗಳಿಂದ ನಾವು ನಮ್ಮನ್ನು ರಕ್ಷಿಸಿಕೊಳ್ಳಬೇಕು. ಇದರ ಎಚ್ಚರಿಕೆಯನ್ನು ಅಲ್ಲಾಹನು ಈ ರೀತಿ ನೀಡಿದ್ದಾನೆ-

ಇದು ನನ್ನ ನೇರವಾದ ಮಾರ್ಗ. ಆದುದರಿಂದ ನೀವು ಅದರಲ್ಲೇ ನಡೆಯಿರಿ. ಇತರ ಮಾರ್ಗಗಳಲ್ಲಿ ನಡೆಯದಿರಿ. ಅವು ನಿಮ್ಮನ್ನು ನೇರಮಾರ್ಗದಿಂದ ತಪ್ಪಿಸಿ ನಿಮ್ಮನ್ನು ಛಿದ್ರಗೊಳಿಸುವುವು. ಇದು ನೀವು ಆಜ್ಞೋಲ್ಲಂಘನೆಯಿಂದ ಪಾರಾಗಲಿಕ್ಕಾಗಿ ನಿಮ್ಮ ಪ್ರಭು ನಿಮಗೆ ನೀಡಿರುವ ಸನ್ಮಾರ್ಗವಾಗಿದೆ. (ಅನ್‌ಆಮ್ : 153)

ಈ ಧರ್ಮವನ್ನು ಸಂಸ್ಥಾಪಿಸಿರಿ ಮತ್ತು ಇದರಲ್ಲಿ ಭಿನ್ನಾಭಿಪ್ರಾಯಗಳಲ್ಲಿ ಸಿಲುಕಬೇಡಿರಿ. (ಅಶ್ಶೂರಾ:13)

ಹ. ಅಬ್ದುಲ್ಲಾ ಬಿನ್ ಮಸ್‌ಊದ್(ರ) ಹೇಳುತ್ತಾರೆ: ಪ್ರವಾದಿ(ಸ) ತಮ್ಮ ಕೈಯಿಂದ

ಒಂದು ನೇರ ರೇಖೆಯನ್ನು ಎಳೆದರು. ಇದು ಅಲ್ಲಾಹನ ನೇರ ಮಾರ್ಗವೆಂದರು. ಅನಂತರ ಎಡ ಬಲಗಳಿಗೆ ಇನ್ನೂ ಕೆಲವು ರೇಖೆಗಳನ್ನೆಳೆದರು. ಅನಂತರ ಹೀಗೆಂದರು: ಇವು ವಿಭಿನ್ನ ಮಾರ್ಗಗಳಾಗಿವೆ. ಅವುಗಳಲ್ಲಿ ಪ್ರತಿಯೊಂದು ಮಾರ್ಗದಲ್ಲೂ ಶೈತಾನನು ಕುಳಿತುಕೊಂಡು ತನ್ನೆಡೆಗೆ ಕರೆಯುತ್ತಿದ್ದಾನೆ. ತರುವಾಯ ಪ್ರವಾದಿ(ಸ) ಅಲ್‌ಅನ್‌ಆಮ್ ಅಧ್ಯಾಯದ 153ನೇ ಸೂಕ್ತವನ್ನು ಪಠಿಸಿದರು.

ಇಸ್ಲಾಮ್‌ನ ಉತ್ಥಾನವನ್ನು ಬಯಸುವವರು ಧರ್ಮದಲ್ಲಿ ಕಠೋರ ನೀತಿಯನ್ನು ಅನುಸರಿಸಬಾರದು. ಅವರು ಸಂತುಲಿತ ಮಾರ್ಗವನ್ನು ಅನುಸರಿಸಬೇಕು. ಅತಿರೇಕ ಮತ್ತು ಕಟು ಧೋರಣೆ ತಾಳುವವರು ನಾಶವಾಗುವರೆಂದು ಪ್ರವಾದಿ(ಸ) ಎಚ್ಚರಿಸಿದ್ದಾರೆ.

"ಅತಿರೇಕವೆಸಗುವವರು ಮತ್ತು ಉಗ್ರ ನಿಲುವಿನವರು ನಾಶವಾದರು. ಈ ಮಾತನ್ನು ಪ್ರವಾದಿ(ಸ) ಮೂರು ಸಲ ಆವರ್ತಿಸಿದರು." (ಮುಸ್ಲಿಮ್)

'ಅತಿರೇಕವೆಸಗುವವರು' ಎಂಬುದನ್ನು ಹಿಂಗಾಮಿಗಳು ವಿವಿಧ ಸಹಾಬಿಗಳಿಂದ ಈ ರೀತಿ ವ್ಯಾಖ್ಯಾನಿಸಿದ್ದಾರೆ: ಇಬಾದತ್‌ಗಳಲ್ಲಿ ಅತಿರೇಕವೆಸಗುವುದು. ಇದು ಅವರನ್ನು ಶರೀಅತ್‌ನ ಕಾನೂನುಗಳಿಂದ ಹೊರ ಹಾಕಿ ಶೈತಾನನೊಂದಿಗೆ ಜೋಡಿಸುತ್ತದೆ. ಇಲ್ಲದಂತಹ ಸಮಸ್ಯೆಗಳ ಬಗ್ಗೆ ಚಿಂತನೆ ನಡೆಸುವುದು. ಅಲ್ಲಾಹನ ಗ್ರಂಥ ಮತ್ತು ಪ್ರವಾದಿಚರ್ಯೆಯಲ್ಲಿಲ್ಲದ ಆಂಶಿಕ ವಿಷಯಗಳಲ್ಲಿ ಬಹಳ ಹೆಚ್ಚು ಸಿಲುಕಿಕೊಂಡಿರುವುದು. ಚರ್ಚೆಗೆ ಆಸ್ಪದವೇ ಇಲ್ಲದೆ ವಿಶ್ವಾಸವಿರಿಸಬೇಕಾದ ವಿಷಯಗಳಲ್ಲಿ ತರ್ಕಿಸುವುದು ಮತ್ತು ಅಂತಹ ವಿಷಯಗಳ ಕುರಿತು ಪ್ರಶ್ನೆಗಳನ್ನೆಬ್ಬಿಸುವುದು. ಉದಾ: ಪರಲೋಕ, ರೂಹ್(ಆತ್ಮ) ಮುಸ್ಲಿಮ್ ಸಮುದಾಯದ ಬದುಕು ಇತ್ಯಾದಿ. ಪ್ರವಾದಿ(ಸ) ಅತಿರೇಕದ ಧೋರಣೆಯನ್ನು ಕಟುವಾಗಿ ವಿರೋಧಿಸಿದ್ದಾರೆ.

"ಧರ್ಮದಲ್ಲಿ ಅತಿರೇಕವೆಸಗಬೇಡಿರಿ. ಧರ್ಮದಲ್ಲಿ ಅತಿರೇಕವೆಸಗಿದುದರಿಂದಾಗಿಯೇ ನಿಮಗಿಂತ ಹಿಂದಿನ ಸಮುದಾಯಗಳು ನಾಶವಾದುವು." (ಅಹ್ಮದ್, ನಸಾಈ, ಇಬ್ನುಮಾಜಃ)

ಧರ್ಮದಲ್ಲಿ ಅತಿರೇಕವು ಸಣ್ಣ ಪುಟ್ಟ ಹಾಗೂ ಸಾಮಾನ್ಯ ವಿಷಯಗಳಲ್ಲಿಯೂ ತಮ್ಮ ಎದುರಾಳಿಯ ವಿರುದ್ಧ ಪಕ್ಷಪಾತ ಮತ್ತು ಭಿನ್ನಾಭಿಪ್ರಾಯ ಮೂಡಿಸುತ್ತದೆ. ಹೃದಯ ವೈಶಾಲ್ಯ, ಔದಾರ್ಯ ಮತ್ತು ಮೃದು ಧೋರಣೆಯಿಂದ ಐಕ್ಯ ಮೂಡುತ್ತದೆ. ಸಹಾಬಿಗಳಲ್ಲಿ ಆಂಶಿಕ ವಿಷಯಗಳಲ್ಲಿ ವಿಶಾಲತೆ ಮತ್ತು ಔದಾರ್ಯದ ಈ ಸ್ಫೂರ್ತಿಯಿಂದಾಗಿಯೇ ಅವರು ಭಿನ್ನಾಭಿಪ್ರಾಯಗಳ ಹೊರತಾಗಿಯೂ ಪಕ್ಷಪಾತ ಮತ್ತು ಒಡಕಿಗೆ ಬಲಿಯಾಗಲಿಲ್ಲ. ಅನವಶ್ಯಕ ತರ್ಕಗಳನ್ನು ಅವರು ಸ್ವಯಂ ಮಾಡುತ್ತಿರಲಿಲ್ಲ. ಇತರರನ್ನು ಅದರಿಂದ ತಡೆಯುತ್ತಿದ್ದರು. ಏಕೆಂದರೆ ಧರ್ಮದಲ್ಲಿ ಸೌಲಭ್ಯದ ಬದಲು ಕಠೋರತೆ ಉಂಟಾಗಲು ಸಾಧ್ಯವಿರುವ ಇಂತಹ ತರ್ಕಗಳಿಂದಲೂ ಪ್ರಶ್ನೆ ಕೇಳುವುದರಿಂದಲೂ ಅವರನ್ನು ಪ್ರವಾದಿ(ಸ) ತಡೆದಿದ್ದರು. ಈ ಕೆಳಗಿನ ಕುರ್‌ಆನ್ ಸೂಕ್ತವು ಸರಿಯಾದ ಮಾರ್ಗದರ್ಶನ ನೀಡುತ್ತದೆ-

"ಸತ್ಯವಿಶ್ವಾಸಿಗಳೇ! ಬಹಿರಂಗಗೊಳಿಸಿದರೆ ನಿಮಗೆ ಅರೋಚಕವಾಗುವಂತಹ ವಿಷಯಗಳ ಬಗ್ಗೆ ಪ್ರಶ್ನಿಸಬೇಡಿರಿ. ಕುರ್‌ಆನ್ ಅವತೀರ್ಣಗೊಳ್ಳುತ್ತಿರುವಾಗ ಅಂತಹ ಪ್ರಶ್ನೆಗಳನ್ನು ಕೇಳಿದರೆ ಅವು ನಿಮಗೆ ಪ್ರಕಟಗೊಳಿಸಲ್ಪಡಬಹುದು. ನೀವು ಈ ವರೆಗೆ ಮಾಡಿದವುಗಳನ್ನು

ಅಲ್ಲಾಹನು ಕ್ಷಮಿಸಿ ಬಿಟ್ಟಿದ್ದಾನೆ. ಅವನು ಕ್ಷಮಾಶೀಲನೂ ಸಹನ ಶೀಲನೂ ಆಗಿದ್ದಾನೆ." (5:101)

ವೃಥಾ ಅನಗತ್ಯ ಪ್ರಶ್ನೆಗಳನ್ನು ಕೇಳುವುದರ ಬಗ್ಗೆ ಪ್ರವಾದಿ(ಸ) ಬಹಳ ಅಸಮಾಧಾನ ಪ್ರಕಟಿಸುತ್ತಾ ಹಿಂದಿನ ಜನಾಂಗಗಳ ವಿನಾಶದಿಂದ ಪಾಠ ಕಲಿಯುವಂತೆ ತಾಕೀತು ಮಾಡಿದ್ದಾರೆ. "(ಧರ್ಮದ ಸಕಲ ಪ್ರಮುಖ ವಿಷಯಗಳನ್ನೂ ನಾನು ನಿಮಗೆ ತಲಪಿಸಿದ್ದೇನೆ) ನಿಮಗೆ ತಿಳಿಸದಿರುವ ವಿಷಯಗಳನ್ನು ಕೆದಕಬೇಡಿರಿ. ಏಕೆಂದರೆ ನಿಮಗಿಂತ ಮುಂಚಿನ ಸಮುದಾಯಗಳು ಅಧಿಕಾಧಿಕ ಪ್ರಶ್ನೆಗಳನ್ನು ಕೇಳುವುದರಿಂದಲೂ ತಮ್ಮ ಪ್ರವಾದಿಗಳೊಂದಿಗಿನ ಭಿನ್ನಾಭಿಪ್ರಾಯಗಳಿಂದಲೂ ನಾಶವಾದವು. ನಾನು ಯಾವುದೇ ವಿಷಯದ ಕುರಿತು ನಿಮ್ಮನ್ನು ತಡೆದರೆ ಅದನ್ನು ಮಾಡದಿರಿ. ನಾನು ಏನಾದರೂ ನಿಮಗೆ ಆದೇಶಿಸಿದರೆ ನಿಮ್ಮ ಶಕ್ತ್ಯಾನುಸಾರ ಅದರಂತೆ ನಡೆಯಿರಿ".

ಈ ಪ್ರವಾದಿವಚನವು ಬನೀ ಇಸ್ರಾಈಲ್‌ನ ಅತಿರೇಕದ ವರ್ತನೆಯ ಕಡೆಗೆ ಬೆಟ್ಟು ಮಾಡುತ್ತದೆ. ಅವರಿಗೆ ದನ ಕಡಿಯಬೇಕೆಂಬ ಆಜ್ಞೆ ನೀಡಿದಾಗ ಅವರು ಮೂಸಾ(ಅ) ಅವರಲ್ಲಿ ಪ್ರಶ್ನೆಗಳನ್ನು ಕೇಳತೊಡಗಿದರು. ಇದರಿಂದ ಅವರೇ ಸಂಕಟಕ್ಕೆ ಸಿಲುಕಿದರು. ವಿಶಿಷ್ಟರೂಪದ ದನವನ್ನು ಹುಡುಕುವುದು ಅವರಿಗೆ ಬಹಳ ಕಷ್ಟವಾಯಿತು. ಹ. ಅನಸ್ ವರದಿ ಮಾಡುತ್ತಾರೆ- ಒಮ್ಮೆ ಸಹಾಬಿಗಳು ಪ್ರವಾದಿ(ಸ) ಅವರಲ್ಲಿ ಒಂದು ಪ್ರಶ್ನೆಯನ್ನು ಅನೇಕ ಬಾರಿ ಆವರ್ತಿಸಿ ಆವರ್ತಿಸಿ ಕೇಳಿದಾಗ, ಪ್ರವಾದಿ(ಸ) ಬಹಳ ಕುಪಿತಗೊಂಡು ವೇದಿಕೆಯೇರಿ ಹೀಗೆಂದರು- "ನೀವಿಂದು ಯಾವ ವಿಷಯಗಳ ಕುರಿತು ನನ್ನಲ್ಲಿ ಪ್ರಶ್ನಿಸುತ್ತೀರೋ ಅವುಗಳ ವಿವರವಾದ ಉತ್ತರವನ್ನು ನಾಳೆ ನೀಡುವೆ." ಅನಸ್(ರ) ಹೇಳುತ್ತಾರೆ- ಪ್ರವಾದಿ(ಸ) ಅವರ ಕೋಪ ಮತ್ತು ಮಾತಿನ ಶೈಲಿ ನೋಡಿ ನಾನು ಆಚೀಚೆ ನೋಡಿದೆ. ಸಹಾಬಿಗಳೆಲ್ಲರೂ ಮುಖ ಮುಚ್ಚಿ ಅಳುತ್ತಿದ್ದರು. ಅದೇ ಸಂದರ್ಭದಲ್ಲಿ ಹ. ಉಮರ್ ಎದ್ದು ನಿಂತು ಹೀಗೆ ಹೇಳಿದರು-

"ನಮ್ಮ ಪ್ರಭು ಅಲ್ಲಾಹನಾಗಿದ್ದಾನೆ. ನಮ್ಮ ಧರ್ಮ ಇಸ್ಲಾಮ್ ಆಗಿದೆ ಮತ್ತು ಮುಹಮ್ಮದ್(ಸ) ಅಲ್ಲಾಹನ ಪ್ರವಾದಿಯಾಗಿದ್ದಾರೆ ಎಂಬ ಬಗ್ಗೆ ನಾವು ಸಂತೃಪ್ತರಾಗಿದ್ದೇವೆ."

ಈ ಘಟನೆ ಸಹಾಬಿಗಳ ಮಟ್ಟಿಗೆ ಬಹಳ ಪಾಠ ಬೋಧಕವಾಗಿತ್ತು. ಆ ದಿನದಿಂದ ಅವರು ಪ್ರವಾದಿವರ್ಯರಲ್ಲಿ ಅನಗತ್ಯ ಪ್ರಶ್ನೆ ಕೇಳುವುದನ್ನು ಮತ್ತು ಕೆದಕುವುದನ್ನು ಬಿಟ್ಟು ಬಿಟ್ಟರು. ಪ್ರವಾದಿತ್ವದ ಸಂಪೂರ್ಣ ಅವಧಿಯಲ್ಲಿ ಹ. ಉಮರ್(ರ) ಅವರು ಒಟ್ಟು 13 ಪ್ರಶ್ನೆಗಳನ್ನು ಕೇಳಿದ್ದು, ಅವೆಲ್ಲವೂ ಕರ್ಮಗಳಿಗೆ ಸಂಬಂಧಿಸಿದ ಪ್ರಮುಖ ಪ್ರಶ್ನೆಗಳಾಗಿದ್ದುವು. ಅವುಗಳ ಪೈಕಿ ಒಂದೂ ಕಾಲ್ಪನಿಕ ಪ್ರಶ್ನೆಯಾಗಿರಲಿಲ್ಲ. ಪ್ರವಾದಿವರ್ಯರ ಈ ಬೋಧನೆಯಿಂದಾಗಿ ಅಂದಿನಿಂದ ಸಹಾಬಿಗಳ ಸಂಪೂರ್ಣ ಗಮನವು ಕ್ರಿಯಾತ್ಮಕ ಸಮಸ್ಯೆಗಳ ಪರಿಹಾರದಲ್ಲಿ ಸೌಲಭ್ಯವುಂಟು ಮಾಡುವುದರ ಕಡೆಗೆ ಹರಿಯಿತು. ಅವರು ಕಾಲ್ಪನಿಕ ಮತ್ತು ಇಲ್ಲದ ಸಮಸ್ಯೆಗಳ ಬಗ್ಗೆ ತರ್ಕವನ್ನು ಸಂಪೂರ್ಣ ಬಿಟ್ಟು ಬಿಟ್ಟರು. ಅವರು ಜನರನ್ನು ಧರ್ಮದ ವಿಷಯದಲ್ಲಿ ಸಂಕೀರ್ಣತೆಗೀಡು ಮಾಡುವಂತಹ ಉತ್ತರಗಳನ್ನು ನೀಡಲಿಲ್ಲ. ಬದಲಾಗಿ ಜನರು ಧರ್ಮವನ್ನು ಅಪ್ಪಿಕೊಂಡು ಪ್ರೀತಿಸುವಂತೆ ಮಾಡಿದರು.

ಸಂಶೋಧನಾತ್ಮಕ ಆಂಶಿಕ ವಿಷಯಗಳಲ್ಲಿ ಸೌಲಭ್ಯಗಳನ್ನೊದಗಿಸುವುದೇ ಸಹಾಬಿಗಳ ಕಾರ್ಯ ವಿಧಾನವಾಗಿತ್ತು. ಯಾವುದೇ ವಿಷಯದ ಕುರಿತು ಕೆದಕುವಂತಹ ಕಾರ್ಯವನ್ನು ಅವರು ಮಾಡುತ್ತಿರಲಿಲ್ಲ. ಒಂದು ಸಮಸ್ಯೆಯು ಸುಲಭವಾಗುವ ಬದಲು ಕಠಿಣವಾಗುವುದೆಂದರೆ, ವೈಶಾಲ್ಯದ ಬದಲು ಸಂಕೀರ್ಣತೆಯುಂಟಾಗುವುದಾದರೆ ಅವರು ಅದರಿಂದ ದೂರವಿರುತ್ತಿದ್ದರು. ಇದು ಅಲ್ಲಾಹನ ಧರ್ಮದಲ್ಲಿ ನಕಾರಾತ್ಮಕವಾದ ಕೃತ್ಯವಾಗಿದೆ. ಅಲ್ಲಾಹನ ಮೂಲಭೂತ ಬೋಧನೆಗೆ ವಿರುದ್ಧವಾಗಿದೆ. ಕುರ್‌ಆನ್‌ನಲ್ಲಿ ಹೀಗಿದೆ-

"ಅಲ್ಲಾಹನು ಧರ್ಮದಲ್ಲಿ ನಿಮಗೆ ಯಾವುದೇ ಸಂಕೀರ್ಣತೆಯನ್ನಿಟ್ಟಿಲ್ಲ." (22:78)

ಅಲ್ಲಾಹನು ನಿಮಗೆ ಸೌಲಭ್ಯವನ್ನೀಯ ಬಯಸುತ್ತಾನೆ. ನಿಮ್ಮನ್ನು ಕಷ್ಟಕ್ಕೀಡು ಮಾಡಲು ಇಚ್ಛಿಸುವುದಿಲ್ಲ." (2:185)

ಯೂಸುಫ್ ಬಿನ್ ಮಾಲಿಕ್ ಹೇಳುತ್ತಾರೆ, "ನಾನು ಹ. ಆಯಿಶಾರ ಬಳಿಯಲ್ಲಿದ್ದೆ. ಅಲ್ಲಿಗೆ ಒಬ್ಬ ಇರಾಕಿನವ ಬಂದು, ಉತ್ತಮ ಕಫನ್ ಯಾವುದು ಎಂದು ಕೇಳಿದ. ಆಯಿಶಾ ಅದಕ್ಕೆ ಉತ್ತರವಾಗಿ ನಿನಗೆ ಈ ಪ್ರಶ್ನೆಯ ಉತ್ತರ ತಿಳಿಯದಿದ್ದರೆ ನಿನಗೇನು ನಷ್ಟ. ನಿನ್ನ ಧರ್ಮದಲ್ಲಿ ಯಾವ ಲೋಪವುಂಟಾದೀತು ಎಂದು ಕೇಳಿದರು. ಆತ ಪುನಃ ಉಮ್ಮುಲ್ ಮೂಮಿನೀನ್! ನನಗೆ ತಮ್ಮ ಕುರ್‌ಆನ್ ತೋರಿಸಿ ಎಂದ. ಅದರಲ್ಲಿ ನಿನಗೇನು ಕೆಲಸ ಎಂದು ಆಯಿಶಾ ಪ್ರಶ್ನಿಸಿದರು. ಆತ ಹೇಳಿದ- ನಾನು ಅದೇ ಕ್ರಮದಂತೆ ಕುರ್‌ಆನ್ ಕ್ರೋಢೀಕರಿಸ ಬಯಸುತ್ತೇನೆ. ಏಕೆಂದರೆ ಜನರು ಕ್ರೋಢೀಕರಣ ಮಾಡದ ರೂಪದಲ್ಲೇ ಕುರ್‌ಆನ್ ಪಠಿಸುತ್ತಾರೆ. ಅದಕ್ಕೆ ಆಯಿಶಾ ಹೀಗೆ ಉತ್ತರಿಸಿದರು- ಇದಕ್ಕಿಂತ ಮುಂಚೆ ನೀನು ಯಾವ ಕ್ರಮದಲ್ಲಿ ಕುರ್‌ಆನ್ ಪಠಿಸುತ್ತಿದ್ದೆಯೋ ಅದರಿಂದ ನಿನ್ನ ಧರ್ಮಕ್ಕೆ ಯಾವ ಹಾನಿಯಾಗಿದೆ?" (ಬುಖಾರಿ- ಫಝಾಇಲುಲ್ ಕಿರಅತ್)

ಅಲ್ಲಾಮಾ ಹಾಫಿಝ್ ಇಬ್ನು ಹಜರ್ ಅವರು ತಮ್ಮ ಫತ್ಹುಲ್ ಬಾರಿಯಲ್ಲಿ ಪ್ರಸ್ತುತ ಹದೀಸ್‌ನ ವಿವರಣೆಯನ್ನು ಈ ರೀತಿ ಮಾಡಿದ್ದಾರೆ, "ಪುರುಷರಿಗೆ ಕಫನ್‌ಗೆ ಬಿಳಿ ಬಟ್ಟೆಯೇ ಶುದ್ಧವೆಂದು ಹೇಳಲಾದ ತಿರ್ಮಿದಿಯ ಹದೀಸನ್ನು ಆ ಇರಾಕಿನವ ಕೇಳಿರಬೇಕು. ಆಯಿಶಾರಿಂದ ಅದರ ದೃಢೀಕರಣ ಬಯಸಿದ್ದ. ಆದರೆ ಇರಾಕ್‌ನವರು ಧರ್ಮದ ಬಗ್ಗೆ ವ್ಯರ್ಥ ಚರ್ಚೆಗಳನ್ನೂ ಅಸಂಬದ್ಧ ಪ್ರಶ್ನೆಗಳನ್ನೂ ಮಾಡುವುದರಲ್ಲಿ ಪ್ರಸಿದ್ಧರಾಗಿದ್ದರು. ಅದಕ್ಕಾಗಿಯೇ ಆಯಿಶಾರು ನಿನಗೆ ಈ ವಿಷಯ ತಿಳಿಯದಿದ್ದರೆ ನಿನಗೇನು ನಷ್ಟ ಎಂದುತ್ತರಿಸಿದರು. ಅಂದರೆ ನೀನು ಮೃತದೇಹಕ್ಕೆ ಯಾವ ಬಟ್ಟೆಯ ಕಫನ್ ಹೊದಿಸಿದರೂ ಸಮ್ಮತಾರ್ಹವಾಗಿದೆ."

ಅಬ್ದುಲ್ಲಾ ಬಿನ್ ಉಮರ್(ರ) ಅವರೊಡನೆ ಓರ್ವ ಇರಾಕಿನವ ಸೊಳ್ಳೆಯ ರಕ್ತದ ಕುರಿತು ಪ್ರಶ್ನೆ ಕೇಳಿದಾಗ, ಅವರು ತಮ್ಮ ಪ್ರಸಿದ್ಧ ಮಾತನ್ನು ಹೀಗೆ ಪುನರಾವರ್ತಿಸಿದರು, "ಇರಾಕಿಗಳನ್ನು ನೋಡಿ! ಇವರು ಸೊಳ್ಳೆಯ ರಕ್ತದ ಕುರಿತು ಶರೀಅತ್‌ನ ಆಜ್ಞೆಯೇನೆಂದು ತಿಳಿಯಬಯಸುತ್ತಾರೆ. ಆದರೆ ಪ್ರವಾದಿ(ಸ) ಅವರ ಮೊಮ್ಮಗನನ್ನು ವಧಿಸಿದ ಈ ಮಂದಿಗೆ ಆಗ ಶರೀಅತ್‌ನ ಆದೇಶವೇನೆಂದು ತಿಳಿಯುವ ಅಗತ್ಯವೇ ಬರಲಿಲ್ಲ."

ಶಾಹ್ ವಲಿಯುಲ್ಲಾ ದೆಹ್ಲವಿಯವರು ತಮ್ಮ ಪ್ರಖ್ಯಾತ 'ಹುಜ್ಜತುಲ್ಲಾಹಿಲ್ ಬಾಲಿಗ'

ಎಂಬ ಗ್ರಂಥದಲ್ಲಿ ಹೀಗೆ ಬರೆಯುತ್ತಾರೆ- ಪ್ರವಾದಿ(ಸ) ಮತ್ತು ಸಹಾಬಿಗಳ ಕಾಲದಲ್ಲಿ ಧರ್ಮಜ್ಞಾನಗಳಿಸುವ ಮತ್ತು ಅವುಗಳ ಪ್ರಕಾರ ನಡೆಯುವ ಸಲುವಾಗಿ ಸಂಶೋಧನಾತ್ಮಕ ಮತ್ತು ಆಂಶಿಕ ವಿಷಯಗಳಲ್ಲಿ ಸೌಲಭ್ಯವನ್ನು ಪರಿಗಣಿಸಲಾಗುತ್ತಿತ್ತು. ಆದರೆ ಅನಂತರದ ಕಾಲದಲ್ಲಿ ಅಂತಹ ವಿಷಯಗಳಲ್ಲಿ ಕಾಠಿಣ್ಯ, ಉಗ್ರತೆ ಮತ್ತು ಕೆದಕುವುದನ್ನು ಉತ್ತಮವೆಂದು ಭಾವಿಸಲಾಯಿತು. ಧರ್ಮದ ಸೌಲಭ್ಯಗಳನ್ನು ಕ್ಲಿಷ್ಟಕರವಾಗಿ ಮಾಡಲಾಯಿತು. ಉದಾ: ಪ್ರವಾದಿ(ಸ) ವುಝೂ ಮಾಡುವಾಗ ಸಹಾಬಿಗಳು ಅದನ್ನು ಗಮನವಿಟ್ಟು ನೋಡುತ್ತಿದ್ದರು. ಅದೇ ರೀತಿಯಲ್ಲಿ ವುಝೂ ಮಾಡುತ್ತಿದ್ದರು. ಅದರಲ್ಲಿ ಫರ್ಝ್ ಎಷ್ಟು, ಸುನ್ನತ್ ಯಾವುದು, ಅಪೇಕ್ಷಣೀಯ ಯಾವುದು ಎಂದು ನೋಡುತ್ತಿರಲಿಲ್ಲ. ಅದೇ ರೀತಿ ಪ್ರವಾದಿ(ಸ) ನಮಾಝ್ ಮಾಡುವುದನ್ನು ಸಹಾಬಿಗಳು ನೋಡುತ್ತಿದ್ದರು ಮತ್ತು ಅದೇ ರೀತಿಯಲ್ಲಿ ನಮಾಝ್ ಮಾಡುತ್ತಿದ್ದರು. ಹಾಗೆಯೇ ಪ್ರವಾದಿ(ಸ) ಹಜ್ಜ್ ಕರ್ಮಗಳನ್ನು ನಿರ್ವಹಿಸುವುದನ್ನು ಸಹಾಬಿಗಳು ನೋಡಿ ಅದೇ ರೀತಿ ಮಾಡುತ್ತಿದ್ದರು. ಆ ಕಾಲದಲ್ಲಿ ಇದು ಧಾರ್ಮಿಕ ಶಿಕ್ಷಣದ ಉತ್ಕೃಷ್ಟ ರೂಪವಾಗಿತ್ತು. ವುಝೂ, ನಮಾಝ್ ಮತ್ತು ಹಜ್ಜ್‌ಗಳ ಶರ್ತಗಳು ಯಾವುವು, ಫರ್ಝ್‌ಗಳು ಯಾವುವು, ಅಪೇಕ್ಷಣೀಯವಾದುದು ಯಾವುವು ಎಂದು ಸಹಾಬಿಗಳಿಗೆ ವಿವರಿಸುವ ಅಗತ್ಯವನ್ನು ಪ್ರವಾದಿ(ಸ) ಮನಗಾಣಲಿಲ್ಲ. ಸಹಾಬಿಗಳು ಕೂಡಾ ಈ ವಿಷಯಗಳ ಕುರಿತು ಪ್ರವಾದಿ(ಸ) ಅವರಲ್ಲಿ ಕೇಳಲಿಲ್ಲ. ಅವುಗಳ ಫರ್ಝ್, ಸುನ್ನತ್‌ಗಳನ್ನು ಅರಿಯದೆ ನಿರ್ವಹಿಸಿದರೆ ಅವರ ವುಝೂ, ನಮಾಝ್, ಹಜ್ಜ್‌ಗಳೆಲ್ಲ ಸಿಂಧುವಾಗಲಾರದೆಂಬುದು ಕೂಡಾ ಅವರ ಮಸ್ತಿಷ್ಕಗಳಿಗೆ ಹೊಳೆಯಲಿಲ್ಲ. ಏಕೆಂದರೆ ಪ್ರವಾದಿ(ಸ) ಈ ವಿಷಯಗಳನ್ನು ಅವರಿಗೆ ತಿಳಿಸಲಿಲ್ಲ. ಪ್ರವಾದಿವರ್ಯರಲ್ಲಿ ಅವರು ಆಂಶಿಕ ವಿಷಯಗಳ ಬಗ್ಗೆ ಬಹಳ ಕಡಿಮೆ ಪ್ರಶ್ನೆಗಳನ್ನು ಕೇಳಿದರು.

ಅಬ್ದುಲ್ಲಾ ಬಿನ್ ಅಬ್ಬಾಸ್(ರ) ಹೇಳುತ್ತಾರೆ- ನಾನು ಸಹಾಬಿಗಳಿಗಿಂತ ಉತ್ತಮ ಜನ ಕೂಟವನ್ನು ನೋಡಿಲ್ಲ. ಅವರು ಪ್ರವಾದಿ(ಸ) ಅವರಲ್ಲಿ ಒಟ್ಟು 13 ಪ್ರಶ್ನೆಗಳನ್ನು ಕೇಳಿದರು. ಅವೆಲ್ಲವೂ ಕುರ್‌ಆನ್‌ಗೆ ಸಂಬಂಧಿಸಿದ ಕ್ರಿಯಾತ್ಮಕ ಪ್ರಶ್ನೆಗಳಾಗಿದ್ದುವು. ಅವು ಕುರ್‌ಆನ್‌ನಲ್ಲಿವೆ. ಅವರ ಕರ್ಮಗಳಿಗೆ ಸಂಬಂಧಿಸಿರದ ಮತ್ತು ಯಾವುದೇ ಪ್ರಯೋಜನವಿಲ್ಲದಂತಹ ಪ್ರಶ್ನೆಗಳನ್ನು ಅವರು ಪ್ರವಾದಿ(ಸ) ಅವರಲ್ಲಿ ಎಂದೂ ಕೇಳಲೇ ಇಲ್ಲ.

ಇಬ್ನ್ ಉಮರ್(ರ) ಹೇಳುತ್ತಾರೆ- ಬದುಕಿಗೆ ಸಂಬಂಧಿಸದ ಪ್ರಶ್ನೆಗಳನ್ನು ಕೇಳಬೇಡಿರಿ. ಏಕೆಂದರೆ ಅಂತಹ ಪ್ರಶ್ನೆಗಳನ್ನು ಕೇಳುವವರನ್ನು ಹ. ಉಮರ್(ರ) ಶಪಿಸುವುದನ್ನು ಕೇಳಿದ್ದೇನೆ.

ಹ. ಕಾಸಿಮ್ ಹೇಳುತ್ತಾರೆ- ನಾವು ಎಂದೂ ಯಾರಲ್ಲೂ ಕೇಳಿರದಂತಹ ಪ್ರಶ್ನೆಗಳನ್ನು ನೀವು ನಮ್ಮೊಂದಿಗೆ ಕೇಳುತ್ತೀರಾ? ನಾವು ಸಮಯ ಹಾಳು ಮಾಡುವುದು ವ್ಯರ್ಥವೆಂದು ಭಾವಿಸುವ ವಿಷಯಗಳ ಹುಡುಕಾಟ ಮತ್ತು ಸಂಶೋಧನೆಯಲ್ಲಿ ನಿಮ್ಮ ಸಮಯ ಹಾಳು ಮಾಡುತ್ತೀರಾ. ನಮಗೆ ತಿಳಿದೇ ಇಲ್ಲದಂತಹ ಅಥವಾ ತಿಳಿದಿದ್ದರೂ ನಮ್ಮ ಕರ್ಮ ಜೀವನದಲ್ಲಿ ಅದರಿಂದ ಲಾಭ ಅಥವಾ ಹಾನಿಯಿಲ್ಲದಂತಹ ವಿಷಯಗಳ ಬಗ್ಗೆ ನಮ್ಮಲ್ಲಿ

ನೀವು ಪ್ರಶ್ನೆ ಕೇಳುತ್ತೀರಾ?

ಉಮರ್ ಬಿನ್ ಇಸ್ಹಾಕ್ ಹೇಳುತ್ತಾರೆ- ಸಹಾಬಿಗಳ ಬದುಕನ್ನು ನನಗಿಂತ ಹೆಚ್ಚು ಅರಿತವರು ವಿರಳ. ಆದರೆ ಅವರ ಬದುಕಿನಲ್ಲಿ ಸೌಲಭ್ಯಗಳೇ ಇದ್ದುದನ್ನು ಮತ್ತು ಯಾವುದೇ ಕಾಠಿಣ್ಯ ಇಲ್ಲದುದನ್ನು ನಾನು ದರ್ಶಿಸಿದ್ದೇನೆ.

(ಹುಜ್ಜತುಲ್ಲಾಹಿಲ್ ಬಾಲಿಗ, ಭಾಗ1- ಪುಟ: 140-41)

'ಮುಹ್ಕಮಾತ್' ಮತ್ತು 'ಮುತಶಾಬಿಹಾತ್'

ಸಮುದಾಯದಲ್ಲಿ ಐಕ್ಯವುಂಟು ಮಾಡುವುದರಲ್ಲಿ ಸಹಾಯಕವಾಗುವ ಮತ್ತು ಅನೈಕ್ಯದಿಂದ ಅದನ್ನು ರಕ್ಷಿಸುವ ಇನ್ನೊಂದು ವಿಷಯವೇನೆಂದರೆ ಕುರ್‌ಆನ್‌ನ ಮೂಲಾಧಾರವಾಗಿರುವ 'ಮುಹ್ಕಮಾತ್' (ಸ್ಪಷ್ಟ ಆದೇಶಗಳು)ಗಳ ಬಗ್ಗೆ ಚಿಂತನೆ ನಡೆಸಿ ಅವುಗಳಲ್ಲಿ ಗಮನ ಕೇಂದ್ರೀಕರಿಸಬೇಕು. ಅದೇ ರೀತಿ ಅರ್ಥ ತಾತ್ಪರ್ಯಗಳಲ್ಲಿ ಅಸ್ಪಷ್ಟತೆಯಿರುವ 'ಮುತಶಾಬಿಹಾತ್'ಗಳಿಂದ ದೂರವಿರಬೇಕು. ಕುರ್‌ಆನ್‌ನ 'ಮುಹ್ಕಮಾತ್' ಸೂಕ್ತಗಳು ಧರ್ಮದ ಮೂಲಭೂತ ವಿಶ್ವಾಸ, ನಂಬಿಕೆಗಳು, ಆರಾಧನೆಗಳು, ನೀತಿ- ನಡವಳಿಕೆಗಳು, ವ್ಯವಹಾರಗಳು, ಸಾಮಾಜಿಕ, ಆರ್ಥಿಕ ಮತ್ತು ಒಳಿತು - ಕೆಡುಕುಗಳ ಆಜ್ಞೆಗಳು, ದಂಡನಾ ನಿಯಮಗಳು, ವಾರೀಸು ನಿಯಮಗಳು ಹಾಗೂ ವಿಧಿ ನಿಷೇಧಗಳನ್ನೊಳಗೊಂಡಿದೆ. ಅವುಗಳನ್ನು ಚಿಂತನೆ ನಡೆಸಲು, ಪುರಾವೆ ಪಡೆಯಲು ಮತ್ತು ಅದರಂತೆ ನಡೆಯಲು ಅವತೀರ್ಣಗೊಳಿಸಲಾಗಿದೆ. ಅವುಗಳಲ್ಲಿ ಮಾನವನಿಗೆ ಸನ್ಮಾರ್ಗದ ಮಾರ್ಗದರ್ಶನವಿದೆ. ಕುರ್‌ಆನ್‌ನಿಂದ ಸನ್ಮಾರ್ಗ ಪಡೆಯ ಬೇಕಾದರೆ ಇದೇ ಸೂಕ್ತಗಳ ಕಡೆಗೆ ಗಮನ ಹರಿಸಬೇಕಾದುದು ಸತ್ಯವಿಶ್ವಾಸಿಗಳ ಪಾಲಿಗೆ ಅವಶ್ಯಕ. 'ಮುಹ್ಕಮಾತ್' ಸೂಕ್ತಗಳಿಗೆ ಅನುಗುಣವಾಗಿರುವ ಅರ್ಥವೇ 'ಮುತಶಾಬಿಹಾತ್' ಸೂಕ್ತಗಳ ಮಟ್ಟಿಗೂ ಸರಿಯೆಂದೂ ಅಧಿಕೃತವಾದುದೆಂದೂ ತಿಳಿದಿರಬೇಕು. ಏಕೆಂದರೆ ಕುರ್‌ಆನ್‌ನ ವಿಷಯಗಳಲ್ಲಿ ಭಿನ್ನತೆ ಮತ್ತು ವೈರುಧ್ಯಗಳಿಲ್ಲವೆಂದೂ ಕುರ್‌ಆನ್‌ನ ಸೂಕ್ತಗಳು ಪರಸ್ಪರ ಪುಷ್ಟೀಕರಿಸುತ್ತವೆಯೇ ಹೊರತು ಅವು ಪರಸ್ಪರ ನಿರಾಕರಿಸು ವಂತಹವುಗಳಲ್ಲವೆಂದೂ ವಿವರಿಸುವ ಸೂಕ್ತ ಈ ಮುಂಚೆ ಬಂದಿದೆ.

ಇದಕ್ಕೆ ವ್ಯತಿರಿಕ್ತವಾಗಿ ಅಲ್ಲಾಹನ ಅಸ್ತಿತ್ವ, ದೇವ ಸಿಂಹಾಸನ, ಪೀಠ, ದೇವಚರರು, ಜಿನ್ನ್, ಸ್ವರ್ಗ- ನರಕ ಇತ್ಯಾದಿ ಪರೋಕ್ಷದ ವಿಷಯಗಳನ್ನು ಮಾನವ ಭಾಷೆಯಲ್ಲಿ ವಿವರಿಸಿರುವಂತಹ ಸೂಕ್ತಗಳ ನೈಜ ವಾಸ್ತವಿಕತೆಯನ್ನು ಅಲ್ಲಾಹನ ಹೊರತು ಬೇರಾರೂ ಬಲ್ಲವರಿಲ್ಲ. ಆದುದರಿಂದ 'ಮುತಶಾಬಿಹಾತ್'ಗಳ ಅರ್ಥ ತಾತ್ಪರ್ಯಗಳನ್ನು 'ಮುಹ್ಕಮಾತ್'ಗಳ ಅಧೀನವಿರಿಸಬೇಕು. ಅವುಗಳಲ್ಲಿ ಅರ್ಥವಾಗದ ವಿಷಯಗಳನ್ನು ಅಲ್ಲಾಹನಿಗೆ ಬಿಟ್ಟು ಅವುಗಳ ಮೇಲೆ ನಂಬಿಕೆಯಿರಿಸಬೇಕು. 'ಮುತಶಾಬಿಹಾತ್'ಗಳ ಬೆನ್ನು ಹತ್ತಿ ಅವುಗಳ ಅರ್ಥ ತಾತ್ಪರ್ಯದ ಹುಡುಕಾಟ ನಡೆಸಲು ಮತ್ತು ಅವುಗಳಿಗೆ ತಮ್ಮದೇ ಆದ ಅರ್ಥ ಕಲ್ಪಿಸುವ ವಕ್ರಬುದ್ಧಿಯವರ ಕುತಂತ್ರಕ್ಕೆ ಸಿಲುಕಬಾರದು.

ಹ. ಅಬೂ ಹುರೈರಾ(ರ) ಉಲ್ಲೇಖಿಸುತ್ತಾರೆ- ಪ್ರವಾದಿ(ಸ) ಹೇಳಿದರು, "ಕುರ್ ಆನ್‌ನಲ್ಲಿ ಐದು ವಿಧದ ಸೂಕ್ತಗಳಿವೆ. ಹಲಾಲ್-ಹರಾಮ್, ಮುಹ್ಕಮ್-ಮುತಶಾಬಿಹ್ ಮತ್ತು ಅಮ್ಸಾಲ್. ಆದುದರಿಂದ ನೀವು ಹಲಾಲನ್ನು ಹಲಾಲ್ (ಧರ್ಮಬದ್ಧ) ಎಂದು ಭಾವಿಸಿ ಅದನ್ನು ಅಳವಡಿಸಿ, ಹರಾಮನ್ನು ಹರಾಮ್ (ನಿಷಿದ್ಧ) ಎಂದು ಬಗೆದು ಅವುಗಳಿಂದ ದೂರವಿರಿ, ಮುಹ್ಕಮ್ (ಸ್ಪಷ್ಟ ಆದೇಶ) ನಂತೆ ನಡೆಯಿರಿ. ಮುತಶಾಬಿಹ್ (ಅಸ್ಪಷ್ಟ) ಗಳನ್ನು ನಂಬಿರಿ, ಅಮ್ಸಾಲ್ (ಘಟನೆಗಳು) ಗಳಿಂದ ಪಾಠ ಕಲಿಯಿರಿ." (ಮಿಶ್ಕಾತ್)

ಹ. ಆಯಿಶಾ(ರ) ಹೇಳುತ್ತಾರೆ- ಪ್ರವಾದಿ(ಸ) ಮುಹ್ಕಮಾತ್ ಮತ್ತು ಮುತಶಾಬಿಹಾತ್‌ಗಳ ವಿವರಣೆಯಿರುವ ಮತ್ತು ಅದರ ಬಗ್ಗೆ ಸತ್ಯವಿಶ್ವಾಸಿಗಳ ಧೋರಣೆ ಏನಾಗಿರಬೇಕೆಂದು ವಿವರಿಸುವ ಆಲಿ ಇಮ್ರಾನ್ ಅಧ್ಯಾಯದ ಸೂಕ್ತ ಪಠಿಸಿ ಹೀಗೆಂದರು, "ಸತ್ಯವಿಶ್ವಾಸಿಗಳೇ! ಮುತ ಶಾಬಿಹಾತ್‌ಗಳ ಅರ್ಥ ತಾತ್ಪರ್ಯದ ಹುಡುಕಾಟ ನಡೆಸುವ ಜನರನ್ನು ನೀವು ಕಂಡರೆ ಅವರಿಂದ ದೂರವಿರಿ. ಏಕೆಂದರೆ ಅವರ ಮನಸ್ಸಿನಲ್ಲಿ ವಕ್ರತೆಯಿದೆ ಮತ್ತು ಅವರೇ ಗೊಂದಲ ಸೃಷ್ಟಿಸುವವರಾಗಿದ್ದಾರೆ." (ಮುತ್ತಫಕುನ್ ಅಲೈಹಿ)

ಆದುದರಿಂದಲೇ ಜ್ಞಾನದಲ್ಲಿ ಪಕ್ವವಾಗಿರುವವರು ಮುಹ್ಕಮಾತ್‌ನಂತೆ ನಡೆಯುತ್ತಾರೆ ಮತ್ತು ತಮ್ಮ ವಿಚಾರ ನೀತಿ ಮತ್ತು ಕರ್ಮದಲ್ಲಿ ಅದನ್ನೇ ಮೂಲ ತತ್ವವಾಗಿ ಅಂಗೀಕರಿಸುತ್ತಾರೆ. ತದ್ವಿರುದ್ಧವಾಗಿ ವಕ್ರಬುದ್ಧಿಯವರು ಮತ್ತು ಗೊಂದಲ ಪ್ರಿಯರು ಯಾವಾಗಲೂ ಮುತಶಾಬಿಹಾತ್‌ಗಳ ಅರ್ಥ ಹುಡುಕುವುದರಲ್ಲಿ ತಲ್ಲೀನರಾಗಿರುತ್ತಾರೆ.

ಮುಹ್ಕಮಾತ್ ಸೂಕ್ತಗಳನ್ನು ವಿಶ್ವಾಸ - ಕರ್ಮಗಳ ಮೂಲಾಧಾರವಾಗಿರುವುದನ್ನು ಯಾವಾಗಲೆಲ್ಲ ಕೈ ಬಿಡಲಾಗುತ್ತದೋ ಆಗೆಲ್ಲ ಪರಸ್ಪರ ಭಿನ್ನಾಭಿಪ್ರಾಯ ಮತ್ತು ಒಡಕಿನ ದ್ವಾರ ತೆರೆಯುತ್ತದೆ. ವಿಶೇಷವಾಗಿ ಸಂಕೀರ್ಣ ಮತ್ತು ಭಾವನಾತ್ಮಕ ಸಮಸ್ಯೆಗಳ ಕುರಿತು ಪ್ರಾಚೀನ ಮತ್ತು ಆಧುನಿಕ ಮಸ್ತಿಷ್ಕಗಳು ದಂಗಾಗಿವೆ. ಈ ಪೈಕಿ ಅತ್ಯಂತ ಸಂಕೀರ್ಣವಾದುದು ವಿಧಿ ವಿಶ್ವಾಸ (ತಕ್ದೀರ್) ದಂತಹ ಸಮಸ್ಯೆಯಾಗಿದೆ. ಈ ವಿಷಯದಲ್ಲಿ ಸಹಾಬಿಗಳೂ ತರ್ಕ-ವಿತರ್ಕಗಳಲ್ಲಿ ಸಿಲುಕಿದ್ದರು. ಅದನ್ನು ಪ್ರವಾದಿ(ಸ) ಕಟುವಾಗಿ ವಿಮರ್ಶಿಸಿದ್ದರು.

ಹ. ಅಬ್ದುಲ್ಲಾ ಬಿನ್ ಉಮರ್(ರ) ಹೇಳುತ್ತಾರೆ- ಕೆಲವು ಮಂದಿ ಬಡಜನರು ಪ್ರವಾದಿಯವರ(ಸ) ಮನೆಬಾಗಿಲಲ್ಲಿ ಕುಳಿತಿದ್ದರು. ಅವರ ಪೈಕಿ ಒಬ್ಬನು, "ಅಲ್ಲಾಹನು ಹೀಗೆ ಹೇಳಿಲ್ಲವೇ?" ಎಂದು ಹೇಳಿದನು. ಆಗ ಇನ್ನೊಬ್ಬನು, "ಅಲ್ಲಾಹನು ಹೀಗೆನ್ನಲಿಲ್ಲವೇ?" ಎಂದು ಮರು ಪ್ರಶ್ನಿಸಿದರು. ಪ್ರವಾದಿವರ್ಯರು(ಸ) ಇವರ ಮಾತುಕತೆಗಳನ್ನು ಕೇಳಿ ಹೊರ ಬಂದರು. ಅವರ ಮುಖ ಕೋಪದಿಂದ ಕೆಂಪಗಾಗಿತ್ತು. ದಾಳಿಂಬೆಯ ರಸ ಚಿಮುಕಿಸಲಾಗಿದೆಯೋ ಎಂಬಂತಿತ್ತು ಅವರ ಮುಖ. ಪ್ರವಾದಿ(ಸ) ಹೇಳಿದರು, "ಅಲ್ಲಾಹನ ಗ್ರಂಥದ ಒಂದು ಭಾಗದ ಮೂಲಕ ಇನ್ನೊಂದು ಭಾಗವನ್ನು ಅಳಿಸಿ ಹಾಕಲು ನಿಮಗೆ ಆಜ್ಞಾಪಿಸಲಾಗಿದೆಯೆ? ನಿಮಗಿಂತ ಮುಂಚಿನ ಸಮುದಾಯಗಳು ಇದೇ ತರ್ಕ-ವಿತರ್ಕಗಳಿಂದಾಗಿ ಪಥಭ್ರಷ್ಟವಾದವು. ಆದುದರಿಂದ ನೀವೀಗ ಮಾಡುವ ಕಾರ್ಯವು ವ್ಯರ್ಥಕಾರ್ಯವಾಗಿದೆ. ಯಾವ ಕೆಲಸವನ್ನು ಮಾಡಲು ನಿಮಗೆ ಆಜ್ಞಾಪಿಸಲಾಗಿದೆಯೋ ಅದನ್ನು ಮಾಡಿರಿ ಮತ್ತು ಯಾವುದರಿಂದ ನಿಮ್ಮನ್ನು

ತಡೆಯಲಾಗಿದೆಯೋ ಅವುಗಳಿಂದ ಕೂಡಲೇ ದೂರವಿರಿ"

(ಅಹ್ಮದ್ ಬಿನ್ ಹಂಬಲ್)

ಸಂಶೋಧನಾತ್ಮಕ ವಿಷಯಗಳ ಬಗ್ಗೆ ಸರಿಯಾದ ನಿಲುವು

ಧರ್ಮದ ಸಂಶೋಧನಾತ್ಮಕ ವಿಷಯದಲ್ಲಿ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಅಭಿಪ್ರಾಯಕ್ಕೆ ಅವಕಾಶವಿರುವಾಗ, ಅಭಿಪ್ರಾಯ ಭಿನ್ನತೆ ಹೊಂದಿರುವವರ ಬಗ್ಗೆ ದ್ವೇಷ ಮತ್ತು ಸಂಬಂಧ ಮುರಿಯುವ ಭಾವನೆ ಹೊಂದಿರಬಾರದು. ಏಕೆಂದರೆ ಸಂಶೋಧನಾತ್ಮಕ ವಿಷಯಗಳಲ್ಲಿ ಯಾವ ಸಂಶೋಧಕನೂ ತನ್ನಂತಹ ಇನ್ನೊಬ್ಬ ಸಂಶೋಧಕನನ್ನು ವಿಮರ್ಶಿಸಬಾರದು ಹಾಗೂ ವಿರೋಧಿಸಬಾರದು. ಅದೇ ರೀತಿ ಯಾವುದೇ ಕರ್ಮಶಾಸ್ತ್ರ ವಿಧಾನವನ್ನು ಅನುಸರಿಸುವವನು ತನ್ನಂತಹ ಇತರ ಕರ್ಮಶಾಸ್ತ್ರ ವಿಧಾನವನ್ನು ಅನುಸರಿಸುವವನನ್ನು ನಿಂದಿಸುವುದೋ ವಿರೋಧಿಸುವುದೋ ಅಥವಾ ಅವನೊಂದಿಗೆ ಸಂಬಂಧ ಕಡಿದುಕೊಳ್ಳುವುದೋ ಸಲ್ಲದು ಎಂಬ ಬಗ್ಗೆ ವಿದ್ವಾಂಸರು ಮತ್ತು ಕರ್ಮಶಾಸ್ತ್ರ ಪಂಡಿತರು ಏಕಾಭಿಪ್ರಾಯ ಹೊಂದಿದ್ದಾರೆ.

"ಸಂಶೋಧನಾತ್ಮಕ ವಿಷಯಗಳಲ್ಲಿ ಯಾರಾದರೂ ತನ್ನ ಮದ್‌ಹಬ್‌ನಿಂದ ಸರಿದು ಇತರ ಕೆಲವು ವಿದ್ವಾಂಸರ ಅನುಕರಣೆ ಮಾಡಿದರೆ ಅಥವಾ ಎರಡು ವಿಧಿಗಳ ಪೈಕಿ ಒಂದನ್ನು ಅಂಗೀಕರಿಸಿ ಇನ್ನೊಂದನ್ನು ತ್ಯಜಿಸಿದರೆ ಅವನನ್ನು ವಿರೋಧಿಸಬೇಕೇ" ಎಂದು ಶೇಖುಲ್‌ಇಸ್ಲಾಮ್ ಇಬ್ನು ತೀಮಿಯ್ಯಾರೊಡನೆ ಯಾರೋ ಕೇಳಿದಾಗ ಅವರು ಹೀಗೆ ಉತ್ತರಿಸಿದರು, "ಅಲ್ಲಾಹನಿಗೆ ಸ್ತುತಿ, ಸಂಶೋಧನಾತ್ಮಕ ವಿಷಯಗಳಲ್ಲಿ ಒಬ್ಬನು ಕೆಲವು ವಿದ್ವಾಂಸರ ಫತ್ವಗಳನ್ನು ಅಂಗೀಕರಿಸಿ ನಡೆದರೆ ಮತ್ತು ಇನ್ನು ಕೆಲವರ ಫತ್ವಗಳನ್ನು ಬಿಟ್ಟು ಬಿಟ್ಟರೆ ಅವನನ್ನು ವಿರೋಧಿಸಬಾರದು. ಅವನನ್ನು ತಪ್ಪುಗಾರನೆಂದು ಹೇಳಬಾರದು ಮತ್ತು ಅವನೊಂದಿಗೆ ಸಂಬಂಧವನ್ನು ಕಡಿಯಬಾರದು. ಅದೇ ರೀತಿ ಒಂದು ವಿಷಯಕ್ಕೆ ಸಂಬಂಧಿಸಿ ಎರಡು ಅಭಿಪ್ರಾಯಗಳಿದ್ದಾಗ ಒಬ್ಬನು ಒಂದನ್ನು ಬಿಟ್ಟು ಇನ್ನೊಂದನ್ನು ಅಂಗೀಕರಿಸಿದರೆ ಅವನು ತಪ್ಪೆಸಗಿದನೆಂದಾಗಲಿ ಅವನನ್ನು ವಿರೋಧಿಸುವುದಾಗಲಿ ಸಲ್ಲದು. ಏಕೆಂದರೆ ಎರಡು ಅಭಿಪ್ರಾಯಗಳ ಪೈಕಿ ಒಂದು ಸರಿಯಾದುದೆಂದು ಭಾವಿಸಿಯೇ ಆತ ಅದನ್ನು ಅನುಸರಿಸುತ್ತಾನೆ. ಸರಿಯಾದ ಅಭಿಪ್ರಾಯವನ್ನು ಅಂಗೀಕರಿಸುವುದು ಉತ್ತಮವಾಗಿದೆ ಅಥವಾ ಅವನು ಎರಡು ಅಭಿಪ್ರಾಯಗಳ ಪೈಕಿ ತನಗೆ ಹೆಚ್ಚು ನಂಬಿಕೆಯಿರುವ ವಿದ್ವಾಂಸರನ್ನು ಅನುಕರಿಸುತ್ತಾನೆ. (ಅಲ್ಲಾಹನೇ ಹೆಚ್ಚು ಬಲ್ಲನು.)"

ಇನ್ನೊಂದು ಸಂದರ್ಭದಲ್ಲಿ ಇಮಾಮ್ ಇಬ್ನು ತೀಮಿಯ್ಯಾರೊಡನೆ ಒಬ್ಬರು ಹೀಗೆ ಕೇಳಿದರು, "ಒಬ್ಬರು ಮುಸ್ಲಿಮರ ವ್ಯವಹಾರಗಳಲ್ಲಿ ಒಂದು ವಿಶಿಷ್ಟ ಖಾತೆಯ ಅಧಿಕಾರಿಯಾಗಿದ್ದಾರೆ. ಆದರೆ ಆ ಕಾರ್ಯವು ಅವರ ಮದ್‌ಹಬ್‌ಗೆ ವಿರುದ್ಧವಾಗಿದೆ. ಹಾಗಿರುವಾಗ ಅವರು ಜನರನ್ನು ಆ ಕಾರ್ಯದಿಂದ ತಡೆಯುವುದು ಸರಿಯಾದೀತೆ?"

ಅವಕ್ಕೆ ಅವರು ಹೀಗೆ ಉತ್ತರಿಸಿದರು, "ಸಾಧ್ಯವಿಲ್ಲ, ಅವರು ಹಾಗೆ ಮಾಡಬಾರದು. ಏಕೆಂದರೆ ಸಂಶೋಧನಾತ್ಮಕ ವಿಷಯಗಳಲ್ಲಿ ಜನರಿಗೆ ತಂತಮ್ಮ ಅಭಿಪ್ರಾಯದಂತೆ ನಡೆಯುವ ಸ್ವಾತಂತ್ರ್ಯವನ್ನು ಶರೀಅತ್ ನೀಡಿದೆ. ಅದನ್ನು ವಿರೋಧಿಸುವುದಕ್ಕೆ ಆಧಾರವಾದ ಯಾವುದೇ ನಸ್ಸ್ ಕುರ್‌ಆನ್, ಪ್ರವಾದಿಚರ್ಯೆ ಮತ್ತು ಇಜ್ಮಾಅ್ (ಸಮುದಾಯದ ಒಮ್ಮತಾಭಿಪ್ರಾಯ)ಗಳಲ್ಲಿ ಉಂಟೆಂದು ಸಾಬೀತಾಗುವ ವರೆಗೆ ಅದರಿಂದ ತಡೆಯುವುದು ಸಾಧ್ಯವಿಲ್ಲ. ಹೆಚ್ಚಿನ ವಿದ್ವಾಂಸರು ಇದೇ ಅಭಿಪ್ರಾಯ ಹೊಂದಿದ್ದಾರೆ. ಮುಸ್ಲಿಮ್ ದೇಶಗಳಲ್ಲಿ ಜನಸಾಮಾನ್ಯರ ನಡವಳಿಕೆಯೂ ಅದುವೇ ಆಗಿದೆ."

ಅದೇ ರೀತಿಯಲ್ಲಿ ಓರ್ವ ಅಧಿಕಾರಿಯು ಸಂಶೋಧನಾತ್ಮಕ ವಿಷಯಗಳಲ್ಲಿ ಇನ್ನೊಬ್ಬ ಅಧಿಕಾರಿಯ ಆಜ್ಞೆಯನ್ನು ಅನೂರ್ಜಿತಗೊಳಿಸುವಂತಿಲ್ಲ. ಯಾವುದೇ ವಿದ್ವಾಂಸ ಅಥವಾ ಮುಫ್ತಿ ಸಂಶೋಧನಾತ್ಮಕ ವಿಷಯಗಳಲ್ಲಿ ತನ್ನ ಅಭಿಪ್ರಾಯವನ್ನೇ ಸ್ವೀಕರಿಸಬೇಕೆಂದು ಜನಸಾಮಾನ್ಯರನ್ನು ಒತ್ತಾಯಪಡಿಸುವಂತಿಲ್ಲ.

ಖಲೀಫಾ ಹಾರೂನ್‌ರಶೀದ್ ಇಸ್ಲಾಮೀ ದೇಶಗಳಲ್ಲಿರುವ ಎಲ್ಲರೂ ಇಮಾಮ್ ಮಾಲಿಕರ ಮೂತಾವನ್ನು ಅನುಸರಿಸಬೇಕೆಂದು ವಿಧಿಸ ಬಯಸಿದರು. ಇದನ್ನು ಅವರು ಇಮಾಮ್ ಮಾಲಿಕ್‌ರಲ್ಲಿ ಪ್ರಸ್ತಾಪಿಸಿದಾಗ ಅವರು ಅದನ್ನು ವಿರೋಧಿಸುತ್ತಾ ಹೀಗೆಂದರು, "ಸಹಾಬಿಗಳು ಎಲ್ಲ ಇಸ್ಲಾಮೀ ದೇಶಗಳಲ್ಲಿ ಚದುರಿದ್ದಾರೆ. ಅವರ ಪೈಕಿ ಪ್ರತಿಯೊಬ್ಬರೂ ಪ್ರವಾದಿ(ಸ)ಯವರಿಂದ ಮತ್ತು ಕುರ್‌ಆನ್‌ನಿಂದ ಜ್ಞಾನ ಗಳಿಸಿದವರಾಗಿದ್ದರು. ಪ್ರತಿಯೊಬ್ಬರೂ ಆಂಶಿಕ ವಿಷಯದಲ್ಲಿ ತಮ್ಮ ಜ್ಞಾನಕ್ಕೆ ತಕ್ಕಂತೆ ನಡೆಯುತ್ತಾರೆ. ಅವರೆಲ್ಲರನ್ನೂ ನನ್ನ ಜ್ಞಾನ ಮತ್ತು ಸಂಶೋಧನೆಗೆ ಬದ್ಧಗೊಳಿಸುವುದು ಸರಿಯಲ್ಲ. ಅದರಿಂದ ಕ್ಷೋಭೆಯುಂಟಾದೀತು."

ಇದೊಂದು ಮಹತ್ವದ ವಿಷಯವಾಗಿದ್ದು, ಅದರ ಆಧಾರದಲ್ಲಿ, ಸಹಾಬಿಗಳ ಏಕಾಭಿಪ್ರಾಯವು ಸ್ಪಷ್ಟ ಪ್ರಮಾಣವಾಗಿದೆಯೆಂದೂ ಅವರ ಭಿನ್ನಾಭಿಪ್ರಾಯಗಳು ವೈಶಾಲ್ಯವೂ ಅನುಗ್ರಹವೂ ಆಗಿದೆಯೆಂದೂ ವಿದ್ವಾಂಸರು ಹೇಳುತ್ತಾರೆ. ಇದೇ ವಿಷಯವನ್ನು ಹ. ಉಮರ್ ಬಿನ್ ಅಬ್ದುಲ್ ಅಝೀಝ್(ರ) ಹೇಳುತ್ತಾರೆ, "ಸಹಾಬಿಗಳು ಆಂಶಿಕ ವಿಷಯಗಳಲ್ಲಿ ಭಿನ್ನಾಭಿಪ್ರಾಯ ತಾಳದಿರುತ್ತಿದ್ದರೆ ನನಗೇನೂ ಸಂತೋಷವಾಗುತ್ತಿರಲಿಲ್ಲ. ಏಕೆಂದರೆ ಎಲ್ಲ ಸಹಾಬಿಗಳು ಒಬ್ಬ ಸಂಶೋಧಕನ ಅಭಿಪ್ರಾಯ ಮತ್ತು ಆಂಶಿಕ ವಿಷಯದಲ್ಲಿ ಒಂದಾಗುತ್ತಿದ್ದರೆ ಅದನ್ನು ವಿರೋಧಿಸುವವನು ಪಥಭ್ರಷ್ಟನಾಗುತ್ತಿದ್ದನು. ಅವರು ಸಂಶೋಧನಾತ್ಮಕ ಮತ್ತು ಆಂಶಿಕ ವಿಷಯಗಳಲ್ಲಿ ಭಿನ್ನಾಭಿಪ್ರಾಯ ತಾಳಿರುವುದರಿಂದಾದ ಪ್ರಯೋಜನವೇನೆಂದರೆ ಒಬ್ಬ ವ್ಯಕ್ತಿ ಅಥವಾ ಸಮೂಹ ಒಬ್ಬ ಸಹಾಬಿಯ ಅಭಿಪ್ರಾಯಗಳಂತೆ ನಡೆಯತೊಡಗಿದರೆ, ಇನ್ನೊಬ್ಬ ಅಥವಾ ಇನ್ನೊಂದು ಗುಂಪು ಇನ್ನೊಬ್ಬ ಸಹಾಬಿಯ ಅಭಿಪ್ರಾಯವನ್ನು ಅನುಸರಿಸತೊಡಗಿದರು. ಈ ರೀತಿ ಧರ್ಮದಲ್ಲಿ ಸೌಲಭ್ಯ ಮತ್ತು ವೈಶಾಲ್ಯಕ್ಕೆ ದಾರಿ ಮಾಡಿಕೊಟ್ಟಿತು." ಆದುದರಿಂದಲೇ ಇಮಾಮ್ ಮಾಲಿಕ್‌ರ ಹೊರತು ಇತರೆಲ್ಲ ಇಮಾಮರು ಹೇಳುವುದು- ಜನರು ತನ್ನ ಮದ್‌ಹಬ್‌ನಂತೆ ನಡೆಯಬೇಕೆಂದು ಆದೇಶಿಸುವುದು ಮತ್ತು

ಇತರ ಮದ್‌ಹಬ್‌ಗಳನ್ನು ವಿರೋಧಿಸುವುದು ಒಬ್ಬ ಕರ್ಮಶಾಸ್ತ್ರ ಪಂಡಿತನಿಗೆ ಮತ್ತು ಸಂಶೋಧಕನಿಗೆ ಭೂಷಣವಲ್ಲ.

'ಅಮ್ರ್ ಬಿಲ್ ಮಲ್‌ರೂಫ್ ವನಹೀ ಅನಿಲ್‌ಮುಂಕರ್' (ಒಳಿತಿನ ಆಜ್ಞೆ ಮತ್ತು ಕೆಡುಕಿನ ತಡೆ)ನ ವಿಷಯದಲ್ಲಿ ಬರೆಯುವ ವಿದ್ವಾಂಸರು, ಆಂಶಿಕ ಮತ್ತು ಸಂಶೋಧನಾತ್ಮಕ ವಿಷಯಗಳ ವಿರುದ್ಧ 'ನಹೀ ಅನಿಲ್ ಮುಂಕರ್' ಮಾಡುವಂತಿಲ್ಲವೆಂದು ಬರೆಯುತ್ತಾರೆ. ಜನರನ್ನು ತನ್ನ ಸಂಶೋಧಿತ ಅಭಿಪ್ರಾಯವನ್ನು ಹಾಗೂ ತನ್ನ ತಿಳುವಳಿಕೆಯ ಆಂಶಿಕ ವಿಷಯಗಳನ್ನು ಅನುಸರಿಸುವಂತೆ ಹೇಳುವ ಅಧಿಕಾರ ಯಾವುದೇ ಸ್ಥಾನಮಾನದ ಯಾವ ವ್ಯಕ್ತಿಗೂ ಇಲ್ಲ. ಆದರೆ ಆತ ಜ್ಞಾನ ಸಹಿತ ಪುರಾವೆ ಮತ್ತು ಸೂಕ್ತ ರೀತಿಯಲ್ಲಿ ತನ್ನ ಮದ್‌ಹಬ್ ಸರಿಯೆಂದೂ ಇತರರ ಮದ್‌ಹಬ್‌ನಲ್ಲಿ ದೋಷವಿದೆಯೆಂದೂ ಸ್ಪಷ್ಟಪಡಿಸಬಹುದು. ಇನ್ನು ಎರಡು ವಿಭಿನ್ನ ರೀತಿಯ ವಿಷಯಗಳ ಪೈಕಿ ಒಂದು ಸರಿಯೆಂದು ಒಬ್ಬನು ಮನಗಂಡರೆ ಅದನ್ನು ಅನುಸರಿಸ ಬಹುದು. ಅದರ ಪ್ರಚಾರವನ್ನೂ ಮಾಡಬಹುದು. ಆದರೆ ಅದಕ್ಕೆ ವ್ಯತಿರಿಕ್ತವಾದ ವಿಷಯವನ್ನು ಅನುಸರಿಸುವವರನ್ನು ಟೀಕಿಸುವ ಅಧಿಕಾರ ಅವನಿಗಿಲ್ಲ. ಏಕೆಂದರೆ ಆಂಶಿಕ ಮತ್ತು ಸಂಶೋಧನಾತ್ಮಕ ವಿಷಯಗಳಲ್ಲಿ ಒಂದಕ್ಕಿಂತ ಹೆಚ್ಚು ನಿಲುವು, ವ್ಯಾಖ್ಯಾನ ಮತ್ತು ಕರ್ಮವಿಧಾನಕ್ಕೆ ಅವಕಾಶವಿದೆ.

ವಿದ್ವಾಂಸರ ಭಿನ್ನಾಭಿಪ್ರಾಯಗಳ ಕುರಿತು ತಿಳುವಳಿಕೆ

ಆಂಶಿಕ ವಿಷಯಗಳಲ್ಲಿ ವಿದ್ವಾಂಸರ ಭಿನ್ನಾಭಿಪ್ರಾಯಗಳೇನು? ಧರ್ಮದಲ್ಲಿ ಆಂಶಿಕ ವಿಷಯಗಳಲ್ಲಿ ಬೇರೆ ಬೇರೆ ಮದ್‌ಹಬ್‌ಗಳ ಉದ್ಭವಕ್ಕೆ ಕಾರಣವೇನು? ಎಂಬುದನ್ನು ಗ್ರಹಿಸುವ ವರೆಗೆ ಒಬ್ಬನು ಭಿನ್ನಾಬಿಪ್ರಾಯಗಳ ವಿಷಯದಲ್ಲಿ ಔದಾರ್ಯ ಮತ್ತು ವಿಶಾಲ ದೃಷ್ಟಿಯ ರೀತಿಯನ್ನು ಅವಲಂಬಿಸಲಾರ. ಆತನಿಗೆ ಭಿನ್ನಾಭಿಪ್ರಾಯಗಳ ಮೂಲ, ಅದರ ಪ್ರೇರಣೆ ಇತ್ಯಾದಿ ತಿಳಿಯುವವರೆಗೆ ಅದು ಸಾಧ್ಯವೂ ಅಲ್ಲ. ಈ ಮದ್‌ಹಬ್‌ಗಳ ವಿದ್ವಾಂಸರ ದೃಷ್ಟಿಕೋನ ಮತ್ತು ಆಧಾರಗಳನ್ನು ಹಾಗೂ ಅವನು ಯಾರನ್ನು ನಂಬಿದ್ದಾನೋ ಆ ಎಲ್ಲ ವಿದ್ವಾಂಸರೂ ಒಂದೇ ಇಸ್ಲಾಮೀ ಶರೀಅತ್‌ನಿಂದ ಪ್ರಯೋಜನ ಪಡೆಯುತ್ತಿದ್ದು ಅವರ ಭಿನ್ನಾಭಿಪ್ರಾಯಗಳು ಶರೀಅತ್ ಶಾಶ್ವತ, ಸಮಗ್ರ ಹಾಗೂ ವಿಶಾಲವೆಂಬುದರ ಸ್ಪಷ್ಟ ಪುರಾವೆಯೆಂಬುದನ್ನೂ ಅವನು ಗ್ರಹಿಸಿರಬೇಕು. ಆದುದರಿಂದಲೇ ವಿದ್ವಾಂಸರ ಒಮ್ಮತಾಭಿಪ್ರಾಯದ ಜ್ಞಾನ ಗಳಿಸುವುದು ಎಷ್ಟು ಅವಶ್ಯಕವೋ ಆಂಶಿಕ ವಿಷಯಗಳ ಜ್ಞಾನಗಳಿಸುವುದೂ ಅಷ್ಟೇ ಅವಶ್ಯಕವೆಂದು ವಿದ್ವಾಂಸರು ಬಲವಾಗಿ ಪ್ರತಿಪಾದಿಸುತ್ತಾರೆ. ಏಕೆಂದರೆ ವಿದ್ವಾಂಸರ ಭಿನ್ನಾಭಿಪ್ರಾಯಗಳು ಅನುಗ್ರಹವಾದರೆ ಅವರ ಒಮ್ಮತವು ಪ್ರಮಾಣವಾಗಿದೆ. ಭಿನ್ನಾಭಿಪ್ರಾಯಗಳ ತಿರುಳನ್ನು ಗ್ರಹಿಸದವನು ವಿದ್ವಾಂಸನೆಂದು ಕರೆಸಿಕೊಳ್ಳಲು ಅರ್ಹನಲ್ಲ. ಅಂಥವನಿಗೆ ಕರ್ಮಶಾಸ್ತ್ರದ ಗಂಧಗಾಳಿಯೂ ಸೋಂಕಿಲ್ಲವೆಂದು ಕೆಲವು ವಿದ್ವಾಂಸರು ಹೇಳುತ್ತಾರೆ.

ಇಂದು ವಿದ್ವಾಂಸರಿಗೆ ಬಾಧಿಸಿರುವ ಅತಿ ದೊಡ್ಡ ದುರಂತವೇನೆಂದರೆ, ಅವರು

ಕರ್ಮಶಾಸ್ತ್ರಜ್ಞರ ವಿಭಿನ್ನ ಅಭಿಪ್ರಾಯಗಳ ಪೈಕಿ ತಮ್ಮ (ಮದ್‌ಹಬ್‌ನ) ಗುರುಗಳು ಕಲಿಸಿದ ಒಂದೇ ಅಭಿಪ್ರಾಯ ಮತ್ತು ದೃಷ್ಟಿಕೋನವನ್ನು ಮಾತ್ರ ಬಲ್ಲವರಾಗಿರುತ್ತಾರೆ. ಅದರಲ್ಲೇ ಅವರು ತಮ್ಮನ್ನು ಬಂಧಿಸಿರುತ್ತಾರೆ. ಅದರ ಹೊರತಾದ ಇತರ ಕರ್ಮಶಾಸ್ತ್ರಜ್ಞರ ಅಭಿಪ್ರಾಯಗಳ ಆಧಾರಗಳನ್ನು ಅರಿತು ಅದು ಸರಿಯಾದುದೇ ಎಂದು ಪರೀಕ್ಷಿಸಿ ಅವುಗಳನ್ನು ತಾಳೆನೋಡುವ ಮಾತಂತಿರಲಿ, ವಿರುದ್ಧ ಅಭಿಪ್ರಾಯವನ್ನು ಕೇಳಲು ಕೂಡಾ ಈ ಮಂದಿ ಇಂದು ಸಿದ್ಧರಿಲ್ಲ.

ಈ ಮಂದಿ ತಮ್ಮ ಜ್ಞಾನದ ಪರಿಧಿಯನ್ನು ವಿಶಾಲಗೊಳಿಸಿದ್ದರೆ, ಒಂದು ವಿಷಯ ಅಥವಾ ಸಮಸ್ಯೆಗೆ ಒಂದಕ್ಕಿಂತ ಹೆಚ್ಚು ಅಭಿಪ್ರಾಯ ಅಥವಾ ನಿಲುವು ಇರಬಹುದೆಂದೂ ಪರಸ್ಪರ ಭಿನ್ನಾಭಿಪ್ರಾಯಗಳ ಹೊರತಾಗಿಯೂ ವಿವಿಧ ಅಭಿಪ್ರಾಯಗಳಲ್ಲಿ ಸಮನ್ವಯ ಸಾಧ್ಯವಿದೆಯೆಂದೂ ಕಂಡು ಕೊಳ್ಳುತ್ತಿದ್ದರು. ಈ ರೀತಿಯ ಸಮಸ್ಯೆಗಳಲ್ಲಿ ಪಕ್ಷಪಾತವನ್ನು ಬಿಟ್ಟು ನ್ಯಾಯನಿಷ್ಠೆಯೊಂದಿಗೆ ಇತರರ ಆಧಾರಗಳನ್ನು ಗಮನ ಕೊಟ್ಟು ಆಲಿಸಿ ಅವುಗಳಲ್ಲಿ ಸರಿಯಾದ ವಿಧಾನವನ್ನು ಅನುಸರಿಸುವುದೇ ಉತ್ತಮ. ಉದಾ: ರಮೀಜಮಾರ್ (ಕಲ್ಲು ಹೊಡೆಯುವುದು)ನ ವಿಷಯವನ್ನೇ ತೆಗೆದುಕೊಳ್ಳಿ. ಸೂರ್ಯ ಇಳಿಮುಖವಾಗುವುದಕ್ಕೆ ಮುಂಚೆ ಕಲ್ಲು ಹೊಡೆದವನ ಹಜ್ಜ್ ಸಿಂಧುವಲ್ಲ. ಏಕೆಂದರೆ ಇದು ಪ್ರವಾದಿಚರ್ಯೆಗೆ ವಿರುದ್ಧವಾಗಿದೆ.

ಜಾಬಿರ್(ರ) ಹೇಳುತ್ತಾರೆ- ಕುರ್ಬಾನಿಯ ದಿವಸ ಪ್ರವಾದಿ(ಸ) ಸೂರ್ಯೋದಯವಾದ ಸ್ವಲ್ಪ ಹೊತ್ತಿನಲ್ಲಿ ಕಲ್ಲೆಸೆದರು. ಅನಂತರದ ಎರಡು ದಿವಸಗಳಲ್ಲಿ ಸೂರ್ಯ ಇಳಿ ಮುಖವಾದ ನಂತರ ಎಸೆದರು. (ಬುಖಾರಿ)

ದಬ್ರ(ರ) ಹೇಳುತ್ತಾರೆ- ನಾನು ಇಬ್ನು ಉಮರ್(ರ) ಅವರಲ್ಲಿ ಕಲ್ಲು ಹೊಡೆಯುವುದು ಯಾವಾಗ ಮತ್ತು ಯಾವ ಸಮಯಗಳಲ್ಲಿ ಎಂದು ಕೇಳಿದೆ. ಅವರು ಹೇಳಿದರು, ನಿನ್ನ ಇಮಾಮ್ (ನಾಯಕ) ಕಲ್ಲೆಸೆದಾಗ ನೀನೂ ಅವರ ಜೊತೆ ಎಸೆ.

ಹಾಫಿಝ್ ಇಬ್ನು ಹಜರ್ ಹೇಳುತ್ತಾರೆ- ಈ ಹದೀಸ್‌ನಲ್ಲಿ ಹೇಳಿರುವಂತೆ ಕಲ್ಲೆಸೆಯುವ ಕ್ರಿಯೆಯು ಕುರ್ಬಾನಿಯ ದಿವಸದ ಹೊರತು ಸುನ್ನತ್ ಆಗಿದೆ. ಬಹುಸಂಖ್ಯಾತ ವಿದ್ವಾಂಸರ ಅಭಿಪ್ರಾಯವೂ ಅದುವೇ ಆಗಿದೆ. ಹನಫೀಗಳೂ ಕುರ್ಬಾನಿಯ ದಿವಸ ಸೂರ್ಯ ಇಳಿಮುಖವಾಗುವುದಕ್ಕಿಂತ ಮುಂಚೆ ಕಲ್ಲೆಸೆಯ ಬಹುದೆನ್ನುತ್ತಾರೆ. ಆದರೆ ಅತಾ ಮತ್ತು ತಾವೂಸ್‌ರಿಗೆ ಈ ಅಭಿಪ್ರಾಯದೊಂದಿಗೆ ಸಹಮತವಿಲ್ಲ. ಅವರ ಅಭಿಪ್ರಾಯದಲ್ಲಿ ಆ ಸಮಯದಲ್ಲಿ ಕಲ್ಲೆಸೆಯುವುದು ಧರ್ಮ ಸಮ್ಮತವಾಗಿದೆ. ಕರ್ಮಶಾಸ್ತ್ರಜ್ಞರ ಮಧ್ಯೆ ಕಲ್ಲೆಸೆಯುವ ಕ್ರಿಯೆಯೂ ವಾಜಿಬ್ (ಕಡ್ಡಾಯ) ಆಗಿದೆಯೋ ಸುನ್ನತ್ ಮುಅಕ್ಕದ ಆಗಿದೆಯೋ ಎಂಬ ಬಗೆಗೂ ಭಿನ್ನಾಭಿಪ್ರಾಯವಿದೆ.

ಕೆಲವು ವಿದ್ವಾಂಸರು ಈ ಭಿನ್ನಾಭಿಪ್ರಾಯದ ವಿಷಯದಲ್ಲಿ ಬಹುಸಂಖ್ಯಾತ ಪಂಡಿತರ ಅಭಿಪ್ರಾಯಕ್ಕೆ ವಿರುದ್ಧ ಒಂದೆರಡು ಅಭಿಪ್ರಾಯಗಳಿದ್ದರೆ ಅವುಗಳನ್ನು ಸ್ವೀಕರಿಸುವಂತಿಲ್ಲ ಎನ್ನುತ್ತಾರೆ. ಇನ್ನು ಕೆಲವು ವಿದ್ವಾಂಸರ ಅಭಿಪ್ರಾಯದಲ್ಲಿ ಸಮುದಾಯದ ಬಹುದೊಡ್ಡ ವಿಭಾಗವು ಅಂಗೀಕರಿಸಿರುವ ನಾಲ್ವರು ಇಮಾಮರ ಅಭಿಪ್ರಾಯಗಳಿಗೆ ವಿರುದ್ಧವಾದ ಯಾವುದೇ ಅಭಿಪ್ರಾಯವನ್ನು ತಿರಸ್ಕರಿಸಬಹುದು. ಪ್ರಸ್ತುತ ಎರಡೂ ಅಭಿಪ್ರಾಯಗಳು

ಕುರ್‌ಆನ್ ಮತ್ತು ಪ್ರವಾದಿಚರ್ಯೆಯ ಆಧಾರಿತವಲ್ಲವೆಂಬುದೇ ಸತ್ಯ. ಧರ್ಮದಲ್ಲಿ ಪ್ರಮಾಣವಾಗಿರುವ ಒಮ್ಮತವು ಶರೀಅತ್‌ನ ಯಾವುದೇ ವಿಷಯದಲ್ಲಿ ಎಲ್ಲ ಸಂಶೋಧಕರ ಒಮ್ಮತವಾಗಿದೆ. ಒಂದು ವೇಳೆ ಅದಕ್ಕೆ ಒಬ್ಬರಾದರೂ ಭಿನ್ನಾಭಿಪ್ರಾಯ ಹೊಂದಿದ್ದರೆ ಅದು ಧರ್ಮದಲ್ಲಿ ಪ್ರಮಾಣವಾಗಬಲ್ಲ ಪೂರ್ಣ ಒಮ್ಮತವಾಗಲಾರದು. ಅದು ಕೇವಲ ಬಹುಮತದ ಅಭಿಪ್ರಾಯವಾದೀತು. ಬಹುಮತದ ಅಭಿಪ್ರಾಯಕ್ಕೆ ಮಹತ್ವವಿದೆ. ಅದಕ್ಕೆ ಭಿನ್ನಾಭಿಪ್ರಾಯ ವ್ಯಕ್ತಪಡಿಸಲು ಬಲವಾದ ಪುರಾವೆಗಳು ಬೇಕು. ಆದರೆ ಅದು ಎಂದೆಂದಿಗೂ ಭಿನ್ನಾಭಿಪ್ರಾಯ ತಾಳಬಾರದಂತಹ ಅಭಿಪ್ರಾಯವಲ್ಲವೆಂಬುದೇ ಸರಿ.

ಎಷ್ಟೋ ಸಹಾಬಿಗಳ ಉದಾಹರಣೆ ನಮ್ಮ ಮುಂದಿದೆ. ಕೆಲವು ವಿಷಯಗಳಲ್ಲಿ ಎಲ್ಲ ಸಹಾಬಿಗಳ ಅಭಿಪ್ರಾಯ ಒಂದಾಗಿದ್ದರೆ ಒಬ್ಬ ಸಹಾಬಿಯ ಅಭಿಪ್ರಾಯ ಮಾತ್ರ ಅದಕ್ಕೆ ವಿರುದ್ಧವಾಗಿದ್ದು ಅದರಲ್ಲೇ ಅವರು ಸ್ಥಿರವಾಗಿದ್ದರು. ಆದರೆ ಅದರಿಂದ ಅವರ ಧರ್ಮಕ್ಕೆ ಯಾವುದೇ ಚ್ಯುತಿ ಉಂಟಾಗಲಿಲ್ಲ.

ತಾಬಈಗಳ ಪೈಕಿ ಅನೇಕ ಕರ್ಮಶಾಸ್ತ್ರ ವಿದ್ವಾಂಸರು ತಮ್ಮ ಕಾಲದ ಎಲ್ಲ ಕರ್ಮಶಾಸ್ತ್ರ ವಿದ್ವಾಂಸರ ಒಮ್ಮತದ ಅಭಿಪ್ರಾಯಕ್ಕೆ ವ್ಯತಿರಿಕ್ತವಾದ ವೈಯಕ್ತಿಕ ಅಭಿಪ್ರಾಯವಿರಿಸಿಕೊಂಡಿದ್ದರು. ಆದರೆ ಅದರಿಂದ ಅವರ ಅಭಿಪ್ರಾಯಕ್ಕೆ ಬೆಲೆ ಸಿಗದೆ ಇರಲಿಲ್ಲ. ಏಕೆಂದರೆ ಯಾರದಾದರೂ ಅಭಿಪ್ರಾಯದ ಮೇಲಿನ ನಂಬಿಕೆಯು ಬಹುಸಂಖ್ಯೆಯನ್ನು ಆಧರಿಸಿರುವುದಲ್ಲ. ಬದಲಾಗಿ ಪ್ರಮಾಣಗಳನ್ನು ಅವಲಂಬಿಸಿರುತ್ತದೆ.

ನಾಲ್ವರು ಇಮಾಮರುಗಳ ಪೈಕಿ ಮೂವರ ಅಭಿಪ್ರಾಯ ಒಂದಾಗಿದ್ದು ಒಬ್ಬರ ಅಭಿಪ್ರಾಯ ಅದಕ್ಕೆ ವಿರುದ್ಧವಾಗಿರುವ ಅನೇಕ ವಿಷಯಗಳಿವೆ. ಅದನ್ನೇ ಅನುಸರಿಸಿ ಅವರು ನಡೆಯುತ್ತಿದ್ದರು. ಅದನ್ನು ಅವರ ಧರ್ಮದಲ್ಲಿ ಲೋಪವೆಂದು ಪರಿಗಣಿಸಲಾಗುತ್ತಿರಲಿಲ್ಲ. ಬಹುಸಂಖ್ಯಾತ ವಿದ್ವಾಂಸರ ಪ್ರಕಾರ ನಾಲ್ಕೂ ಮದ್‌ಹಬ್‌ಗಳಿಗಿರುವ ಸ್ಥಾನಮಾನ ಏನೇ ಇರಲಿ, ಆದರೆ ಆಂಶಿಕ ವಿಷಯಗಳಲ್ಲಿ ಅವರ ಎಲ್ಲಾ ಅಭಿಪ್ರಾಯಗಳೂ ಅಲ್ಲಾಹನ ಧರ್ಮದಲ್ಲಿ ಪ್ರಮಾಣವಲ್ಲ. ಶರೀಅತ್‌ನ ಪುರಾವೆಯಿಂದ ಸಂಶೋಧಿಸಲ್ಪಟ್ಟ ವಿಷಯಗಳು ಮಾತ್ರ ಪ್ರಮಾಣವಾಗಿದೆ. ಕರ್ಮಶಾಸ್ತ್ರಜ್ಞರ ಈ ಅಭಿಪ್ರಾಯ ಅಪರಿಚಿತ (ಗರೀಬ್)ವಾಗಿದೆ, ಇದು ದುರ್ಬಲವಾಗಿದೆ ಎಂಬಿತ್ಯಾದಿಗಳನ್ನು ಸಾಮಾನ್ಯ ಎಲ್ಲ ಸ್ಥಿತಿಗಳಿಗೂ ಅನ್ವಯಿಸಲಾಗದು. ಏಕೆಂದರೆ ಎಷ್ಟೋ ವಿಷಯಗಳು ಒಮ್ಮೆ ಅಪರಿಚಿತವಾದುದು ಅನಂತರ ಜನಪ್ರಿಯವಾಯಿತು. ಅದೇ ರೀತಿ ಒಂದು ಕಾಲದಲ್ಲಿ ದುರ್ಬಲವೆಂದು ಪರಿಗಣಿಸಲ್ಪಟ್ಟ ಎಷ್ಟೋ ವಿಷಯಗಳು ಅನಂತರದ ಕಾಲದಲ್ಲಿ ಪ್ರಬಲವಾಯಿತು. ಕೆಲವೊಂದು ವಿಷಯಗಳು ಒಂದು ಕಾಲದಲ್ಲಿ ಅಪರೂಪವಾಗಿದ್ದರೆ, ಅನಂತರದ ಕಾಲದಲ್ಲಿ ಅದರ ಅಧಿಕೃತತೆಯನ್ನು ತಿಳಿಯುವಂತಹ ಸ್ಥಿತಿಗತಿಯನ್ನು ಅಲ್ಲಾಹನು ಸೃಷ್ಟಿಸಿದನು. ಅದರಿಂದ ಅವು ಅಧಿಕೃತವೆಂಬುದಕ್ಕೆ ಸಾಕ್ಷಿಗಳುಂಟಾದುವು. ಅನಂತರದ ಕಾಲದಲ್ಲಿ ಅದು ಧರ್ಮವಿಧಿಗೆ (ಫತ್ವಾ) ಆಧಾರವಾಯಿತು.

ಇಂದು ಸಮುದಾಯವನ್ನು ಬಾಧಿಸಿರುವ ಒಂದು ಹೊಸ ವಿಪತ್ತೆಂದರೆ, ಸಂಶೋಧನಾತ್ಮಕ ಮತ್ತು ಆಂಶಿಕ ಭಿನ್ನಾಭಿಪ್ರಾಯಗಳನ್ನು ಅಳಿಸಿ ಬಿಡುವ ಸಾಮರ್ಥ್ಯ ಹೊಂದಿದೆಯೆಂದು ತನ್ನ

ಬಗ್ಗೆ ತಾನೇ ಭಾವಿಸಿಕೊಂಡಿರುವ ಒಂದು ವರ್ಗವು ತನ್ನ ಅಭಿಪ್ರಾಯದಲ್ಲಿ ಯಾವುದು ಸರಿಯೋ ಅದನ್ನು ಇಡೀ ಸಮುದಾಯವು ಸ್ವೀಕರಿಸಿಕೊಳ್ಳಬೇಕು. ತಾನು ಯಾವುದನ್ನು ಒಪ್ಪುವುದಿಲ್ಲವೋ ಅದನ್ನು ಇಡೀ ಸಮುದಾಯವು ತಪ್ಪೆಂದು ಭಾವಿಸಬೇಕು ಎಂದು ಹೇಳುತ್ತದೆ. ಆದರೆ ಇದು ಬೂಟಾಟಿಕೆಯ ಅಭಿಪ್ರಾಯವಾಗಿದೆ. ಇದನ್ನು ಪ್ರವಾದಿ(ಸ) ಮಾರಕ ಅಪರಾಧವಾಗಿ ಪರಿಗಣಿಸಿದ್ದಾರೆ. ಈ' ಮಂದಿಯ ಅತಿ ದೊಡ್ಡ ತಪ್ಪೆಂದರೆ ಅವರು ಭಿನ್ನಾಭಿಪ್ರಾಯಗಳ ವಿಷಯದಲ್ಲಿ ಹದೀಸ್ ಇರುವುದನ್ನು ಭಿನ್ನಾಭಿಪ್ರಾಯಗಳನ್ನು ಅಳಿಸಲಿಕ್ಕೆ ಸಾಕೆಂದು ಭಾವಿಸುತ್ತಾರೆ. ತಮ್ಮ ಅಭಿಪ್ರಾಯ ಸರಿಯಲ್ಲವೆಂದು ಹೇಳುವವರನ್ನು ಹದೀಸ್ ಮತ್ತು ಪ್ರವಾದಿ ಚರ್ಯೆಯ ವಿರೋಧಿಗಳೆಂದು ಸಾರುತ್ತಾರೆ. ವಸ್ತುತಃ ವಿವಿಧ ಕಾರಣಗಳಿಂದಾಗಿ ಅವರ ಈ ಅಭಿಪ್ರಾಯ ತಪ್ಪಾಗಿದೆ.

ಅವರು ಕೆಲವು ಪ್ರಾಚೀನ ವಿದ್ವಾಂಸರ ಅಭಿಪ್ರಾಯಗಳನ್ನು ನಂಬಿ ಈ ಹದೀಸ್‌ಗಳನ್ನು 'ಸಹೀಹ್' (ಪ್ರಾಮಾಣಿಕ) ಎಂದು ಪರಿಗಣಿಸಿ ಅವರನ್ನು ಅನುಸರಿಸುತ್ತಾರೆ ಅಥವಾ ಹದೀಸ್‌ನ ಸಂಶೋಧನೆಯಲ್ಲಿ ತೊಡಗಿರುವ ಕೆಲವು ಸಮಕಾಲೀನ ವಿದ್ವಾಂಸರನ್ನು ಅನುಸರಿಸುತ್ತಾರೆ. ಆದರೆ ಇತರ ಹದೀಸ್ ವಿದ್ವಾಂಸರು ಅವರ ಈ ನಿಲುವನ್ನು ಒಪ್ಪುವುದಿಲ್ಲ. ಏಕೆಂದರೆ ಓರ್ವ ಹದೀಸ್ ವಿದ್ವಾಂಸರು ಸಹೀಹ್ ಎಂದು ಹೇಳಿದ ಹದೀಸ್, ಇನ್ನೊಬ್ಬ ಹದೀಸ್ ವಿದ್ವಾಂಸನ ದೃಷ್ಟಿಯಲ್ಲಿ ದಈಫ್ (ದುರ್ಬಲ) ಆಗಿರುವುದನ್ನು ಪ್ರಾಚೀನ ಕರ್ಮಶಾಸ್ತ್ರಜ್ಞರು ಮತ್ತು ಸಮುದಾಯದ ಹಳೆಯ ಮತ್ತು ಹಿರಿಯ ವಿದ್ವಾಂಸರೆಲ್ಲರೂ ಒಪ್ಪುತ್ತಾರೆ. ಏಕೆಂದರೆ ಒಂದು ಹದೀಸ್ ಪ್ರಾಮಾಣಿಕವಾದುದೆಂಬುದಕ್ಕೆ ಓರ್ವ ಹದೀಸ್ ತಜ್ಞ ಅನುಸರಿಸುವ ಮಾನದಂಡಕ್ಕೆ ಅದು ಅನುಗುಣವಾಗಿರುವುದಿಲ್ಲ. ಇನ್ನೊಬ್ಬನ ಮಾನದಂಡವು ಅದಕ್ಕೆ ಅನುಗುಣವಾಗಿರುತ್ತದೆ. ಹದೀಸನ್ನು ಅಳೆಯುವ ಮತ್ತು ಪರಿಶೀಲಿಸುವ ಮಾನದಂಡದಲ್ಲೂ ಹದೀಸ್ ತಜ್ಞರಲ್ಲಿ ಭಿನ್ನಾಭಿಪ್ರಾಯಗಳಿರುತ್ತವೆ. ಒಂದು ಹದೀಸ್‌ನ ವರದಿಗಾರನನ್ನು ಒಬ್ಬ ಹದೀಸ್ ತಜ್ಞನು ಪ್ರಾಮಾಣಿಕನೆಂದು ಹೇಳಿದರೆ, ಇನ್ನೊಬ್ಬ ಹದೀಸ್ ತಜ್ಞನು ಹಾಗೆ ಹೇಳುವುದಿಲ್ಲ. ಅವನಲ್ಲಿ ಲೋಪವಿದೆಯೆಂದು ಹೇಳುತ್ತಾನೆ, 'ಒಬ್ಬ ಹದೀಸ್ ತಜ್ಞನುವಿವಿಧ ದುರ್ಬಲ ಪರಂಪರೆಗಳಿಂದ ವರದಿಯಾಗಿರುವ ಒಂದು ಹದೀಸನ್ನು ಪ್ರಬಲವೆಂದು ಹೇಳಿ ಅಂಗೀಕರಿಸಿದರೆ ಇನ್ನೊಬ್ಬನು ಅದನ್ನು ಅಂಗೀಕರಿಸುವುದಿಲ್ಲ. ಏಕೆಂದರೆ ಅದರ ಎಲ್ಲ ಪರಂಪರೆಗಳನ್ನೂ ಒಬ್ಬ ಹದೀಸ್ ತಜ್ಞನು ಮುರ್ಸಲ್ ಹದೀಸನ್ನು ಪ್ರಮಾಣವೆಂದು ಅಂಗೀಕರಿಸಿದರೆ ಇನ್ನೊಬ್ಬನು ಅಂಗೀಕರಿಸುವುದಿಲ್ಲ.'

ಉದಾಹರಣೆಗೆ, ಸ್ತ್ರೀಯರಿಗೆ ಚಿನ್ನದ ಆಭರಣಗಳು ಹರಾಮ್ ಆಗಿದೆಯೆಂದು ಬಂದಿರುವ ಹದೀಸ್‌ಗಳನ್ನು ಕೆಲವು ಹದೀಸ್ ತಜ್ಞರು ಸಹೀಹ್ ಎಂದರೆ ಇನ್ನು ಕೆಲವರು ದುರ್ಬಲವೆಂದಿದ್ದಾರೆ. ಸಹೀಹ್ ಎಂದು ಹೇಳುವವರ ಪೈಕಿಯೂ ಕೆಲವರು ಈ ಹದೀಸ್‌ಗಳು ಮನ್ಸೂಖ್ (ಅನೂರ್ಜಿತ)ಗೊಂಡಿದ್ದು ಅದನ್ನು ಪಾಲಿಸಬೇಕಾಗಿಲ್ಲವೆನ್ನುತ್ತಾರೆ. ಕೆಲವರು ಅವುಗಳನ್ನು ಸಮರ್ಥಿಸಬಹುದೆನ್ನುತ್ತಾರೆ. ಆದುದರಿಂದ ಈ ಹದೀಸ್‌ಗಳಿರುವುದರಿಂದಲೇ ಸ್ತ್ರೀಯರು ಚಿನ್ನದ ಆಭರಣಗಳನ್ನು ಧರಿಸಬಹುದೆಂಬ ಬಗ್ಗೆ ಎಲ್ಲ ಕರ್ಮಶಾಸ್ತ್ರ ವಿಭಾಗಗಳಲ್ಲೂ

ಒಮ್ಮತವಿದೆ. ಇಡೀ ಸಮುದಾಯವು ಹದಿನಾಲ್ಕು ಶತಮಾನಗಳಿಂದ ಅದನ್ನು ಅನುಸರಿಸುತ್ತಾ ಬಂದಿದೆ.

ಕೆಲವು ಹದೀಸ್ ತಜ್ಞರು, ಇದು ಪ್ರಾಮಾಣಿಕ ಹದೀಸ್ ಎಂದು ಒಪ್ಪಿಕೊಂಡರೂ ಅದನ್ನು ಆಚರಿಸುವುದಕ್ಕೆ ವಿರೋಧ ವ್ಯಕ್ತಪಡಿಸಿದ್ದಾರೆ. ಏಕೆಂದರೆ ಈ ಹದೀಸ್ ಧರ್ಮಶಾಸ್ತ್ರಕ್ಕೆ ಸಂಬಂಧಿಸಿದ್ದಲ್ಲ. ಬದಲಾಗಿ ಇದು ಸಾಮಾನ್ಯ ಅಭ್ಯಾಸದ ಲೌಕಿಕ ಕಾರ್ಯಗಳಿಗೆ ಸಂಬಂಧಿಸಿದ್ದೆಂಬುದು ಅವರ ವಾದ. ಉದಾ: ಜುಮಾ ಖುತ್ಬಾದಲ್ಲಿ ಲಾಠಿ ಹಿಡಿಯುವುದು, ಕೈಯಿಂದ ಊಟ ಮಾಡುವುದು, ನೆಲದ ಮೇಲೆ ಕುಳಿತು ಊಟ ಮಾಡುವುದು ಇತ್ಯಾದಿ ಅಥವಾ ಪ್ರವಾದಿವರ್ಯರು ನೀವು ಇಸ್ಮಿದ್ (ಒಂದು ವಿಧದ ಕಾಡಿಗೆ) ಅನ್ನು ಕಡ್ಡಾಯವಾಗಿ ಹಾಕಬೇಕು ಎಂದು ಹೇಳಿರುವರು ಎಂಬ ಮಾತು. ಏಕೆಂದರೆ ಅದು ಕಣ್ಣನ್ನು ಶುಭ್ರಗೊಳಿಸುತ್ತದೆ ಮತ್ತು ಕೂದಲು ಬೆಳೆಸುತ್ತದೆ. ಆದರೆ ಒಬ್ಬ ವ್ಯಕ್ತಿಯು ಇದನ್ನು ಪರಿಗಣಿಸದೆ ಓರ್ವ ನುರಿತ ನೇತ್ರ ತಜ್ಞನ ಸಲಹೆಯಂತೆ ನಡೆದರೆ ಅದು ನಸ್ಸ್ (ಸ್ಪಷ್ಟ ಆದೇಶ) ಅಥವಾ ಪ್ರವಾದಿಚರ್ಯೆಗೆ ವಿರುದ್ಧವಾಗುವುದಿಲ್ಲ.

ಇಂತಹದೇ ಇನ್ನೊಂದು ಹದೀಸ್ ಕೂಡಾ ಇದೆ. ಅದರಲ್ಲಿ ನೀನು ಕಡ್ಡಾಯವಾಗಿ ದನದ ಹಾಲನ್ನು ಕುಡಿಯಬೇಕು. ಏಕೆಂದರೆ ಅದರ ಹಾಲು ಔಷಧಿಯೂ ಅದರ ಮಾಂಸವು ರೋಗವೂ ಆಗಿದೆ ಎಂದು ಹೇಳಲಾಗಿದೆ. ಆದರೆ ವೈದ್ಯಕೀಯ ಮತ್ತು ಆಹಾರ ಪದಾರ್ಥಗಳ ಸಂಶೋಧನೆಗಳಿಂದ ದನದ ಮಾಂಸದಲ್ಲಿ ಯಾವುದೇ ರೋಗ ವಿಲ್ಲವೆಂದೂ ಅದು ಒಂಟೆ ಮತ್ತು ಆಡಿನ ಮಾಂಸಕ್ಕಿಂತ ಮಾನವನಿಗೆ ಪ್ರಯೋಜನಕಾರಿಯಾಗಿದೆಯೆಂದೂ ಸಾಬೀತಾಗಿದೆ. ಆದುದರಿಂದ ಒಬ್ಬನು ದನದ ಮಾಂಸವನ್ನು ತಿಂದರೆ ಅವನು ಹದೀಸ್‌ನ ವಿರೋಧಿಯೆಂದಾಗುವುದಿಲ್ಲ. ಪ್ರವಾದಿಚರ್ಯೆಯನ್ನು ಕೈ ಬಿಟ್ಟವನೆಂದೂ ಆಗುವುದಿಲ್ಲ. ಏಕೆಂದರೆ ಇದು ಶರೀಅತ್‌ಗೆ ಸಂಬಂಧಿಸಿದ ವಿಷಯಗಳಲ್ಲ. ಬದಲಾಗಿ ಸಾಮಾನ್ಯ ರೂಢಿಯ ಲೌಕಿಕ ವಿಷಯಗಳಿಗೆ ಸಂಬಂಧಿಸಿದ್ದಾಗಿದೆ. ಇದರ ಕುರಿತೇ ಪ್ರವಾದಿ(ಸ) ಹೀಗೆ ಹೇಳಿದರು- "ಅಂತುಮ್ ಅಅ್‌ಲಮು ಬಿ ಉಮೂರಿ ದುನ್ಯಾಕುಮ್" (ನಿಮ್ಮ ಲೌಕಿಕ ಕಾರ್ಯಗಳ ವಿಷಯದಲ್ಲಿ ನೀವೇ ಹೆಚ್ಚು ಬಲ್ಲವರಾಗಿದ್ದೀರಿ.)

ಒಂದು ಹದೀಸ್ ಸಾಮಾನ್ಯ ಹಾಗೂ ಶರೀಅತ್‌ಗೆ ಸಂಬಂಧಿಸಿದ ವಿಷಯವಾಗಿರುತ್ತದೆ. ಆದರೆ ಕರ್ಮಶಾಸ್ತ್ರಜ್ಞರ ಮಧ್ಯೆ ಅದರ ಆಜ್ಞೆಯು ಪ್ರಮಾಣವೇ ಎಂಬ ಕುರಿತು ಭಿನ್ನಾಭಿಪ್ರಾಯವಿರುತ್ತದೆ. ಉದಾ: ಹದೀಸ್ ವಿಧಿ-ನಿಷೇಧಕ್ಕೆ ಸಂಬಂಧಿಸಿದ್ದರೆ ಅದು ಕಡ್ಡಾಯವೇ, ಅಪೇಕ್ಷಣೀಯವೇ ಅಥವಾ ಕೇವಲ ತಬ್ಲೀಗ್(ಪ್ರಚಾರ)ಗಾಗಿಯೇ ಎಂಬ ಕುರಿತು ಭಿನ್ನಾಭಿಪ್ರಾಯವಿರುತ್ತದೆ. ಈ ಎಲ್ಲಾ ಸಾಧ್ಯತೆಗಳೂ ಕರ್ಮಶಾಸ್ತ್ರಜ್ಞರಲ್ಲಿರುತ್ತದೆ, ವಿಧಿ-ನಿಷೇಧದ ಪ್ರಮಾಣದ ಕುರಿತು ವಿದ್ವಾಂಸರ ಪ್ರತಿಯೊಂದು ಹೇಳಿಕೆಗೂ ಒಂದು ದೃಷ್ಟಿಕೋನ ಮತ್ತು ಒಂದು ಆಧಾರವಿರುತ್ತದೆ. ವಿಧಿ-ನಿಷೇಧಗಳ ಚರ್ಚೆಯಲ್ಲಿ ವಿದ್ವಾಂಸರು ಏಳು ಹೇಳಿಕೆಗಳನ್ನು ಪ್ರಸ್ತಾಪಿಸಿದ್ದಾರೆ. ಅವುಗಳಿಂದ ಅದಕ್ಕೆ ಆಧಾರ ಪಡೆಯಬಹುದಾಗಿದೆ.

ಉದಾ: ಸಹಾಬಿಗಳು ಪ್ರವಾದಿ(ಸ) ಅವರಿಂದ ಆಜ್ಞೆಗಳನ್ನು ಕೇಳುತ್ತಿದ್ದರು. ಆದರೂ

ಅವರ ಕೆಲವು ಆಜ್ಞೆಗಳನ್ನು ಪಾಲಿಸುತ್ತಿರಲಿಲ್ಲ. ಏಕೆಂದರೆ ಅದು ಕಡ್ಡಾಯ ಆಜ್ಞೆಯಲ್ಲವೆಂದು ಅವರು ತಿಳಿದಿದ್ದರು. ಆದರೆ ಅದರ ಯಾವುದಾದರೂ ಒಂದು ಪದ ಅಥವಾ ಸಾಧ್ಯತೆಯಿಂದಾಗಿ ಅದು ಕಡ್ಡಾಯ ಆಜ್ಞೆಯೆಂದು ಸಾಬೀತಾದಾಗ ಅದನ್ನು ಪಾಲಿಸುವುದರಲ್ಲಿ ಅವರು ಆತುರ ಪಡುತ್ತಿದ್ದರು.

ರಮಝಾನ್‌ನಲ್ಲಿ ನಡೆದ ಒಂದು ಯುದ್ಧ ಯಾತ್ರೆಯಲ್ಲಿ ಸಹಾಬಿಗಳು ಉಪವಾಸ ಆಚರಿಸಿದ್ದರು. ಪ್ರವಾದಿ(ಸ) ಉಪವಾಸ ತೊರೆಯುವಂತೆ ಅವರಿಗೆ ಆಜ್ಞಾಪಿಸಿದರು. ಆಗ ಕೆಲವರು ಉಪವಾಸ ಮುರಿದರು. ಕೆಲವರು ತಮ್ಮ ಉಪವಾಸವನ್ನು ಮುಂದುವರಿಸಿದರು. ಈ ಆಜ್ಞೆ ತಮ್ಮ ಮೇಲಿನ ಕರುಣೆಯಿಂದ ಕೊಟ್ಟಿರಬೇಕೆಂದೂ ಅದು ಕಡ್ಡಾಯವಾದ ಆಜ್ಞೆಯಲ್ಲವೆಂದೂ ಅವರು ಭಾವಿಸಿದರು. ಅನಂತರ ಯುದ್ಧರಂಗ ಹತ್ತಿರವಾದಾಗ ಪ್ರವಾದಿ(ಸ) ಹೀಗೆಂದರು- 'ನಾಳೆ ಬೆಳಿಗ್ಗೆ ವೈರಿಗಳೊಡನೆ ಹೋರಾಡಲಿಕ್ಕಿದೆ. ನೀವು ಉಪವಾಸ ಆಚರಿಸದಿದ್ದರೆ ನಿಮಗೆ ಬಲ ಸಿಕ್ಕೀತು. ಆದುದರಿಂದ ನೀವು ನಾಳೆ ಉಪವಾಸ ಆಚರಿಸಬಾರದು.' ಈ ಸೂಚನೆಯಿಂದಲೇ ಈ ಆಜ್ಞೆಯು ಕಟ್ಟಪ್ಪಣೆಯೆಂದು ಸಹಾಬಿಗಳು ಗ್ರಹಿಸಿದರು. ಅದರಂತೆ ಯಾರೂ ಉಪವಾಸ ಆಚರಿಸಲಿಲ್ಲ.

ಯಹೂದಿಗಳೂ ಕ್ರೈಸ್ತರೂ ಕೂದಲಿಗೆ ಬಣ್ಣ ಬಳಿಯುವುದಿಲ್ಲ. ನೀವು ಅವರಿಗಿಂತ ಭಿನ್ನವಾದ ರೀತಿಯನ್ನು ಅನುಸರಿಸಿರಿ. ನೀವು ಕೂದಲಿಗೆ ಬಣ್ಣ ಬಳಿಯಿರಿ ಎಂಬ ಹದೀಸ್‌ನ ಬಗ್ಗೆ ಸಹಾಬಿಗಳು ಅದು ಅಪೇಕ್ಷಣೀಯವೆಂದಷ್ಟೆ ತಿಳಿದುಕೊಂಡರು. ಆದುದರಿಂದ ಕೆಲವರು ಅವರಂತೆ ತಮ್ಮ ಕೂದಲಿಗೆ ಬಣ್ಣ ಬಳಿದರು, ಕೆಲವರು ಬಳಿಯಲಿಲ್ಲ. ಅವರಲ್ಲಿ ಕೆಲವರು ಮದರಂಗಿ ಹಚ್ಚಿದರೆ, ಇನ್ನು ಕೆಲವರು ಕಾಡಿಗೆ ಬಳಿದರು.

ಅದೇ ರೀತಿ ನಿಮ್ಮ ಮಕ್ಕಳಿಗೆ ನಾಫಿಲ್, ಯಸಾರ್ ಮತ್ತು ರಬಾಹ್ ಎಂಬ ಹೆಸರಿಡಬೇಡಿರಿ ಎಂಬ ಹದೀಸ್ ಇದೆ. ಆದರೆ ಸಹಾಬಿಗಳು ತಮ್ಮ ಮಕ್ಕಳಿಗೆ ಈ ಹೆಸರುಗಳನ್ನಿಟ್ಟಿದ್ದಾರೆಂದು ನಮಗೆ ತಿಳಿದಿದೆ. ಈ ಆದೇಶವನ್ನು ಕಡ್ಡಾಯವೆಂಬ ಅರ್ಥದಲ್ಲಿ ಅವರು ತೆಗೆಯಲಿಲ್ಲ. ತಾಬಈಗಳ ಹೆಸರುಗಳಿಂದ ಇದು ವ್ಯಕ್ತವಾಗುತ್ತದೆ. ಉದಾ: ನಾಫಿಲ್ ಬಿನ್ ಮೌಲಾ ಬಿನ್ ಉಮರ್, ಸುಲೈಮಾನ್ ಬಿನ್ ಯಸಾರ್, ಅತಾ ಬಿನ್ ರಬಾಹ್ ಇತ್ಯಾದಿ.

ಅದೇ ರೀತಿ ಇಮಾಮ್ ಇಬ್ನು ತೀಮಿಯಾ ಅವರು ಯಾರು ತನ್ನ ಗುಪ್ತಾಂಗವನ್ನು ಮುಟ್ಟಿದನೋ ಅವನು ವುಝೂ ಮಾಡಬೇಕೆಂದು ಹೇಳಿದ ಹದೀಸನ್ನು ಕಡ್ಡಾಯ ಆಜ್ಞೆಯೆಂದು ಬಗೆಯದೆ ಕೇವಲ ಅಪೇಕ್ಷಣೀಯವೆಂದು ಭಾವಿಸಿದರೆಂದೂ ನಮಗೆ ತಿಳಿದಿದೆ. ಇಮಾಮ್ ಇಬ್ನು ತೀಮಿಯಾ ಅವರು, ಒಂಟೆಯ ಮಾಂಸ ತಿಂದವನು ವುಝೂ ಮಾಡಬೇಕೆಂಬ ಆದೇಶವನ್ನು ಅಪೇಕ್ಷಣೀಯವೆಂದು ಬಗೆದರೇ ವಿನಾ ಅದನ್ನು ಕಡ್ಡಾಯ ಆಜ್ಞೆಯ ಅರ್ಥದಲ್ಲಿ ತೆಗೆಯಲಿಲ್ಲ. ಈ ಎರಡೂ ವಿಷಯಗಳಲ್ಲಿ ಅವರು ತಮ್ಮ ಗುರು ಇಮಾಮ್ ಅಹ್ಮದ್ ಬಿನ್ ಹಂಬಲ್‌ರ ಅಭಿಪ್ರಾಯಕ್ಕೆ ವಿರುದ್ಧ ಫತ್ವಾ (ಧರ್ಮವಿಧಿ) ನೀಡಿದರು.

ಕುರ್‌ಆನ್‌ನ ಪದಗಳ ಅರ್ಥ ವಿವರಣೆ

ಅಭಿಪ್ರಾಯ ಭಿನ್ನತೆಯ ತೀವ್ರತೆ ಮತ್ತು ಅದರ ಮೇರೆಯನ್ನು ಸೀಮಿತ ಗೊಳಿಸಲು ಮುಸ್ಲಿಮ್ ಜನ ಸಾಮಾನ್ಯರ ಮಧ್ಯೆ ಹಾಗೂ ವಿಶೇಷವಾಗಿ ಇಸ್ಲಾಮಿನ ಉತ್ಥಾನಕ್ಕಾಗಿ ರಂಗಕ್ಕಿಳಿದಿರುವ ಜನರ ಮಧ್ಯೆ ಒಡಕು ಮತ್ತು ಕ್ಷೋಭೆಗೆ ಕಾರಣವಾಗುವಂತಹ ಕೆಲವು ಪದಗಳ ತಾತ್ಪರ್ಯವನ್ನು ಸ್ಪಷ್ಟಪಡಿಸಬೇಕಾದುದು ಅಗತ್ಯವೆನಿಸುತ್ತದೆ. ಅವುಗಳನ್ನು ಗ್ರಹಿಸುವಲ್ಲಿ ಉಂಟಾಗುವ ಅತಿರೇಕವು ಇಲ್ಲದಂತಾಗಲು ಇದು ಅಗತ್ಯ. ಅನೇಕ ವಿಷಯಗಳಲ್ಲಿ ಉಭಯತರರ ನಡುವೆ ಭಿನ್ನಾಭಿಪ್ರಾಯಗಳು ತೀವ್ರ ಸ್ವರೂಪ ತಾಳುತ್ತಾ ಹೋಗುತ್ತದೆ. ಕಟ್ಟ ಕಡೆಗೆ ಈ ಎಲ್ಲ ಭಿನ್ನಾಭಿಪ್ರಾಯಗಳು ಕೇವಲ ಶಬ್ದಕ್ಕೆ ಸಂಬಂಧಿಸಿದ್ದು ಅದಕ್ಕೆ ಯಾವ ಬೆಲೆಯೂ ಇಲ್ಲವೆಂದು ತಿಳಿದು ಬರುತ್ತದೆ.

ಪ್ರಾಚೀನ ಕಾಲದಲ್ಲಿ ಖವಾರಿಜ್‌ಗಳು ಮುಸ್ಲಿಮರನ್ನು ಕಾಫಿರರೆಂದು ಹೇಳಿ ಅವರ ಜೀವ ಸೊತ್ತುಗಳನ್ನು ಹಲಾಲ್ ಮಾಡಿದ್ದರು. ಇಂದಿನ ಕಾಫಿರ್ ಮಾಡುವವರು ಕೂಡಾ ಅವರ ಹೆಜ್ಜೆಗಳನ್ನು ಅನುಸರಿಸಿ ಅದೇ ಕೆಲಸವನ್ನು ಮಾಡುತ್ತಿದ್ದಾರೆ. ಈ ಎರಡೂ ಪ್ರಾಚೀನ ಮತ್ತು ಆಧುನಿಕ ವರ್ಗಗಳು ಕುರ್‌ಆನ್ ಮತ್ತು ಸುನ್ನತ್‌ನಲ್ಲಿ ವಿವಿಧ ಸಂದರ್ಭಗಳಲ್ಲಿ ಬಂದ ಪದಗಳ ತಾತ್ಪರ್ಯವನ್ನು ಗ್ರಹಿಸದಿರುವುದರಿಂದಲೇ ಪಥಭ್ರಷ್ಟರಾದರು. ಅವರ ಗ್ರಹಣಶಕ್ತಿಯ ಕೊರತೆಯಿಂದಾಗಿಯೇ ಅವರು ಆ ಪದಗಳಿಗೆ ತಮ್ಮದೇ ಆದ, ಆದರೆ ಅಲ್ಲಾಹ್ ಮತ್ತು ಪ್ರವಾದಿಯವರ(ಸ) ಇಂಗಿತಕ್ಕೆ ವಿರುದ್ಧವಾದ ಅರ್ಥ ತಾತ್ಪರ್ಯಗಳನ್ನು ಕಂಡು ಹಿಡಿದರು. ಈ ರೀತಿ ಅವರು ಸ್ವಯಂ ಪಥಭ್ರಷ್ಟರಾಗಿ ಸಮುದಾಯವನ್ನು ಒಂದು ಮಹಾನ್ ಗೊಂದಲಕ್ಕೆ ಸಿಲುಕಿಸಿದರು.

ಈಮಾನ್, ಕುಫ್ರ್, ಶಿರ್ಕ್, ನಿಫಾಕ್ ಮತ್ತು ಜಾಹಿಲಿಯ್ಯತ್ ಮುಂತಾದ ಪದಗಳು ಈ ಸಾಲಿಗೆ ಸೇರಿವೆ. ವಾಸ್ತವದಲ್ಲಿ ಈ ಪದಗಳ ವಿವಿಧ ಪ್ರಯೋಗಗಳ ಮಧ್ಯೆ ಅವರು ತಾರತಮ್ಯ ಮಾಡದೆ ಹೋದರು. ಏಕೆಂದರೆ ಕುರ್‌ಆನ್ ಮತ್ತು ಸುನ್ನತ್‌ನಲ್ಲಿ ಅನೇಕ ಕಡೆಗಳಲ್ಲಿ ಈ ಪದಗಳು ನೈಜ ಅರ್ಥದಲ್ಲಿ ಬಳಸಲ್ಪಟ್ಟಿದ್ದರೆ ಕೆಲವೆಡೆ ಆಲಂಕಾರಿಕವಾಗಿಯೂ ಬಳಸಲ್ಪಟ್ಟಿವೆ. ಇದು ಕುರ್‌ಆನ್ ಮತ್ತು ಸುನ್ನತ್‌ನಿಂದ ಸ್ಪಷ್ಟವಾಗುತ್ತದೆ. ಅನೇಕ ಕಡೆಗಳಲ್ಲಿ ಈಮಾನ್ ಎಂದರೆ ಕೇವಲ ವಿಶ್ವಾಸವಲ್ಲ. ಬದಲಾಗಿ ನಿರಾಕರಿಸಿದರೆ ಕಾಫಿರ್ (ಸತ್ಯನಿಷೇಧಿ) ಆಗುವಂತಹ ಪರಿಪೂರ್ಣ ಈಮಾನ್ ಆಗಿದೆ. ಉದಾ: ಪವಿತ್ರ ಕುರ್‌ಆನ್ ಹೇಳುತ್ತದೆ,

"ಅಲ್ಲಾಹನ ಪ್ರಸ್ತಾಪ ಕೇಳಿದೊಡನೆ ಹೃದಯದಲ್ಲಿ ನಡುಕವುಂಟಾಗುವವರೇ ನಿಜವಾದ ಮೂಮಿನರು. ಅವರ ಮುಂದೆ ಅಲ್ಲಾಹನ ಆಯತ್(ಸೂಕ್ತ)ಗಳು ಓದಲ್ಪಟ್ಟಾಗ ಅವರ ಈಮಾನ್ ವೃದ್ಧಿಯಾಗುತ್ತದೆ ಮತ್ತು ಅವರು ತಮ್ಮ ಪ್ರಭುವಿನ ಮೇಲೆ ಭರವಸೆಯಿಡುತ್ತಾರೆ. ಅವರು ನಮಾಝನ್ನು ಸಂಸ್ಥಾಪಿಸುತ್ತಾರೆ ಮತ್ತು ನಾವು ಅವರಿಗೆ ನೀಡಿದುದರಿಂದ (ನಮ್ಮ ಮಾರ್ಗದಲ್ಲಿ) ಖರ್ಚು ಮಾಡುತ್ತಾರೆ." (8:3-4)

ಈ ಸೂಕ್ತದಲ್ಲಿ ನೈಜ ಸತ್ಯವಿಶ್ವಾಸಿಗಳೆಂದರೆ ಪರಿಪೂರ್ಣ ಈಮಾನ್ ಉಳ್ಳವರು

ಎನ್ನಲಾಗಿದೆ. ಈ ಸೂಕ್ತಗಳ ಅರ್ಥ ಅಥವಾ ತಾತ್ಪರ್ಯ- ಯಾರ ಮನಸ್ಸು ಅಲ್ಲಾಹನ ಸ್ಮರಣೆಯ ವೇಳೆ ಕಂಪಿಸುವುದಿಲ್ಲವೋ ಅಥವಾ ಯಾರು ಅಲ್ಲಾಹನ ಮೇಲೆ ಭರವಸೆಯಿರಿಸುವುದಿಲ್ಲವೋ ಅವರು- ಕಾಫಿರರೆಂದೋ ಈಮಾನ್ ಇಲ್ಲದವರೆಂದೋ ಅಲ್ಲ.

ಇನ್ನೊಂದು ಉದಾಹರಣೆ ನೋಡಿರಿ: "ಖಂಡಿತವಾಗಿಯೂ ಸತ್ಯವಿಶ್ವಾಸಿಗಳು ವಿಜಯಿಗಳಾದರು. ಅವರು ತಮ್ಮ ನಮಾಝ್‌ನಲ್ಲಿ ಭಯಭಕ್ತಿ ತೋರುತ್ತಾರೆ. ನಿರರ್ಥಕ ಕಾರ್ಯಗಳಿಂದ ದೂರವಿರುತ್ತಾರೆ. ಝಕಾತ್‌ನ ನಿಯಮವನ್ನು ಪಾಲಿಸುತ್ತಾರೆ. ತಮ್ಮ ಪತ್ನಿಯರು ಮತ್ತು ಅಧೀನವಿರುವ ದಾಸಿಯರ ಹೊರತು ಇತರರಿಂದ ತಮ್ಮ ಗುಪ್ತಾಂಗಗಳನ್ನು ರಕ್ಷಿಸಿಕೊಳ್ಳುತ್ತಾರೆ. ಅವರಿಂದ ರಕ್ಷಿಸಿಕೊಳ್ಳದಿದ್ದುದರಲ್ಲಿ ಅವರು ದೂಷಣೀಯರಲ್ಲ. ಆದರೆ ಇದರ ಹೊರತು ಇನ್ನೇನಾದರೂ ಬಯಸುವವರೇ ಅತಿರೇಕವೆಸಗುವವರು. ತಮ್ಮ ವಿಶ್ವಸ್ಥ ಸೊತ್ತುಗಳನ್ನು ಹಾಗೂ ತಮ್ಮ ವಾಗ್ದಾನಗಳನ್ನು ಪಾಲಿಸುತ್ತಾರೆ ಮತ್ತು ತಮ್ಮ ನಮಾಝ್‌ಗಳನ್ನು ರಕ್ಷಿಸಿಕೊಳ್ಳುತ್ತಾರೆ. ಇವರೇ ವಾರೀಸುದಾರರು. ವಾರೀಸಿನಲ್ಲಿ ಫಿರ್‌ದೌಸ್ (ಮಹೋನ್ನತ ಸ್ವರ್ಗ) ಪಡೆಯುವವರು ಮತ್ತು ಅದರಲ್ಲಿ ಸದಾ ವಾಸಿಸುವರು. (23:1-11)

ಈ ಸೂಕ್ತಗಳಲ್ಲೂ ಪರಿಪೂರ್ಣ ವಿಶ್ವಾಸಿಗಳನ್ನು ಉದ್ದೇಶಿಸಲಾಗಿದೆ. ಈ ಸೂಕ್ತಗಳ ಅರ್ಥ ನಮಾಝ್‌ನಲ್ಲಿ ಭಯ ಭಕ್ತಿಯಿಲ್ಲದವರು, ನಿರರ್ಥಕ ಕಾರ್ಯಗಳಿಂದ ದೂರವಾಗದವರು, ಝಕಾತ್‌ನ ನಿಯಮವನ್ನು ಪಾಲಿಸದವರು, ತಮ್ಮ ಗುಪ್ತಾಂಗಗಳನ್ನು ರಕ್ಷಿಸಿಕೊಳ್ಳದವರು, ವಿಶ್ವಸ್ಥ ಸೊತ್ತು ಮತ್ತು ವಾಗ್ದಾನಗಳನ್ನು ಪಾಲಿಸದವರು ಕಾಫಿರರಾಗಿ ಬಿಟ್ಟರೆಂದೋ ಇಸ್ಲಾಮಿನಿಂದ ಹೊರ ಹೋದವರೆಂದೋ ಅಲ್ಲ. ವಾಸ್ತವದಲ್ಲಿ ಅವರು ದುರ್ಬಲ ವಿಶ್ವಾಸಿಗಳಾಗಿದ್ದಾರೆ.

ಒಂದು ಹದೀಸ್ ಹೀಗಿದೆ- ವ್ಯಭಿಚಾರಿಯು ವ್ಯಭಿಚಾರವೆಸಗುತ್ತಿರುವಾಗ ಸತ್ಯವಿಶ್ವಾಸಿಯಾಗಿರುವುದಿಲ್ಲ. ಮದ್ಯಪಾನಿಯು ಶರಾಬು ಕುಡಿಯುತ್ತಿರುವಾಗ ಸತ್ಯವಿಶ್ವಾಸಿಯಾಗಿರುವುದಿಲ್ಲ ಮತ್ತು ಕಳ್ಳನು ಕಳ್ಳತನ ಮಾಡುತ್ತಿರುವಾಗ ಸತ್ಯವಿಶ್ವಾಸಿಯಾಗಿರುವುದಿಲ್ಲ.

(ಮುತ್ತಫಕುನ್ ಅಲೈಹಿ)

ಈ ಹದೀಸ್‌ನಲ್ಲಿ ಸತ್ಯವಿಶ್ವಾಸವನ್ನು ಅಲ್ಲಗಳೆಯಲಾಗಿಲ್ಲ. ಬದಲಾಗಿ ಪರಿಪೂರ್ಣ ಸತ್ಯವಿಶ್ವಾಸವನ್ನು ಅಲ್ಲಗಳೆಯಲಾಗಿದೆ. ಅದರ ಅರ್ಥ ಒಬ್ಬನು ಒಮ್ಮೆ ಮಹಾಪಾಪವೆಸಗಿ ಬಿಟ್ಟರೆ ಕಾಫಿರನಾದನೆಂದೋ ಸತ್ಯವಿಶ್ವಾಸದ ಮೇರೆಯಿಂದ ಹೊರ ಹೋದನೆಂದೋ ಅಲ್ಲ.

ಒಂದು ವೇಳೆ ಈ ಹದೀಸ್‌ನಲ್ಲಿ ನೈಜ ಸತ್ಯವಿಶ್ವಾಸವನ್ನು ಅಲ್ಲಗಳೆಯಲಾಗುತ್ತಿದ್ದರೆ ವ್ಯಭಿಚಾರಿ, ಮದ್ಯಪಾನಿ ಮತ್ತು ಕಳ್ಳನಿಗೂ ಮುರ್ತದ್ (ಧರ್ಮ ಭ್ರಷ್ಟ)ನಿಗೆ ವಿಧಿಸಲಾಗುವ ಶಿಕ್ಷೆಯನ್ನು ವಿಧಿಸಬೇಕಾದೀತು. ಮುರ್ತದ್‌ನಿಗೆ ಮರಣದಂಡನೆ, ವ್ಯಭಿಚಾರಿಗೆ ಕಲ್ಲೆಸೆಯುವುದು ಮದ್ಯಪಾನಿಗೆ ಛಡಿಯೇಟು ಮತ್ತು ಕಳ್ಳನಿಗೆ ಕೈ ಕಡಿಯುವ ಶಿಕ್ಷೆ ಎಂಬಿತ್ಯಾದಿ ತಾರತಮ್ಯವಿರುತ್ತಿರಲಿಲ್ಲ.

ಒಮ್ಮೆ ಓರ್ವ ನಿತ್ಯ ಮದ್ಯಪಾನಿಗೆ ಶಿಕ್ಷೆ ನೀಡುತ್ತಿರುವಾಗ ಓರ್ವ ಸಹಾಬಿಯು ಆತನನ್ನು ಶಪಿಸತೊಡಗಿದರು. ಆದರೆ ಪ್ರವಾದಿ(ಸ) ಅದನ್ನು ತಡೆಯುತ್ತಾ, "ಅವರನ್ನು ಶಪಿಸದಿರಿ.

ಅಲ್ಲಾಹನಾಣೆ! ಆತ ಅಲ್ಲಾಹನನ್ನೂ ಪ್ರವಾದಿಯನ್ನೂ(ಸ) ಪ್ರೀತಿಸುತ್ತಾನೆ" ಎಂದರು. (ಬುಖಾರಿ)

ಈ ಹದೀಸ್‌ನಿಂದ ಪಾಪಕಾರ್ಯವು ಅದು ಮಹಾಪಾಪವೇ ಆದರೂ ಮನಸ್ಸಿನಿಂದ ಈಮಾನ್‌ನ ಮೂಲವನ್ನು ಕಿತ್ತು ಹಾಕುವುದಿಲ್ಲವೆಂದು ತಿಳಿದುಬರುತ್ತದೆ.

ಒಮ್ಮೆ ಪ್ರವಾದಿ(ಸ) ಹೇಳಿದರು- "ಅಲ್ಲಾಹನಾಣೆ! ಆತ ಸತ್ಯವಿಶ್ವಾಸಿಯಲ್ಲ (ಹೀಗೆ ಮೂರು ಬಾರಿ ಹೇಳಿದರು) ಅದಾರೆಂದು ಸಹಾಬಿಗಳು ಕೇಳಿದಾಗ ಪ್ರವಾದಿ(ಸ) ಹೇಳಿದರು, "ಯಾರ ಕಿರುಕುಳದಿಂದ ಅವನ ನೆರೆಯಾತನು ಸುರಕ್ಷಿತನಲ್ಲವೋ ಅವನು." (ಬುಖಾರಿ)

ಇದರಿಂದಲೂ ಆತ ಕಾಫಿರನಾದನೆಂದು ಅರ್ಥವಲ್ಲ. ಬದಲಾಗಿ ಅವನ ಈಮಾನ್ ಪರಿಪೂರ್ಣವಲ್ಲ, ಅದರಲ್ಲಿ ಕೊರತೆ ಇದೆಯೆಂದಾಗಿದೆ.

ಶಿರ್ಕ್‌ನ ವಿಷಯವೂ ಹಾಗೆಯೇ. ಒಂದು 'ಶಿರ್ಕ್ ಅಕ್ಬರ್' (ದೊಡ್ಡ ಶಿರ್ಕ್) ಆಗಿದೆ. ಅಲ್ಲಾಹನ ಜೊತೆ ಇತರರನ್ನು ಆರಾಧ್ಯರನ್ನಾಗಿ ಮಾಡುವುದು ಎಂದು ಅದರ ಅರ್ಥ. ಇಂತಹ ಬಹುದೇವಾರಾಧಕರನ್ನೇ ಅಲ್ಲಾಹನು ಅಲ್ ಮುಶ್ರಿಕೂನ್ ಎಂದಿರುವುದು. ಈ ಶಿರ್ಕನ್ನು ಅಲ್ಲಾಹನು ಎಂದೆಂದಿಗೂ ಕ್ಷಮಿಸಲಾರ.

"ಅಲ್ಲಾಹ್ ತನ್ನೊಂದಿಗೆ ಇತರರನ್ನು ಸಹಭಾಗಿಗಳನ್ನಾಗಿ ಮಾಡುವುದನ್ನು ಮಾತ್ರ ಎಂದೆಂದಿಗೂ ಕ್ಷಮಿಸುವುದಿಲ್ಲ. ಅದರ ಹೊರತು ಅವನು ಕ್ಷಮಿಸಲಿಚ್ಛಿಸುವ ಇತರ ಎಲ್ಲವನ್ನೂ ಕ್ಷಮಿಸುವನು. ಅಲ್ಲಾಹನೊಂದಿಗೆ ಇತರ ಯಾರನ್ನಾದರೂ ಸಹಭಾಗಿಯನ್ನಾಗಿ ಮಾಡಿದವನು ಅತಿ ದೊಡ್ಡ ಸುಳ್ಳನ್ನು ಸೃಷ್ಟಿಸಿದನು ಮತ್ತು ಅತ್ಯಂತ ಘೋರ ಪಾಪವೆಸಗಿದನು." (ಪ. ಕುರ್‌ಆನ್ 4:48) ಇದುವೇ ಸ್ಪಷ್ಟವಾದ ನೈಜ ಶಿರ್ಕ್ ಆಗಿದೆ.

ಇನ್ನು ಕೆಲವು ಶಿರ್ಕ್‌ಗಳನ್ನು 'ಶಿರ್ಕ್ ಅಸ್ಗರ್' ಅರ್ಥಾತ್ ಸಣ್ಣ ಶಿರ್ಕ್ ಎಂದು ಕರೆಯಲಾಗುತ್ತದೆ. ಅವು ಪಾಪಗಳ ಸಾಲಿಗೆ ಸೇರಿದ್ದು ಪರಿಪೂರ್ಣ ತೌಹೀದ್‌ಗೆ ವಿರುದ್ಧವಾಗಿದೆ.

"ಯಾರು ದೇವೇತರರ ಆಣೆ ಹಾಕಿದನೋ ಅವನು ಶಿರ್ಕ್ ಮಾಡಿದನು." (ಅಹ್ಮದ್, ತಿರ್ಮಿದಿ)

"ಮಾಟ ಮಂತ್ರ ಮಾಡುವುದು, ತಾಯಿತ ಕಟ್ಟುವುದು ಮತ್ತು ಇಂದ್ರಜಾಲ ಶಿರ್ಕ್ ಆಗಿವೆ." (ಅಬೂದಾವೂದ್, ಅಹ್ಮದ್)

"ತಾಯಿತ ಕಟ್ಟುವವನು ಶಿರ್ಕ್ ಮಾಡಿದನು." (ಅಹ್ಮದ್, ಹಾಕಿಮ್)

'ಕುಫ್ರ್' (ನಿರಾಕರಣೆ) ಎಂಬುದು ಕೂಡಾ ಅಂತಹದೇ ಒಂದು ಪದವಾಗಿದೆ. ಅದರಲ್ಲೂ ಯಥಾರ್ಥ ಕುಫ್ರ್ ಮತ್ತು ಕುಫ್ರ್ ಅಕ್ಬರ್ (ದೊಡ್ಡ ಕುಫ್ರ್) ನಾಸ್ತಿಕರ ಅಂದರೆ ಅಲ್ಲಾಹನ ಅಸ್ತಿತ್ವವನ್ನೇ ನಿರಾಕರಿಸುವವರದ್ದಾಗಿದೆ. ಅನಂತರ ಪ್ರವಾದಿತ್ವ, ದೇವಚರರು, ಅಲ್ಲಾಹನ ಗ್ರಂಥಗಳು, ಪರಲೋಕ ಮತ್ತು ವಿಧಿಯ ಮೇಲಿನ ವಿಶ್ವಾಸವನ್ನು ನಿರಾಕರಿಸುವವರು. ಆ ಬಳಿಕ ಕೆಲವು ಪ್ರವಾದಿಗಳನ್ನು ನಂಬುವ ಮತ್ತು ಕೆಲವರನ್ನು ನಿರಾಕರಿಸುವವರು ಅಥವಾ ಅಲ್ಲಾಹನು ಅವತೀರ್ಣಗೊಳಿಸಿದ ಕೆಲವು ವಿಷಯಗಳನ್ನು ನಂಬುವ ಮತ್ತು ಕೆಲವನ್ನು

ನಿರಾಕರಿಸುವವರು. ಇವೆಲ್ಲವೂ ದೊಡ್ಡ ಕುಫ್ರ್ ಆಗಿವೆ. ಇದನ್ನು ಕುರ್‌ಆನ್‌ನಲ್ಲಿ ಪ್ರಸ್ತಾಪಿಸಲಾಗಿದೆ. (4:136, 150 ಮತ್ತು 151 ಹಾಗೂ 5: 72,73)

ಇನ್ನೊಂದು ಸಣ್ಣ ಕುಫ್ರ್ (ಅಸ್ಗರ್) ಆಗಿದ್ದು ಅವು ಪಾಪಗಳ ಸಾಲಿಗೆ ಸೇರುತ್ತವೆ. ಕುರ್‌ಆನ್ ಮತ್ತು ಹದೀಸ್‌ಗಳ ಸ್ಪಷ್ಟ ಪ್ರಮಾಣದಲ್ಲಿ ಈ ಪದ ಪದೇ ಪದೇ ಬಳಕೆಯಾಗಿವೆ. ಅಲ್ಲಿ ಅದು ಆಲಂಕಾರಿಕ ಅರ್ಥವನ್ನು ಕೊಡುತ್ತದೆ. ಕೆಲವೆಡೆ ಪಾಪಗಳಿಗೆ ಕುಫ್ರ್ ಎನ್ನಲಾಗಿದೆ. ಇನ್ನು ಕೆಲವೆಡೆ ಕಾಫಿರರ (ಸತ್ಯನಿಷೇಧಿಗಳು) ಕರ್ಮಗಳಂತಹ ಕರ್ಮಗಳನ್ನೆಸಗುವುದನ್ನು ಕುಫ್ರ್ ಎಂದು ವರ್ಣಿಸಲಾಗಿದೆ ಮತ್ತು ಕೆಲವೆಡೆ ಕೃತಘ್ನತೆಗೆ ಕುಫ್ರ್ ಎಂಬ ಹೆಸರು ನೀಡಲಾಗಿದೆ.

ಉದಾ: "ಅಲ್ಲಾಹನು ಅವತೀರ್ಣಗೊಳಿಸಿದ ಕಾನೂನಿನ ಪ್ರಕಾರ ತೀರ್ಮಾನ ಮಾಡದವರೇ ಕಾಫಿರರು." (ಕುರ್‌ಆನ್:5:44)

ಪ್ರವಾದಿ(ಸ) ಹೇಳಿದರು, "ಮುಸ್ಲಿಮನನ್ನು ಬೈಯುವುದು ಫಿಸ್ಕ್ (ಕರ್ಮಭ್ರಷ್ಟತೆ) ಆಗಿದೆ ಮತ್ತು ಅವನನ್ನು ವಧಿಸುವುದು ಕುಫ್ರ್ ಆಗಿದೆ." (ಮುತ್ತಫಕ್ ಅಲೈಹಿ)

"ಮಾನವನ ಮತ್ತು ಕುಫ್ರ್ -ಶಿರ್ಕ್‌ಗಳ ಮಧ್ಯೆ ಗುರುತಿಸಲ್ಪಡುವ ಕ್ರಿಯೆ ನಮಾಝ್ ಆಗಿದೆ." (ಮುಸ್ಲಿಮ್)

ಶಿರ್ಕ್ ಮತ್ತು ಕುಫ್ರ್‌ನಂತೆಯೇ ನಿಫಾಕ್ (ಕಾಪಟ್ಯ)ಗೂ ಇದು ಅನ್ವಯವಾಗುತ್ತದೆ. ಒಂದು ನಿಫಾಕ್ ಅಕ್ಬರ್ (ದೊಡ್ಡ ಕಾಪಟ್ಯ) ಅದು ವಿಶ್ವಾಸ ನಂಬಿಕೆಗಳ ಕುರಿತಾದ ನಿಫಾಕ್ ಆಗಿದೆ. ಇನ್ನು ಕೆಲವು ಕರ್ಮಕ್ಕೆ ಸಂಬಂಧಿಸಿದ್ದು, ಇದನ್ನು ನಿಫಾಕ್ ಅಸ್ಗರ್ (ಸಣ್ಣ ಕಾಪಟ್ಯ) ಎಂದು ಕರೆಯಲಾಗುತ್ತದೆ. ವಿಶ್ವಾಸ ನಂಬಿಕೆಯ ನಿಫಾಕ್ ಹೊಂದಿರುವಾತನು ಬಾಯಿಯಿಂದಲೂ ತನ್ನ ಕೆಲವು ಕರ್ಮಗಳಿಂದಲೂ ತಾನು ವಿಶ್ವಾಸಿಯೆಂದು ತೋರ್ಪಡಿಸುತ್ತಾನೆ. ಆದರೆ ಅಂತರ್ಯವಾಗಿ ಆತ ಅಲ್ಲಾಹನನ್ನೂ ಪ್ರವಾದಿಯನ್ನೂ ನಿರಾಕರಿಸುವವನಾಗಿರುತ್ತಾನೆ. ಇದನ್ನು ಕುರ್‌ಆನ್‌ನಲ್ಲಿ ಪ್ರಸ್ತಾಪಿಸಲಾಗಿದೆ. (ನೋಡಿರಿ: (2:8-9, 63:1-2,4:145)

ಆದರೆ ಕರ್ಮಕ್ಕೆ ಸಂಬಂಧಿಸಿದ ನಿಫಾಕ್ ಮುನಾಫಿಕ್‌ನ ನೀತಿ ನಡವಳಿಕೆಯಿಂದ ಬಹಿರಂಗವಾಗುತ್ತದೆ. ಅವರ ವರ್ತನೆಗಳಿಂದಲೂ ಕರ್ಮಗಳಿಂದಲೂ ಅವರ ಮನಸ್ಸಿನೊಳಗೆ ಅಲ್ಲಾಹನ, ಪ್ರವಾದಿಯ ಮತ್ತು ಪರಲೋಕದ ನಂಬಿಕೆಯಿದೆಯೆಂದು ವ್ಯಕ್ತವಾಗುತ್ತದೆ. ಇವರ ಕುರಿತು ಬಂದಿರುವ ಹದೀಸ್ ಹೀಗಿದೆ, ಮುನಾಫಿಕನ ಮೂರು ಲಕ್ಷಣಗಳಿವೆ.

1. ಮಾತನಾಡಿದರೆ ಸುಳ್ಳು ಹೇಳುವುದು. 2. ವಚನ ಕೊಟ್ಟರೆ ಪಾಲಿಸದಿರುವುದು.
3. ಅವನ ಕೈಯಲ್ಲಿ ಏನಾದರೂ ಅಮಾನತ್ತು ಕೊಟ್ಟರೆ ಅದನ್ನು ಕಬಳಿಸುವುದು.

(ಮುತ್ತಫಕುನ್ ಅಲೈಹಿ)

ಜಾಹಿಲಿಯ್ಯತ್ (ಅಜ್ಞಾನ) ಎಂಬ ಪದದ ಅರ್ಥವೂ ಹೀಗೆಯೆ. ಅದರಿಂದಾಗಿ ವಿಶ್ವಾಸ-ನಂಬಿಕೆಗಳಲ್ಲೇನಾದರೂ ಕೇಡುಂಟಾದರೆ ಆಗ ಅದು ದೊಡ್ಡ ಕುಫ್ರ್ ಎಂದು ಪರಿಗಣಿಸಲ್ಪಡುವುದು. ಇನ್ನು ಅದರಿಂದಾಗಿ ಮನುಷ್ಯನ ಕರ್ಮದಲ್ಲಿ ಏನಾದರೂ ಲೋಪದೋಷಗಳುಂಟಾದರೆ ಇಂತಹ ಜಾಹಿಲಿಯ್ಯತ್ ಸಣ್ಣ ಪಾಪವೆಂದು ಪರಿಗಣಿಸಲ್ಪಡುವುದು.

ಈ ತಾತ್ಪರ್ಯವು ಪ್ರವಾದಿವರ್ಯರ(ಸ) ಈ ವಚನದಿಂದ ವ್ಯಕ್ತವಾಗುತ್ತದೆ- "ನಿಮ್ಮಲ್ಲೂ ಜಾಹಿಲಿಯ್ಯತ್‌ನ ಪಳೆಯುಳಿಕೆ (ಪ್ರಭಾವ) ಉಳಿದಿದೆ." (ಮುತ್ತಫಕುನ್ ಅಲೈಹಿ) ಇದು ಪ್ರವಾದಿ(ಸ) ಓರ್ವ ಮಹಾನ್ ಸಹಾಬಿಯ ಕುರಿತು ಹೇಳಿದ ಮಾತಾಗಿದೆ.

ಕುರ್‌ಆನ್‌ನ ಈ ಪದಗಳ ಅರ್ಥ ವಿವರಣೆಯಿಂದ ಅವುಗಳ ಸ್ಪಷ್ಟ ತಾತ್ಪರ್ಯವನ್ನು ಗ್ರಹಿಸಬಹುದು. ಅದರಿಂದ ಸಂಶಯಗಳು ನೀಗುತ್ತದೆ. ಭಿನ್ನಾಭಿಪ್ರಾಯ ಹೊಂದಿದವರ ಅಂತರವು ದೂರವಾಗಿ ಅವರು ಹತ್ತಿರವಾಗುವರು. ಅವರಲ್ಲಿ ಸತ್‌ಸಂಕಲ್ಪವಿದ್ದರೆ ಅವರೊಳಗಿನ ಭಿನ್ನಾಭಿಪ್ರಾಯಗಳೂ ನೀಗುವುದು.

ಉನ್ನತ ಉದ್ದೇಶಗಳಿಗಾಗಿ ಸಂಘಟಿತ ಹೋರಾಟ

ಸಮಾನ ಮಹಾನ್ ಉದ್ದೇಶಗಳು, ಉನ್ನತ ದೃಢ ಸಂಕಲ್ಪ ಮತ್ತು ಶುಭ ನಿರೀಕ್ಷೆಗಳಿಂದ ಜನಾಂಗಗಳ ಮನಸ್ಸು ಬರಿದಾದಾಗ ಅವು ಪರಸ್ಪರ ಭಿನ್ನಾಭಿಪ್ರಾಯಗಳಲ್ಲಿ ಸಿಲುಕಿ ಸಾಮೂಹಿಕತೆಯಿಂದ ದೂರ ಸರಿಯುತ್ತವೆ. ಮಾತ್ರವಲ್ಲ ಕ್ಷುಲ್ಲಕ, ವ್ಯರ್ಥ ಹಾಗೂ ಮಹತ್ವವಿಲ್ಲದಂತಹ ವಿಷಯಗಳಿಂದಾಗಿ ಅವರು ಪರಸ್ಪರ ಕಚ್ಚಾಟ ಹೋರಾಟಗಳಲ್ಲಿ ತೊಡಗುತ್ತಾರೆ. ಇದರಿಂದ ಈ ಲೋಕದಲ್ಲೂ ಪರಲೋಕದಲ್ಲೂ ಯಾವುದೇ ಪ್ರಯೋಜನವಿಲ್ಲ. ಇದು ಅನುಭವ ಸಿದ್ಧ ವಾಸ್ತವಿಕತೆಯಾಗಿದೆ.

ಸಮಾನವಾದ ಉದ್ದೇಶ ಸಾಧನೆಗಾಗಿರುವ ಪರಿಶ್ರಮ ಮತ್ತು ಸಾಮಾನ್ಯ ವೈರಿಯನ್ನು ಎದುರಿಸಬೇಕಾದ ನಿಶ್ಚಯ ದಾರ್ಢ್ಯವು ಜನಾಂಗಗಳು ಮತ್ತು ಸಮುದಾಯಗಳೊಳಗೆ ಸಹೋದರತೆ ಮತ್ತು ಸಂಘಟನೆಯ ಹುಟ್ಟಿಗೆ ಹೇತುವಾಗುತ್ತದೆ. ಆದುದರಿಂದ ಇಸ್ಲಾಮೀ ಸಮಾಜದ ಪ್ರಸಕ್ತ ಸ್ಥಿತಿಗತಿ, ಅದರ ಸಮಸ್ಯೆಗಳು ಮತ್ತು ಸಂಕಷ್ಟಗಳನ್ನು ಕಡೆಗಣಿಸಿ ಯಾರಾದರೂ ಅದನ್ನು ಕರ್ಮಶಾಸ್ತ್ರಪರ ಹಾಗೂ ಆಂಶಿಕ ವಿಷಯಗಳಲ್ಲಿ ಸಿಲುಕಿಸ ಹೊರಟರೆ ಅದಕ್ಕಿಂತ ದೊಡ್ಡ ವಂಚನೆ ಬೇರೆ ಇರಲಾರದು. ಈ ಹಿಂದೆ ಸಮುದಾಯದೊಳಗೆ ಕಚ್ಚಾಟ-ಹೋರಾಟಗಳಿಗೆ ಕಾರಣವಾದ ಈ ಚಿಕ್ಕಪುಟ್ಟ ಸಮಸ್ಯೆಗಳಲ್ಲಿ ಇಡೀ ಮುಸ್ಲಿಮ್ ಸಮುದಾಯ ಪರಸ್ಪರ ಒಗ್ಗಟ್ಟಾದೀತೆಂದು ಭಾವಿಸುವಂತಹ ಯಾವ ಕುರುಹೂ ದೂರದೂರದ ವರೆಗೂ ಗೋಚರಿಸುವುದಿಲ್ಲ.

ಸಮುದಾಯದ ಒಂದು ವರ್ಗವು ಇನ್ನೊಂದು ವರ್ಗದ ಮೇಲೆ ಅತ್ಯಂತ ಕಟು ಶಬ್ದಗಳಲ್ಲಿ ಅಪವಾದ ಹೊರಿಸುವುದು, ಫತ್ವಾವನ್ನು ಹೊರಡಿಸಿ ವಾತಾವರಣವನ್ನು ಬಿಗುಗೊಳಿಸುವುದು ಸಮುದಾಯದ ಎಂತಹ ದುರಂತ! ಒಂದಕ್ಕಿಂತ ಹೆಚ್ಚು ವ್ಯಾಖ್ಯಾನ-ಅಭಿಪ್ರಾಯಗಳಿಗೆ ಅವಕಾಶವಿರುವ ಮತ್ತು ಜನಪ್ರಿಯವಾಗಿರುವ ಇಂತಹ ಆಂಶಿಕ ವಿಷಯಗಳಿಗಾಗಿ ಹಗೆತನ-ದ್ವೇಷ ಮತ್ತು ಜಗಳ- ಹೋರಾಟ ನಡೆಸುವುದು ವಿವಿಧ ಕಾಲಗಳಿಗೆ, ವಿವಿಧ ರೂಪಗಳಿಗೆ ಅವಕಾಶ ವಿರುವ ಅಗತ್ಯವೂ ಆಗಿರುವ ಧರ್ಮದಲ್ಲಿ ವೈಶಾಲ್ಯ ಮತ್ತು ಅನುಗ್ರಹಪ್ರದವಾಗಿರುವ ಸಂಶೋಧಿತ ವಿಷಯವು ಸರಿಯಾದರೆ ಸಂಶೋಧಕನಿಗೆ ಇಮ್ಮಡಿ ಪುಣ್ಯವೂ ತಪ್ಪಾದರೆ ಪುಣ್ಯ ವಂಚಿತನಾಗದೆ ಹದೀಸ್ ಪ್ರಕಾರ ಒಂದು ಪುಣ್ಯವೂ ಲಭಿಸಬಲ್ಲಂತ ಆಂಶಿಕ ಸಮಸ್ಯೆಗಳಲ್ಲಿ

ಕಚ್ಚಾಡುವುದು ಎಷ್ಟರ ಮಟ್ಟಿಗೆ ಸಮಂಜಸ?

ಆದುದರಿಂದ ಇಂದು ಮುಸ್ಲಿಮ್ ಜನಸಾಮಾನ್ಯರನ್ನು ಧರ್ಮದ ಮೂಲ ಸಿದ್ಧಾಂತ ಮತ್ತು ತಳಹದಿಯ ಮೇಲೆ ಒಂದುಗೂಡಿಸಿ ಅಲ್ಲಾಹನು 'ಭದ್ರಗೋಡೆ, ಏಕ ಸಮುದಾಯ' ಎಂದು ಹೇಳಿರುವಂತಹ ಆ ಐಕ್ಯ ಮತ್ತು ಸಂಘಟನೆಯಲ್ಲಿ ಪೋಣಿಸುವುದು ಸಮುದಾಯದ ಎಲ್ಲ ಬುದ್ಧಿಜೀವಿಗಳ ಮತ್ತು ಇಸ್ಲಾಮಿನ ಪ್ರಚಾರಕರ ಕರ್ತವ್ಯವಾಗಿದೆ. ತನ್ಮೂಲಕ ಅದು ಇಸ್ಲಾಮಿನ ಸಮಗ್ರ ಹಾಗೂ ಕ್ರಿಯಾತ್ಮಕ ಪ್ರಜ್ಞೆ ಹೊಂದಿರುವ ಕ್ರಾಂತಿಕಾರಿ ಮಧ್ಯಮ ಸಮುದಾಯವಾಗಬೇಕು. ಹಳೆಯ ಮತ್ತು ಆಧುನಿಕ ವಿಚಾರಧಾರೆ ಸಮ್ಮಿಳಿತವಾದ ಸ್ಥಿರ ಮತ್ತು ಬದಲಾವಣೆಗೊಳ್ಳುತ್ತಿರುವುದರ ನಡುವೆ ಸಮತೂಕ ಹೊಂದಿರುವ ಇಸ್ಲಾಮಿನ ಗತ ಸಂಪತ್ತಿನ ಸಂರಕ್ಷಕವೂ ಭವಿಷ್ಯಕ್ಕಾಗಿ ಯೋಜನಾಬದ್ಧ ಕಾರ್ಯಕ್ರಮ ಹೊಂದಿರುವ ಹಾಗೂ ಆಂಶಿಕ ಮತ್ತು ಸಂಶೋಧನಾತ್ಮಕ ವಿಷಯಗಳ ವಿವಾದಗಳಿಂದ ಸುರಕ್ಷಿತವೂ ಆಗಿರುವಂತಹ ಸಮುದಾಯವಾಗಬೇಕು. ತನ್ಮೂಲಕ ಪ್ರತಿಯೊಬ್ಬನೂ ಆಂಶಿಕ ವಿಷಯಗಳಲ್ಲಿ ತನ್ನ ಜ್ಞಾನಕ್ಕೆ ತಕ್ಕಂತೆ ತನ್ನ ವಿಧಾನವನ್ನು ಅನುಸರಿಸಿ ಇಸ್ಲಾಮೀ ಸಮಾಜದ ನವನಿರ್ಮಾಣದಲ್ಲಿ ಎಲ್ಲರೂ ಒಟ್ಟಾಗಿ ಪೂರ್ಣ ಪಾತ್ರ ವಹಿಸುವಂತಾಗಬೇಕು. ಅದೇ ರೀತಿ ಸತ್ಯ ಮತ್ತು ಸಹನೆಯ ಉಪದೇಶ, ಸತ್ಯದ ಸಾಕ್ಷ್ಯ, ಒಳಿತಿನ ಆದೇಶ ಮತ್ತು ಕೆಡುಕಿನ ಉಚ್ಚಾಟನೆ ಹಾಗೂ ಅಲ್ಲಾಹನು ಇಡೀ ಮುಸ್ಲಿಮ್ ಸಮುದಾಯಕ್ಕೆ ವಹಿಸಿಕೊಟ್ಟಿರುವ ಉನ್ನತ ಧ್ಯೇಯ, ಹೊಣೆಗಾರಿಕೆ ಮತ್ತು ಭಾರವನ್ನು ಒಟ್ಟಾಗಿ ವಹಿಸಲು ಈ ಸಮುದಾಯಕ್ಕೆ ಸುಲಭ ಸಾಧ್ಯವಾಗಬೇಕು.

ಒಮ್ಮತದ ವಿಷಯಗಳಲ್ಲಿ ಪರಸ್ಪರ ಸಹಕಾರ

ಆಂಶಿಕ ವಿಷಯಗಳಲ್ಲಿ ಒಂದು ಮದ್‌ಹಬನ್ನು ತೊರೆದು ಇನ್ನೊಂದನ್ನು, ಅದನ್ನು ತೊರೆದು ಮೂರನೆಯದನ್ನು ಸ್ವೀಕರಿಸುವುದು ದೊಡ್ಡ ಸಮಸ್ಯೆಯಲ್ಲ. ಬದಲಾಗಿ ಭಿನ್ನಾಭಿಪ್ರಾಯಗಳಿರುವ ಆಂಶಿಕ ವಿಷಯಗಳ ವಿವಾದದಿಂದಾಗಿ ಇಡೀ ಸಮುದಾಯ ಹಾಗೂ ಎಲ್ಲ ಮದ್‌ಹಬ್‌ನವರೂ ಒಪ್ಪುವ ಧರ್ಮದ ಮೂಲಾಧಾರವಾಗಿರುವ ಒಮ್ಮತಾಭಿಪ್ರಾಯದ ವಿಷಯಗಳ ಬೇಡಿಕೆಯನ್ನು ಪೂರೈಸುವಂತಾಗದಿರುವುದೇ ಸಮುದಾಯದ ನೈಜ ಸಮಸ್ಯೆಯೆಂಬುದನ್ನು ಮುಸ್ಲಿಮರ ಸ್ಥಿತಿಗತಿ ಮತ್ತು ಸಮಸ್ಯೆಗಳ ಮೇಲೆ ದೃಷ್ಟಿಯಿರುವ ಪ್ರತಿಯೊಬ್ಬನೂ ತಿಳಿದಿರುತ್ತಾನೆ.

ಒಬ್ಬ ವ್ಯಕ್ತಿಯ ಪೂರ್ವಿಕರ ಸರಿಯಾದ ವಿಧಾನವನ್ನು ಬಿಟ್ಟು ಅಲ್ಲಾಹನ ಗುಣ ವಿಶೇಷಗಳನ್ನು ವಿವರಿಸಲಾದ ಆಯತ್, ಹದೀಸ್‌ಗಳ ಸಮರ್ಥನೆ ಹುಡುಕುತ್ತಾ ಹೋಗುವುದು ಸಮುದಾಯದ ನೈಜ ಸಮಸ್ಯೆಯಲ್ಲ. ಬದಲಾಗಿ ಪಾಶ್ಚಾತ್ಯ ಮತ್ತು ಪೌರ್ವಾತ್ಯ ವಿಚಾರಧಾರೆಗಳ ದಾಸನಾಗಿ ಅಲ್ಲಾಹನ ಅಸ್ತಿತ್ವ ಮತ್ತು ಗುಣ ವಿಶೇಷಗಳನ್ನೇ ನಿರಾಕರಿಸುವ ವ್ಯಕ್ತಿಯೇ ನೈಜ ಸಮಸ್ಯೆಯಾಗಿದ್ದಾನೆ.

ಅಲ್ಲಾಹನು ಅರ್ಶ್‌ನ ಮೇಲಿದ್ದಾನೆ ಎಂಬುದನ್ನು ನಂಬುವವನೋ ಅಥವಾ ಅಲ್ಲಾಹನ ಮಹಾನತೆಯ ದೃಷ್ಟಿಯಿಂದ ಅದನ್ನು ಸೂಚ್ಯವಾಗಿ ಹೇಳುವವನೋ ಎಂಬುದು ಸಮಸ್ಯೆಯಲ್ಲ. ಬದಲಾಗಿ ಅರ್ಶನ್ನೂ ಅಲ್ಲಾಹನನ್ನೂ ಒಟ್ಟಾಗಿ ನಿರಾಕರಿಸುವವನೇ ನಿಜವಾದ ಸಮಸ್ಯೆಯಾಗಿದ್ದಾನೆ.

ಅದೇ ರೀತಿ ನಮಾಝ್‌ನಲ್ಲಿ 'ಬಿಸ್ಮಿಲ್ಲಾಹ್' ಜೋರಾಗಿ ಓದುವವರು, ಮೆಲ್ಲನೆ ಓದುವವರು ಅಥವಾ ಓದದೇ ಇರುವವರು ಮುಖ್ಯವಲ್ಲ. ನಮಾಝ್‌ನಲ್ಲಿ ಕೈಕಟ್ಟುವವರೋ, ಕೈಕಟ್ಟದವರೋ ಮುಖ್ಯ ಸಮಸ್ಯೆಯಲ್ಲ. ಹಾಗೆಯೇ ಕೈಯೆತ್ತುವವರೋ ಎತ್ತದವರೋ ಸಮಸ್ಯೆಯಲ್ಲ. ಬದಲಾಗಿ ಅಲ್ಲಾಹನ ಬಗ್ಗೆಯಾಗಲೀ, ಮಸೀದಿ, ನಮಾಝ್, ರುಕೂಅ್, ಸಜ್ದಾಗಳ ಬಗೆಗಾಗಲೀ ತಿಳುವಳಿಕೆಯೇ ಇಲ್ಲದವರು ಮುಖ್ಯ ಸಮಸ್ಯೆಯಾಗಿದ್ದಾರೆ.

ರಮಝಾನ್ ಮತ್ತು ಶವ್ವಾಲ್ ತಿಂಗಳ ಚಂದ್ರದರ್ಶನದ ದೃಢೀಕರಣಕ್ಕಾಗಿ ಯಾವುದೇ ಅಧಿಕೃತ ಮದ್‌ಹಬನ್ನು ಅವಲಂಬಿಸದೆ ಇರುವವರು ನೈಜ ಸಮಸ್ಯೆಯಲ್ಲ. ಬದಲಾಗಿ ರಮಝಾನ್ ತಿಂಗಳಲ್ಲೂ ಶಅಬಾನ್ ತಿಂಗಳಲ್ಲಿದ್ದಂತೆಯೇ ಇರುವ ಮತ್ತು ಶವ್ವಾಲ್ ತಿಂಗಳಲ್ಲೂ ಹಾಗೆಯೇ ಇರಬಯಸುವ, ಉಪವಾಸವೇನು, ತರಾವೀಹ್ ಏನು ಎಂದೇ ತಿಳಿಯದ ಹಾಗೂ ನಿರ್ಲಜ್ಜೆಯಿಂದ ರಮಝಾನ್‌ನ ಹಗಲಲ್ಲಿ ಅನ್ನಪಾನೀಯಗಳನ್ನು ಸೇವಿಸುವವರೇ ನಿಜವಾದ ಸಮಸ್ಯೆಯಾಗಿದ್ದಾರೆ. ನೈಜ ಸಮಸ್ಯೆಯು ಮುಖ ಪರದೆ ಹಾಕದ ಮತ್ತು ಕೈಚೀಲ ಧರಿಸದ ಮಹಿಳೆಯಲ್ಲ. ಬದಲಾಗಿ ಪೇಟೆ ಮಧ್ಯದಲ್ಲಿ ತನ್ನ ತಲೆ, ಕೊರಳು ಮತ್ತು ಬೆನ್ನಿನ ಭಾಗಗಳನ್ನು ತೆರೆದು ಕೊಂಡು ನಡೆಯುವ ಹಾಗೂ ಕಿರಿದಾದ ಅರೆ ನಗ್ನ ಮತ್ತು ತೆಳ್ಳಗಿನ ಉಡುಪು ಧರಿಸಿ ಸಭ್ಯತೆಯೂ ನಾಚಿಸುವಂತೆ ನಗ್ನತೆಯನ್ನು ಪ್ರದರ್ಶಿಸುವ ಮಹಿಳೆಯೇ ನೈಜ ಸಮಸ್ಯೆಯಾಗಿದ್ದಾಳೆ.

ಸಮುದಾಯದ ನೈಜ ಸಮಸ್ಯೆಯು ವಿಶ್ವಾಸದ ದೌರ್ಬಲ್ಯ, ಶರೀಅತ್‌ನಿಂದ ವಿಮುಖತೆ, ನೈತಿಕ ಅರಾಜಕತೆಗೆ ಸಿಲುಕಿರುವ ಬಹುಸಂಖ್ಯೆಯ ಜನರಾಗಿದ್ದಾರೆ. ಮಾತ್ರವಲ್ಲ, ನಮಾಝ್ ಬಿಟ್ಟಿರುವ, ಝಕಾತ್ (ನೀಡುವುದನ್ನು) ನಿರಾಕರಿಸುವ, ವಿಷಯಾಸಕ್ತಿಯ ಅನುರಕ್ತ ಮತ್ತು ಅಶ್ಲೀಲತೆಯ ಪ್ರಚಾರಕರಾಗಿರುವ ಹಾಗೆಯೇ ಭ್ರಷ್ಟಾಚಾರ, ಸುವ್ಯಕ್ತ ನಿಷಿದ್ಧ ಕಾರ್ಯಗಳಲ್ಲಿ ತಲ್ಲೀನವಾಗಿರುವ ಹಾಗೂ ಅಲ್ಲಾಹನ ಮತ್ತು ಪ್ರವಾದಿಯ(ಸ) ವೈರಿಗಳೊಂದಿಗೆ ಮೈತ್ರಿ ಹಸ್ತ ಚಾಚುವ ಸಮುದಾಯದ ಬಹುಸಂಖ್ಯೆಯ ಜನರೇ ನೈಜ ಸಮಸ್ಯೆಯಾಗಿದ್ದಾರೆ.

ಬುದ್ಧಿಯನ್ನು ಒತ್ತೆಯಿಟ್ಟವರು, ವೈಚಾರಿಕ ಮಾಂದ್ಯವುಳ್ಳವರು ಮತ್ತು ಸಂಕಲ್ಪ ದಾರ್ಢ್ಯವಿಲ್ಲದವರು ಹಾಗೂ ಸ್ವತಂತ್ರ ವಿಚಾರದ ವಿರೋಧಿಗಳು, ಕಡ್ಡಾಯ ಕರ್ಮಗಳ ಬಗ್ಗೆ ಅಶ್ರದ್ಧರಾದವರು, ಆತ್ಮ ಪ್ರಶಂಸೆಯ ಭ್ರಾಂತರು ಹಾಗೂ ಸಮುದಾಯದ ಮೇಲೆ ಅಧಿಕಾರಿಗಳ ದಬ್ಬಾಳಿಕೆಯನ್ನು ಪ್ರತಿನಿಧೀಕರಿಸುವವರು ನಿಜವಾಗಿ ಸಮುದಾಯದ ಸಮಸ್ಯೆಯಾಗಿದ್ದಾರೆ.

ಇಂದು ಇಸ್ಲಾಮ್ ಮತ್ತು ಮುಸ್ಲಿಮರ ಉನ್ನತಿಗಾಗಿ ಕೆಲಸ ಮಾಡುವವರ ಪ್ರಪ್ರಥಮ ಕರ್ತವ್ಯವೇನೆಂದರೆ, ಅವರು ತಮ್ಮ ಪ್ರಯತ್ನ ಪರಿಶ್ರಮಗಳನ್ನು ಸಮುದಾಯದೊಳಗೆ ಒಮ್ಮತವಿರುವ ವಿಷಯಗಳಿಗೆ ಕೇಂದ್ರೀಕರಿಸಬೇಕು ಮತ್ತು ಒಮ್ಮತದ ವಿಷಯಗಳಲ್ಲಿ

ಪರಸ್ಪರ ಸಹಕರಿಸಲು ಆರಂಭಿಸಬೇಕು. ಏಕೆಂದರೆ ಒಮ್ಮತದ ವಿಷಯದಲ್ಲಿ ಇಂತಹ ಸಹಕಾರವು ಕಡ್ಡಾಯ ಕರ್ತವ್ಯ; ಮಾತ್ರವಲ್ಲ ಅದು ಅಗತ್ಯವೂ ಹೌದು. ಇದು ಇಸ್ಲಾಮ್ ಹೇರಿದಂತಹ ಕರ್ತವ್ಯವಾಗಿದೆ. ಸ್ಥಿತಿಗತಿಗಳು ಬಯಸುವ ಅಗತ್ಯವೂ ಆಗಿದೆ.

ಸಮುದಾಯದೊಳಗೆ ಒಮ್ಮತವಿರುವ ವಿಷಯಗಳು ಕ್ಷುಲ್ಲಕ, ಆಂಶಿಕ ಅಥವಾ ಕೆಳದರ್ಜೆಯವುಗಳಲ್ಲ. ಬದಲಾಗಿ ಅವು ಧರ್ಮದ ಮೂಲಭೂತ ನಂಬಿಕೆಗಳು ಮತ್ತು ಕಡ್ಡಾಯ ಕರ್ತವ್ಯಗಳಾಗಿವೆ. ಅವು ನಿರಂತರ ಪ್ರಯತ್ನವನ್ನು ಬಯಸುತ್ತದೆ. ಯಾವುದೇ ಬಾಹ್ಯ ಸಹಾಯವಿಲ್ಲದೆ ಕರ್ಮ ದೌರ್ಬಲ್ಯವಿಲ್ಲದಂತಹ ಸಂಕಲ್ಪಶಕ್ತಿ ಸರಿಯಾದ ಮಾರ್ಗದರ್ಶನ ನೀಡ ಬಲ್ಲಂತಹ ಬುದ್ಧಿಮತ್ತೆ, ನಿಸ್ಪೃಹವಾದ ಮತ್ತು ಕರ್ಮೋತ್ಸುಕರಾದ ಪಾವನ ವ್ಯಕ್ತಿತ್ವದ ಯುವಕರು ಹಾಗೂ ನವನಿರ್ಮಾಣ ಮಾಡಬಲ್ಲಂತಹ ಸಂಘಟಿತ ಶಕ್ತಿ ಈ ಕಾರ್ಯಕ್ಕೆ ಬಹಳ ಅಗತ್ಯವಿದೆ.

ಅಲ್ಲಾಹನ ಏಕತೆಯ ಬಗೆಗಿನ ನಂಬಿಕೆಯಲ್ಲಿ ಸಮುದಾಯದಲ್ಲಿ ಒಮ್ಮತವಿಲ್ಲವೆ? ಕುರ್‌ಆನ್ ಮತ್ತು ಹದೀಸ್‌ಗಳಲ್ಲಿ ಬಂದಿರುವ ಅಲ್ಲಾಹನ ಗುಣನಾಮಗಳಲ್ಲಿ ನಾವು ಒಮ್ಮತವಾಗಿಲ್ಲವೇ? ನಮ್ಮ ಮಕ್ಕಳ ಮತ್ತು ಯುವ ಜನಾಂಗದ ಮನಸ್ಸಿನಲ್ಲಿ ಕುರ್‌ಆನ್ ಮತ್ತು ಹದೀಸ್‌ಗಳ ಕಲ್ಪನೆಯ ಏಕ ಅಲ್ಲಾಹನ ವಿಶ್ವಾಸ ಮೂಡಿಸುವುದು ನಮ್ಮ ಕರ್ತವ್ಯವಲ್ಲವೇ? ಇಂದು ಮಾನವಕುಲಕ್ಕೆ ಮತ್ತು ಇಸ್ಲಾಮಿಗೆ ಅತಿ ದೊಡ್ಡ ಅಪಾಯ ಭೌತಿಕತೆ ಮತ್ತು ನಾಸ್ತಿಕತೆಯಾಗಿವೆಯೆಂಬ ಬಗ್ಗೆ ನಮ್ಮಲ್ಲಿ ಒಮ್ಮತವಿಲ್ಲವೇ? ಅವುಗಳಿಂದಾಗಿ ಸಮುದಾಯದ ಯುವ ಜನಾಂಗದ ವಿಚಾರವಿಶ್ವಾಸಗಳಲ್ಲಿ ಮೂಡುತ್ತಿರುವ ಸಂದೇಹಗಳಿಂದ ಅವರನ್ನು ರಕ್ಷಿಸಿ, ಅವರ ಮನಸ್ಸುಗಳಲ್ಲಿ ಅಲ್ಲಾಹನ ಮೇಲಿನ ವಿಶ್ವಾಸದ ಜ್ಯೋತಿಯನ್ನು ಬೆಳಗಿಸಬೇಕಾದರೆ ಅದಕ್ಕೆ ನಾವು ಪರಸ್ಪರ ಸಹಕರಿಸುವುದು ನಮ್ಮ ಕರ್ತವ್ಯವಲ್ಲವೆ?

ಈ ಸಮುದಾಯವು ಪರಲೋಕ, ಸ್ವರ್ಗ- ನರಕ, ಪುರಸ್ಕಾರ- ಶಿಕ್ಷೆ ಮೊದಲಾದವುಗಳಲ್ಲಿ ನಂಬಿಕೆಯಿರಿಸುವ ಬಗ್ಗೆ ಒಮ್ಮತ ಹೊಂದಿಲ್ಲವೆ? ಮಾನವನ ಆತ್ಮದಲ್ಲಿ ಅವನನ್ನು ಒಳಿತಿನೆಡೆಗೆ ಒಯ್ಯುವ ಮತ್ತು ಕೆಡುಕಿನಿಂದ ತಡೆಗಟ್ಟುವ ದೌರ್ಬಲ್ಯದ ಸಂದರ್ಭಗಳಲ್ಲಿ ಅವನಿಗೆ ಧೈರ್ಯ- ಸ್ಥೈರ್ಯಗಳನ್ನು ನೀಡುವ, ನಿರಾಶೆಯ ಸಮಯದಲ್ಲಿ ಆಶಾಕಿರಣ ಮೂಡಿಸುವ ಒಂದು ಕಾವಲುಗಾರನನ್ನು ಆ ವಿಶ್ವಾಸವು ನೇಮಿಸಿಲ್ಲವೆ? ಈ ವಿಶ್ವಾಸವನ್ನು ಸುಭದ್ರಗೊಳಿಸಲು ಮತ್ತು ಅದರ ಕುರಿತು ಎತ್ತಲಾಗುವ ಸಂಶಯದ ವಾತಾವರಣವನ್ನು ದೂರೀಕರಿಸಲು ನಾವು ಪರಸ್ಪರ ಸಹಕರಿಸಬೇಕಾದುದು ನಮ್ಮ ಕರ್ತವ್ಯವಲ್ಲವೇ?

ಇಸ್ಲಾಮಿನ ಮೂಲಭೂತ ವಿಷಯಗಳಲ್ಲಿ ನಂಬಿಕೆಯಿರಿಸುವುದರಲ್ಲಿ ನಾವು ಒಮ್ಮತ ಹೊಂದಿಲ್ಲವೆ? ಅವುಗಳ ಪ್ರಚಾರ- ಪ್ರಸಾರಗಳಲ್ಲಿ ಎಲ್ಲ ದೃಶ್ಯ- ಶ್ರವಣ ಮಾಧ್ಯಮಗಳನ್ನು ಬಳಸಿ ಪರಸ್ಪರ ಸಹಕರಿಸಬೇಕಾದುದು ನಮ್ಮ ಕರ್ತವ್ಯವಲ್ಲವೆ?

ನಾವು ಅಲ್ಲಾಹನ ಮೇಲಿನ, ಮಲಕ್‌ಗಳ, ಗ್ರಂಥಗಳ, ಪ್ರವಾದಿಗಳ, ಪರಲೋಕದ ಮತ್ತು ವಿಧಿಯ ಒಳಿತು-ಕೆಡುಕುಗಳ ಮೇಲಿನ ವಿಶ್ವಾಸದಲ್ಲಿ ಒಮ್ಮತ ಹೊಂದಿಲ್ಲವೆ? ಹೊಸ ಮತ್ತು ಹಳೆಯ ರೀತಿಯ ಎಲ್ಲ ಚರ್ಚೆಗಳನ್ನು ಬಿಟ್ಟು ಕುರ್‌ಆನ್ ಮತ್ತು ಪ್ರವಾದಿಚರ್ಯೆಯ

ಆಧಾರದಲ್ಲಿ ಪ್ರಸ್ತುತ ವಿಶ್ವಾಸ ನಂಬಿಕೆಗಳನ್ನು ವಿಶ್ವಾಸಿಗಳ ಹೃದಯದಲ್ಲಿ ರೂಢಮೂಲಗೊಳಿಸಲು ಮತ್ತು ಸುದೃಢ ಗೊಳಿಸಲು ಪರಸ್ಪರ ಸಹಕಾರದಿಂದ ಕೆಲಸ ಮಾಡುವುದು ನಮ್ಮ ಕರ್ತವ್ಯವಲ್ಲವೆ?

ಅಲ್ಲಾಹನ ಮೇಲೆ ಭರವಸೆ, ಅವನ ಕೊಡುಗೆಗಳಿಗೆ ಕೃತಜ್ಞತೆ, ಅವನ ಸತ್ವ ಪರೀಕ್ಷೆಗಳ ವೇಳೆ ಸ್ಥಿರತೆ, ಅವನ ತೀರ್ಮಾನಗಳಲ್ಲಿ ಸಂತೃಪ್ತಿ ಹಾಗೂ ಅವನ ಕರುಣೆಯ ನಿರೀಕ್ಷೆ ಮುಂತಾದ ಗುಣ ವಿಶೇಷಗಳ ಪರಿಪೂರ್ಣತೆಗಾಗಿಯೇ ಪ್ರವಾದಿ(ಸ) ನಿಯೋಗಿಸಲ್ಪಟ್ಟಿದ್ದರು. ಈ ಬಗ್ಗೆ ನಮ್ಮಲ್ಲಿ ಒಮ್ಮತವಿಲ್ಲವೇ? ಅವನ ಶಿಕ್ಷೆಯ ಭಯ, ಅವನಿಗಾಗಿ ನಿಸ್ಪೃಹ ಪ್ರೇಮ, ಅವನ ಭೇಟಿಯ ಅಮಿತಾಸಕ್ತಿ, ಅವನ ಸ್ಮರಣೆಯಿಂದ ಮನಶ್ಶಾಂತಿ ಲಭಿಸುತ್ತದೆಂಬ ವಿಷಯದಲ್ಲಿ ನಾವು ಒಮ್ಮತ ಹೊಂದಿಲ್ಲವೆ? ನಾವು ಸತ್ಯಸಂಧತೆ, ಪ್ರಾಮಾಣಿಕತೆ, ವಚನಪಾಲನೆ, ಧೈರ್ಯ, ಔದಾರ್ಯ, ಲಜ್ಜೆ, ನಯವಿನಯ, ಶಿಸ್ತು ಮತ್ತು ಪರಸ್ಪರ ಸಹಕಾರವೇ ಮೊದಲಾದ ಮಾನವೀಯ, ಇಸ್ಲಾಮಿ ಮತ್ತು ನೈತಿಕ ಮೌಲ್ಯಗಳನ್ನು ಬೆಳೆಸಬೇಕೆಂಬ ವಿಷಯದಲ್ಲಿ ಒಮ್ಮತ ಹೊಂದಿಲ್ಲವೆ? ಒಂದು ಪಾವನ ವಾತಾವರಣದಲ್ಲಿ ಮಕ್ಕಳು ಯುವಕರಾಗುವಂತಾಗಲು ಮತ್ತು ಯುವಕರು ವೃದ್ಧರಾಗುವಂತಾಗಲು ಪ್ರಸ್ತುತ ಮೌಲ್ಯಗಳ ಪ್ರಚಾರ ಮತ್ತು ಸಮಾಜದಲ್ಲಿ ಅವುಗಳ ಪ್ರಭಾವವುಂಟಾಗಲು ಮಾಡುವ ಪ್ರಯತ್ನದಲ್ಲಿ ಪರಸ್ಪರ ಸಹಕರಿಸಬೇಕಾದುದು ನಮ್ಮ ಕರ್ತವ್ಯವಲ್ಲವೆ?

ಇಡೀ ಸಮುದಾಯವು ಒಂದುಗೂಡಿರುವ ಹಾಗೂ ಸಮುದಾಯದ ನೈತಿಕ, ಬೌದ್ಧಿಕ ಮತ್ತು ವೈಚಾರಿಕ ಏಕತೆಗೆ ಕಾರಣವಾಗಿರುವ ಕುರ್‌ಆನ್ ಮತ್ತು ಪ್ರವಾದಿಚರ್ಯೆಯ ಮುಹ್ಕಮ್ ಆದ ಸ್ಪಷ್ಟ ಪಾವನ ಶರೀಅತ್ ನಿಯಮಗಳ ವಿಷಯದಲ್ಲಿ ನಾವು ಒಮ್ಮತ ಹೊಂದಿಲ್ಲವೆ? ಹಾಗಾದರೆ ಈ ದೇಶದ ಸಾರ್ವಜನಿಕ ಜೀವನದಲ್ಲಿ ಆ ಕಾನೂನಿನಂತೆ ನಡೆಯುವುದು, ಉತ್ತಮ ರೀತಿಯಲ್ಲಿ ಅದರ ಕಡೆಗೆ ಜನರನ್ನು ಆಹ್ವಾನಿಸುವುದು ಮತ್ತು ಅದನ್ನು ಜಾರಿಗೊಳಿಸಲಿಕ್ಕಾಗಿ ಪರಸ್ಪರ ಸಹಕಾರದೊಂದಿಗೆ ಪ್ರಯತ್ನಿಸುವುದು ನಮ್ಮ ಮೇಲಿರುವ ಕರ್ತವ್ಯವಲ್ಲವೆ?

ಇಂದು ಝಿಯೋನಿಝಮ್ ಎಂಬುದು ಇಸ್ಲಾಮ್ ಮತ್ತು ಮುಸ್ಲಿಮರಿಗೆ ಅಪಾಯವಾಗಿದ್ದು, ಅದರ ವಾಹಕರು ಮುಸ್ಲಿಮರ ಧಾರ್ಮಿಕ, ಸೈನಿಕ, ರಾಜಕೀಯ, ನೈತಿಕ, ಸಾರ್ವಜನಿಕ ಮತ್ತು ಸಾಂಸ್ಕೃತಿಕ ಅಸ್ತಿತ್ವವನ್ನೇ ಅಳಿಸಿ ಹಾಕುವ ಹುನ್ನಾರದಲ್ಲಿದ್ದಾರೆಂಬ ಬಗ್ಗೆ ನಮ್ಮಲ್ಲಿ ಒಮ್ಮತವಿಲ್ಲವೆ? ಹಾಗಿರುವಾಗ ಅನೂರ್ಜಿತಗೊಂಡ ಯಹೂದಿ ಮತವನ್ನು ಜಾರಿಯಲ್ಲಿರುವ ಇಸ್ಲಾಮಿನ ಮೂಲಕ, ತಿದ್ದುಪಡಿಗೊಳಗಾದ ತೌರಾತನ್ನು ಸುರಕ್ಷಿತವಾಗಿರುವ ಕುರ್‌ಆನ್‌ನ ಮೂಲಕ ಹಾಗೂ ತಲ್ಮೂದ್‌ನ ಮಿಥ್ಯೆಗಳನ್ನು ಕುರ್‌ಆನ್ ಮತ್ತು ಪ್ರವಾದಿ ಚರ್ಯೆಯ ಸತ್ಯತೆಯ ಮೂಲಕ ಪರಸ್ಪರ ಸಹಕಾರದಿಂದ ಎದುರಿಸಬೇಕಾದ ಹೊಣೆಗಾರಿಕೆ ನಮ್ಮ ಮೇಲಿಲ್ಲವೆ?

ಕ್ರೈಸ್ತ ಮತದ ಪ್ರತಿನಿಧಿಗಳಾದ ಪಾಶ್ಚಾತ್ಯಶಕ್ತಿಗಳು ಇಸ್ಲಾಮಿ ಜಗತ್ತಿನ ಸ್ಥಿತಿಗತಿಗಳ ದುರ್ಲಾಭ ಪಡೆದು, ತಮ್ಮ ಆಧುನಿಕ ವ್ಯಾಪಕ ಸಂಪನ್ಮೂಲಗಳ ಬಲದಿಂದ ಮೌನವಾಗಿ

ಮುಸ್ಲಿಮರನ್ನು ಕ್ರೈಸ್ತರಾಗಿ ಮಾಡುತ್ತಿದ್ದಾರೆಂಬ ಬಗೆಗೆ ನಮ್ಮಲ್ಲಿ ಭಿನ್ನಾಭಿಪ್ರಾಯಗಳಿವೆಯೇ? ಅವರು ಮುಸ್ಲಿಮ್ ಜಗತ್ತಿನಲ್ಲಿ ತರತರದ ಕ್ಷೋಭೆಗಳನ್ನು ಸೃಷ್ಟಿಸಿ ನಮ್ಮ ಶಕ್ತಿಯನ್ನು ಶಿಥಿಲಗೊಳಿಸುತ್ತಿಲ್ಲವೆ? ಪಾಶ್ಚಾತ್ಯ ಲೋಕದ ಈ ದಾಳಿಯನ್ನು ಎದುರಿಸಲು ಹಾಗೂ ಇಸ್ಲಾಮೀ ಸಮಾಜದ ಉಳಿವು ಮತ್ತು ಧರ್ಮದ ರಕ್ಷಣೆಗಾಗಿ ನಾವೆಲ್ಲ ಒಟ್ಟು ಸೇರಿ ಹೋರಾಟ ನಡೆಸುವುದು ನಮ್ಮ ಕರ್ತವ್ಯವಲ್ಲವೇ?

ಕಮ್ಯೂನಿಸ್ಟರು ನಮ್ಮ ವಿಶ್ವಾಸ, ವಿಚಾರ ಮತ್ತು ಸಂಸ್ಕೃತಿಯ ವಿರುದ್ಧ ನಮ್ಮ ನೆಲದಲ್ಲೇ ವೈಚಾರಿಕ, ಸಾಂಸ್ಕೃತಿಕ, ರಾಜಕೀಯ ಮತ್ತು ಸೈನಿಕ ಹೋರಾಟ ನಡೆಸುತ್ತಿರುವಾಗ ಅವರ ಆಕ್ರಮಣವನ್ನು ಎದುರಿಸಿ ಇಸ್ಲಾಮೀ ವಿಶ್ವಾಸ, ನೀತಿ, ಶರೀಅತ್ ಮತ್ತು ನಮ್ಮ ಭೌತಿಕ ಹಾಗೂ ಆಧ್ಯಾತ್ಮಿಕ ಅಸ್ತಿತ್ವವನ್ನು ಉಳಿಸಬೇಕಾದುದು ನಮ್ಮ ಕರ್ತವ್ಯವಲ್ಲವೆ? ಅದಕ್ಕಾಗಿ ನಾವು ಒಗ್ಗಟ್ಟಾಗಿ ಪರಸ್ಪರ ಸಹಕಾರದಿಂದ ಪ್ರಯತ್ನಿಸಬೇಡವೇ?

ಇಡೀ ಜಗತ್ತಿನಲ್ಲಿ ಮುಸ್ಲಿಮರ ಬಹುಸಂಖ್ಯೆ ಈಮಾನ್, ಇಸ್ಲಾಮ್ ಮತ್ತು ಅದರ ಬೇಡಿಕೆಗಳ ಬಗ್ಗೆ ಅಜ್ಞರಾಗಿರುವುದು ಮತ್ತು ಅದರಿಂದ ಅವರು ಎಲ್ಲ ಜನಾಂಗಗಳ ಮಟ್ಟಿಗೂ ಸುಲಭದ ಮೇವಾಗುತ್ತಿರುವುದರ ಬಗ್ಗೆ ನಮಗೆ ಭಿನ್ನಾಭಿಪ್ರಾಯವಿದೆಯೇ? ಹಾಗಿರುವಾಗ ಇಸ್ಲಾಮೀ ವಿಶ್ವಾಸ ಹಾಗೂ ಮೂಲಭೂತ ವಿಷಯಗಳ ಮತ್ತು ಆರಾಧನೆ, ನೀತಿ-ಶಿಷ್ಟಾಚಾರಗಳ ಶಿಕ್ಷಣವನ್ನು ಮುಸ್ಲಿಮರಲ್ಲಿ ವ್ಯಾಪಕಗೊಳಿಸಲು ನಾವು ಪರಸ್ಪರ ಸಹಕಾರದಿಂದ ಒಟ್ಟಾಗಿ ಶ್ರಮಿಸಲಾರೆವೆ? ಇಡೀ ಜಗತ್ತಿನ ಹೆಚ್ಚಿನ ಜನರು ಇಸ್ಲಾಮ್ ಏನೆಂದೇ ಅರಿಯದವರು. ಒಂದು ವೇಳೆ ಕೆಲವರಿಗೆ ತಿಳಿದಿದ್ದರೂ ಅದು ಅತ್ಯಲ್ಪವೆಂಬ ಬಗೆಗೆ ನಮ್ಮಲ್ಲಿ ಭಿನ್ನಭಿಪ್ರಾಯವಿದೆಯೆ? ಹಾಗಿರುವಾಗ ಇಸ್ಲಾಮಿನ ಸಂದೇಶವನ್ನು ಎಲ್ಲ ಜನಾಂಗಗಳಿಗೆ ಅವರವರ ಭಾಷೆಯಲ್ಲಿ ತಲಪಿಸುವ ಮೂಲಕ ಅವರ ತಪ್ಪು ಕಲ್ಪನೆಗಳನ್ನು ದೂರೀಕರಿಸಿ ಅವರಿಗೆ ತಿಳಿದಿಲ್ಲವೆಂಬ ನೆವನಕ್ಕೆಡೆ ಮಾಡದಂತೆ ಪರಿಶ್ರಮಿಸಬೇಕಾದುದು ಹಾಗೂ ಸತ್ಯದ ಸಾಕ್ಷ್ಯವೆಂಬ ಮಹಾನ್ ಇಸ್ಲಾಮೀ ಕರ್ತವ್ಯವನ್ನು ಒಟ್ಟಾಗಿ ನಿರ್ವಹಿಸಬೇಕಾದುದು ಮುಸ್ಲಿಮ್ ಸಮುದಾಯದ ಸಾಮೂಹಿಕ ಕರ್ತವ್ಯವಲ್ಲವೆ?

ಇಡಿಯ ಇಸ್ಲಾಮೀ ಜಗತ್ತಿನಲ್ಲಿ ಇಸ್ಲಾಮೀ ಶರೀಅತ್ ಜಾರಿಗೊಳಿಸಲಿಕ್ಕಾಗಿ ಮಾಡುವ ಪ್ರಯತ್ನಗಳನ್ನು ಹತ್ತಿಕ್ಕಲಿಕ್ಕಾಗಿ ಎಲ್ಲ ಎಡ-ಬಲ ಸೆಕ್ಯೂಲರ್ ಶಕ್ತಿಗಳು ಮುಂಚೂಣಿಯಲ್ಲಿವೆ ಯೆಂಬ ಕಹಿ ಸತ್ಯ ನಮ್ಮ ಮುಂದಿಲ್ಲವೆ? ನಾವು ಈ ಬಗ್ಗೆ ಒಮ್ಮತ ಹೊಂದಿಲ್ಲವೆ? ಹಾಗಿರುವಾಗ ಇಸ್ಲಾಮಿನ ವಿರುದ್ಧ ಮಾಡಲಾಗುವ ಈ ಸೆಕ್ಯೂಲರ್ ಶಕ್ತಿಗಳ ದುರಾಕ್ರಮಣ ಮತ್ತು ವಿರೋಧವನ್ನು ಶಕ್ತಿಯುತವಾಗಿ ಎದುರಿಸಲು ಲೋಕದ ಎಲ್ಲ ಮುಸ್ಲಿಮರು, ವಿಶೇಷವಾಗಿ ಇಸ್ಲಾಮ್ ಪ್ರಿಯರು ಪರಸ್ಪರ ಸಹಕಾರ ಮತ್ತು ಒಗ್ಗಟ್ಟಿನಿಂದ ಹೋರಾಡಬೇಕಾದುದು ಅವರ ಕರ್ತವ್ಯವಲ್ಲವೆ? ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಆಂಶಿಕ ಮತ್ತು ಕ್ಷುಲ್ಲಕ ಭಿನ್ನತೆಗಳ ಹೊರತಾಗಿಯೂ ಐಕ್ಯ ಸಾಧಿಸಲಿಕ್ಕಾಗಿ ಪರಸ್ಪರ ಸಹಕರಿಸಬೇಕಾದುದು ಎಲ್ಲ ಇಸ್ಲಾಮೀ ಶಕ್ತಿಗಳ ಕರ್ತವ್ಯವಲ್ಲವೆ?

ಇಂದಿನ ಪರಿಸ್ಥಿತಿಯಲ್ಲಿ ಪ್ರಸ್ತುತ ಎಲ್ಲ ವಿಷಯಗಳಲ್ಲಿ ಇಸ್ಲಾಮೀ ಸಮುದಾಯದ

ಎಲ್ಲರೂ ಪರಸ್ಪರ ಸಹಕರಿಸಬೇಕಾದುದು ಹೇಗೆ ಕರ್ತವ್ಯವೋ ಅಲ್ಲೇ ನಾವು ಕ್ಷುಲ್ಲಕ ಮತ್ತು ಆಂಶಿಕ ಭಿನ್ನತೆಗಳ ಹೆಸರಿನಲ್ಲಿ ಪರಸ್ಪರ ಹೊಡೆದಾಡಿ ಸಮುದಾಯವನ್ನು ವಿವಿಧ ವರ್ಗ, ಪಂಗಡಗಳಾಗಿ ಒಡೆಯುವುದು ಇಸ್ಲಾಮೀ ಶಕ್ತಿಗಳಿಗೆ, ಅವರ ಸಂಘಟನೆಗಳಿಗೆ, ಅವರ ಸಂಘ-ಸಂಸ್ಥೆಗಳಿಗೆ ಹಾಗೂ ಅವರ ವ್ಯಕ್ತಿಗಳಿಗೆ ಯಾವ ರೀತಿಯಲ್ಲೂ ಭೂಷಣ ಪ್ರಾಯವಲ್ಲ.

ಭಿನ್ನಾಭಿಪ್ರಾಯದ ವಿಷಯಗಳಲ್ಲಿ ಔದಾರ್ಯ

ಒಮ್ಮತವಿರುವ ವಿಷಯಗಳಲ್ಲಿ ಪರಸ್ಪರ ಸಹಕಾರವು ಕಡ್ಡಾಯವಾಗಿರುವಂತೆಯೇ ಭಿನ್ನಾಭಿಪ್ರಾಯದ ವಿಷಯಗಳಲ್ಲಿ ಪರಸ್ಪರ ಮೃದು ನೀತಿ ಮತ್ತು ಔದಾರ್ಯವೂ ಕಡ್ಡಾಯವಾಗಿದೆ. ಈ ಸುವರ್ಣ ತತ್ವವನ್ನು ಈಜಿಪ್ಟ್‌ನ ಅಲ್ಲಾಮಾ ರಶೀದ್ ರಝಾ(ರ) ಅವರು ಹೀಗೆ ವಿವರಿಸಿದ್ದಾರೆ:

"ಒಮ್ಮತದ ವಿಷಯಗಳಲ್ಲಿ ನಾವು ಪರಸ್ಪರ ಸಹಕರಿಸುವೆವು ಮತ್ತು ಭಿನ್ನಾಭಿಪ್ರಾಯದ ವಿಷಯಗಳಲ್ಲಿ ಪ್ರತಿಯೊಬ್ಬನೂ ಇನ್ನೊಬ್ಬನನ್ನು ನಿರ್ಬಂಧಿತನೆಂದು ಭಾವಿಸುವನು".

ಭಿನ್ನಾಭಿಪ್ರಾಯದ ವಿಷಯಗಳಲ್ಲಿ ನಿರ್ಬಂಧಿತನೆಂದು ಭಾವಿಸುವುದೆಂದರೆ ತನ್ನ ಅಥವಾ ತನ್ನ ಇಮಾಮರ ಸಂಶೋಧನಾತ್ಮಕ ಅಭಿಪ್ರಾಯದ ವಿರುದ್ಧ ಇತರ ಇಮಾಮರ ಅಭಿಪ್ರಾಯದ ಕುರಿತು ಮನಸ್ಸಿನಲ್ಲೂ ಯಾವುದೇ ಪಕ್ಷಪಾತ ಮತ್ತು ಹಠ ಹೊಂದದಿರುವುದಾಗಿದೆ. ಏಕೆಂದರೆ ದೊಡ್ಡ ದೊಡ್ಡ 'ಮುಜ್‌ತಹಿದ್' (ಸಂಶೋಧಕ)ಗಳ ಇಜ್ತಿಹಾದ್ (ಸಂಶೋಧನೆ)ನಲ್ಲಿ ಸರಿ ಅಥವಾ ತಪ್ಪು ಸಂಭವಿಸುವ ಸಾಧ್ಯತೆಯಿರುತ್ತದೆ. ಅಂತಹ ಸಂಶೋಧಿತ ಅಭಿಪ್ರಾಯ ಸರಿಯಾದರೆ ಇಮ್ಮಡಿ ಪುಣ್ಯವಿರುವುದು. ತಪ್ಪಾದರೂ ಒಂದು ಪುಣ್ಯವಂತೂ ಇದ್ದೇ ಇರುವುದು.

ಇಮಾಮ್ ಶಾಫಿಈರಂತಹ ಮಹಾನ್ ಕರ್ಮಶಾಸ್ತ್ರ ಪಂಡಿತರು, ಕರ್ಮಶಾಸ್ತ್ರೀಯ ಅಭಿಪ್ರಾಯವು ಸರಿಯೋ ತಪ್ಪೋ ಎಂದು ಗ್ರಹಿಸಲು ಈ ಕೆಳಗಿನ ತತ್ವವನ್ನು ವಿವರಿಸುತ್ತಾರೆ.

"ನನ್ನ ಸಂಶೋಧನೆಯು ತಪ್ಪಿನ ಅವಕಾಶದೊಂದಿಗೆ ಸರಿಯಾಗಿದೆ. ಅದೇ ರೀತಿ ಇತರರ ಅಭಿಪ್ರಾಯವು ಸರಿಯಾಗುವ ಅವಕಾಶದೊಂದಿಗೆ ತಪ್ಪಾಗಿದೆ."

ಸಂಶೋಧನಾತ್ಮಕ ವಿಷಯಗಳು ತಪ್ಪು ಅಥವಾ ಸರಿ ಆಗುವ ಸಾಧ್ಯತೆಗೆ ಅವಾಕಶವಿರುವುದರಿಂದ ಭಿನ್ನಾಭಿಪ್ರಾಯದ ವಿಷಯದಲ್ಲಿ ಯಾವುದೇ ಒಂದು ಅಭಿಪ್ರಾಯವು ಖಂಡಿತವಾಗಿಯೂ ಸರಿಯೆಂದು ಭಾವಿಸದಿರುವುದೇ ಅದರ ಬೇಡಿಕೆಯಾಗಿದೆ. ಇಲ್ಲಿಂದಲೇ, ಆಂಶಿಕ ಮತ್ತು ಸಂಶೋಧನಾತ್ಮಕ ವಿಷಯದಲ್ಲಿ ಭಿನ್ನಾಭಿಪ್ರಾಯ ತಾಳುವವರೊಂದಿಗೆ ಮೃದುತ್ವ ಮತ್ತು ಔದಾರ್ಯದ ನೀತಿ ಅನುಸರಿಸಬೇಕೆಂದೂ ಸ್ಪಷ್ಟವಾಗುತ್ತದೆ.

ಒಂದು ವಿಷಯದಲ್ಲಿ ಯಾವಾಗಲೂ ಒಂದು ಅಭಿಪ್ರಾಯ ಮಾತ್ರ ಸರಿಯಾದುದೆ ಒಂದು ಸಮಯದಲ್ಲಿ ಒಂದಕ್ಕಿಂತ ಹೆಚ್ಚು ದೃಷ್ಟಿಕೋನಗಳಿರಲು ಸಾಧ್ಯವಿಲ್ಲವೆ ಎಂದು ಯಾರಾದರೂ ಆಕ್ಷೇಪವೆತ್ತಬಹುದು.

ಕರ್ಮಶಾಸ್ತ್ರಜ್ಞರು ಈ ಆಕ್ಷೇಪಕ್ಕೆ ನೀಡುವ ಉತ್ತರವೇನೆಂದರೆ ಸಂಶೋಧನಾತ್ಮಕ ವಿಷಯದಲ್ಲಿ ಸಂಶೋಧಕನ ತೀರ್ಮಾನ ಸರಿಯಾದುದಾಗಿರುತ್ತದೆ. ಅದರಲ್ಲಿ ಪರಸ್ಪರ ವಿರೋಧಾಭಾಸಗಳಿದ್ದರೂ ಸರಿ. ಏಕೆಂದರೆ ಓರ್ವ ಕರ್ಮಶಾಸ್ತ್ರಜ್ಞನ ದೃಷ್ಟಿಯಲ್ಲಿ ಒಂದು ವಸ್ತು ಹಲಾಲ್ ಆಗಿದ್ದರೆ ಇನ್ನೊಬ್ಬನ ದೃಷ್ಟಿಯಲ್ಲಿ ಅದು ಹರಾಮ್ ಆಗಿರುತ್ತದೆ. ಏಕೆಂದರೆ ಸಂಶೋಧನಾತ್ಮಕ ವಿಷಯಗಳಲ್ಲಿ ಸರಿಯಾದುದು ವಿಭಿನ್ನವಾಗಬಹುದು. ಕೆಲವು ಕರ್ಮಗಳನ್ನು ಅಲ್ಲಾಹನೇ ವಿವಿಧ ರೀತಿಯಲ್ಲಿ ನಿರ್ವಹಿಸುವ ಅನುಮತಿ ನೀಡಿದ್ದಾನೆ. ಒಂದೇ ವಿಧಾನ ಸರಿಯೆಂಬ ನಿರ್ಬಂಧ ಹೇರಿಲ್ಲ.

ಇದರ ಅತ್ಯಂತ ಸ್ಪಷ್ಟ ಉದಾಹರಣೆಯು ಕುರ್‌ಆನ್ ಪಾರಾಯಣದ ವಿವಿಧ ಶೈಲಿಯಾಗಿದೆ. ವಿವಿಧ ಗೋತ್ರಗಳ ಉಚ್ಚಾರಗಳನ್ನು ಪರಿಗಣಿಸಿಕೊಂಡು ಪ್ರವಾದಿ(ಸ) ಕುರ್‌ಆನ್ ಪಾರಾಯಣದ ಏಳು ಅಥವಾ ಹತ್ತು ಶೈಲಿಯನ್ನು ಅನುಮತಿಸಿದ್ದಾರೆ.

ಒಮ್ಮೆ ಅಬ್ದುಲ್ಲಾ ಬಿನ್ ಮಸ್‌ಊದ್(ರ) ಅವರು ಒಬ್ಬನು ತನ್ನ ಪಾರಾಯಣ ಶೈಲಿಗಿಂತ ಭಿನ್ನವಾಗಿ ಓದುವುದನ್ನು ಕೇಳಿದಾಗ ಆಕ್ಷೇಪಿಸಿದರು. ಇಬ್ಬರೂ ಪ್ರವಾದಿ(ಸ) ಅವರ ಬಳಿ ಬಂದು ವಿಷಯ ತಿಳಿಸಿದಾಗ ಪ್ರವಾದಿ(ಸ) ನಿಮ್ಮಿಬ್ಬರದೂ ಸರಿಯಾದ ಪಾರಾಯಣವಾಗಿದೆ ಎಂದರು.

ಕೆಲವೊಂದು ವಿಷಯಗಳು ಪರಿಸ್ಥಿತಿಯ ಬದಲಾವಣೆಯಿಂದಾಗಿ ಅಥವಾ ವಿಶಿಷ್ಟ ನಿರ್ಬಂಧಗಳಿಂದಾಗಿ ಒಂದಕ್ಕಿಂತ ಹೆಚ್ಚು ಅಭಿಪ್ರಾಯಕ್ಕೆ ಅವಕಾಶ ಕೊಡುತ್ತದೆ. ಒಂದೇ ವಿಷಯದಲ್ಲಿ ದಾರುಲ್ ಇಸ್ಲಾಮ್ (ಇಸ್ಲಾಮೀರಾಷ್ಟ್ರ) ಮತ್ತು ದಾರುಲ್ ಕುಫ್ರ್ (ಸತ್ಯನಿಷೇಧಿ ರಾಷ್ಟ್ರ)ನ ಕಾನೂನುಗಳು ವಿಭಿನ್ನವಾಗಿರುತ್ತದೆ. ದಾರುಸ್ಸುನ್ನಃ (ಪ್ರವಾದಿಚರ್ಯೆಯನ್ನು ಅನುಸರಿಸುವ ರಾಷ್ಟ್ರ)ದ ಕಾನೂನುಗಳು ದಾರುಲ್ ಬಿದ್‌ಅಃ (ನವೀನಾಚಾರಿ ರಾಷ್ಟ್ರ)ದ ಕಾನೂನುಗಳಿಗಿಂತ ಭಿನ್ನವಾಗಿರುವುದು. ಊರಲ್ಲಿರುವವನು ಮತ್ತು ಪ್ರಯಾಣಿಕನಿಗೆ ಸಂಬಂಧಿಸಿದ ಕಾನೂನುಗಳು ಬೇರೆ ಬೇರೆಯಾಗಿರುವುದು. ಗುಲಾಮನ ಮತ್ತು ಸ್ವತಂತ್ರನ ಕಾನೂನು ಬೇರೆ ಬೇರೆಯಾಗಿರುವುದು. ಶಕ್ತಿ ಪ್ರಾಪ್ತವಾಗಿರುವ ಕಾಲದ ಕಾನೂನುಗಳು ಅಧೀನಗೊಂಡಾಗಿನ ಕಾನೂನುಗಳಿಗೆ ವ್ಯತಿರಿಕ್ತವಾಗಿರುವುದು.

ಕರ್ಮಶಾಸ್ತ್ರೀಯ ವಿಷಯಗಳಿಗೆ ಸಂಬಂಧಿಸಿದ ಈ ವರೆಗಿನ ಚರ್ಚೆಯು ರಾಜಕೀಯ ಮತ್ತು ಸಾಮೂಹಿಕ ವಿಷಯಗಳಿಗೂ ಅನ್ವಯಿಸುತ್ತದೆ. ಕಾಲ ಮತ್ತು ಪರಿಸ್ಥಿತಿಯ ಬದಲಾವಣೆಯೊಂದಿಗೆ ರಾಜಕೀಯ ಮತ್ತು ಸಾಮೂಹಿಕ ಸುಧಾರಣೆಯ ರೀತಿ-ನೀತಿಗಳೂ ಬದಲಾಗಬೇಕಾದುದು ಅನಿವಾರ್ಯ.

ಇಸ್ಲಾಮೀ ಕರ್ಮಶಾಸ್ತ್ರದ ಪ್ರಸಿದ್ಧ ನಿಯಮವೇನೆಂದರೆ, ಕಾಲ, ಸ್ಥಳ ಮತ್ತು ಪರಿಸ್ಥಿತಿ ಬದಲಾಗುವಾಗ ಒಂದೇ ವಿಷಯಕ್ಕೆ ಸಂಬಂಧಿಸಿದ ಫತ್ವ ಮತ್ತು ಆಜ್ಞೆ ಬದಲಾಗುತ್ತದೆ. ಉದಾ: ಸಹಾಬಿಗಳು ಕಾಲ ಮತ್ತು ಪರಿಸ್ಥಿತಿಯು ಬದಲಾದ ಕಾರಣ ಪ್ರವಾದಿವರ್ಯರ ಚರ್ಯೆಗೆ ವ್ಯತಿರಿಕ್ತವಾಗಿ ಬೇರೆಯೇ ರೀತಿಯಲ್ಲಿ ನಡೆದರು. ಇರಾಕ್, ಸಿರಿಯಾ ಮತ್ತು

ಈಜಿಪ್ಟ್‌ನ ಭೂ ಸೊತ್ತನ್ನು ಪ್ರವಾದಿವರ್ಯರು ಖೈಬರ್‌ನ ಭೂಮಿಯನ್ನು ವಿಜೇತರಲ್ಲಿ (ಯೋಧರಲ್ಲಿ) ವಿತರಿಸಿದಂತೆ ವಿತರಿಸಲಿಲ್ಲ.

ಸಮುದಾಯದೊಳಗೆ ಭಿನ್ನತೆಯುಂಟಾದೀತೆಂಬ ಭಯದಿಂದ ಹ.ಉಸ್ಮಾನ್(ರ) ಅವರು ಸಹಾಬಿಗಳೊಂದಿಗೆ ಸಮಾಲೋಚಿಸಿ ಕುರೈಶರ ಕುರ್‌ಆನ್ ಪಾರಾಯಣ ರೀತಿ (ಕಿರಾಅತ್)ಯನ್ನು ಮಾತ್ರ ಉಳಿಸಿ ಉಳಿದೆಲ್ಲ ಪಾರಾಯಣ ಶೈಲಿಯನ್ನು ರದ್ದುಗೊಳಿಸಿದರು. ವಸ್ತುತಃ ಪ್ರವಾದಿವರ್ಯರು ವಿವಿಧ ರೀತಿಯ ಪಾರಾಯಣಕ್ಕೆ ಅನುಮತಿ ನೀಡಿದ್ದರು.

ಅದೇ ರೀತಿಯಲ್ಲಿ ನಾಲ್ವರು ಇಮಾಮರುಗಳ ಪ್ರಧಾನ ಶಿಷ್ಯರು, ಕಾಲ ಮತ್ತು ಪರಿಸ್ಥಿತಿ ಬದಲಾವಣೆಗೊಂಡ ಕಾರಣ ತಂತಮ್ಮ ಇಮಾಮರ (ಗುರುಗಳ) ಅಭಿಪ್ರಾಯಗಳಿಗೆ ವ್ಯತಿರಿಕ್ತವಾಗಿ ತೀರ್ಪು ನೀಡಿದರು. ಈ ವಿಷಯಗಳು ಫಿಕ್ಹ್‌ನ ಐತಿಹಾಸಿಕ ದಾಖಲೆಗಳಲ್ಲಿ ಕಾಣಸಿಗುತ್ತವೆ. ಆದೇ ರೀತಿ ಇಮಾಮ್ ಅಬೂ ಯೂಸುಫ್ ಮತ್ತು ಮುಹಮ್ಮದ್‌ರವರು ತಮ್ಮ ಗುರುವರ್ಯರಾದ ಇಮಾಮ್ ಅಬೂ ಹನೀಫಾರೊಂದಿಗೆ ತಳೆದ ಭಿನ್ನಾಭಿಪ್ರಾಯವು ಆಧಾರ ಪ್ರಮಾಣದ ಭಿನ್ನತೆಯಾಗಿರಲಿಲ್ಲ. ಬದಲಾಗಿ ಕಾಲ ಮತ್ತು ಪರಿಸ್ಥಿತಿಯ ಬದಲಾವಣೆಯಿಂದಾಗಿ ಉಂಟಾದುದಾಗಿತ್ತು.

ಪ್ರವಾದಿ(ಸ) ಕೆಲವು ಜನರಿಗೆ ಅವರ ಪರಿಸ್ಥಿತಿಯನ್ನು ಪರಿಗಣಿಸಿ ನೀಡಿದ ಧರ್ಮ ವಿಧಿಗಳು ಕರ್ಮಶಾಸ್ತ್ರಜ್ಞರ ಅಭಿಪ್ರಾಯದಲ್ಲಿ ಅದು ಆ ವ್ಯಕ್ತಿಗೆ ಮಾತ್ರ ಸೀಮಿತವಾಗಿತ್ತು. ಅದನ್ನು ಎಲ್ಲರಿಗೂ ಅನ್ವಯಿಸುವಂತಿಲ್ಲ.

ಹ. ಉಮರ್ ಬಿನ್ ಅಬ್ದುಲ್ ಅಝೀಝ್(ರ) ಅವರು ತಮ್ಮ ಆಡಳಿತ ಕಾಲದಲ್ಲಿ ತಮ್ಮ ರಾಜ್ಯಪಾಲರು ಯಾವುದೇ ಉಡುಗೊರೆ ಪಡೆಯಬಾರದೆಂದು ಅಪ್ಪಣೆ ಕೊಟ್ಟಿದ್ದರು. ಪ್ರವಾದಿ(ಸ) ಉಡುಗೊರೆ ಪಡೆಯುತ್ತಿದ್ದರಲ್ಲವೆ? ಎಂದು ಅವರೊಡನೆ ಹೇಳಲಾದಾಗ ಅವರು ಹೀಗೆ ಉತ್ತರಿಸಿದರು- "ಪ್ರವಾದಿವರ್ಯರಿಗೆ ಅದು ಉಡುಗೊರೆಯಾಗಿತ್ತು, ಆದರೆ ನಮಗೆ ಅದು ಲಂಚವಾಗಿದೆ."

ಬನೂ ಕುರೈಝಾರ ವಿರುದ್ಧ ಸೇನಾ ಕಾರ್ಯಾಚರಣೆಗಾಗಿ ಹೊರಟ ಸಹಾಬಿಗಳು ಅಸರ್ ನಮಾಝ್‌ನ ಕುರಿತು ತಳೆದ ಭಿನ್ನಾಭಿಪ್ರಾಯವು ಬಹಳ ಪ್ರಸಿದ್ಧವಿದೆ. ಆದರೆ ಪ್ರವಾದಿವರ್ಯರಿಗೆ ಇದು ತಿಳಿದಾಗ, ಯಾರನ್ನೂ ತಪ್ಪಿತಸ್ಥರೆಂದು ಹೇಳಲಿಲ್ಲ. ಉಭಯ ವರ್ಗದವರನ್ನೂ ಸಮರ್ಥಿಸಿದರು.

ಧರ್ಮದ ವಿಧಿ-ನಿಷೇಧಗಳನ್ನು ನಿರಾಕರಿಸುವವನು ಕರ್ಮಶಾಸ್ತ್ರ ಪಂಡಿತರ ಒಮ್ಮತದ ಅಭಿಪ್ರಾಯದಂತೆ ಮುರ್ತದ್ದ್ (ಧರ್ಮಭ್ರಷ್ಟ) ಆಗಿದ್ದಾನೆ. ಆದರೆ ವಿದ್ಯಾಭ್ಯಾಸಕ್ಕೆ ಅವಕಾಶ ಲಭ್ಯವಿಲ್ಲದ ಗ್ರಾಮೀಣರಿಗೆ ಈ ವಿಧಿ ಅನ್ವಯವಾಗುವುದಿಲ್ಲ. ಅವರಿಗೆ ಶಿಕ್ಷಣಗಳಿಸುವ ಮತ್ತು ಧರ್ಮ ವಿಧಿಗಳನ್ನು ಕಲಿಯುವ ಸೌಲಭ್ಯ ಒದಗಿಸಿ ಕೊಡಲಾಗುವುದು.

ಮದ್ಯಪಾನಿಗೆ ಹ. ಅಬೂಬಕರ್(ರ) ಅವರ ಆಡಳಿತ ಕಾಲದಲ್ಲಿ 40 ಛಡಿಯೇಟು ಬಾರಿಸಲಾಗುತ್ತಿತ್ತು; ಆದರೆ ಉಮರ್(ರ) ಅವರ ಕಾಲದಲ್ಲಿ 80 ಛಡಿಯೇಟು ನೀಡುವ ಶಾಸನ ಜಾರಿಗೊಂಡಿತು. ಏಕೆಂದರೆ ಜನರು ಮದ್ಯಪಾನವನ್ನು ತೊರೆಯುತ್ತಿರಲಿಲ್ಲ.

ಇಮಾಮ್ ಇಬ್ನು ಕಯ್ಯಿಮ್ ಅವರು ತನ್ನ ಗುರುವರ್ಯರಾದ ಇಮಾಮ್ ಇಬ್ನು ತೀಮಿಯ್ಯಾರ ಕುರಿತು ಹೀಗೆ ಬರೆಯುತ್ತಾರೆ- ಅವರು ತಮ್ಮ ಕೆಲವು ಸಂಗಾತಿಗಳೊಂದಿಗೆ ಡೆಮಾಸ್ಕಸ್‌ನಲ್ಲಿ ಎಲ್ಲಿಗೋ ಹೋಗುತ್ತಿದ್ದರು. ದಾರಿ ಮಧ್ಯೆ ತಾರ್ತಾರಿಗಳ ಗುಂಪೊಂದು ಮದ್ಯದ ಅಮಲಿನಲ್ಲಿರುವುದು ಅವರ ಕಣ್ಣಿಗೆ ಬಿತ್ತು. ಇಬ್ನು ತೀಮಿಯ್ಯಾರ ಸಂಗಾತಿಗಳು ಅವರನ್ನು ಈ ಕೆಡುಕಿನಿಂದ ತಡೆಯಬಯಸಿದರು. ಆದರೆ ಇಬ್ನು ತೀಮಿಯ್ಯಾರು ಅವರನ್ನು ತಡೆಯುತ್ತಾ ಹೀಗೆಂದರು- ಮದ್ಯವು ಮನುಷ್ಯನನ್ನು ನಮಾಝ್‌ನಿಂದಲೂ ಅಲ್ಲಾಹನ ಸ್ಮರಣೆಯಿಂದಲೂ ತಡೆಯುತ್ತದೆ. ಅದಕ್ಕಾಗಿ ಅಲ್ಲಾಹನು ಅದನ್ನು ನಿಷೇಧಿಸಿದನು. ಈ ಮಂದಿಯನ್ನು ಮದ್ಯದ ಅಮಲು ಕೊಲೆ, ರಕ್ತಪಾತದಿಂದ ತಡೆದಿದೆ. (ಆದುದರಿಂದ ಅವರನ್ನು ಹಾಗೆಯೇ ಬಿಟ್ಟು ಬಿಡಿರಿ)

ಇದುವೇ ನೈಜ ಕರ್ಮಶಾಸ್ತ್ರವಾಗಿದ್ದು, ಇದು ಧರ್ಮವಿಧಿ ಮತ್ತು ಆಜ್ಞೆಯನ್ನು ಯಾವುದೇ ಒಂದು ಸ್ಥಿತಿಗೆ ಮಾತ್ರ ಸೀಮಿತಗೊಳಿಸುವುದಿಲ್ಲ. ಬದಲಾಗಿ ನೈಜ ಉದ್ದೇಶದ ಕಡೆಗೆ ದೃಷ್ಟಿಯಿರಿಸುತ್ತದೆ.

ಇಂದು ಇಸ್ಲಾಮಿನ ವಕ್ತಾರರು ಭಿನ್ನಾಭಿಪ್ರಾಯಗಳ ವಿಷಯದಲ್ಲಿ ಮೃದು ನೀತಿ, ವಿಶಾಲತೆ ಮತ್ತು ಕ್ಷಮಾಗುಣವನ್ನು ಬೆಳೆಸಿಕೊಳ್ಳಬೇಕು. ಏಕೆಂದರೆ ಭಿನ್ನತೆಯು ಇಂದು ನಾವು ಇಸ್ಲಾಮಿ ರಾಷ್ಟ್ರಗಳಲ್ಲಿ ಕಾಣುವಂತೆ ಶರೀಅತ್‌ನ ಆದೇಶಗಳ ಭಿನ್ನತೆಗಳಲ್ಲ. ಬದಲಾಗಿ ಕಾಲ ಮತ್ತು ಪರಿಸ್ಥಿತಿಗೆ ಸಂಬಂಧಿಸಿದ ಅವಲೋಕನ, ಅನುಭವ, ಜ್ಞಾನ ಮತ್ತು ವೈಚಾರಿಕ ಭಿನ್ನತೆಗಳಾಗಿವೆ. ಇದನ್ನು ಕರ್ಮಶಾಸ್ತ್ರದ ಭಾಷೆಯಲ್ಲಿ 'ತಹ್ಕೀಕುಲ್ ಮುನಾತ್' ಎಂದು ಹೇಳಲಾಗುತ್ತದೆ.

ಉದಾ: ಕೆಡುಕನ್ನು ಬಲಪ್ರಯೋಗದಿಂದ ತಡೆಯಬಲ್ಲ ಮತ್ತು ಉಚ್ಚಾಟಿಸಬಲ್ಲ ವ್ಯಕ್ತಿಯೊಬ್ಬನು ಅದರಿಂದ ತನ್ನ ಪ್ರಾಣಕ್ಕೆ ಅಪಾಯವಿಲ್ಲದಿದ್ದರೆ, ಅವನಿಗೆ ಅದರಿಂದ ಯಾವುದೇ ದೊಡ್ಡ ನಷ್ಟವಿಲ್ಲದಿದ್ದರೆ, ಅವನಿಗೆ ನಿರೀಕ್ಷಿತ ಲಾಭಕ್ಕಿಂತ ಧಾರ್ಮಿಕ ಹಾನಿಯ ಅಪಾಯವಿಲ್ಲದಿದ್ದರೆ ಅಥವಾ ಅವನಿಗೆ ಅದಕ್ಕಿಂತ ದೊಡ್ಡ ಕೆಡುಕು ಉಂಟಾದೀತೆಂಬ ಭೀತಿಯಿಲ್ಲದಿದ್ದರೆ ಅವನು ಹಿಂಜರಿಯದೆ ಆ ಕೆಡುಕನ್ನು ಬಲ ಪ್ರಯೋಗದಿಂದ ತಡೆಗಟ್ಟುವುದು ಅವನ ಕಡ್ಡಾಯ ಕರ್ತವ್ಯವಾಗಿದೆ. ಒಂದು ವೇಳೆ ಅವನಲ್ಲಿ ಶಕ್ತಿಯಿಲ್ಲದಿದ್ದರೆ ನಾಲಗೆ ಮತ್ತು ಲೇಖನಿಯ ಮೂಲಕ ಅವರ ವಿರುದ್ಧ ಧ್ವನಿಯೆತ್ತಬೇಕು. ಅಷ್ಟೂ ಶಕ್ತಿಯಿಲ್ಲದಿದ್ದರೆ ಮನಸ್ಸಿನಲ್ಲಿ ಅದನ್ನು ಕೆಡುಕೆಂದು ಭಾವಿಸಬೇಕು. ಇದು ಈಮಾನ್‌ನ ಅತ್ಯಂತ ದುರ್ಬಲ ಅವಸ್ಥೆಯಾಗಿದೆ.

ಈ ಮೂಲಭೂತ ವಿಷಯದಲ್ಲಿ ಇಸ್ಲಾಮಿನ ವಕ್ತಾರರ ನಡುವೆ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಭಿನ್ನಾಭಿಪ್ರಾಯವಿರುವುದಾದರೆ- ಕೆಡುಕನ್ನು ಬಲವಂತವಾಗಿ ಅಳಿಸಬೇಕಾದರೆ ಅದರ ಶರ್ತಗಳೇನು ಎಂಬ ವಿಷಯದಲ್ಲಿ ಒಬ್ಬ ವ್ಯಕ್ತಿ ಅಥವಾ ಒಂದು ಗುಂಪು ಆ ಶರ್ತವನ್ನು ಪೂರೈಸಬಲ್ಲುದೆ ಎಂಬ ಕುರಿತು ಮಾತ್ರ. ಈ ಪ್ರಶ್ನೆಗೆ ಉತ್ತರ ಹುಡುಕುವುದರಲ್ಲಿ ವೈಚಾರಿಕ ಭಿನ್ನತೆಯುಂಟಾಗುತ್ತದೆ.

ಒಂದು ಗುಂಪು ತನ್ನ ಶಕ್ತಿಯ ಬಗ್ಗೆ ಉತ್ಪ್ರೇಕ್ಷೆ ತಾಳುತ್ತದೆ. ತಾನು ಕೆಡುಕನ್ನು ಬಲಪ್ರಯೋಗದಿಂದ ಅಳಿಸಬಲ್ಲೆನೆಂದು ಭಾವಿಸುತ್ತದೆ. ಏಕೆಂದರೆ ಯಾವುದೋ ಒಂದು ಸಂದರ್ಭದಲ್ಲಿ ಅದು ಮದ್ಯದಂಗಡಿಗಳನ್ನು ಪುಡಿಪುಡಿ ಮಾಡಿತ್ತು ಅಥವಾ ನೃತ್ಯ ಗಾಯನ ಕಚೇರಿ ನಡೆಯಗೊಟ್ಟಿರಲಿಲ್ಲ. ಆದರೆ ಅದರ ಈ ಕಾರ್ಯಾಚರಣೆಯಿಂದ ಸಣ್ಣ ಮದ್ಯದಂಗಡಿಗಳ ಸ್ಥಳದಲ್ಲಿ ದೊಡ್ಡದೊಡ್ಡ ಬಾರ್‌ಗಳು ತಲೆಯೆತ್ತಿದವು, ಅವುಗಳಲ್ಲಿ ದಿನಂಪ್ರತಿ ಕ್ಯಾಬರೆ-ಡ್ಯಾನ್ಸ್‌ಗಳು ಜರಗುತ್ತಿರುತ್ತವೆ. ಈ ತಂಡಕ್ಕೆ, ಅದನ್ನು ಅಳಿಸುವ ಶಕ್ತಿಯಿಲ್ಲವೆಂಬುದನ್ನು ಅಂದಾಜಿಸಿರುವುದಿಲ್ಲ.

ಇದಕ್ಕೆ ತದ್ವಿರುದ್ಧವಾಗಿ ಇನ್ನೊಂದು ವರ್ಗವು ತನ್ನನ್ನು, ತನಗೆ ಪ್ರಾಪ್ತವಾಗಿರುವ ಶಕ್ತಿಗಿಂತ ಬಹಳ ದುರ್ಬಲವೆಂದು ಭಾವಿಸುತ್ತದೆ. ಎಷ್ಟೆಂದರೆ ಬಾಯಿ ಮಾತಿನ ಮೂಲಕವೂ ಕೆಡುಕನ್ನು ವಿರೋಧಿಸುವಷ್ಟು ಧೈರ್ಯ, ಸಂಕಲ್ಪ ಮತ್ತು ಸಾಮರ್ಥ್ಯವನ್ನು ಹೊಂದಿಲ್ಲವೆಂದು ಅದು ಭಾವಿಸುತ್ತದೆ.

ಈ ಎರಡೂ ವರ್ಗಗಳ ಮಧ್ಯೆ ಮೂರನೆಯ ಒಂದು ವರ್ಗವಿದೆ. ಈ ಮಧ್ಯಮ ವರ್ಗವು ವಿಷಯದ ಎಲ್ಲ ಮುಖಗಳನ್ನೂ ಅವಲೋಕಿಸುತ್ತದೆ. ಅದರ ಒಳಿತು ಕೆಡುಕುಗಳನ್ನು ಪರಾಮರ್ಶಿಸುತ್ತದೆ. ಲಾಭ ನಷ್ಟಗಳ ಕೋಷ್ಟಕ ತಯಾರಿಸಿ ಕೆಡುಕಿನ ಉಚ್ಚಾಟನೆಯಿಂದ ಇಸ್ಲಾಮಿನ ವಕ್ತಾರರಿಗೆ ಹಾಗೂ ಒಟ್ಟು ಇಸ್ಲಾಮಿಗೆ ಪ್ರಯೋಜನವಾಯಿತೇ ಅಥವಾ ಹಾನಿಯಾಯಿತೇ ಎಂದು ನೋಡುತ್ತದೆ. ಸ್ಥಿತಿಗತಿಗಳು ತನಗೆ ಅನುಕೂಲವಾಗಿದೆಯೇ ಅಥವಾ ಪ್ರತಿಕೂಲವಾಗಿದೆಯೇ? ಇಸ್ಲಾಮಿನ ಮತ್ತು ಮುಸ್ಲಿಮ್ ಜನಸಾಮಾನ್ಯರ ನಿರೀಕ್ಷೆಯ ಕೇಂದ್ರವಾಗಿದೆಯೇ ಅಥವಾ ತಿರಸ್ಕಾರ ಯೋಗ್ಯವಾಗಿದೆಯೇ ಎಂದು ನೋಡಿದ ನಂತರವೇ ನಾವೀಗ ಯಾವ ಹಂತದಲ್ಲಿದ್ದೇವೆ ಎಂದು ತೀರ್ಮಾನಿಸುತ್ತದೆ.

ಕೆಲವು ಪ್ರಾಮಾಣಿಕ ವ್ಯಕ್ತಿಗಳು, ನಾವು ನವೀನಾಚಾರಿ (ಬಿದ್‌ಅತ್)ಗಳೊಂದಿಗೆ ಸಹಕರಿಸುವುದಾದರೂ ಹೇಗೆ? ಅವರ ನವೀನಾಚಾರಗಳನ್ನು ಹೇಗೆ ಮತ್ತು ಯಾಕೆ ಕಡೆಗಣಿಸಬೇಕು. ಅಲ್ಲಾಹನು ನವೀನಾಚಾರಿಗಳೊಂದಿಗೆ ಸಂಬಂಧ ಕಡಿಯಬೇಕೆಂದು ಆದೇಶಿಸಿಲ್ಲವೆ! ಎಂದು ಸಂದೇಹ ವ್ಯಕ್ತಪಡಿಸುತ್ತಾರೆ.

ಈ ಸಂದೇಹಕ್ಕೆ ಉತ್ತರವೇನೆಂದರೆ, ಎಲ್ಲ ಬಿದ್‌ಅತ್‌ಗಳೂ ಒಂದೇ ರೀತಿಯವುಗಳಲ್ಲ. ಅವುಗಳಲ್ಲೂ ಹಂತಗಳಿವೆ. ಕೆಲವು ಬಿದ್‌ಅತ್‌ಗಳು ಅದನ್ನು ಆಚರಿಸುವವರನ್ನು ಸ್ಪಷ್ಟ ಕುಫ್ರ್‌ನೆಡೆಗೆ ಒಯ್ಯುತ್ತವೆ. ಆದರೆ ಎಲ್ಲವೂ ಹಾಗಿಲ್ಲ. ಕೆಲವು ಸ್ಪಷ್ಟ ಬಿದ್‌ಅತ್‌ಗಳಿವೆ. ಅವು ಬಿದ್‌ಅತ್‌ಗಳೆಂಬ ಬಗ್ಗೆ ಸಮುದಾಯದ ಬಹುಸಂಖ್ಯಾತರ ಒಮ್ಮತವಿದೆ. ಕೆಲವು ಬಿದ್‌ಅತ್‌ಗಳ ಬಗ್ಗೆ ವಿದ್ವಾಂಸರ ಮಧ್ಯೆ ಭಿನ್ನಾಭಿಪ್ರಾಯಗಳಿವೆ.

ಅದೇ ರೀತಿ ನವೀನಾಚಾರಿಗಳಲ್ಲೂ ವಿವಿಧ ಸ್ತರದವರಿದ್ದಾರೆ. ಕೆಲವರು ಬಿದ್‌ಅತ್‌ಗೆ ಅಂಟಿಕೊಂಡು ಅದರಂತೆ ನಡೆಯುವವರಾಗಿದ್ದಾರೆ. ಇನ್ನು ಕೆಲವರು ಬಿದ್‌ಅತ್‌ಗಳನ್ನು ಕಂಡು ಹಿಡಿದವರೂ ಅದರ ಪ್ರಚಾರಕರೂ ಆಗಿರುತ್ತಾರೆ.

ಇವರೆಲ್ಲರ ವಿಷಯದಲ್ಲಿ ಒಂದೇ ರೀತಿಯಲ್ಲಿ ವರ್ತಿಸುವುದು ಯುಕ್ತಿಗೆ ವಿರುದ್ಧವಾಗಿದೆ.

ಮಾತ್ರವಲ್ಲ ಎರಡು ಕೆಡುಕುಗಳಲ್ಲಿ ಸಣ್ಣದನ್ನು ಸ್ವೀಕರಿಸಬಹುದೆಂಬ ಶರೀಅತ್‌ನ ತತ್ವಕ್ಕೂ ಇದು ವಿರುದ್ಧವಾಗಿದೆ.

ಆದುದರಿಂದ ಬಿದ್‌ಅತ್‌ನ ಪ್ರಚಾರಕರಿಗಿಂತ ಬಿದ್‌ಅತ್ ಎಸಗುವವರೊಂದಿಗೆ ಸಹಕರಿಸುವುದು ಧರ್ಮಸಮ್ಮತವಾಗಿದೆ. ಅಷ್ಟೇ ಅಲ್ಲ, ಉಗ್ರ ಪಕ್ಷಪಾತಿ ಸತ್ಯನಿಷೇಧಿಗಿಂತ ನಿಷ್ಪಕ್ಷಪಾತಿ ಸತ್ಯನಿಷೇಧಿಯೊಂದಿಗೆ ಸಹಕಾರ, ಮೈತ್ರಿ ಧರ್ಮಸಮ್ಮತ ಮಾತ್ರವಲ್ಲ ಅದು ಅಗತ್ಯವೂ ಆಗಿದೆ. ಪ್ರವಾದಿ(ಸ) ಅವರು ಹುದೈಬಿಯಾ ಸಂಧಿಯ ನಂತರ ಕುರೈಶರ ವಿರುದ್ಧ ಬನೂ ಖಿಝಾಅ ಗೋತ್ರದವರೊಂದಿಗೆ ಮೈತ್ರಿ ಒಪ್ಪಂದ ಮಾಡಿದ್ದರು.

ಇರಾನೀಯರು ಮತ್ತು ರೋಮನರು ಯುದ್ಧಮಾಡಿ ಇರಾನಿಯರು ರೋಮನರನ್ನು ಸೋಲಿಸಿ, ಸಿರಿಯಾ ಮತ್ತು ಫೆಲೆಸ್ತೀನ್‌ನ ಪ್ರದೇಶಗಳನ್ನು ವಶಪಡಿಸಿಕೊಂಡಾಗ ಮಕ್ಕಾದ ಸತ್ಯನಿಷೇಧಿಗಳು ಸಂಭ್ರಮದಿಂದ ಕುಣಿದಾಡಿದರು. ಆದರೆ ಮುಸ್ಲಿಮರು ಕಳವಳಗೊಂಡರು. ಏಕೆಂದರೆ ಇರಾನೀಯರ ಜಯವು ತಮಗೆ ಹಿತಕಾರಿಯೆಂದು ಮಕ್ಕಾದ ಸತ್ಯನಿಷೇಧಿಗಳು ಭಾವಿಸಿದ್ದರು. ಮುಸ್ಲಿಮರ ದೃಷ್ಟಿಯಲ್ಲಿ ಇರಾನೀಯರ ವಿಜಯವು ಇಸ್ಲಾಮ್ ಮತ್ತು ಮುಸ್ಲಿಮರ ಹಿತಾಸಕ್ತಿಗೆ ವಿರುದ್ಧವಾಗಿದ್ದು ಅದು ಅವರ ದೌತ್ಯ ನಿರ್ವಹಣೆಗೆ ಅಡ್ಡಿಯಾಗುತ್ತಿತ್ತು. ಅದೇ ಸಂದರ್ಭದಲ್ಲಿ ಸೂರಃ ಅರ್ರೂಮ್‌ನ ಪ್ರಥಮ ಐದು ಸೂಕ್ತಗಳು ಅವತೀರ್ಣಗೊಂಡವು. ಅದರಲ್ಲಿ ಅಲ್ಲಾಹನು, ಕೆಲವೇ ವರ್ಷಗಳಲ್ಲಿ ರೋಮನರು ಪುನಃ ಜಯಗಳಿಸುವರೆಂಬ ವಾರ್ತೆಯನ್ನು ಮುಸ್ಲಿಮರಿಗೆ ನೀಡಿದನು. ಮಕ್ಕಾದ ಸತ್ಯನಿಷೇಧಿಗಳು ಈ ಸೂಕ್ತಗಳ ಪರಿಹಾಸ್ಯ ಮಾಡಿದರು. ಉಬೈಬಿನ್ ಖಿಲಫ್ ಹ. ಅಬೂಬಕರ್(ರ) ರವರೊಂದಿಗೆ ಹತ್ತು ವರ್ಷಗಳೊಳಗೆ ರೋಮನರು ಗೆದ್ದು ಇರಾನೀಯರು ಸೋತರೆ ನಾನು ನಿಮಗೆ 100 ಒಂಟೆಗಳನ್ನು ನೀಡುವೆನು. ಅನ್ಯಥಾ ನೀವು 100 ಒಂಟೆಗಳನ್ನು ಕೊಡಬೇಕು ಎಂದು ಪಂಥಾಹ್ವಾನ ಒಡ್ಡಿದನು. ಹ.ಅಬೂಬಕರ್(ರ) ಈ ಶರ್ತವನ್ನು ಒಪ್ಪಿದರು. ನಿಗದಿತ ಅವಧಿಯೊಳಗೆ ಅಲ್ಲಾಹನ ಅನುಜ್ಞೆಯಂತೆ ರೋಮನರು ಗೆದ್ದರು, ಇರಾನೀಯರು ಸೋತರು. ಆಗ ಹ. ಅಬೂಬಕರ್(ರ) ಪ್ರವಾದಿವರ್ಯರ(ಸ) ಅನುಮತಿಯಿಂದ 100 ಒಂಟೆಗಳನ್ನು ಪಡೆದು ಅವುಗಳನ್ನು ದಾನ ಮಾಡಿದರು. ಆ ಸೂಕ್ತಗಳು ಹೀಗಿವೆ:

ಅಲಿಫ್, ಲಾಮ್, ಮೀಮ್, ರೋಮನರು ಸಮೀಪದ ಭೂಭಾಗದಲ್ಲಿ ಪರಾಜಿತರಾದರು ಮತ್ತು ತಮ್ಮ ಈ ಪರಾಜಯದ ಬಳಿಕ ಕೆಲವೇ ವರ್ಷಗಳಲ್ಲಿ ಅವರು ವಿಜಯಿಗಳಾಗುವರು. ಹಿಂದೆಯೂ ಇನ್ನು ಮುಂದೆಯೂ ಅಲ್ಲಾಹನದೇ ಪ್ರಭುತ್ವವಿದೆ. ಆ ದಿನವು ಅಲ್ಲಾಹ್ ದಯಪಾಲಿಸಿದ ವಿಜಯಕ್ಕಾಗಿ ಮುಸ್ಲಿಮರು ಸಂತೋಷವನ್ನಾಚರಿಸುವ ದಿನವಾಗಿರುವುದು. ಅಲ್ಲಾಹ್ ತಾನಿಚ್ಛಿಸಿದವರಿಗೆ ಸಹಾಯ ನೀಡುತ್ತಾನೆ ಮತ್ತು ಅವನು ಮಹಾ ಪ್ರಬಲನೂ ಕರುಣಾನಿಧಿಯೂ ಆಗಿರುತ್ತಾನೆ. (30: 1-5)

ಈ ಘಟನೆಯಿಂದ ತಿಳಿಯುವ ವಿಚಾರವೇನೆಂದರೆ ಕೆಲವು ಕುಫ್ರ್ (ಸತ್ಯನಿಷೇಧ) ಬಹಳ ಕಠೋರವಾಗಿರುತ್ತವೆ. ಇನ್ನು ಕೆಲವು ಕುಫ್ರ್ ಅಷ್ಟು ಕಠಿಣವಾಗಿರುವುದಿಲ್ಲ. ಮೃದುವಾಗಿರುತ್ತದೆ. ಕೆಲವು ಸತ್ಯನಿಷೇಧಿಗಳು ಮುಸ್ಲಿಮರೊಂದಿಗೆ ಕಠೋರ ಸತ್ಯನಿಷೇಧಿಗಳಿಗಿಂತ ಹತ್ತಿರವೂ

ಮೃದುನೀತಿ ಹೊಂದಿದವರೂ ಆಗಿರುತ್ತಾರೆ.

ಕಠೋರ ಸತ್ಯನಿಷೇಧಿಗಳ ಬದಲು ಮೃದು ಸ್ವಭಾವದ ನಿಷೇಧಿಗಳ ಪ್ರಾಬಲ್ಯವನ್ನು ಇಸ್ಲಾಮ್ ಮತ್ತು ಮುಸ್ಲಿಮರ ಹಿತದೃಷ್ಟಿಯಿಂದ ಸ್ವಲ್ಪ ಸಮಯದ ಮಟ್ಟಿಗೆ ಸಹಿಸಿಕೊಳ್ಳಬಹುದು. ಅದನ್ನು ಬೆಂಬಲಿಸಬಹುದು. ಅಗತ್ಯ ಬಿದ್ದರೆ ಕಠೋರ ಸತ್ಯನಿಷೇಧಿಗಳನ್ನು ಸೋಲಿಸಲಿಕ್ಕಾಗಿ ಮೃದು ಸ್ವಭಾವದ ನಿಷೇಧಿಗಳೊಂದಿಗೆ ಮೈತ್ರಿ ಒಪ್ಪಂದವನ್ನೂ ಮಾಡಿಕೊಳ್ಳಬಹುದು.

ಮುಸ್ಲಿಮನನ್ನು ಕಾಫಿರನೆಂದು ಕರೆಯುವುದು

ಮುಸ್ಲಿಮರ ಒಗ್ಗಟ್ಟನ್ನು ಮುರಿಯುವ, ಅವರನ್ನು ವಿವಿಧ ವರ್ಗ-ಪಂಗಡಗಳಾಗಿ ವಿಭಜಿಸುವ ಮತ್ತು ಅವರನ್ನು ತುಚ್ಛರನ್ನಾಗಿಯೂ ಮೌಲ್ಯಹೀನರನ್ನಾಗಿಯೂ ಮಾಡುವ ವಿಷಯದಲ್ಲಿ ಅತ್ಯಂತ ಹಿರಿಯ ಪಾತ್ರ ವಹಿಸಿರುವುದು ಅವರು ಪರಸ್ಪರರನ್ನು ಕಾಫಿರ್ ಎಂದು ಕರೆಯುವುದಾಗಿದೆ. ವಸ್ತುತಃ ಸತ್ಯವಿಶ್ವಾಸಿಯನ್ನು ಕಾಫಿರ್ ಎಂದು ಕರೆಯುವುದನ್ನು ಪ್ರವಾದಿ(ಸ) ಕಟುವಾಗಿ ನಿಷೇಧಿಸಿರುವರು.

ಪ್ರವಾದಿ(ಸ) ಹೇಳಿದರು- ಒಬ್ಬನು ತನ್ನ ಮುಸ್ಲಿಮ್ ಸಹೋದರನನ್ನು, ಓ ಕಾಫಿರನೆ? ಎಂದು ಕರೆದರೆ ಇಬ್ಬರ ಪೈಕಿ ಒಬ್ಬನು ಖಂಡಿತ ಕಾಫಿರನಾದನು. ಕಾಫಿರ್ ಎಂದು ಯಾರನ್ನು ಕರೆಯಲಾಗಿತ್ತೋ ಅವರು ಕಾಫಿರನಲ್ಲದಿದ್ದರೆ ಕಾಫಿರ್ ಎಂದು ಕರೆದವನು ಕುಫ್ರ್ ಮಾಡಿದನು. (ಮುತ್ತಫಕುನ್ ಅಲೈಹಿ- ಅಬ್ದುಲ್ಲಾ ಬಿನ್ ಉಮರ್(ರ)

ಪ್ರವಾದಿ(ಸ) ಹೇಳಿದರು- ಒಬ್ಬನು ಇನ್ನೊಬ್ಬ ಮುಸ್ಲಿಮನನ್ನು ಕಾಫಿರ್ ಅಥವಾ ಅಲ್ಲಾಹನ ವೈರಿಯೆಂದು ಕರೆದರೆ ಮತ್ತು ಅವನು ಹಾಗಿಲ್ಲದಿದ್ದರೆ ಕರೆಯುವವನು ಕಾಫಿರನಾದನು. (ಮುತ್ತಫಕ್ ಅಲೈಹಿ- ಅಬೂದರ್(ರ))

ಪ್ರವಾದಿ(ಸ) ಹೇಳಿದರು- ಒಬ್ಬನು ಇನ್ನೊಬ್ಬ ಸತ್ಯವಿಶ್ವಾಸಿಯ ಮೇಲೆ ಕುಫ್ರ್ ಆರೋಪಿಸಿದರೆ ಅವನು ಅವನನ್ನು ಕೊಂದಂತೆ. (ಮುತ್ತಫಕ್ ಅಲೈಹಿ)

ಆದುದರಿಂದ ಇಸ್ಲಾಮೀ ನವ ಜಾಗೃತಿಯ ವಾಹಕರು 'ಲಾಇಲಾಹ ಇಲ್ಲಲ್ಲಾಹ್' ಎಂದು ಹೇಳುವ ಯಾರನ್ನೂ ಕಾಫಿರ್ ಎಂದು ಹೇಳಲೇ ಬಾರದು. ಏಕೆಂದರೆ ಯಾರು 'ಲಾಇಲಾಹ ಇಲ್ಲಲ್ಲಾಹ್' ಎಂದು ಹೇಳಿದನೋ ಅವನು ತನ್ನ ಪ್ರಾಣ, ಸೊತ್ತು ಮತ್ತು ಮಾನವನ್ನು ಕಾಪಾಡಿದನು. ಅವನ ಲೆಕ್ಕಾಚಾರವು ಅಲ್ಲಾಹನ ಹೊಣೆಯಾಗಿದೆ ಎಂದು ಅಧಿಕೃತ ಹದೀಸ್‌ಗಳಿಂದ ತಿಳಿದು ಬರುತ್ತದೆ. ಲೆಕ್ಕಾಚಾರವು ಅಲ್ಲಾಹನ ಹೊಣೆಯಾಗಿದೆ ಎಂದರೆ ನಾವು ಅವನ ಬಾಹ್ಯ ಮಾತನ್ನು ನಂಬಿ ಅವನ ಬಗ್ಗೆ ತೀರ್ಮಾನಿಸುವೆವು. ಅವನ ಅಂತರಂಗದ ವಿಷಯವನ್ನು ಅಲ್ಲಾಹನಿಗೆ ಬಿಟ್ಟು, ಬಿಡುವೆವು.

ಉಸಾಮ ಬಿನ್ ಝೈದ್(ರ) ಒಂದು ಯುದ್ಧದ ವೇಳೆ 'ಲಾಇಲಾಹ್ ಇಲ್ಲಲ್ಲಾಹ್' ಎಂದು ಉಚ್ಚರಿಸಿದ ಒಬ್ಬ ವ್ಯಕ್ತಿಯನ್ನು ಆತ ತನ್ನ ಪ್ರಾಣವುಳಿಸಲಿಕ್ಕಾಗಿ ಹಾಗೆ ಹೇಳಿದನೆಂದು ಭಾವಿಸಿ ಕೊಂದು ಬಿಟ್ಟರು. ಆದರೆ ಪ್ರವಾದಿ(ಸ) ಈ ವಿಷಯವನ್ನು ತಿಳಿದಾಗ ಉಸಾಮರ

ಮೇಲೆ ಕೆಂಡ ಕಾರಿದರು. 'ನೀನು ಅವನ ಮನಸ್ಸನ್ನು ಸೀಳಿ ನೋಡಿದೆಯಾ?' ಎಂದು ಕೇಳಿದರು.

ನಾವು ಪ್ರವಾದಿ(ಸ) ಹಾಕಿ ಕೊಟ್ಟ ಮೇರೆಯನ್ನು ಕಾಪಾಡಿಕೊಳ್ಳಬೇಕು, ಯಾವ ಅವಸ್ಥೆಯಲ್ಲೂ ಅದನ್ನು ಮುರಿಯಬಾರದು. ಮುಸ್ಲಿಮರ ಪಾಪಗಳ ಮತ್ತು ಕರ್ಮಭ್ರಷ್ಟತೆಯ ಕಾರಣ ಅವರನ್ನು ಎಂದೆಂದಿಗೂ ಕಾಫಿರ್ ಎಂದು ಹೇಳಬಾರದೆಂದು ಇದರಿಂದ ಸ್ಪಷ್ಟವಾಗುತ್ತದೆ. ಏಕೆಂದರೆ ಹ. ಅನಸ್(ರ) ಹೇಳುವ ಪ್ರಕಾರ ಪ್ರವಾದಿ(ಸ) ಹೇಳಿದರು-

ಮೂರು ವಿಷಯಗಳು ಸತ್ಯವಿಶ್ವಾಸದ ಮೂಲದಲ್ಲಿ ಸೇರಿದೆ- ಸತ್ಯವಿಶ್ವಾಸಿಯ ಮೇಲೆ ಕೈಯೆತ್ತದಿರುವುದು, ಪಾಪದ ಕಾರಣ ಆತನನ್ನು ಕಾಫಿರ್ ಎಂದು ಕರೆಯದಿರುವುದು ಮತ್ತು ದುಷ್ಕರ್ಮಗಳಿಗಾಗಿ ಆತನನ್ನು ಇಸ್ಲಾಮಿನಿಂದ ಭ್ರಷ್ಟಗೊಳಿಸದಿರುವುದು.

(ಅಬೂ ದಾವೂದ್, ಕಿತಾಬುಲ್ ಜಿಹಾದ್)

ಇನ್ನೊಂದು ಹದೀಸ್‌ನಲ್ಲಿ ಪ್ರವಾದಿ(ಸ) ಹೇಳಿದರು- 'ಲಾಇಲಾಹ ಇಲ್ಲಲ್ಲಾಹ್' ಎಂದು ಉಚ್ಚರಿಸಿದರೆ ಸಾಕು. ನೀವು ಅವರ ಪಾಪಗಳಿಂದಾಗಿ ಅವರನ್ನು ಕಾಫಿರ್ ಎಂದು ಕರೆಯಬೇಡಿರಿ. ಯಾರು ಅವರನ್ನು ಕಾಫಿರ್ ಎನ್ನುವರೋ ಅವರು ಅವರಿಗಿಂತ ಕುಫ್ರ್‌ಗೆ ಹತ್ತಿರವಾಗಿದ್ದಾರೆ.

(ತಬ್ರಾನೀ ಫಿಲ್‌ಕಬೀರ್)

ಇಮಾಮ್ ಶಾಫಿಈ(ರ) ಹೀಗೆ ಹೇಳುತ್ತಾರೆ- ಒಬ್ಬನ ವಾಕ್ಯ ಅಥವಾ ಪದಗಳಿಂದ ಕುಫ್ರ್ ಪ್ರಕಟವಾಗುತ್ತದಾದರೂ ಅವನ ಇಂಗಿತವು ನಾವು ಭಾವಿಸಿದುದೇ ಆಗಿದೆಯೆಂಬುದು ದೃಢಗೊಳ್ಳುವ ವರೆಗೆ ಅವನನ್ನು ಕಾಫಿರ್ ಎಂದು ಹೇಳಬಾರದು.

(ಈಸಾರುಲ್ ಹಕ್ ಅಲಲ್ ಖಲ್ಕ್, ಪು: 392, 394)

ಆದರೆ ಇಂದಿನ ಮುಸ್ಲಿಮರ ಪರಿಸ್ಥಿತಿಯೇನೆಂದರೆ, ಅವರು ಮೊದಲು ಇತರರ ಪದಗಳಿಗೆ ತಮ್ಮದೇ ಅರ್ಥವನ್ನು ಸೇರಿಸಿ ಅನಂತರ ಅವರಿಗೆ ಪಥಭ್ರಷ್ಟ, ಕಾಫಿರ್ ಎಂಬಿತ್ಯಾದಿ ಫತ್ವಾ ನೀಡುತ್ತಾರೆ. ಆ ಪದಗಳಿಗೆ ಅವರು ನೀಡುವ ಅರ್ಥವನ್ನು, ಹೇಳಿದವನು ಎಷ್ಟೇ ನಿರಾಕರಿಸಿದರೂ ಸರಿ. ಇನ್ನೂ ಮುಂದುವರಿದು, ಇಂದು ಉಪಖಂಡದಲ್ಲಿ ನಡೆಯುವ ಆಟವೇನೆಂದರೆ ಒಂದು ವರ್ಗವು ಇನ್ನೊಂದನ್ನು ಪಥಭ್ರಷ್ಟರು, ದಾರಿಗೆಟ್ಟವರು ಮತ್ತು ಕಾಫಿರರು ಎಂದು ಸಾರಲಿಕ್ಕಾಗಿ ಅವರ ವಾಕ್ಯಗಳನ್ನೇ ತಿರುಚಿ, ಅವುಗಳನ್ನು ಅದರ ಹಿನ್ನೆಲೆಯಿಂದ ಕಳಚಿ, ಅವುಗಳಿಗೆ ತೇಪೆ ಹಚ್ಚಿ ತಮ್ಮದೇ ಅರ್ಥವನ್ನು ಸೇರಿಸಿ ಬಿಡುತ್ತಾರೆ. 'ಅಸಂಭವನೀಯ'ದಿಂದ 'ಅ'ವನ್ನು ತೆಗೆದು 'ಸಂಭವನೀಯ' ಮಾಡಿ ಬಿಡುತ್ತಾರೆ. ಈ ಬಗ್ಗೆ ಎಷ್ಟೇ ಸ್ಪಷ್ಟೀಕರಣ ನೀಡಿದರೂ, ಪದೇ ಪದೇ ಮನವಿ ಮಾಡಿದರೂ ಅವರು ತಮ್ಮ ತಪ್ಪನ್ನು ಒಪ್ಪಿಕೊಳ್ಳುವುದೂ ಇಲ್ಲ. ಫತ್ವಾವನ್ನು ಹಿಂತೆಗೆಯುವುದೂ ಇಲ್ಲ.

ಖವಾರಿಜ್‌ಗಳು ಪಥಭ್ರಷ್ಟರೆಂಬ ಬಗ್ಗೆ ಸ್ಪಷ್ಟ ಆಧಾರವಿದೆ. ಸಹಾಬಿಗಳು, ತಾಬಿಈಗಳು ಮತ್ತು ಇಮಾಮರುಗಳು ಈ ವಿಷಯದಲ್ಲಿ ಒಮ್ಮತ ಹೊಂದಿದ್ದಾರೆ. ಹ.ಅಲೀ (ರ) ಅವರು ತಮ್ಮ ಕಾಲದಲ್ಲಿ ಅವರೊಂದಿಗೆ ಯುದ್ಧ ಮಾಡಿದ್ದಾರೆ. ಆದರೂ ಅವರನ್ನು ಎಲ್ಲರೂ ಮುಸ್ಲಿಮರೆಂದೇ ಪರಿಗಣಿಸಿದ್ದಾರೆ. ಯಾರೂ ಅವರನ್ನು ಕಾಫಿರ್ ಎಂದು ಹೇಳಲಿಲ್ಲ.

ಸಹಾಬಿಗಳು ಮತ್ತು ಪೂರ್ವ ಕಾಲದ ವಿದ್ವಾಂಸರು ಖವಾರಿಜ್ ನಂತಹ ಪಥಭ್ರಷ್ಟ

ಪಂಗಡವನ್ನು ಕಾಫಿರ್ ಎಂದು ಹೇಳದಿರುವಾಗ 'ಲಾಇಲಾಹ ಇಲ್ಲಲ್ಲಾಹ್' ಎಂದು ಉಚ್ಚರಿಸುವ, ತಮ್ಮನ್ನು ಮುಸ್ಲಿಮರೆಂದು ಹೇಳುವ ಮತ್ತು ಬರೆಯುವ ಒಂದು ವರ್ಗವನ್ನು ಇನ್ನೊಂದು ವರ್ಗವು ಕಾಫಿರ್ ಎಂದು ಕರೆಯುವುದು ಧರ್ಮಸಮ್ಮತವಾಗುವುದಾದರೂ ಹೇಗೆ?

ಮುಸ್ಲಿಮರ ರಕ್ತ, ಸೊತ್ತು ಮತ್ತು ಮಾನ ಪರಸ್ಪರ ಹರಾಮ್ ಆಗಿದೆ. ಇದನ್ನು ಪ್ರವಾದಿ(ಸ) ಹಜ್ಜತುಲ್ ವಿದಾದ ಸಂದರ್ಭದಲ್ಲಿ ಈ ರೀತಿ ಹೇಳಿದ್ದಾರೆ-

"ನಿಮ್ಮ ರಕ್ತ, ನಿಮ್ಮ ಸೊತ್ತು ಮತ್ತು ನಿಮ್ಮ ಮಾನ ಪರಸ್ಪರರಿಗೆ ಈ ದಿನ, ಈ ತಿಂಗಳು ಮತ್ತು ಈ ನಗರ ಹರಾಮ್ ಆಗಿರುವಂತೆಯೇ ಹರಾಮ್ ಆಗಿದೆ."

ಮುಸ್ಲಿಮ್ ಎಂದರೆ ಯಾರೆಂಬುದನ್ನು ಪ್ರವಾದಿ(ಸ) ಈ ರೀತಿ ಸ್ಪಷ್ಟಪಡಿಸಿದ್ದಾರೆ-

"ನಮ್ಮಂತೆ ನಮಾಝ್ ಮಾಡುವ, ನಮ್ಮ ಕಿಬ್ಲಾವನ್ನು ಅಭಿಮುಖಿ ಕೇಂದ್ರವಾಗಿ ಮಾಡುವ ಮತ್ತು ನಾವು ದಿಬಹ್ ಮಾಡಿದ್ದನ್ನು ತಿನ್ನುವವನು ಮುಸ್ಲಿಮ್ ಆಗಿದ್ದಾನೆ. ಅಲ್ಲಾಹನೂ ಅವನ ಪ್ರವಾದಿಯೂ ಅವನ ಹೊಣೆ ವಹಿಸಿದ್ದಾರೆ".

ಸಹಾಬಿಗಳು ಜಮಲ್ ಮತ್ತು ಸಿಫ್ಫೀನ್ ಯುದ್ಧಗಳಲ್ಲಿ ಪರಸ್ಪರ ಕಾದಾಡಿದರು. ಆದರೂ ಅವರು ಎಲ್ಲರೂ ಮುಸ್ಲಿಮರೇ ಆಗಿದ್ದರು. ಈ ಯುದ್ಧಗಳಿಂದಾಗಿ ಅವರೆಂದೂ ದುಷ್ಟ ಗುಂಪುಗಾರಿಕೆಗೆ ಬಲಿ ಬೀಳಲಿಲ್ಲ. ತಮ್ಮ ಮಸೀದಿಗಳನ್ನು ಬೇರೆ ಬೇರೆ ಮಾಡಲಿಲ್ಲ. ಪರಸ್ಪರರನ್ನು ಪಥಭ್ರಷ್ಟರೆಂದೋ ಕಾಫಿರರೆಂದೋ ಕರೆಯಲಿಲ್ಲ.

ಪರಸ್ಪರ ಕಾದಾಡಿದರೂ, ಅಲ್ಲಾಹನು ಎರಡೂ ವಿಭಾಗದವರನ್ನು ಸತ್ಯವಿಶ್ವಾಸಿಗಳೆಂದೇ ಕರೆದನು. ಅದರಲ್ಲಿ ಒಂದು ವಿಭಾಗವು ಇನ್ನೊಂದರ ಮೇಲೆ ಅತಿಕ್ರಮವೆಸಗುತ್ತಿತ್ತು. ಸತ್ಯವಿಶ್ವಾಸಿಗಳ ಮತ್ತೊಂದು ವಿಭಾಗದವರಿಗೆ ಅಲ್ಲಾಹನು ಹೀಗೆ ಆಜ್ಞಾಪಿಸಿದನು- 'ನೀವು ನಿಮ್ಮ ಉಭಯ ಕಡೆಯ ಸಹೋದರರಿಗೆ ಸಹಾಯ ಮಾಡಿರಿ. ಉಭಯತರರ ನಡುವೆ ನ್ಯಾಯದೊಂದಿಗೆ ಸಂಧಾನ ಮಾಡಿಸಿರಿ. ಸಂಧಾನಕ್ಕೆ ಒಪ್ಪದ ಶಕ್ತಿಯೊಡನೆ ಸಂಧಾನಕ್ಕೆ ಸಿದ್ಧರಾಗುವ ತನಕ ಹೋರಾಡಿರಿ. ಉಭಯತರರೂ ಸಂಧಾನಕ್ಕೆ ಒಪ್ಪಿದರೆ ನೀವು ಅವರ ನಡುವೆ ನ್ಯಾಯಪೂರ್ಣವಾಗಿ ಸಂಧಾನ ಮಾಡಿ ಅವರನ್ನು ಪರಸ್ಪರ ಸಹೋದರರಾಗಿ ಮಾಡಿರಿ. ಇದರಿಂದಲೇ ಇಡೀ ಮುಸ್ಲಿಮ್ ಸಮುದಾಯವು ಅಲ್ಲಾಹನ ಅನುಗ್ರಹಕ್ಕೆ ಪಾತ್ರವಾದೀತು. ಆದರೆ ಪರಸ್ಪರ ಕಾದಾಡುವವರು ಸಂಧಾನ ಮಾಡದಿದ್ದರೆ ಮತ್ತು ಅಲಿಪ್ತರು ಉಭಯೇತರರ ನಡುವೆ ಸಂಧಾನ ಮಾಡಿಸದಿದ್ದರೆ, ಆಗ ಇಡೀ ಸಮುದಾಯವು ಅಲ್ಲಾಹನ ಅನುಗ್ರಹದಿಂದ ವಂಚಿತಗೊಳ್ಳುವುದು. ಅಲ್ಲಾಹನ ಕ್ರೋಧಕ್ಕೆ ಪಾತ್ರವಾಗುವುದು. ಏಕೆಂದರೆ ಅಲ್ಲಾಹನು ಅವನ ಧರ್ಮಕ್ಕಾಗಿ ಮತ್ತು ಅವನ ಸಂಪ್ರೀತಿಗಾಗಿ ಅವನ ಮಾರ್ಗದಲ್ಲಿ ಉಕ್ಕಿನ ಎರಕಹೊಯ್ದ ಗೋಡೆಯಂತೆ ಹೋರಾಡುವ ಸತ್ಯವಿಶ್ವಾಸಿಗಳನ್ನೇ ಪ್ರೀತಿಸುತ್ತಾನೆ.

ಆದುದರಿಂದ ಮುಸ್ಲಿಮರು ಚಿಕ್ಕಪುಟ್ಟ ವಿಷಯಗಳಿಗಾಗಿ ತಮ್ಮ ಮಸೀದಿಗಳನ್ನು ಬೇರೆ ಮಾಡಬಾರದು. ಜುಮಾ ಮತ್ತು ಸಾಮೂಹಿಕ ನಮಾಝ್‌ಗಳನ್ನು ಒಟ್ಟಾಗಿ ನಿರ್ವಹಿಸಬೇಕು. ಪರಸ್ಪರ ಮಿತ್ರರಾಗಬೇಕು. ದ್ವೇಷ, ಅಸೂಯೆಗಳನ್ನು ಬಿಡಬೇಕು. ಆದರೆ ಒಂದು ವಿಭಾಗವು

ಇನ್ನೊಂದು ವಿಭಾಗದಲ್ಲಿ ಯಾವುದಾದರೂ ತಪ್ಪು ಅಥವಾ ಪಥಭ್ರಷ್ಟತೆಯನ್ನು ಕಂಡರೆ ಅದರ ಸುಧಾರಣೆಗಾಗಿ ಗರಿಷ್ಠ ಪ್ರಯತ್ನಿಸಬೇಕು. ಆದರೂ ಅದರಲ್ಲಿ ವಿಫಲವಾದರೆ ತೀರ್ಮಾನವನ್ನು ಅಲ್ಲಾಹನಿಗೆ ಬಿಟ್ಟು ಬಿಡಬೇಕು. ಆದರೆ ಪ್ರಾರ್ಥನೆ ಮತ್ತು ಸುಧಾರಣಾ ಪ್ರಯತ್ನವನ್ನು ಕೈಬಿಡಬಾರದು. ಏಕೆಂದರೆ ಸಹಾಬಿಗಳೂ ಕೂಡಾ ನಿರ್ಬಂಧಿತಾವಸ್ಥೆಯಲ್ಲಿ ಕರ್ಮಭ್ರಷ್ಟರ ಮತ್ತು ಪಾಪಿಗಳ ಹಾಗೂ ಬಿದ್‌ಅತ್(ನವೀನಾಚಾರ)ಗಳನ್ನು ಮಾಡುವವರ ಹಿಂದೆ ನಮಾಝ್ ನಿರ್ವಹಿಸಿದ್ದಾರೆ. ನಮಾಝನ್ನು ಅವರು ಪುನರಾವರ್ತಿಸುತ್ತಿರಲಿಲ್ಲ.

ಅಲ್ಲಾಮಾ ಇಬ್ನುತೀಮಿಯ್ಯಾ ಅವರು ಹೀಗೆ ಹೇಳಿರುವರು- ಬಿದ್‌ಅತ್ ಮಾಡುವವರ ಹಿಂದೆ ನಮಾಝ್ ಸಿಂಧುವಾಗಿದೆ. ಆದುದರಿಂದ ನಾವು ಒಟ್ಟಾಗಿ ಜಮಾಅತ್‌ಸಹಿತ ನಮಾಝ್ ನಿರ್ವಹಿಸಬೇಕು. ಪರಸ್ಪರ ಅತಿರೇಕವೆಸಗುವುದರಿಂದ ಮತ್ತು ಕಾಫಿರ್ ಮಾಡುವುದರಿಂದ ಸದಾ ದೂರ ನಿಲ್ಲಬೇಕು. (ಫತಾವಾ ಇಬ್ನು ತೀಮಿಯ್ಯ ಭಾಗ: 3 ಪುಟ: 282, 287)

ಆದರೆ, ಅಲ್ಲಾಹನನ್ನು, ಪ್ರವಾದಿ(ಸ)ಯನ್ನು, ಸಹಾಬಿಗಳನ್ನು ಮತ್ತು ಸಲಫುಸ್ಸಾಲಿಹೀನ್ (ಪ್ರಾಚೀನ ವಿದ್ವಾಂಸರು)ರನ್ನು ಪ್ರೀತಿಸುತ್ತೇವೆ, ಅವರನ್ನು ಅನುಸರಿಸುತ್ತೇವೆ ಎಂದು ವಾದಿಸುವವರು ಇಂದು ಅವರ ಮಾರ್ಗವನ್ನು ಬಿಟ್ಟು ಪರಸ್ಪರ ಪಕ್ಷ ಪಂಗಡಗಳಾಗಿ ಹರಿಹಂಚಾಗಿದ್ದಾರೆ. ತಂತಮ್ಮ ಮಸೀದಿಗಳನ್ನು ಬೇರೆ ಮಾಡಿದ್ದಾರೆ. ನಮಾಝ್‌ನಲ್ಲಿ ಕೈ ಎತ್ತುವ, ಜೋರಾಗಿ ಆಮೀನ್ ಹೇಳುವ, ಪ್ರವಾದಿವರ್ಯರ ಮೇಲೆ ದರೂದ್ ಸಲಾಮ್ ಹೇಳುವ, ಇಕಾಮತ್ ಹೇಳುವಾಗ ನಿಲ್ಲುವ ಅಥವಾ ಕುಳಿತುಕೊಳ್ಳುವಂತಹ ಚಿಕ್ಕಪುಟ್ಟ ವಿಷಯಗಳಲ್ಲಿ ಒಬ್ಬ ಮುಸ್ಲಿಮನು ಇನ್ನೊಬ್ಬ ಮುಸ್ಲಿಮನ ಪ್ರಾಣ, ಸೊತ್ತು ಮತ್ತು ಮಾನವನ್ನು ತನ್ನ ಪಾಲಿಗೆ ಹಲಾಲ್ ಮಾಡಿಕೊಂಡಿದ್ದಾನೆ. ಪರಸ್ಪರ ಪರಿಹಾಸ್ಯ, ಮೂದಲಿಕೆ, ಕೆಟ್ಟ ಹೆಸರಿನಿಂದ ಕರೆಯುವುದು, ಕೆಟ್ಟ ಗುಮಾನಿಯಿರಿಸುವುದು, ಹುಳುಕು ಹುಡುಕುವುದು, ಗೂಢಾಲೋಚನೆ ಮಾಡುವುದು, ಚಾಡಿಹೇಳುವುದೇ ಮೊದಲಾದ ದುಷ್ಕೃತ್ಯಗಳನ್ನು ಒಬ್ಬನು ಇನ್ನೊಬ್ಬನ ವಿರುದ್ಧ ಯಾವುದೇ ಅಳುಕಿಲ್ಲದೆ, ಬಹಿರಂಗವಾಗಿ ಮಸೀದಿ, ಮಿಂಬರ್‌ಗಳಲ್ಲಿ ಮಾಡುತ್ತಿದ್ದಾನೆ. ಇದು ಅಲ್ಲಾಹನೂ ಆತನ ಪ್ರವಾದಿಯೂ ನಿಷೇಧಿಸಿರುವಂತಹ ಪಾಪಗಳಾಗಿವೆಯೆಂದಾಗಲಿ, ಈ ಪಾಪಗಳನ್ನು ತೊರೆಯದವರನ್ನು ಅಕ್ರಮಿ ಮತ್ತು ಕರ್ಮಭ್ರಷ್ಟರೆಂದು ಅವರು ಹೇಳಿರುವರೆಂದಾಗಲಿ, ಇದರಿಂದ ಇಸ್ಲಾಮ್ ಮತ್ತು ಮುಸ್ಲಿಮ್ ಸಮುದಾಯದ ಪ್ರತಿಷ್ಠೆ ಕುಗ್ಗುತ್ತದೆಯೆಂದಾಗಲಿ ಅವರಿಗೆ ಸ್ವಲ್ಪವೂ ಪ್ರಜ್ಞೆಯಿಲ್ಲ.

ಸಮುದಾಯದ ಒಗ್ಗಟ್ಟಿಗೆ ಅಗತ್ಯವಿರುವ ನೈತಿಕ ಗುಣಗಳು

ಸಮುದಾಯದ ಒಗ್ಗಟ್ಟನ್ನು ಕಾಪಾಡಬೇಕಾದುದು ಇಡೀ ಸಮುದಾಯದ ಕರ್ತವ್ಯವಾಗಿದೆ. ಪರಸ್ಪರ ಒಡಕು, ಭಿನ್ನತೆಗಳು ಬಹುದೊಡ್ಡ ಅಪರಾಧವೂ ಪಾಪವೂ ಆಗಿದೆ. ಒಡಕು ಭಿನ್ನತೆಗಳಿಂದ ಪಾರಾಗಲು ಮತ್ತು ಸಮುದಾಯ ಒಗ್ಗಟ್ಟು ಸಾಧಿಸುವ ಕರ್ತವ್ಯವನ್ನು ಪೂರೈಸಲು ವಿಚಾರ-ಕರ್ಮಗಳಲ್ಲಿ ಕೆಲವು ಗುಣಗಳು ಅಗತ್ಯವಾಗಿದೆ. ಅದರ ಹೊರತು ಅದು ತನ್ನ ಉದ್ದೇಶ

ಸಾಧನೆಯಲ್ಲಿ ಯಶಸ್ಸು ಕಾಣಲಾರದು.

ಈ ವರೆಗಿನ ಚರ್ಚೆಯಲ್ಲಿ ನಾವು ಸಮುದಾಯದ ಒಗ್ಗಟ್ಟಿಗಾಗಿ, ಪ್ರತಿಯೊಬ್ಬ ವ್ಯಕ್ತಿಯೂ ಅಗತ್ಯವಾಗಿ ತನ್ನ ಶಕ್ತ್ಯಾನುಸಾರ ಪಾಲಿಸಬೇಕಾದ ವೈಚಾರಿಕ ಮತ್ತು ಕರ್ಮಪರವಾದ ಗುಣಗಳನ್ನು ಸ್ಪಷ್ಟಪಡಿಸಲು ಪ್ರಯತ್ನಿಸಿದ್ದೇವೆ. ಅವುಗಳ ಅಭಾವದಲ್ಲಿ ಸಮುದಾಯದಲ್ಲಿ ಒಗ್ಗಟ್ಟು ಸಾಧಿಸುವುದು ಅಸಂಭವನೀಯ.

ಪ್ರಸ್ತುತ ಗುಣವಿಶೇಷಗಳನ್ನು ಹೊಂದಿರುವ ವ್ಯಕ್ತಿ ಕೂಡಾ ಕೆಲವು ನೈತಿಕ ಗುಣಗಳನ್ನು ಹೊಂದಿ ಅವುಗಳಂತೆ ಪ್ರಾಮಾಣಿಕವಾಗಿ ನಡೆಯದೆ ಇದ್ದರೆ ಸಮುದಾಯದ ಒಗ್ಗಟ್ಟಿನ ಬಾಧ್ಯತೆಯನ್ನು ಸಾಧಿಸಲಾರ. ಅವುಗಳ ಪೈಕಿ ಮಹತ್ವಪೂರ್ಣವಾದ ಪ್ರಪ್ರಥಮ ಗುಣವು ಏಕ ಅಲ್ಲಾಹನಿಗಾಗಿ ನಿಸ್ಪೃಹತೆ, ಸತ್ಯಕ್ಕಾಗಿ ಇಡೀ ಜಗತ್ತಿನೊಂದಿಗೆ ಹೋರಾಡಿ ಸಾಯುವಂತಹ ಸ್ಫೂರ್ತಿ ಮತ್ತು ಚಿತ್ತಾಕಾಂಕ್ಷೆಯನ್ನು ನಿಯಂತ್ರಿಸಲಿಕ್ಕಾಗಿ ಅದರ ವಿರುದ್ಧ ಯುದ್ಧ ಹಾಗೂ ತನ್ನ ಮತ್ತು ಇತರರ ಚಿತ್ತಾಕಾಂಕ್ಷೆಯ ಅನುಸರಣೆಯಿಂದ ಮುಕ್ತಿ ಪಡೆಯುವುದಾಗಿದೆ.

ಕೆಲವೊಮ್ಮೆ ವ್ಯಕ್ತಿಗಳ ಮತ್ತು ಸಂಘಟನೆಗಳ ನಡುವೆ ಕಂಡು ಬರುವ ವೈಚಾರಿಕ ಭಿನ್ನತೆಗೆ ಹೆಚ್ಚಾಗಿ ಅವರಲ್ಲಿರುವ 'ಅಹಂ' ಮತ್ತು ಚಿತ್ತಾಕಾಂಕ್ಷೆಯ ಅನುಸರಣೆಯೇ ಕಾರಣವಾಗಿರುತ್ತವೆ. ಇದು ಅಲ್ಲಾಹನು ಮೆಚ್ಚುವ ಮಾರ್ಗದಿಂದ ಅಂದರೆ ಐಕ್ಯ ಮತ್ತು ಒಗ್ಗಟ್ಟಿನಿಂದ ದೂರ ಸರಿಸುತ್ತದೆ.

ಇಂದು ವಿವಿಧ ಇಸ್ಲಾಮೀ ಸಂಘಟನೆಗಳ ಮಧ್ಯೆ, ಒಂದು ಸಂಘಟನೆಯ ವಿವಿಧ ವಿಭಾಗಗಳ ಮಧ್ಯೆ ಅಥವಾ ಬೇರೆ ಬೇರೆ ಸಂಘಟನೆಗಳ ನಾಯಕರ ಮಧ್ಯೆ ಕಂಡುಬರುವ ಭಿನ್ನಾಭಿಪ್ರಾಯಗಳು ವೈಯಕ್ತಿಕ ಹಿತಾಸಕ್ತಿಯನ್ನು ಅವಲಂಬಿಸಿರುತ್ತದೆ. ಅದಕ್ಕೆ ಇಸ್ಲಾಮ್ ಮತ್ತು ಸಂಘಟನೆಯ ಹಿತರಕ್ಷಣೆಯೆಂಬ ಸುಂದರ ಹೆಸರನ್ನಿಡುವುದು ಅತ್ಯಂತ ವಿಷಾದನೀಯ. ವಾಸ್ತವದಲ್ಲಿ ಈ ಭಿನ್ನಾಭಿಪ್ರಾಯಗಳು ನಾಯಕ ಯಾರಾಗಬೇಕು, ಅಧ್ಯಕ್ಷ ಯಾರಾಗಬೇಕು ಎಂಬುದರ ಕುರಿತಾಗಿರುತ್ತದೆ. ಅಧಿಕಾರ ಮತ್ತು ಹುದ್ದೆಯ ಈ ಹುಚ್ಚು ಇಸ್ಲಾಮ್ ಮತ್ತು ಇಸ್ಲಾಮೀ ಆಂದೋಲನಗಳ ಒಳಗೆ ಸೃಷ್ಟಿಸಿರುವ ಕ್ಷೋಭೆಯು ಹಸಿದ ತೋಳಗಳು ಕುರಿ ಮಂದೆಗಳೊಳಗೆ ಮಾಡುವುದಕ್ಕಿಂತ ಭೀಕರವಾಗಿದೆ. ಇದನ್ನು ಪ್ರವಾದಿ(ಸ) ಈ ರೀತಿ ವಿವರಿಸುತ್ತಾರೆ- ಒಬ್ಬನ ಧಾರ್ಮಿಕ ಮೇಲ್ಮೆಯ ಹುಚ್ಚು, ಪೌರೋಹಿತ್ಯದ ಆಗ್ರಹ ಮತ್ತು (ಈ ಲೋಕದ) ಸಂಪತ್ತಿನ ವ್ಯಾಮೋಹವು ಸೃಷ್ಟಿಸುವ ಕ್ಷೋಭೆಯು ಹಸಿದತೋಳವು ಕುರಿ ಮಂದೆಯೊಳಗೆ ಮಾಡುವುದಕ್ಕಿಂತ ಭೀಕರವಾಗಿದೆ. (ಅಹ್ಮದ್, ತಿರ್ಮಿದಿ)

ಆದುದರಿಂದಲೇ ಅಲ್ಲಾಹನು ಮತ್ತು ಪ್ರವಾದಿ(ಸ) ಅವರು, ಸೃಷ್ಟಿಗಳ ಸಂಪ್ರೀತಿಯ ಬದಲು ಸೃಷ್ಟಿಕರ್ತನ ಸಂಪ್ರೀತಿಯನ್ನು, ಲೌಕಿಕ ಲಾಭಗಳ ಬದಲು ಪರಲೋಕದ ಮೋಕ್ಷವನ್ನು ಹಾಗೂ ಮಾನವರಿಂದ ಸಿಗುವ ಪ್ರಯೋಜನಗಳ ಬದಲು ಅಲ್ಲಾಹನಿಂದ ದೊರೆಯುವ ಅನುಗ್ರಹವನ್ನು ಸತ್ಯವಿಶ್ವಾಸಿಯ ಇಸ್ಲಾಮೀ ಸುಧಾರಣೆಯ ಅಂತಿಮ ಗುರಿಯೆಂದು ಸಾರಿದ್ದಾರೆ. ಸತ್ಯವಿಶ್ವಾಸಿಯನ್ನು, ಈ ಲೋಕದಲ್ಲಿ ಅವನ ಜ್ಞಾನ ಮತ್ತು ಪರಿಶ್ರಮಗಳ ಉದ್ದೇಶವು ಅಲ್ಲಾಹನ ಸಂಪ್ರೀತಿ ಮತ್ತು ಪರಲೋಕದ ವಿಜಯವಾಗಿರಬೇಕೇ ಹೊರತು

ವ್ಯಕ್ತ ಅಥವಾ ಅವ್ಯಕ್ತವಾದ ವೈಯಕ್ತಿಕ ಅಥವಾ ವರ್ಗೀಯ ಮೇಲ್ಮೆ ಸಾಧಿಸುವುದಾಗಿರಬಾರದೆಂದು ಎಚ್ಚರಿಸಿದ್ದಾರೆ.

ನಿರ್ಣಾಯಕ ದಿನದಂದು ಪ್ರಪ್ರಥಮವಾಗಿ ನರಕಕ್ಕೆ ಹಾಕಲ್ಪಡುವವರು ಡಂಬಾಚಾರಿಗಳು ಮತ್ತು ಅಲ್ಲಾಹನ ಮೇಲೆ ಸುಳ್ಳಾರೋಪ ಹೊ ರಿಸುವವರಾಗಿರುವರು ಎಂದು ಅಧಿಕೃತ ಹದೀಸ್‌ಗಳಿಂದ ತಿಳಿದು ಬರುತ್ತದೆ. ಅರ್ಥಾತ್ ತಾವು ಅಲ್ಲಾಹನಿಗೋಸ್ಕರ ಕೆಲಸ ಮಾಡುವವರೆಂದು ತೋರಿಕೆಯ ಕರ್ಮವೆಸಗುವವರು ವಾಸ್ತವದಲ್ಲಿ ತಮ್ಮ ವ್ಯಕ್ತಿ ಪ್ರತಿಷ್ಠೆ ಮತ್ತು ತಮ್ಮ ಸ್ವಂತಕ್ಕಾಗಿ ಮಾಡುತ್ತಾರೆ. ಅದು ಅಲ್ಲಾಹನ ಮಾರ್ಗದಲ್ಲಿ ಜೀವ-ಸೊತ್ತುಗಳಿಂದ ಹೋರಾಡುವ ಯೋಧನಾಗಲಿ, ಧರ್ಮಶಿಕ್ಷಣವನ್ನು ಬೋಧಿಸುವ ಗುರುಗಳು ಮತ್ತು ವಿದ್ವಾಂಸರಾಗಿರಲಿ ಅಥವಾ ಅಲ್ಲಾಹನ ಮಾರ್ಗದಲ್ಲಿ ತಮ್ಮ ಸಂಪತ್ತನ್ನು ಖರ್ಚುಮಾಡುವ ವರ್ತಕರು ಮತ್ತು ಧನಿಕರಾಗಿರಲಿ.

ಇದಕ್ಕೆ ತದ್ವಿರುದ್ಧವಾಗಿ, ಅಲ್ಲಾಹನನ್ನೂ ಪ್ರವಾದಿಯನ್ನೂ(ಸ) ಅನುಸರಿಸಿದ ಮತ್ತು ಅಲ್ಲಾಹನ ಧರ್ಮಕ್ಕಾಗಿ ತಮ್ಮ ರಕ್ತದ ಕೊನೆಯ ಬಿಂದನ್ನೂ ಹರಿಸಿದ ಮತ್ತು ತನ್ನ ಆಯುಷ್ಯದ ಅಮೂಲ್ಯ ಕಾಲವನ್ನು ಕಳೆದ ನಿರಪೇಕ್ಷಮಂದಿಯನ್ನು ಅಲ್ಲಾಹನೂ ಪ್ರವಾದಿಯೂ ಬಹಳ ಪ್ರಶಂಸಿಸಿದ್ದಾರೆ. ಅವರು ಜನರ ಪ್ರಶಂಸೆಗಾಗಿ ತೋರಿಕೆಯ ಕೆಲಸ ಮಾಡಿದವರಲ್ಲ. ಝೈದ್ ಬಿನ್ ಅಸ್ಲಮ್(ರ) ಹೇಳುತ್ತಾರೆ- ಒಮ್ಮೆ ಹ. ಉಮರ್(ರ) ಮಸೀದಿಗೆ ಹೋಗಲು ಹೊರಗೆ ಬಂದಾಗ ಹ. ಮುಆದ್‌ಬಿನ್ ಜಬಲ್(ರ) ಪ್ರವಾದಿ(ಸ) ಅವರ ಸಮಾಧಿಯ ಬಳಿ ಅಳುತ್ತಿರುವುದನ್ನು ಕಂಡು ಕಾರಣ ಕೇಳಿದರು. ಆಗ ಮುಆದ್(ರ) ಹೀಗೆ ಉತ್ತರಿಸಿದರು- ಸಾಮಾನ್ಯ ತೋರಿಕೆಯೂ ಶಿರ್ಕ್ ಆಗಿದೆಯೆಂದು ನಾನು ಪ್ರವಾದಿ(ಸ) ಅವರಿಂದ ಕೇಳಿದ್ದೇನೆ. ಅಲ್ಲಾಹನು ಕಾಣೆಯಾದರೆ ಹುಡುಕದ ಆದರೆ ಪ್ರತ್ಯಕ್ಷದಲ್ಲಿದ್ದರೆ ಗುರುತಿಸಲ್ಪಡದ ಧರ್ಮನಿಷ್ಠ ಸಜ್ಜನರನ್ನು ಖಂಡಿತ ಪ್ರೀತಿಸುತ್ತಾನೆ. ಅವರ ಮನಸ್ಸುಗಳು ಸನ್ಮಾರ್ಗದ ಪ್ರಕಾಶಭರಿತ ದೀಪಗಳಂತಿರುವುದು. ಅವರು ಭೂಮುಖದ ಅಪರಿಚಿತ ಭಾಗದಿಂದ ಏಳುವರು.

(ಹಾಕಿಮ್, ಅಲ್ ಮುಂದಿರೀ)

ನೈಜ ಮುಸ್ಲಿಮನು ಅಲ್ಲಾಹನ ದಾಸನಾಗಿರುವನೇ ಹೊರತು ತನ್ನ ದೇಹೇಚ್ಛೆಯ ದಾಸನಾಗಲಾರ. ಅವನನ್ನು ಎಲ್ಲಿ ಯಾವ ಕಾರ್ಯಕ್ಕೆ ನೇಮಿಸಿದರೂ ಅವನಿಗೆ ಯಾವುದೇ ಹೊಣೆಗಾರಿಕೆ ನೀಡಿದರೂ, ಅವನ ಗಮನವನ್ನು ಎತ್ತಕಡೆಗೆ ಸೆಳೆದರೂ- ಹಿಂದೆ ಅಥವಾ ಮುಂದೆ- ನಾಯಕನಾಗಿ ಅಥವಾ ಸಾಮಾನ್ಯ ಅನುಯಾಯಿಯಾಗಿ, ಆತ ಎಲ್ಲೆಲ್ಲೂ ಲೌಕಿಕ ಕೀರ್ತಿ, ಸ್ಥಾನ, ಪ್ರತಿಷ್ಠೆ ಇತ್ಯಾದಿಗಳಿಂದ ನಿರಪೇಕ್ಷನಾಗಿ ತನ್ನ ಕರ್ತವ್ಯವನ್ನು ಈಡೇರಿಸುತ್ತಿರುತ್ತಾನೆ. ಏಕೆಂದರೆ ಅಲ್ಲಾಹನೂ ಪ್ರವಾದಿ(ಸ) ಅವರೂ ಇದೇ ಶಿಕ್ಷಣವನ್ನು ನೀಡಿದ್ದಾರೆ.

ಪ್ರವಾದಿ(ಸ) ಹೇಳುತ್ತಾರೆ- ಹಾಳಾಗಿ ಹೋದ ಲೋಕದ ದಾಸ, ನಾಶವಾಗಿ ಹೋದ ಸಂಪತ್ತಿನ ದಾಸ. ಕೆಟ್ಟೇ ಹೋದ ಹೊಟ್ಟೆಯ ದಾಸ. ಅವನಿಗೆ ಕೊಟ್ಟರೆ ಸಂತೋಷಗೊಳ್ಳುತ್ತಾನೆ, ಕೊಡದಿದ್ದರೆ ಕೋಪಗೊಳ್ಳುತ್ತಾನೆ. ತನ್ನಿಂದ ತಪ್ಪಾದರೂ ತೌಬಾ ಮಾಡದವನು ನಾಶವಾಗಲಿ,

ನಿಂದ್ಯನಾಗಲಿ. (ತದ್ವಿರುದ್ಧವಾಗಿ) ಅಲ್ಲಾಹನ ಮಾರ್ಗದಲ್ಲಿ ತಲೆಗೂದಲು ಮತ್ತು ಶರೀರ ಧೂಳು ಮುಕ್ಕಿದ, ಎರಡೂ ಕಾಲುಗಳು ಕೆಸರಿನಿಂದಾವೃತವಾದ ಅವಸ್ಥೆಯಲ್ಲೇ ಕುದುರೆಯ ಲಗಾಮು ಹಿಡಿದು ನಿಂತಿರುವವನಿಗೆ ಶುಭವಾರ್ತೆಯಿದೆ. ಅವನನ್ನು ಸೇನೆಯ ಮುಂಚೂಣಿಯಲ್ಲಿ ನೇಮಿಸಿದರೆ ಅಲ್ಲೂ ಹೋರಾಡುತ್ತಾನೆ. ಸೇನೆಯ ಹಿಂದಿನ ಭಾಗದಲ್ಲಿ ನೇಮಿಸಿದರೆ ಅಲ್ಲೂಹೋರಾಡುತ್ತಾನೆ. (ಬುಖಾರಿ, ಅಬೂ ಹುರೈರಾ)

ಹ. ಖಾಲಿದ್ ಬಿನ್ ವಲೀದ್(ರ) ಅವರ ಮೇಲೆ ಅಲ್ಲಾಹನ ಕೋಟಿಕೋಟಿ ಅನುಗ್ರಹಗಳು ಸುರಿಯಲಿ. ಅವರನ್ನು ಸೇನೆಯ ದಂಡನಾಯಕನಾಗಿ ಮಾಡಲಾದಾಗ, ಅಲ್ಲಾಹನ ಸಹಾಯದಿಂದ, ಇಸ್ಲಾಮ್ ಮತ್ತು ಇಸ್ಲಾಮಿ ಸಾಮ್ರಾಜ್ಯಕ್ಕೆ ವಿಜಯದ ಸರಮಾಲೆ, ಜೊತೆಗೆ ಸಿರಿ-ಸಂಪತ್ತು ಲಭಿಸಿದುವು. ಇನ್ನು, ಯುದ್ಧ ನಡೆಯುತ್ತಿದ್ದಾಗಲೇ ಅವರನ್ನು ಪದಚ್ಯುತಗೊಳಿಸಿ ಅವರ ಸ್ಥಾನದಲ್ಲಿ ಅಬೂ ಉಬೈದಾ ಬಿನ್ ಜರ್ರಾಹ್(ರ) ಅವರನ್ನು ದಂಡನಾಯಕನಾಗಿ ಮಾಡಿದಾಗ ಅವರು ಯಾವುದೇ ಅಳುಕಿಲ್ಲದೆ ಓರ್ವ ಸಾಮಾನ್ಯ ಯೋಧನಂತೆ ಅತ್ಯುತ್ತಮ ಯೋಧ, ಸಲಹೆಗಾರ ಮತ್ತು ಹಿತಚಿಂತಕನ ಪಾತ್ರವಹಿಸಿದರು. ಸತ್ಯಸಂಧ ಪ್ರಾಮಾಣಿಕ ವಿಶ್ವಾಸಿಗಳು ಹೀಗಿರುತ್ತಾರೆ.

ಮುಸ್ಲಿಮರ ಮತ್ತು ಇಸ್ಲಾಮಿ ಸಂಘಟನೆಗಳ ಭಿನ್ನಾಭಿಪ್ರಾಯಗಳ ಹಿಂದೆ ಹೆಚ್ಚಾಗಿ ಒಬ್ಬ ವ್ಯಕ್ತಿ ಅಥವಾ ಸಂಘಟನೆಯ, ಒಂದು ಕಾರ್ಯರೀತಿ ಮತ್ತು ದೇಶದ ಬಗೆಗಿನ ಪಕ್ಷಪಾತವಿರುತ್ತದೆ. ಒಂದು ವೇಳೆ ಎಲ್ಲರೂ ನ್ಯಾಯದೊಂದಿಗೆ ಸತ್ಯಕ್ಕಾಗಿ ತಮ್ಮನ್ನು ಅರ್ಪಿಸಿ ಬಿಟ್ಟರೆ ಮತ್ತು ಧರ್ಮವನ್ನು ಅಲ್ಲಾಹನಿಗಾಗಿ ಮಾತ್ರ ಮೀಸಲಾಗಿರಿಸಿ, ನನ್ನ ನಮಾಝ್, ನನ್ನ ಬಲಿದಾನಗಳು, ನನ್ನ ಜೀವನ ಮತ್ತು ನನ್ನ ಮರಣ ಎಲ್ಲವೂ ಸರ್ವ ಲೋಕಗಳ ಒಡೆಯನಾದ ಅಲ್ಲಾಹನಿಗೆ ಮೀಸಲು ಎಂದು ಘೋಷಿಸಿದರೆ, ಮುಸ್ಲಿಮ್ ಸಮುದಾಯದ ಭಿನ್ನಾಭಿಪ್ರಾಯಗಳೆಲ್ಲವೂ ಕೊನೆಗೊಳ್ಳಬಹುದು.

ವಾಸ್ತವದಲ್ಲಿ ಶಿರ್ಕ್‌ನ ಒಂದು ವಿಧವು ಸ್ವೇಚ್ಛೆಯ ಅನುಸರಣೆಯಾಗಿದೆ. ಆದುದರಿಂದಲೇ ಸಲಫುಸ್ಸಾಲಿಹೀನ್‌ಗಳು (ಪ್ರಾಚೀನ ವಿದ್ವಾಂಸರು) ಹೀಗೆ ಹೇಳಿರುವರು- ಈ ಭೂಮುಖದ ಮೇಲೆ ಪೂಜಿಸಲ್ಪಡುವ ಆರಾಧ್ಯರುಗಳ ಪೈಕಿ ಸ್ವೇಚ್ಛೆಯೇ ಅತೀ ದೊಡ್ಡ ಆರಾಧ್ಯ ವಸ್ತುವಾಗಿದೆ. ಅದು ಕೇವಲ ಜನಸಾಮಾನ್ಯರನ್ನು ಮಾತ್ರವಲ್ಲ ವಿದ್ವಾಂಸರನ್ನೂ ಸತ್ಯದ ಮಾರ್ಗದಿಂದ ಸರಿಸಿ ದಾರಿಗೆಡಿಸಿ ಬಿಡುತ್ತದೆ. ಇದನ್ನು ಅಲ್ಲಾಹನು ಕುರ್‌ಆನ್‌ನಲ್ಲಿ ಹೀಗೆ ಹೇಳಿದ್ದಾನೆ- ತನ್ನ ಸ್ವೇಚ್ಛೆಗಳನ್ನೇ ತನ್ನ ದೇವರಾಗಿ ಮಾಡಿಕೊಂಡವನ ಕುರಿತು ನೀವೆಂದಾದರೂ ವಿವೇಚಿಸಿದಿರಾ? ಅಲ್ಲಾಹನು ಜ್ಞಾನದ ಹೊರತಾಗಿಯೂ ಅವನನ್ನು ಪಥಭ್ರಷ್ಟತೆಗೆ ಎಸೆದು ಬಿಟ್ಟನು. ಅವನ ಹೃದಯ ಹಾಗೂ ಕಿವಿಗಳಿಗೆ ಮುದ್ರೆಯನ್ನು ಒತ್ತಿ ಬಿಟ್ಟನು ಮತ್ತು ಅವನ ದೃಷ್ಟಿಗಳ ಮೇಲೆ ತೆರೆಯೆಳೆದು ಬಿಟ್ಟನು. ಅಲ್ಲಾಹನ ಬಳಿಕ ಅವನಿಗೆ ಸನ್ಮಾರ್ಗ ನೀಡಲು ಯಾರಿದ್ದಾರೆ? ನೀವು ಪಾಠ ಕಲಿಯುವುದಿಲ್ಲವೆ? (45: 23)

ವೈಯಕ್ತಿಕ ಮತ್ತು ಪಕ್ಷ-ಪಂಗಡಗಳ ಪಕ್ಷಪಾತದಿಂದ ಮುಕ್ತಿ

ಒಬ್ಬ ವ್ಯಕ್ತಿಯ ಧರ್ಮವು, ಅವನು ವೈಯಕ್ತಿಕ ಮತ್ತು ಮಸ್ಲಕ್ (ಮದ್‌ಹಬ್)ನ ಪಕ್ಷಪಾತದಿಂದ ಮುಕ್ತಿ ಹೊಂದುವ ವರೆಗೆ ಅಲ್ಲಾಹನಿಗಾಗಿ ಮೀಸಲಾಗಿರಲಾರದು ಮತ್ತು ಅವನು ಸತ್ಯ-ನ್ಯಾಯದ ವಾಹಕನಾಗಲಾರ. ಮುಕ್ತಿ ಹೊಂದುವುದೆಂದರೆ ಒಬ್ಬನು ತನ್ನ ಅಭಿಪ್ರಾಯವು ದುರ್ಬಲವಾಗಿದೆಯೆಂದು ಮನಗಂಡರೂ ಅಹಂಭಾವ ಮತ್ತು ಸ್ವಾರ್ಥಭಾವನೆಯೊಂದಿಗೆ ಅಥವಾ ಅಲ್ಪಜ್ಞಾನಿ ಮತ್ತು ತಪ್ಪೆಸಗಿದನೆಂಬ ಆರೋಪಕ್ಕೆ ಹೆದರಿ ತನ್ನ ಬಲಹೀನ ಅಭಿಪ್ರಾಯಕ್ಕೆ ಅಂಟಿಕೊಂಡು ಹಟಸಾಧನೆಯೊಂದಿಗೆ ಅದರ ರಕ್ಷಣೆ ಮಾಡುವುದಾಗಿದೆ. ಇದುವೇ ಪಕ್ಷಪಾತವಾಗಿದ್ದು ಅಹಂಭಾವದ ಪ್ರತೀಕವಾಗಿದೆ. ಇದನ್ನೇ ಪ್ರವಾದಿ(ಸ) ಅತ್ಯಂತ ವಿನಾಶಕಾರಿಯೆಂದು ಬಣ್ಣಿಸಿದ್ದಾರೆ.

ಇಮಾಮ್ ಶಾಫಿಈ(ರ) ಅವರ ಮೇಲೆ ಅಲ್ಲಾಹನ ಅನುಗ್ರಹಗಳು ಸುರಿಯಲಿ ಮತ್ತು ಅವರಿಂದ ಪ್ರಸನ್ನನಾಗಲಿ. ಅವರದು ಎಷ್ಟೊಂದು ಸರಿಯಾದ ಮಾತು! ಅವರು ಹೇಳಿದರು- ಅಲ್ಲಾಹನಾಣೆ! ನನ್ನ ದೃಷ್ಟಿಯಲ್ಲಿ ನಿಜವಾದ ಕಾರ್ಯ ಸತ್ಯದ ಸ್ಪಷ್ಟೀಕರಣ ಮತ್ತು ಅದರ ಪ್ರಕಟನೆಯಾಗಿದೆ. ಅದು ನನ್ನ ಬಾಯಿಯಿಂದ ಹೊರಡಲಿ ಅಥವಾ ನನ್ನ ವಿರೋಧಿಯ ಬಾಯಿಯಿಂದ ಬರಲಿ- ಅನುಸರಿಸಲ್ಪಡಲು ಸತ್ಯಕ್ಕೆ ಮಾತ್ರ ಹಕ್ಕಿದೆ.

ಪಕ್ಷಪಾತಿಯು ಗಾಜಿನ ಮನೆಯಲ್ಲಿ ವಾಸಿಸುವ ಒಂಟಿ ಮನುಷ್ಯನಂತಿರುತ್ತಾನೆ. ಅವನಿಗೆ ಅವನ ಎಡ, ಬಲ, ಹಿಂದೆ, ಮುಂದೆ, ಎಲ್ಲೆಲ್ಲೂ ಅವನನ್ನೇ ಕಾಣುತ್ತದೆ. ವಿವಿಧ ದೃಷ್ಟಿಕೋನಗಳು ಹಾಗೂ ಬಹುಮತಾಭಿಪ್ರಾಯವಿದ್ದರೂ ಅವನು ಅದನ್ನು ಗೊಡವೆಗೆ ತೆಗೆದುಕೊಳ್ಳುವುದಿಲ್ಲ. ಅವನು ತನ್ನ ಬುದ್ಧಿಯ ದ್ವಾರವನ್ನು ಇತರ ದೃಷ್ಟಿಕೋನಗಳಿಗಾಗಿ ತೆರೆಯುವುದೇ ಇಲ್ಲ. ಅವನು ತನ್ನನ್ನು ತಾನೇ ಅತಿದೊಡ್ಡ ಬುದ್ಧಿವಂತ, ಅತಿದೊಡ್ಡ ಜ್ಞಾನಿ ಮತ್ತು ಅತಿದೊಡ್ಡ ಆಧಾರಪ್ರಮಾಣ ಹೊಂದಿದವನೆಂದು ಭಾವಿಸುತ್ತಾನೆ. ಆದರೆ ವಾಸ್ತವದಲ್ಲಿ ಅವನ ಬಳಿ ಸಂಶೋಧನೆ ಮಾಡುವಷ್ಟು ಬುದ್ಧಿಯಾಗಲಿ, ಇತರರಿಂದ ನಿರಪೇಕ್ಷಗೊಳಿಸಬಲ್ಲಷ್ಟು ಜ್ಞಾನವಾಗಲಿ, ಸಂತೃಪ್ತಿಹೊಂದುವಂತಹ ಪುರಾವೆಯಾಗಲಿ ಇರುವುದಿಲ್ಲ.

ಅವರಲ್ಲಿ ಕೆಲವು ಪಕ್ಷಪಾತಿಗಳು ಇತರರ ಪುರಾವೆಗಳನ್ನು ಮತ್ತು ದೃಷ್ಟಿಕೋನವನ್ನು ಕೇಳಿ ತಿಳಿಯುವುದಕ್ಕಿಂತ ಮೊದಲೇ ಅದನ್ನು ನಿರಾಕರಿಸಿ ಬಿಡುತ್ತಾರೆ. ಪವಿತ್ರ ಕುರ್‌ಆನ್‌ನಲ್ಲಿ ಅಲ್ಲಾಹನು ಇಂತಹ ಪಕ್ಷಪಾತವನ್ನು ಖಂಡಿಸಿರುತ್ತಾನೆ. ಸತ್ಯದ ಮಾರ್ಗದಲ್ಲಿ ಅದು ಸ್ವೇಚ್ಛೆಯ ನಂತರದ ಅತಿದೊಡ್ಡ ತೊಡಕೆಂದು ಹೇಳಿದ್ದಾನೆ. ಅನೇಕ ಕಡೆ ಸತ್ಯವಿಶ್ವಾಸಿಗಳಿಗೆ ಅದರಿಂದ ದೂರ ವಿರಲು ಉಪದೇಶಿಸಿದ್ದಾನೆ. ಬನೀ ಇಸ್ರಾಈಲ್‌ರ ಬಗ್ಗೆ ಪವಿತ್ರ ಕುರ್‌ಆನ್‌ನಲ್ಲಿ ಹೀಗೆ ಹೇಳಿದ್ದಾನೆ-

ಅಲ್ಲಾಹ್ ಅವತೀರ್ಣಗೊಳಿಸಿದುದರ ಮೇಲೆ ವಿಶ್ವಾಸವಿಡಿರಿ- ಎಂದು ಅವರೊಡನೆ ಹೇಳಲಾದಾಗ, ನಮಗೆ (ಇಸ್ರಾಈಲ್ ಕುಲಕ್ಕೆ) ಅವತೀರ್ಣವಾದುದರಲ್ಲಿ ಮಾತ್ರ ನಾವು ವಿಶ್ವಾಸವಿಡುತ್ತೇವೆ ಎಂದು ಅವರು ಹೇಳುತ್ತಾರೆ. ಅದಕ್ಕೆ ಹೊರತಾಗಿರುವುದನ್ನು ಅವರು

ನಿಷೇಧಿಸುತ್ತಾರೆ. ವಸ್ತುತಃ ಅದು ಸತ್ಯವಾಗಿದ್ದು ಅವರ ಬಳಿ ಮೊದಲೇ ಇರುವ ಬೋಧನೆಯನ್ನು ದೃಢೀಕರಿಸುತ್ತದೆ. (2:91)

ಬಹುದೇವವಿಶ್ವಾಸಿಗಳ ಬಗ್ಗೆ ಹೀಗೆ ಹೇಳಿದ್ದಾನೆ-

ಅಲ್ಲಾಹನು ಅವತೀರ್ಣಗೊಳಿಸಿದ ನಿರ್ದೇಶಗಳನ್ನು ಅನುಸರಿಸಿರೆಂದು ಅವರೊಡನೆ ಹೇಳಲಾದಾಗ ನಾವು ನಮ್ಮ ಪೂರ್ವಿಕರು ಯಾವ ಕ್ರಮವನ್ನು ಅನುಸರಿಸುತ್ತಿದ್ದುದನ್ನು ಕಂಡಿದ್ದೇವೋ ಅದನ್ನು ಅನುಸರಿಸುವೆವು ಎನ್ನುತ್ತಾರೆ. ಸರಿ, ಅವರ ಪೂರ್ವಿಕರು ತಮ್ಮ ಬುದ್ಧಿಶಕ್ತಿಯನ್ನೇನೂ ಉಪಯೋಗಿಸದೆ ಸತ್ಯಮಾರ್ಗದಿಂದ ವಂಚಿತರಾಗಿದ್ದರೆ ಆಗಲೂ ಇವರು ಅವರನ್ನನುಸರಿಸುತ್ತಲೇ ಇರುವರೆ? ಅಲ್ಲಾಹನು ತೋರಿಸಿದ ಮಾರ್ಗದರ್ಶನದ ಪ್ರಕಾರ ನಡೆಯಲು ನಿರಾಕರಿಸಿದವರ ಉಪಮೆಯು ಕುರುಬನು ಪ್ರಾಣಿಗಳನ್ನು ಕೂಗುವಾಗ ಅವುಗಳು ಅವನ ಕೂಗಾಟದ ನಾದದ ವಿನಾ ಬೇರೇನನ್ನೂ ಕೇಳದಂತಿದೆ. ಇವರು ಕಿವುಡರು, ಮೂಕರು, ಅಂಧರು. ಆದುದರಿಂದ ಇವರಿಗೇನೂ ತಿಳಿಯುವುದಿಲ್ಲ. (2: 170-71)

ಸಮುದಾಯದ ಐಕ್ಯದ ಹಾದಿಯಲ್ಲಿ ಕೆಲವೊಮ್ಮೆ ಕರ್ಮಶಾಸ್ತ್ರೀಯ ಪಕ್ಷಪಾತವು ತಡೆಯಾಗುತ್ತದೆ. ಇದು ನಿರ್ದಿಷ್ಟ ಮದ್‌ಹಬ್‌ಗೆ ಸಂಬಂಧಿಸಿದ ವ್ಯಕ್ತಿ ಅಥವಾ ವರ್ಗವು ತಮ್ಮ ಮದ್‌ಹಬ್‌ನ ಇಮಾಮರನ್ನು ಮತ್ತು ಅವರ ಜ್ಞಾನವನ್ನು ನ್ಯೂನತೆಯಿಂದ ಮುಕ್ತರೆಂದು ಭಾವಿಸುತ್ತಾರೆ. ಕಣ್ಣು ಮುಚ್ಚಿ ಅವರನ್ನು ಅನುಸರಿಸುವುದು ಕಡ್ಡಾಯವೆಂದು ಸಾರುತ್ತಾರೆ. ಅಲ್ಲಾಹ್ ಮತ್ತು ಪ್ರವಾದಿಯು ನಿರ್ಣಯಿಸಿದ ವಾಜಿಬ್ (ಕಡ್ಡಾಯ)ಗಳ ಹೊರತು ಯಾರ ಮೇಲೂ ಯಾವುದೂ ವಾಜಿಬ್ ಅಲ್ಲವೆಂದು ತಿಳಿದೂ ಅದನ್ನು ಕಡೆಗಣಿಸುತ್ತಾರೆ. ಅಲ್ಲಾಹ್ ಮತ್ತು ಪ್ರವಾದಿ(ಸ) ಯಾರನ್ನೂ ಅಂಧವಾಗಿ ಅನುಸರಿಸುವುದನ್ನು ಕಡ್ಡಾಯಗೊಳಿಸಲಿಲ್ಲ. ಎಷ್ಟೇ ದೊಡ್ಡ ವ್ಯಕ್ತಿಯಾಗಿರಲಿ, ಅವರ ಜ್ಞಾನ ಎಷ್ಟೇ ಉನ್ನತವಾಗಿರಲಿ. ಇಂತಹ ಅನುಸರಣೆಯು ಧರ್ಮದಲ್ಲಿ ಅತಿರೇಕವಾಗಿದೆ. ಇದು ಯಹೂದಿ-ಕ್ರೈಸ್ತರು ಮಾಡಿದಂತಹ ಅತಿರೇಕವಾಗಿದೆ. ಅದರಿಂದಾಗಿ ಅವರು ತಮ್ಮ ವಿದ್ವಾಂಸರು ಮತ್ತು ಪುರೋಹಿತರನ್ನು ದೇವರಾಗಿ ಮಾಡಿದ್ದರು.

"ಅವರು ಅಲ್ಲಾಹನನ್ನು ಹೊರತು ತಮ್ಮ ವಿದ್ವಾಂಸರನ್ನೂ ಸಂತರನ್ನೂ ತಮ್ಮ ಪ್ರಭುಗಳನ್ನಾಗಿ ಮಾಡಿಕೊಂಡಿದ್ದಾರೆ". (ಕುರ್‌ಆನ್- 9: 31)

ಇದನ್ನು ಸಹಾಬಿಗಳು, ಹಿಂದಿನ ಸಜ್ಜನರು ಮತ್ತು ಸಂಶೋಧಕ ವಿದ್ವಾಂಸರು ಹಾಗೂ ನಾಲ್ವರು ಇಮಾಮರು ನಿಷೇಧಿಸಿದ್ದಾರೆ.

ಇಮಾಮ್ ಇಝ್ಝುದ್ದೀನ್ ಬಿನ್ ಸಲಾಮ್ ಹೇಳುತ್ತಾರೆ- ಆರಂಭ ಕಾಲಘಟ್ಟದಲ್ಲಿ ಯಾವಾಗಲೂ ಜನರು ಕರ್ಮಶಾಸ್ತ್ರದ ಪ್ರತಿಬಂಧವಿಲ್ಲದೆ ವಿದ್ವಾಂಸರಲ್ಲಿ ಪ್ರಶ್ನೆಗಳನ್ನು ಕೇಳುತ್ತಿದ್ದರು. ಅವರು ಅದಕ್ಕೆ ಸೂಕ್ತ ಉತ್ತರ ಕೊಡುತ್ತಿದ್ದರು. ತರುವಾಯ ಮದ್‌ಹಬ್‌ನ ಪಕ್ಷಪಾತಿ ಅನುಯಾಯಿಗಳ ಕಾಲ ಬಂತು. ಕುರ್‌ಆನ್ ಮತ್ತು ಪ್ರವಾದಿಚರ್ಯೆಯ ಆಧಾರದಲ್ಲಿ ತಾನು ಕೈಗೊಂಡಿರುವ ಅಭಿಪ್ರಾಯವು ದುರ್ಬಲವಾಗಿತ್ತೆಂದು ಕಂಡುಕೊಂಡರೂ ಓರ್ವ ಪಕ್ಷಪಾತಿಯಂತೆ ತಮ್ಮ ಮದ್‌ಹಬ್‌ನ ಇಮಾಮರನ್ನು ಅವರು ಪ್ರವಾದಿಯೋ

ಎಂಬಂತೆ ಅನುಸರಿಸ ತೊಡಗಿದರು. ಈ ನೀತಿಯು ಸತ್ಯಕ್ಕೆದುರಾಗಿದೆ. ಅದನ್ನು ಯಾವ ಬುದ್ಧಿಮತಿಯೂ ಒಪ್ಪಲಾರ.

ಇಮಾಮ್ ಅಬೂಶಾಮ ಹೇಳುತ್ತಾರೆ- ವಿದ್ವಾಂಸರು ಮತ್ತು ಕರ್ಮಶಾಸ್ತ್ರಪಂಡಿತರು ಯಾವುದೇ ಓರ್ವ ಇಮಾಮನ ಅನುಸರಣೆಗೆ ಅಂಟಿಕೊಂಡಿರಬಾರದು. ಅಭಿಪ್ರಾಯ ಭಿನ್ನತೆಯಿರುವ ವಿಷಯಗಳಲ್ಲಿ ಅಲ್ಲಾಹನ ಗ್ರಂಥ ಮತ್ತು ಪ್ರವಾದಿಚರ್ಯೆಯ ಆಧಾರದಲ್ಲಿ ಯಾವುದು ಪ್ರಬಲವೋ ಅದನ್ನು ಸರಿಯೆಂದು ಪರಿಗಣಿಸಿ ಅದರಂತೆ ನಡೆಯಲು ಪ್ರಯತ್ನಿಸಬೇಕು. ಏಕೆಂದರೆ ಇಮಾಮ್ ಶಾಫಿಈ ಅವರು ಇತರರ ಅಂಧಾನುಕರಣೆಯ ಜೊತೆಗೆ ತನ್ನನ್ನೂ ಹಾಗೆಯೇ ಅನುಸರಿಸುವುದನ್ನು ವಿರೋಧಿಸುತ್ತಿದ್ದರು ಎಂದು ಅಧಿಕೃತ ಮೂಲಗಳಿಂದ ತಿಳಿದು ಬಂದಿದೆ. (ಹುಜ್ಜತುಲ್ಲಾಹಿಲ್ ಬಾಲಿಗ, ಭಾಗ-1)

ಇದೇನೂ ಆಶ್ಚರ್ಯದಾಯಕ ವಿಷಯವಲ್ಲ. ನ್ಯಾಯಶೀಲರಾದ ಸಂಶೋಧಕ ವಿದ್ವಾಂಸರು ಕುರ್ಆನ್ ಮತ್ತು ಪ್ರವಾದಿಚರ್ಯೆಯ ಆಧಾರದಲ್ಲಿ ತಮ್ಮ ಮದ್‌ಹಬ್‌ನ ಅಭಿಪ್ರಾಯ ದುರ್ಬಲವೆಂದು ತಿಳಿದ ನಂತರ ಇತರರ ಪ್ರಬಲ ಅಭಿಪ್ರಾಯಗಳಿಗೆ ಪ್ರಾಶಸ್ತ್ಯ ನೀಡಿದ್ದಾರೆ. ಇಮಾಮ್ ಕಾಝೀ ಅಬೂಬಕರ್ ಬಿನ್ ಅರಬಿ ಅಲ್ ಮಾಲಿಕಿಯವರು ಭೂ ಉತ್ಪನ್ನಗಳ ವಿಷಯದಲ್ಲಿ ಮಾಲಿಕೀ ಮದ್‌ಹಬ್‌ಗಿಂತ ಹನಫೀ ಮದ್‌ಹಬ್‌ಗೆ ಪ್ರಾಶಸ್ತ್ಯ ನೀಡಿದ್ದಾರೆ. ಏಕೆಂದರೆ ಹನಫೀ ಕರ್ಮಶಾಸ್ತ್ರದ ಆಧಾರವು ಪ್ರಬಲವೂ ಅಲ್ಲಾಹನ ಗ್ರಂಥ ಮತ್ತು ಪ್ರವಾದಿಚರ್ಯೆಗೆ ನಿಕಟವೂ ಆಗಿತ್ತು. ಇಮಾಮ್ ನವವಿ ಮತ್ತು ಇಮಾಮ್ ಶೀರಾಝಿ ಕೂಡಾ ಹಾಗೆಯೇ ಮಾಡಿದ್ದಾರೆ. (ಹುಜ್ಜತುಲ್ಲಾಹಿಲ್ ಬಾಲಿಗ: ಭಾಗ-1)

ಇಮಾಮ್ ಅಬೂಹನೀಫಾರ ಶಿಷ್ಯಂದಿರಾದ ಇಮಾಮ್ ಅಬೂಯೂಸುಫ್, ಮುಹಮ್ಮದ್ ಮತ್ತು ಝುಫರ್ ಅವರು ಅಸಂಖ್ಯಾತ ವಿಧಿಗಳಲ್ಲಿ ತಮ್ಮ ಗುರುವಿನೊಂದಿಗೆ ಭಿನ್ನಾಭಿಪ್ರಾಯ ಹೊಂದಿದ್ದಾರೆ. ಅದೇ ರೀತಿ ಇಮಾಮ್ ಮಾಲಿಕ್, ಶಾಫಿಈ ಮತ್ತು ಅಹ್ಮದ್‌ರ ಶಿಷ್ಯಂದಿರೂ ತಂತಮ್ಮ ಇಮಾಮರ ಮದ್‌ಹಬ್‌ಗಳೊಂದಿಗೆ ಭಿನ್ನಾಭಿಪ್ರಾಯ ಹೊಂದಿದ್ದರು. (ಹುಜ್ಜತುಲ್ಲಾಹಿಲ್ ಬಾಲಿಗ : ಭಾಗ-1)

ಶಾಹ್ ವಲಿಯುಲ್ಲಾಹ್ ಹೇಳುತ್ತಾರೆ- ಪ್ರವಾದಿಯ ಹೊರತು ಇತರರನ್ನು ಪಾಪ ಮುಕ್ತರೆಂದು ಭಾವಿಸಿ ಅವರನ್ನು ಅಂಧವಾಗಿ ಅನುಕರಿಸುವುದು ಧರ್ಮದಲ್ಲಿ ಹಸ್ತಕ್ಷೇಪದ ಕಾರಣಗಳಲ್ಲೊಂದು. ಸಮುದಾಯದ ವಿದ್ವಾಂಸರ ಪೈಕಿ ಒಬ್ಬರು ಇಜ್ತಿಹಾದ್ ನಡೆಸಿದರೆ ಅವರ ಅನುಯಾಯಿಗಳು ಅವರ ಸಂಶೋಧನೆಯನ್ನು ಖಂಡಿತವಾಗಿಯೂ ಸರಿಯಾದುದು ಎಂದು ಭಾವಿಸಿ ಅದರ ವಿರುದ್ಧ ಸಹೀಹ್ ಹದೀಸನ್ನು ಕೂಡಾ ತಿರಸ್ಕರಿಸಿ ಬಿಡುತ್ತಾರೆ. ಈ ಅನುಕರಣೆಯನ್ನು ಸಮುದಾಯವು ಅನುಮೋದಿಸಿಲ್ಲ. ಸಮುದಾಯವು ಅಂಗೀಕರಿಸಿರುವ ಅನುಕರಣೆಯು ಮುಜ್ತಹಿದ್ (ಸಂಶೋಧಕ)ನಿಂದ ಸರಿಯೂ ತಪ್ಪೂ ಸಂಭವಿಸಬಹುದು ಮತ್ತು ಅವರ ಅಭಿಪ್ರಾಯಕ್ಕೆ ವಿರುದ್ಧವಾಗಿ ಅಧಿಕೃತ ಹದೀಸ್ ಸಿಕ್ಕಿದರೆ ಈ ಅನುಕರಣೆಯನ್ನು ಕೈ ಬಿಡಲಾಗುವುದು ಎಂಬ ಸಂಕಲ್ಪದೊಂದಿಗೆ ಮಾಡುವ ಅನುಕರಣೆಯಾಗಿದೆ. ಅನ್ಯಥಾ ಪ್ರವಾದಿ(ಸ) ಹೇಳಿರುವಂತೆ, ಯಹೂದಿ ಕ್ರೈಸ್ತರಂತೆ ತಮ್ಮ ವಿದ್ವಾಂಸರನ್ನು ದೇವರಾಗಿ

ಮಾಡಿದ ಅಪರಾಧವು ಅಂಧಾನುಕರಣೆ ಮಾಡುವವರಿಗೂ ಅನ್ವಯವಾಗುವುದು.

(ಹುಜ್ಜತುಲ್ಲಾಹಿಲ್ ಬಾಲಿಗ: ಭಾಗ1, ಪುಟ: 263-64)

ಕೆಲವು ವಿಷಯಗಳಲ್ಲಿ ತನ್ನ ಮದ್‌ಹಬ್ ಬಿಟ್ಟು ಬೇರೆ ಮದ್‌ಹಬ್ ಅನುಸರಿಸಿದ ಒಬ್ಬ ವ್ಯಕ್ತಿಯ ಈ ಕ್ರಮವನ್ನು ಅವನ ಮದ್‌ಹಬ್‌ನವರು ಆಕ್ಷೇಪಿಸಿದರು. ಈ ಬಗ್ಗೆ ಅಲ್ಲಾಮಾ ಇಬ್ನು ತೀಮಿಯ್ಯಾರೊಡನೆ ಪ್ರಶ್ನೆ ಕೇಳಿದಾಗ ಅವರು ಹೀಗೆ ಉತ್ತರಿಸಿದರು-

ಒಬ್ಬನು ನಾಲ್ಕು ಮದ್‌ಹಬ್‌ಗಳ ಪೈಕಿ ಯಾವುದಾದರೂ ಒಂದನ್ನು ಅನುಸರಿಸುತ್ತಾನೆ. ಕೆಲವು ವಿಷಯಗಳಲ್ಲಿ ಅವನು ಅನುಸರಿಸುವ ಮದ್‌ಹಬ್‌ಗಿಂತ ಇನ್ನೊಂದು ಮದ್‌ಹಬ್‌ನ ಇಮಾಮರ ಅಭಿಪ್ರಾಯವು ಪ್ರಬಲವಾಗಿದ್ದರೆ ಅವನು ಆ ವಿಷಯಗಳಲ್ಲಿ ಆ ಇಮಾಮರನ್ನು ಅನುಸರಿಸುವುದೇ ಉತ್ತಮ. ಅವನ ಧರ್ಮದಲ್ಲಾಗಲಿ ಅವನ ತೀರ್ಮಾನದಲ್ಲಾಗಲಿ ಯಾವುದೇ ವ್ಯತ್ಯಾಸವುಂಟಾಗುವುದಿಲ್ಲ. ಬದಲಾಗಿ ಸರಿಯಾದ ಅಭಿಪ್ರಾಯವನ್ನು ಅನುಸರಿಸಿದ ಕಾರಣ ಸದಾ ಒಬ್ಬನೇ ಇಮಾಮನನ್ನು ಅನುಸರಿಸುವ ಪಕ್ಷಪಾತಿ ವ್ಯಕ್ತಿಗಿಂತ ಪ್ರವಾದಿವರ್ಯರಿಗೆ(ಸ) ಇಷ್ಟವಾದುದೂ ಉತ್ತಮವೂ ಆಗಿದೆ. ಅಂತಹ ಪಕ್ಷಪಾತಿ ವ್ಯಕ್ತಿಯು ಅಜ್ಞಾನಿಯೂ ದಾರಿಗೆಟ್ಟವನೂ ಆಗಿದ್ದಾನೆ.

ಕೆಲವು ಉದಾಹರಣೆಗಳನ್ನು ನೀಡಿದ ಬಳಿಕ ಅವರು ಹೀಗೆ ಬರೆಯುತ್ತಾರೆ-

ಇಮಾಮರನ್ನು ಪ್ರೀತಿಸುವ ಒಬ್ಬ ವ್ಯಕ್ತಿ ಪ್ರತಿಯೊಂದು ವಿಷಯದಲ್ಲೂ ಅಲ್ಲಾಹನ ಗ್ರಂಥ ಮತ್ತು ಪ್ರವಾದಿಚರ್ಯೆಗೆ ಹತ್ತಿರವಾಗಿರುವ ಇಮಾಮನ ಫತ್ವಾವನ್ನು ಅನುಸರಿಸುವುದು ಉತ್ತಮ. ಆಧಾರ ಸಹಿತ ಪ್ರಾಮಾಣಿಕವಾಗಿ ಒಬ್ಬ ಇಮಾಮರ ಅನುಸರಣೆ ಬಿಟ್ಟು ಇನ್ನೊಬ್ಬ ಇಮಾಮನನ್ನು ಅನುಸರಿಸುವುದು ಎರಡು ದೋಣಿಗೆ ಕಾಲಿಡುವಂತಹ ತಪ್ಪುಕೃತ್ಯವಲ್ಲ. ಬದಲಾಗಿ ಒಬ್ಬನು ಕೆಲವೊಮ್ಮೆ ಸತ್ಯವಿಶ್ವಾಸಿಗಳೊಂದಿಗಿದ್ದು ಅವರನ್ನು ಅನುಸರಿಸುವುದು, ಇನ್ನು ಕೆಲವೊಮ್ಮೆ ಸತ್ಯನಿಷೇಧಿಗಳೊಂದಿಗಿದ್ದು ಅವರನ್ನು ಅನುಸರಿಸುವುದು ಮಾತ್ರ ದ್ವಂದ್ವವೂ ತಪ್ಪೂ ಆಗಿದೆ. ಇಂತಹ ವ್ಯಕ್ತಿಯನ್ನೇ ಅಲ್ಲಾಹ್ ಮತ್ತು ಪ್ರವಾದಿ(ಸ) ದ್ವಂದ್ವ ನೀತಿಯ ಮುನಾಫಿಕ್ ಎಂದಿರುವುದು.

"ಇವರು ಸತ್ಯನಿಷೇಧ ಮತ್ತು ಸತ್ಯವಿಶ್ವಾಸದ ನಡುವೆ ಓಲಾಡುತ್ತಿರುತ್ತಾರೆ. ಸಂಪೂರ್ಣವಾಗಿ ಅತ್ತಲೂ ಇಲ್ಲ, ಸಂಪೂರ್ಣವಾಗಿ ಇತ್ತಲೂ ಇಲ್ಲ." (ಕುರ್‌ಆನ್ - 4: 143)

ಮುಂದುವರಿಯುತ್ತಾ ಅವರು ಹೀಗೆ ಬರೆಯುತ್ತಾರೆ- ಎಲ್ಲ ಇಮಾಮರನ್ನು ಬಿಟ್ಟು ಓರ್ವ ನಿರ್ದಿಷ್ಟ ಇಮಾಮನ ಅಂಧಾನುಕರಣೆ ಮಾಡುವವನು ಎಲ್ಲ ಸಹಾಬಿಗಳನ್ನು ಬಿಟ್ಟು ಕೇವಲ ಒಬ್ಬ ಸಹಾಬಿಯನ್ನು ಅನುಸರಿಸುವಂತೆ. ಈ ಕ್ರಮವು ಎಲ್ಲ ಸಹಾಬಿಗಳನ್ನು ಬಿಟ್ಟು ಕೇವಲ ಹ. ಅಲೀಯವರ(ರ) ಅನುಕರಣೆಯನ್ನು ಕಡ್ಡಾಯಗೊಳಿಸಿದ ಶಿಯಾಗಳಂತೆ ಅಥವಾ ನಿರ್ದಿಷ್ಟವಾಗಿ ಹ. ಉಸ್ಮಾನ್ ಮತ್ತು ಅಲೀಯವರ(ರ) ಅನುಸರಣೆಯನ್ನು ನಿರಾಕರಿಸಿದ ಖವಾರಿಜ್‌ರಂತಾಗಿದೆ. ಇದು ತಮ್ಮ ಸ್ವೇಚ್ಛೆಯನ್ನು ಅನುಸರಿಸುವ ಬಿದ್‌ಅತಿ (ನವೀನಾಚಾರಿ)ಗಳ ಕ್ರಮವಾಗಿದೆ. ಇಂತಹ ಮಂದಿ ಅಲ್ಲಾಹನು ಪ್ರವಾದಿಯನ್ನು ನಿಯೋಗಿಸಿದ ಶರೀಅತ್ ಮತ್ತು ಕ್ರಮದಿಂದ ಹೊರ ಹೋದವರೆಂದು ಕುರ್‌ಆನ್, ಸುನ್ನತ್ ಮತ್ತು ಇಜ್ಮಾಅ್

(ಒಮ್ಮತಾಭಿಪ್ರಾಯ)ನಿಂದ ಸ್ಥಿರಪಟ್ಟಿದೆ. ಎಲ್ಲ ಇಮಾಮರನ್ನು ಬಿಟ್ಟು ಕೇವಲ ಒಬ್ಬ ಇಮಾಮನ ಪಕ್ಷಪಾತಿಯಾಗಿರುವವರೆಲ್ಲರೂ ಪ್ರಸ್ತುತ ವರ್ಗಗಳಿಗೆ ಸೇರಿದಂತಾಗಿರುವರು. ಈ ಪಕ್ಷಪಾತವು ನಾಲ್ವರ ಪೈಕಿ ಒಬ್ಬ ಇಮಾಮನ ಮಟ್ಟಿಗಾಗಿರಲಿ ಅಥವಾ ಬೇರಾವುದೇ ಇಮಾಮನಿಗಾಗಿರಲಿ. (ಫತಾವಾ ಇಬ್ನು ತೀಮಿಯ್ಯಾ- ಭಾಗ, 22- ಪುಟ: 248, 254)

ಅಂಧಾನುಕರಣೆ ಮತ್ತು ಪಕ್ಷಪಾತ ತಪ್ಪು

ಇಮಾಮರುಗಳ ಮತ್ತು ಅವರ ಕರ್ಮಶಾಸ್ತ್ರೀಯ ಅಭಿಪ್ರಾಯಗಳ ಅಂಧಾನುಕರಣೆ ಮತ್ತು ಪಕ್ಷಪಾತವು ತಪ್ಪಾಗಿರುವಂತೆಯೇ ಅವರ ಅಭಿಪ್ರಾಯಗಳ ಅನುಸರಣೆಯನ್ನು ವಿರೋಧಿಸುವುದೂ ಪಕ್ಷಪಾತ ಮತ್ತು ಅನಪೇಕ್ಷಣೀಯವಾಗಿದೆ.

ಇಡೀ ಸಮುದಾಯವು ಯಾವುದಾದರೂ ಓರ್ವ ಇಮಾಮನನ್ನು ಅನುಸರಿಸುವುದು ಕಡ್ಡಾಯವೆಂದು ಹೇಳುವುದು ಯಾವ ರೀತಿ ಸರಿಯಲ್ಲವೋ ಅದೇ ರೀತಿ ಇಡೀ ಸಮುದಾಯದ ಪಾಲಿಗೆ ಅಂತಹ ಅನುಸರಣೆಯು ಹರಾಮ್ ಆಗಿದೆಯೆಂದೂ ಪಾಮರ- ವಿದ್ವಾಂಸರೆಂಬ ಬೇಧವಿಲ್ಲದೆ ಎಲ್ಲರೂ ಇಜ್ತಿಹಾದ್ ಮಾಡಬೇಕೆಂದು ಹೇಳುವುದೂ ತಪ್ಪಾಗಿದ್ದು ಬುದ್ಧಿಗೆ ನಿಲುಕದ ವಿಷಯವಾಗಿದೆ. ಅದನ್ನು ಅಂಗೀಕರಿಸಲಿಕ್ಕೂ ಸಾಧ್ಯವಿಲ್ಲ. ಏಕೆಂದರೆ ಸಮುದಾಯವು ಅಂಗೀಕರಿಸಿ ಅನುಸರಿಸುವ ಇಮಾಮರುಗಳೆಲ್ಲ ಒಮ್ಮತದಿಂದ ಹೀಗೆ ಹೇಳಿದ್ದಾರೆ-

"ನಮ್ಮ ಅಭಿಪ್ರಾಯವನ್ನು ಆಧಾರವಿಲ್ಲದೆ, ಕಾರಣ ಕಂಡು ಹಿಡಿಯದೆ ಅನುಸರಿಸುವುದು ಯಾರಿಗೂ ಧರ್ಮಸಮ್ಮತವಲ್ಲ"

"ನಮ್ಮ ಅಭಿಪ್ರಾಯಗಳ ಮತ್ತು ಮದ್‌ಹಬ್‌ನ ವಿರುದ್ಧ ಯಾವುದಾದರೂ ಸಹೀಹ್ ಹದೀಸ್ ಸಿಕ್ಕಿದರೆ ಅದುವೇ ನಮ್ಮ ಮದ್‌ಹಬ್ ಆಗಿದೆ."

ಅಲ್ಲಾಮಾ ಇಬ್ನು ತೀಮಿಯ್ಯಾ ಅವರು ಹೀಗೆ ಬರೆಯುತ್ತಾರೆ-

'ಅಲ್ಲಾಹ್, ಪ್ರವಾದಿ(ಸ) ಮತ್ತು ಸತ್ಯವಿಶ್ವಾಸಿಗಳಿಗೆ ನಿಷ್ಠೆ ತೋರಿದ ಬಳಿಕ ಮುಸ್ಲಿಮರು ಪ್ರವಾದಿಗಳ ವಾರೀಸುದಾರರಾದ ಇಮಾಮರುಗಳಿಗೆ ನಿಷ್ಠೆ ತೋರಿ ಅವರನ್ನು ಅನುಸರಿಸುವುದು ಕಡ್ಡಾಯವಾಗಿದೆ. ಅವರನ್ನು ಅಲ್ಲಾಹನು ನಕ್ಷತ್ರಗಳಂತೆ ಮಾಡಿದ್ದಾನೆ. ಅವರಿಂದ ಜನರು ನೆಲ-ಜಲಗಳ ಅಂಧಕಾರದಲ್ಲಿ ಬೆಳಕನ್ನು ಪಡೆಯುತ್ತಾರೆ. ಅವರ ಸಂಶೋಧನೆಯ ಪರವಾಗಿ ಸಮುದಾಯದ (ಬಹುಸಂಖ್ಯಾತರ) ಒಮ್ಮತವಿದೆ."

ಮುಂದುವರಿಯುತ್ತಾ ಅವರು ಹೀಗೆ ಬರೆಯುತ್ತಾರೆ-

ಇವರು ಪ್ರವಾದಿಯ ಸಮುದಾಯದಲ್ಲಿ ಪ್ರವಾದಿಯ ಉತ್ತರಾಧಿಕಾರಿಯಾಗಿದ್ದಾರೆ ಮತ್ತು ಅಳಿದು ಹೋದ ಸುನ್ನತ್‌ಗಳನ್ನು ಜೀವಂತಗೊಳಿಸುವವರಾಗಿದ್ದಾರೆ. ಅವರ ಮೂಲಕ ಮತ್ತು ಅವರ ಪ್ರಯತ್ನಗಳಿಂದಲೇ ಅಲ್ಲಾಹನ ಗ್ರಂಥವು ಈ ಲೋಕದಲ್ಲಿ ಉಳಿದಿದೆ. ಈ ಗ್ರಂಥದ ಮೇಲೆ ಚಿಂತನೆ ನಡೆಸುವುದರಿಂದಲೇ ಮತ್ತು ಅವರ ಅನುಸರಣೆಯಿಂದಲೇ ಇವರಿಗೆ ಈ ಉನ್ನತ ಸ್ಥಾನ ಲಭಿಸಿದೆ. ಅವರ ಮೂಲಕವೇ ಅಲ್ಲಾಹನ ಗ್ರಂಥ ಮಾತಾಡುತ್ತಿದೆ ಹಾಗೂ ಅಲ್ಲಾಹನ ಗ್ರಂಥದ ಮೂಲಕ ಮತ್ತು ಅದರ ಉದ್ಧರಣೆಯೊಂದಿಗೆ ಇವರು ಮಾತಾಡುತ್ತಾರೆ.

ಸಮುದಾಯವು ಅಂಗೀಕರಿಸಿರುವ ಈ ಇಮಾಮರ ಪೈಕಿ ಯಾರೂ ಪ್ರವಾದಿಯ(ಸ) ಯಾವುದಾದರೂ ದುರ್ಬಲ ಅಥವಾ ಪ್ರಬಲ ಚರ್ಯೆಯನ್ನು ವಿರೋಧಿಸಿಲ್ಲ. ಅವರೆಲ್ಲರೂ ಪ್ರವಾದಿಯ ಅನುಸರಣೆ ಕಡ್ಡಾಯವೆಂಬ ಬಗ್ಗೆ ಪೂರ್ಣ ಸಹಮತ ಹೊಂದಿದವರಾಗಿದ್ದಾರೆಂಬುದನ್ನು ಎಲ್ಲರೂ ಅರಿತಿರಬೇಕು. ಅವರೆಲ್ಲರೂ ಹೀಗೆ ಹೇಳಿದ್ದಾರೆ- "ಅಲ್ಲಾಹನ ಪ್ರವಾದಿಯ(ಸ) ಹೊರತಾದ ಯಾವುದೇ ವ್ಯಕ್ತಿಯ ಮಾತನ್ನು ಅಂಗೀಕರಿಸಬಹುದು ಅಥವಾ ತಿರಸ್ಕರಿಸಲೂ ಬಹುದು."

ಆದುದರಿಂದ ಅವರ ಪೈಕಿ ಯಾರದಾದರೂ ಫತ್ವಾ ಸಹೀಹ್ ಹದೀಸ್‌ಗೆ ವಿರುದ್ಧವಾಗಿದ್ದರೆ ಅದನ್ನು ಬಿಟ್ಟಿರುವುದಕ್ಕೆ ಅವರ ಬಳಿ ಸೂಕ್ತ ಕಾರಣವಿರಬಹುದು. ಈ ಕಾರಣಗಳಲ್ಲಿ ಮೂರು ಪ್ರಮುಖ ವಿಧಗಳಿವೆ. ಇದರಿಂದ ಹದೀಸನ್ನು ಬಿಟ್ಟಿರುವ ವಿವಿಧ ಕಾರಣಗಳ ಶಾಖೆಗಳು ಹೊರಡುತ್ತವೆ-

1) ಅದು ಪ್ರವಾದಿಯ ಮಾತಲ್ಲವೆಂಬ ನಂಬಿಕೆ.
2) ಈ ಫತ್ವಾಕ್ಕೆ ನಿರ್ದಿಷ್ಟ ಹದೀಸ್‌ನೊಂದಿಗೆ ಯಾವುದೇ ಸಂಬಂಧವಿಲ್ಲವೆಂಬ ನಂಬಿಕೆ.
3) ಈ ಹದೀಸ್‌ನ ವಿಧಿ ಅನೂರ್ಜಿತಗೊಂಡಿದೆಯೆಂಬ ನಂಬಿಕೆ.

ಮದ್‌ಹಬ್‌ಗಳಿಂದಾಗಿ ಸಮುದಾಯದಲ್ಲಿ ಭಿನ್ನಾಭಿಪ್ರಾಯವುಂಟಾಗಿದೆಯೆಂದು ಹೇಳುವವರ ಮಾತು ಸರಿಯಲ್ಲ. ಆಂಶಿಕ ಭಿನ್ನಾಭಿಪ್ರಾಯಗಳು ಸಮುದಾಯದ ಏಕತೆಗೆ ಹಾನಿಕರವಲ್ಲ. ಸಹಾಬಿಗಳು, ತಾಬಈಗಳು ಮತ್ತು ಇಮಾಮರುಗಳ ನಡುವೆ ಆಂಶಿಕ ವಿಷಯಗಳಲ್ಲಿ ಭಿನ್ನಾಭಿಪ್ರಾಯಗಳಿದ್ದುವು. ಆದರೆ ಅದರಿಂದ ಸಮುದಾಯದ ಏಕತೆಗೆ ಎಂದೂ ಹಾನಿಯಾಗಿಲ್ಲ. ಏಕೆಂದರೆ ಈ ಮಂದಿ ಭಿನ್ನಾಭಿಪ್ರಾಯಗಳ ವಿಷಯದಲ್ಲಿ ಸಂತುಲಿತ ನಿಲುವೇನೆಂದು ತಿಳಿದಿದ್ದರು.

ಅದೇ ರೀತಿ ಆಂಶಿಕ ವಿಷಯಗಳಲ್ಲಿ, ನಸ್ಸ್ (ಸ್ಪಷ್ಟ ಆಧಾರ) ಮತ್ತು ಸದೀಸ್ ಇರುವಾಗ, ಭಿನ್ನಾಭಿಪ್ರಾಯಗಳನ್ನು ನೀಗಿಸಲು ಮತ್ತು ಸಮುದಾಯವನ್ನು ಒಂದೇ ಅಭಿಪ್ರಾಯದಲ್ಲಿ ಒಂದುಗೂಡಿಸಲು ಅದೇ ಸಾಕು ಎಂದು ಹೇಳುವವರ ವಾದವೂ ಸರಿಯಲ್ಲ. ಏಕೆಂದರೆ ಇಡೀ ಸಮುದಾಯ ಒಂದು ನಸ್ಸ್‌ನಲ್ಲಿ ಏಕಾಭಿಪ್ರಾಯ ತಾಳಬೇಕಾದರೆ ಸಮುದಾಯದ ವಿದ್ವಾಂಸರು ಮತ್ತು ಸಂಶೋಧಕರು ಈ ಕೆಳಗಿನ ವಿಷಯಗಳಲ್ಲಿ ಏಕಾಭಿಪ್ರಾಯ ಹೊಂದಿರ ಬೇಕಾದುದು ಅಗತ್ಯ-

ಎಲ್ಲ ಮುಜ್ತಹಿದ್‌ಗಳ ದೃಷ್ಟಿಯಲ್ಲಿ ನಸ್ಸ್ ಅಧಿಕೃತವಾಗಿರಬೇಕು. ಅದರ ತಾತ್ಪರ್ಯದ ನೆಲೆಯಲ್ಲಿ ಅದರ ಆಧಾರವೂ ಸ್ಪಷ್ಟವಾಗಿರಬೇಕು. ಒಂದು ನಸ್ಸ್ ತನ್ನಂತಹ ಅಥವಾ ತನಗಿಂತ ಪ್ರಬಲವಾದ ಆಂಶಿಕ ಅಥವಾ ಮೂಲಭೂತವಾದ ಶರಈ ನಿಬಂಧನೆಗೆ ವಿರುದ್ಧವಾಗಿರಬಾರದು. ಏಕೆಂದರೆ ಒಂದು ನಸ್ಸ್ ಓರ್ವ ಸಂಶೋಧಕನ ದೃಷ್ಟಿಯಲ್ಲಿ ಸರಿಯಾಗಿದ್ದರೆ ಇನ್ನೋರ್ವನ ದೃಷ್ಟಿಯಲ್ಲಿ ಅದೇ ನಸ್ಸ್ ದುರ್ಬಲವಾಗಿರುತ್ತದೆ. ಒಂದು ನಸ್ಸ್ ಓರ್ವ ಇಮಾಮನ ದೃಷ್ಟಿಯಲ್ಲಿ ಸರಿಯಾಗಿರುತ್ತದೆ. ಆದರೆ ನಿರ್ದಿಷ್ಟ ಸಮಸ್ಯೆಗೆ

ಸಂಬಂಧಿಸಿದಂತೆ ಅದರ ತಾತ್ಪರ್ಯಕ್ಕಿರುವ ಆಧಾರವು ಅವರ ದೃಷ್ಟಿಯಲ್ಲಿ ಸ್ಪಷ್ಟವಲ್ಲ. ಆದರೆ ಇನ್ನೊಬ್ಬರ ದೃಷ್ಟಿಯಲ್ಲಿ ಅದು ಸ್ಪಷ್ಟವಾಗಿರುತ್ತದೆ. ಒಬ್ಬ ಸಂಶೋಧಕನ ದೃಷ್ಟಿಯಲ್ಲಿ ಒಂದು ನಸ್ಸ್ ಸಾಮಾನ್ಯ ಮತ್ತು ಸಾರ್ವತ್ರಿಕವಾಗಿರುತ್ತದೆ. ಅದೇ ನಸ್ಸ್ ಇನ್ನೊಬ್ಬ ಸಂಶೋಧಕನ ದೃಷ್ಟಿಯಲ್ಲಿ ಪರಿಮಿತವೂ ವಿಶಿಷ್ಟವೂ ಆಗಿರುತ್ತದೆ. ಒಬ್ಬ ಇಮಾಮನ ದೃಷ್ಟಿಯಲ್ಲಿ ಒಂದು ನಸ್ಸ್ ಕಡ್ಡಾಯ ಮತ್ತು ನಿಷಿದ್ಧಕ್ಕೆ ಆಧಾರವಾದರೆ ಇನ್ನೊಬ್ಬ ಇಮಾಮನ ದೃಷ್ಟಿಯಲ್ಲಿ ಅದು ಅಪೇಕ್ಷಣೀಯ ಮತ್ತು ಅರೋಚಕತೆಗೆ ಆಧಾರವಾಗಿರುತ್ತದೆ. ಒಬ್ಬ ಸಂಶೋಧಕನು ಒಂದು ನಸ್ಸನ್ನು ಆದೇಶವೆಂದು ಬಗೆದರೆ ಇನ್ನೊಬ್ಬ ಸಂಶೋಧಕನು ಅದನ್ನೇ ಅನೂರ್ಜಿತವೆಂದು ಭಾವಿಸುತ್ತಾನೆ.

ಆದರೆ ನಸ್ಸ್‌ನ ವಿಷಯದಲ್ಲಿ ಇಡೀ ಸಮುದಾಯ ಒಮ್ಮತ ಹೊಂದಿರುವುದರ ಹೊರತಾಗಿಯೂ ಸಮುದಾಯದ ಪುರಾತನ ಮತ್ತು ಆಧುನಿಕ ವಿದ್ವಾಂಸರು, ಸಂಶೋಧಕರೆಲ್ಲರೂ ನಸ್ಸ್‌ನ ಕುರಿತು ಪ್ರಸ್ತುತ ಸಂಶೋಧನಾರ್ಹ ವಿಷಯಗಳಲ್ಲೂ ಒಮ್ಮತ ಹೊಂದಿರಬೇಕಾದುದು ಅಗತ್ಯ. ಇದನ್ನು ಶೇಖುಲ್ ಇಸ್ಲಾಮ್ ಇಬ್ನು ತೀಮಿಯ್ಯಾರವರು ರಫಉಲ್ ಮುಲಾಮ್ ಅನ್ ಅಇಮ್ಮತಿಲ್ ಅಲ್‌ಲಾಮ್ ಎಂಬ ಗ್ರಂಥದಲ್ಲೂ, ಶಾಹ್‌ವಲಿಯುಲ್ಲಾದೆಹ್ಲವಿಯವರು 'ಹುಜ್ಜತುಲ್ಲಾಹಿಲ್ ಬಾಲಿಗಃ' ಎಂಬ ಗ್ರಂಥದಲ್ಲೂ, 'ಸಮುದಾಯದ ಪರಸ್ಪರ ಭಿನ್ನತೆಯ ಕಾರಣಗಳು' ಎಂಬ ಶೀರ್ಷಿಕೆಯಡಿಯಲ್ಲಿ ಪ್ರಸ್ತಾಪಿಸಿದ್ದಾರೆ.ಅವರ ಸಂಶೋಧನೆಯ ಪ್ರಕಾರ ಪರಸ್ಪರ ಭಿನ್ನತೆಯಿಂದಾಗಿ ವಿದ್ವಾಂಸರ ಮಧ್ಯೆ ಆಂಶಿಕ ವಿಷಯಗಳಲ್ಲಿ ಭಿನ್ನಾಭಿಪ್ರಾಯವುಂಟಾಗಿದೆ.

ಈ ಕಾರಣಗಳಿಂದಾಗಿ, ತಾವು ನಸ್ಸ್‌ನ ಒಂದು ತಾತ್ಪರ್ಯದ ಮೇಲೆ ಸಮುದಾಯದ ಜನರೆಲ್ಲರನ್ನೂ ಒಗ್ಗೂಡಿಸುವ ಸಾಮರ್ಥ್ಯ ಹೊಂದಿದ್ದೇವೆ ಮತ್ತು ಅದಕ್ಕಾಗಿ ಪೂರ್ಣಸಿದ್ಧತೆ ಮತ್ತು ಪ್ರಯತ್ನ ನಡೆಸಿದ್ದೇವೆಂದು ಹೇಳುವವರ ವಾದದಲ್ಲಿ ಏನೇನೂ ಹುರುಳಿಲ್ಲ. ಅವರ ಸಂಶೋಧನೆಯನ್ನು ಎಲ್ಲರೂ ಒಪ್ಪಿಕೊಳ್ಳಬೇಕು. ಅವರನ್ನು ಅನುಕರಿಸಬೇಕು. ನಸ್ಸ್‌ಗಳ ಕುರಿತು ಅವರ ಅಭಿಪ್ರಾಯಗಳನ್ನು ಒಮ್ಮತದಿಂದ ಅಂಗೀಕರಿಸಬೇಕು. ಇದರಿಂದ ಮದ್‌ಹಬ್‌ಗಳು ಅಳಿದು ಸಮುದಾಯದ ಭಿನ್ನತೆಯೂ ಹೋಗಿ ಎಲ್ಲ ಮುಸ್ಲಿಮರೂ ಒಂದೇ ವಿಷಯದಲ್ಲಿ ಒಂದುಗೂಡುವರು ಎಂಬುದು ಅವರ ವಾದ.

ಆದರೆ ಈ ಮಂದಿ ಒಂದು ವಿಷಯವನ್ನು ಮರೆಯುತ್ತಾರೆ. ಒಂದೆಡೆ ಇಮಾಮರುಗಳ ಮದ್‌ಹಬ್‌ಗಳ ಅನುಸರಣೆಯನ್ನು ಪಥಭ್ರಷ್ಟತೆಯೆಂದು ಹೇಳುವುದರ ಜೊತೆಗೆ ಇನ್ನೊಂದೆಡೆ ಇಡೀ ಸಮುದಾಯವು ತಮ್ಮ ಅಭಿಪ್ರಾಯಗಳನ್ನು ಅಂಗೀಕರಿಸಿ ಅನುಸರಿಸಬೇಕೆಂದು ಅವರು ಬಯಸುತ್ತಾರೆ. ಆದರೆ ನಸ್ಸ್‌ಗಳ ಅಧಿಕೃತತೆ ಮತ್ತು ಅವುಗಳ ಆಧಾರಗಳ ಕುರಿತು ಅವರ ಜ್ಞಾನವೂ ಸಂಶೋಧನಾತ್ಮಕವಾಗಿರುತ್ತದೆ. ಅದರಲ್ಲಿ ತಪ್ಪೂ ಸರಿಯೂ ಆಗಬಹುದು. ಯಾವ ವಿದ್ವಾಂಸ ಅಥವಾ ಸಂಶೋಧಕ ಇಜ್ತಿಹಾದ್‌ನ ಶರ್ತಗಳಿಗೆ ಬದ್ಧನಾಗಿದ್ದರೂ ಸಂಶೋಧನೆಯಲ್ಲಿ ಯಾವುದೇ ತಪ್ಪು ಸಂಭವಿಸಲಾರದೆಂದು ಅಲ್ಲಾಹನೇನೂ ಮಾತು ಕೊಟ್ಟಿಲ್ಲ.

ಅವನಿಗೆ ಪುಣ್ಯದ ಭರವಸೆ ಮಾತ್ರ ನೀಡಲಾಗಿದೆ. ಸಂಶೋಧನೆ ಸರಿಯಾದರೆ ದುಪ್ಪಟ್ಟು ಪುಣ್ಯ. ತಪ್ಪು ಸಂಭವಿಸಿದರೂ ಒಂದು ಪುಣ್ಯವಿದೆಯೆಂಬ ಶುಭವಾರ್ತೆ ನೀಡಲಾಗಿದೆ.

ಆದುದರಿಂದ ಈ ಮಂದಿಯ ಪ್ರಯತ್ನ ಪರಿಶ್ರಮಗಳಿಂದ ಈ ಮದ್‌ಹಬ್‌ಗಳೇನೂ ಅಳಿಯಲಾರದು ಮಾತ್ರವಲ್ಲ ಭಿನ್ನಾಭಿಪ್ರಾಯಗಳೂ ಅಳಿಯಲಾರದು. ಬದಲಾಗಿ ಪ್ರಸಕ್ತ ಮದ್‌ಹಬ್‌ಗಳಿಗೆ ಒಂದು ಹೊಸ ಮದ್‌ಹಬ್‌ನ ಸೇರ್ಪಡೆಯಾಗುವುದು. ತನ್ಮೂಲಕ ಸಮುದಾಯದ ಭಿನ್ನಾಭಿಪ್ರಾಯಗಳೂ ಇನ್ನಷ್ಟು ಹೆಚ್ಚಾಗುವುದು. ಇದನ್ನು ನಾವಿಂದು ಕಣ್ಣಾರೆ ಕಾಣುತ್ತಿದ್ದೇವೆ.

ಅಂಧಾನುಕರಣೆ ಕಡ್ಡಾಯವಲ್ಲ

ಕೇವಲ ಅನುಕರಣೆ ಇಡೀ ಸಮುದಾಯದ ಮೇಲೆ ಕಡ್ಡಾಯವೂ ಅಲ್ಲ, ನಿಷಿದ್ಧವೂ ಅಲ್ಲವೆಂಬುದು ತಕ್ಲೀದ್‌ನ (ಅನುಕರಣೆ) ನ್ಯಾಯ ಪೂರ್ಣ ನಿಲುವಾಗಿದೆ. ಶರೀಅತ್ ವಿದ್ವಾಂಸರ ಮತ್ತು ಪಾಮರರ ಮಧ್ಯೆ ತಾರತಮ್ಯ ಮಾಡಿದೆ. ಯಾವುದೇ ವಿಧಿಯ ಶರೀಅತ್‌ನ ಪುರಾವೆಯನ್ನು ತಿಳಿಯದ ಪ್ರತಿಯೊಬ್ಬ ವ್ಯಕ್ತಿಯೂ ನಾಲ್ವರು ಇಮಾಮರ ಪೈಕಿ ಒಬ್ಬರನ್ನು ಅನುಸರಿಸಬೇಕು. ಆದರೆ ಕೆಲವು ವಿಶಿಷ್ಟ ಸಮಸ್ಯೆಗಳಲ್ಲಿ ಇತರ ಇಮಾಮರನ್ನು ಅನುಸರಿಸುವುದರಲ್ಲಿ ಅಭ್ಯಂತರವಿಲ್ಲ. ವಿದ್ವಾಂಸರು ಯಾವುದೇ ಇಮಾಮರನ್ನು ಕಣ್ಣುಮುಚ್ಚಿ ಅನುಸರಿಸುವುದು ಮಕ್ರೂಹ್ (ಅನಪೇಕ್ಷಣೀಯ) ಆಗಿದೆ. ತಾವು ಅನುಸರಿಸುವ ಇಮಾಮರ ನಿಲುವು, ಪ್ರಸ್ತುತ ವಿಶಿಷ್ಟ ಸಮಸ್ಯೆಗಳ ಕುರಿತು, ದುರ್ಬಲವಾಗಿದೆಯೆಂದು ಮನಗಂಡಾಗಲಂತೂ ಅಂಧಾನುಕರಣೆ ಸಲ್ಲದು.

ಯಾವುದೇ ವ್ಯಕ್ತಿ, ಗುಂಪು ಅಥವಾ ಪಕ್ಷಕ್ಕಾಗಿರುವ ಪಕ್ಷಪಾತವು ಇಂತಹ ಕೆಟ್ಟ ಪಕ್ಷಪಾತಗಳ ಪೈಕಿ ಒಂದಾಗಿದೆ. ನಮ್ಮ ನಾಯಕರು ಹೇಳಿದ್ದೇ ಸರಿ, ನಮ್ಮ ಪಕ್ಷ ಅಥವಾ ಸಂಘಟನೆ ಹೇಳುವುದೇ ಸರಿ. ಅವರು ಮಾಡುವ ಕರ್ಮವು ಅತ್ಯುತ್ತಮವೂ ಅನುಕರಣಾರ್ಹವೂ ಆಗಿದೆ ಎಂದು ಹೇಳುವ ಮೂಲಕ ಇದು ಪ್ರಕಟವಾಗುತ್ತದೆ. ಅವರ ಇಡೀ ಚರಿತ್ರೆ ಪ್ರತಿಷ್ಠಿತ ಚರಿತ್ರೆಯಾಗಿದೆ. ಅವರ ಎಲ್ಲ ನಾಯಕರೂ ಪಾಪಮುಕ್ತರಾಗಿದ್ದಾರೆ. ಇಸ್ಲಾಮಿನ ನವೋತ್ಥಾನಕ್ಕಾಗಿ ಮತ್ತು ಇಸ್ಲಾಮಿನ ಆಧಾರದಲ್ಲಿ ವ್ಯಕ್ತಿ ಮತ್ತು ಸಂಘಟನೆಗಳ ಆಚಾರ-ವಿಚಾರಗಳ ಸುಧಾರಣೆಗಾಗಿ ಕೆಲಸ ಮಾಡುವ ಗುಂಪು ಅಥವಾ ಸಂಘಟನೆಗೆ ತನ್ನ ಉದ್ದೇಶ ಸಾಧನೆಯ ಹಾದಿಯಲ್ಲಿ ಹೆಚ್ಚೆ ಹೆಜ್ಜೆಗೂ ಸಂಶೋಧನೆ ನಡೆಸಿ ಹೊಸ ಹೊಸ ವಿಧಾನಗಳನ್ನು ಕಂಡು ಹುಡುಕುವುದು ಅನಿವಾರ್ಯವಾಗಿರುತ್ತದೆ. ಸಂಶೋಧನೆಯ ವೇಳೆ ಸರಿಯೂ ತಪ್ಪೂ ಆಗುವ ಸಂಭವವಿರುತ್ತದೆ. ಸಂಶೋಧಕನು ಎರಡೂ ಅವಸ್ಥೆಯಲ್ಲಿ ಪುಣ್ಯಫಲಾರ್ಹನಾಗಿದ್ದಾನೆ. ಅವನ ಸಂಕಲ್ಪ ಶುದ್ಧವಾಗಿರಬೇಕು. ಏಕೆಂದರೆ ಅವನು ಪಾಪಮುಕ್ತನಾಗಿರಲು ಸಾಧ್ಯವಿಲ್ಲ.

ಕೆಲವೊಮ್ಮೆ ಈ ಕೆಟ್ಟ ಪಕ್ಷಪಾತವು ತನ್ನ ಇಷ್ಟದ ಸಂಘಟನೆಯ ಸಂಶೋಧನಾತ್ಮಕ ಪ್ರಯತ್ನಗಳ ಪ್ರಸ್ತಾಪವನ್ನು ಅಟ್ಟಕ್ಕೇರಿಸಿ ಪ್ರಚಾರ ಮಾಡುವ ಮೂಲಕ ಪ್ರಕಟವಾಗುತ್ತದೆ.

ಆದರೆ ಇತರ ಸಂಘಟನೆಗಳ ಅಂತಹ ಪ್ರಯತ್ನಗಳಲ್ಲಿ ಯಾವಾಗಲೂ ಹುಳುಕು ಹುಡುಕಲಾಗುತ್ತದೆ. ತನ್ನ ಇಷ್ಟದ ನಾಯಕನ ಸಂಶೋಧನೆಯಲ್ಲಿ ತಪ್ಪಾದರೂ ಅವರ ಪ್ರತಿಷ್ಠೆಯನ್ನು ಎತ್ತಿ ಹಿಡಿಯಲಾಗುತ್ತದೆ. ಆದರೆ ಇಷ್ಟವಿಲ್ಲದ ನಾಯಕರು ಎಷ್ಟೇ ದೊಡ್ಡ ವಿದ್ವಾಂಸರಾದರೂ ಪ್ರಾಮಾಣಿಕತೆಯಲ್ಲಿ ಉನ್ನತ ಸ್ತರದಲ್ಲಿದ್ದರೂ ಅವರ ಬಗ್ಗೆ ನಿಂದಿಸಿಯೇ ಮಾತನಾಡಲಾಗುತ್ತದೆ.

ಇನ್ನೊಂದು ರೀತಿಯಲ್ಲೂ ಈ ಪಕ್ಷಪಾತ ಪ್ರಕಟವಾಗುತ್ತದೆ. ತನ್ನ ಇಷ್ಟದ ಸಂಘಟನೆಯ ಸ್ವರೂಪದ ರಕ್ಷಣೆಯಲ್ಲಿ, ಅದು ಒಂದೇ ಅವಸ್ಥೆಯಲ್ಲಿರಬೇಕೆಂಬಂತೆ ಉತ್ಪ್ರೇಕ್ಷೆಯಿಂದ ಕಾಣಲಾಗುತ್ತದೆ. ಅದರಿಂದ ಇಸ್ಲಾಮ್ ಮತ್ತು ಸಂದೇಶ ಪ್ರಚಾರದ ಹಿತಾಸಕ್ತಿಗಳು ಬಲಿಯಾದರೂ ಸರಿ. ಅಲ್ಲಾಹನಂತೂ ಎಲ್ಲ ಮುಸ್ಲಿಮರ ಮೇಲೆ, ಮಿತ್ರನೊಂದಿಗೂ ವೈರಿಯೊಂದಿಗೂ ನ್ಯಾಯ ಪಾಲಿಸುವುದನ್ನು ಕಡ್ಡಾಯಗೊಳಿಸಿರುತ್ತಾನೆ. ತಂದೆ-ತಾಯಿಗಳಾಗಲಿ, ಆಪ್ತೇಷ್ಟರಾಗಲಿ ತಪ್ಪು ಮಾಡಿದರೆ ಅವರ ವಿರುದ್ಧವೂ ಅಲ್ಲಾಹನಿಗಾಗಿ ನ್ಯಾಯದ ಸಾಕ್ಷಿಗಳಾಗಬೇಕು. ಯಾರೊಂದಿಗೂ ಇರುವ ದ್ವೇಷವು ಅವರ ಒಳ್ಳೆಯತನವನ್ನು ಒಪ್ಪಿಕೊಳ್ಳುವುದಕ್ಕೆ ಅಡ್ಡಿಯಾಗಬಾರದು. ಕೋಪ, ದ್ವೇಷಗಳು ಸತ್ಯ ನ್ಯಾಯದಿಂದ ವಿಮುಖವಾಗಲು ಕಾರಣವಾಗಬಾರದು ಮತ್ತು ಸುಳ್ಳನ್ನು ಅನುಸರಿಸಲು ಪ್ರೇರಕವಾಗಬಾರದು. ಅಲ್ಲಾಹನು ಹೀಗೆ ಹೇಳುತ್ತಾನೆ-

ಓ ಸತ್ಯವಿಶ್ವಾಸಿಗಳೇ! ನೀವು ನ್ಯಾಯದ ಧ್ವಜವಾಹಕರೂ ಅಲ್ಲಾಹನಿಗಾಗಿ ಸಾಕ್ಷ್ಯವಹಿಸುವವರೂ ಆಗಿರಿ. ನಿಮ್ಮ ನ್ಯಾಯ ಮತ್ತು ಸಾಕ್ಷ್ಯವು ಸ್ವತಃ ನಿಮ್ಮ ಅಥವಾ ನಿಮ್ಮ ಮಾತಾಪಿತರ ಮತ್ತು ನಿಮ್ಮ ಸಂಬಂಧಿಕರ ವಿರುದ್ಧವಾಗಿದ್ದರೂ ಸರಿಯೆ (ಅನ್ನಿಸಾ: 135)

ಒಂದು ವಿಭಾಗದ ಮೇಲಿನ ದ್ವೇಷವು ನಿಮ್ಮನ್ನು ನ್ಯಾಯದಿಂದ ವಿಮುಖರಾಗುವಷ್ಟು ರೇಗಿಸದಿರಲಿ. ನ್ಯಾಯ ಪಾಲಿಸಿರಿ. ಇದು ದೇವಭಯಕ್ಕೆ ಹೆಚ್ಚು ಅನುಗುಣವಾಗಿರುತ್ತದೆ.

(ಅಲ್‌ಮಾಇದಃ : 8)

ಕೊನೆಯದಾಗಿ, ಒಬ್ಬನು ಈ ಕೆಳಗಿನ ಗುಣಗಳನ್ನು ತನ್ನಲ್ಲಿ ಬೆಳೆಸಿಕೊಳ್ಳುವ ವರೆಗೆ ವೈಯಕ್ತಿಕ, ಸಂಘಟನೆಗೆ ಸಂಬಂಧಿಸಿದ ಅಥವಾ ವರ್ಗೀಯ ಪಕ್ಷಪಾತದಿಂದ ಮುಕ್ತನಾಗಲಾರ. ಆದುದರಿಂದ ಪ್ರತಿಯೊಬ್ಬ ಸತ್ಯವಿಶ್ವಾಸಿಯು ಈ ಗುಣಗಳನ್ನು ತನ್ನಲ್ಲಿ ಬೆಳೆಸಿಕೊಳ್ಳಬೇಕು. ಅವನ ದೃಷ್ಟಿ ಮತ್ತು ಗಮನವು ಒಬ್ಬನ ಮಾತಿನ ಮೇಲಿರಬೇಕೇ ವಿನಾ ಅವನ ವ್ಯಕ್ತಿತ್ವದ ಮೇಲಿರಬಾರದು. ಅವನು ತನ್ನ ತಪ್ಪನ್ನು ಮುಕ್ತಮನಸ್ಸಿನಿಂದ ಒಪ್ಪಿಕೊಳ್ಳುವವನಾಗಬೇಕು. ಅವನು ತನ್ನನ್ನು ವಿಮರ್ಶೆಗೆ ಒಡ್ಡುವಂತಹ ಧೈರ್ಯವುಳ್ಳವನಾಗಬೇಕು. ಇತರರು ಮಾಡುವ ಟೀಕೆಗಳನ್ನು ತಾಳ್ಮೆಯಿಂದ ಸ್ವಾಗತಿಸುವವನಾಗಬೇಕು. ಅವನು ಇತರರ ಜ್ಞಾನವನ್ನು ಒಪ್ಪಿಕೊಂಡು ಅದರಿಂದ ಪ್ರಯೋಜನ ಪಡೆಯುವವನಾಗಿರಬೇಕು. ಅವನು ವಿರೋಧಿಗಳ ಪ್ರತಿಭೆಗಳನ್ನು ಪ್ರಶಂಸಿಸುವವನಾಗಬೇಕು. ಅವರಿಂದ ಬೋಧನೆ ಪಡೆಯುವವನಾಗಬೇಕು ಮತ್ತು ವಿರೋಧಿಗಳ ಮೇಲೆ ಹೊರಿಸಲಾಗುವ ಸುಳ್ಳಾರೋಪಗಳನ್ನು ಖಂಡಿಸುವವನಾಗಬೇಕು.

ಪರರ ಬಗ್ಗೆ ಉತ್ತಮ ಭಾವನೆ

ತನ್ನದು ಮಾತ್ರ ಸರಿ ಇತರರದು ತಪ್ಪು ಎಂದು ಭಾವಿಸುವುದು ಬೂಟಾಟಿಕೆಯಾಗಿದ್ದು, ಅದು ಸತ್ಯವಿಶ್ವಾಸಿ ನೀತಿಗೆ ವಿರುದ್ಧವಾಗಿದೆ. ಆದುದರಿಂದ ಸತ್ಯವಿಶ್ವಾಸಿಗಳು ಪರಸ್ಪರರ ನಿಲುವು ಮತ್ತು ಕಾರ್ಯಗಳ ವಿಮರ್ಶೆ ನಡೆಸುವಾಗ ಪಕ್ಷಪಾತದ ಕನ್ನಡಕವನ್ನು ತೆಗೆದಿಟ್ಟು ನೀತಿ ನ್ಯಾಯ ಮತ್ತು ಉತ್ತಮ ಭಾವನೆಯೊಂದಿಗೆ ನಡೆಸಬೇಕು. ಸತ್ಯವಿಶ್ವಾಸಿಗಳು ಡಂಬಾಚಾರ ಮತ್ತು ಅಹಂಭಾವದಿಂದ ದೂರವಿರಬೇಕೆಂದು ಅಲ್ಲಾಹನು ತಾಕೀತು ಮಾಡಿದ್ದಾನೆ. ಇದು ಮಾನವನನ್ನು ವಿನಾಶ ಕೂಪಕ್ಕೆಸೆಯುವಂತಹ ಅಪಾಯಕಾರಿಯಾದ ಗುಣಗಳಾಗಿವೆ. ಏಕೆಂದರೆ ತನ್ನನ್ನು ಪರಿಶುದ್ಧನೆಂದು ಭಾವಿಸುವುದರಿಂದ ಮತ್ತು ಆತ್ಮ ಪ್ರಶಂಸೆ ಮಾಡುವುದರಿಂದಲೂ ಅಲ್ಲಾಹನು ಮಾನವನನ್ನು ತಡೆದಿರುತ್ತಾನೆ. ತಮ್ಮನ್ನು ಪರಿಶುದ್ಧರೆಂದು ವಾದಿಸುತ್ತಿದ್ದ ಯಹೂದಿಯರನ್ನು ಖಂಡಿಸುತ್ತಾ ಅಲ್ಲಾಹನು ಹೀಗೆ ಹೇಳಿದ್ದಾನೆ-

"ಆದುದರಿಂದ ನೀವು ನಿಮ್ಮ ಆತ್ಮಪರಿಶುದ್ಧತೆಯ ಬಗ್ಗೆ ಹೇಳಿಕೊಳ್ಳಬೇಡಿರಿ. ನಿಜವಾದ ಧರ್ಮ ನಿಷ್ಠನು ಯಾರೆಂಬುದನ್ನು ಅವನೇ ಹೆಚ್ಚು ಬಲ್ಲನು" (ಅನ್ನಜ್ಮ್: 32)

ಆದುದರಿಂದಲೇ ಕೆಲವು ಪೂರ್ವಿಕ ವಿದ್ವಾಂಸರು ಹೀಗೆ ಹೇಳಿದ್ದಾರೆ- ಸತ್ಯವಿಶ್ವಾಸಿಯು ಡಂಬಾಚಾರಿಯೋ ತನ್ನ ಪರಿಶುದ್ಧತೆಯ ಬಗ್ಗೆ ಗರ್ವಿಷ್ಠನೋ ಆಗಿರುವುದಿಲ್ಲ. ತನ್ನ ಆತ್ಮ ಪರಿಶೋಧನೆ ಮಾಡುವಾಗ ಅಕ್ರಮಿ ರಾಜನಿಗಿಂತಲೂ ವ್ಯಾಪಾರದಲ್ಲಿ ಪಾಲುದಾರನಾಗಿರುವ ಜಿಪುಣನಿಗಿಂತಲೂ ಹೆಚ್ಚು ಕಠೋರನಾಗಿರುತ್ತಾನೆ. ಅಲ್ಲಾಹನ ಮತ್ತು ದಾಸರ ಹಕ್ಕುಗಳ ಈಡೇರಿಕೆಯಲ್ಲಿ ಅವನಿಂದ ಸಂಭವಿಸುವ ಲೋಪ ದೋಷಗಳ ಪ್ರಥಮ ಹೊಣೆಗಾರಿಕೆಯನ್ನು ಆತ ತನ್ನ ಮೇಲೆಯೇ ಹೊರಿಸುತ್ತಾನೆ.

ಪ್ರಾಮಾಣಿಕ ಸತ್ಯವಿಶ್ವಾಸಿಯು ಒಳಿತು ಮತ್ತು ಆಜ್ಞಾಪಾಲನೆಯಲ್ಲಿ ಸಕ್ರಿಯನಾಗಿರುತ್ತಾನೆ. ಅಲ್ಲಾಹನ ಧರ್ಮದ ಉತ್ಥಾನಕ್ಕಾಗಿ ಮತ್ತು ಪ್ರಚಾರ ಕಾರ್ಯದಲ್ಲಿ ಜೀವ-ಸೊತ್ತುಗಳನ್ನು ಅರ್ಪಿಸಲು ಸದಾ ಸಿದ್ಧನಾಗಿರುತ್ತಾನೆ. ಆಗಲೂ ಆತ ತನ್ನ ಈ ಕರ್ಮಗಳು ಅಲ್ಲಾಹನ ಬಳಿ ಸ್ವೀಕೃತವಾಗಬಹುದೆ ಎಂಬ ಚಿಂತೆಯಲ್ಲಿರುತ್ತಾನೆ.

ಸತ್ಯವಿಶ್ವಾಸಿಯು ಯಾವಾಗಲೂ ತನ್ನ ವಿಷಯದಲ್ಲಿ ದಿಟ್ಟತನದ ಮಾರ್ಗವನ್ನು ಅವಲಂಬಿಸುತ್ತಾನೆ. ನೆಪಗಳಿದ್ದರೂ ನುಣುಚಿಕೊಳ್ಳುವುದಿಲ್ಲ. ಆದರೆ ಅಲ್ಲಾಹನ ದಾಸರ ನೆಪಗಳನ್ನು ಕೂಡಲೇ ಒಪ್ಪಿಕೊಳ್ಳುತ್ತಾನೆ. ವಿಶೇಷವಾಗಿ ತನ್ನ ಜೊತೆಯಲ್ಲಿ ಧರ್ಮಸಂಸ್ಥಾಪನೆಯ ಕಾರ್ಯದಲ್ಲಿ ನಿರತರಾಗಿರುವ ತನ್ನ ಸಹೋದರರ ನೆಪಗಳನ್ನು ಅಂಗೀಕರಿಸಿಕೊಳ್ಳುತ್ತಾನೆ. ತನ್ನ ಸಂಗಾತಿಗಳ ಬಗ್ಗೆ ಪೂರ್ವಕಾಲದ ವಿದ್ವಾಂಸರ- ನಾನು ನನ್ನ ಸಹೋದರನ ಎಪ್ಪತ್ತಲ್ಲ, ಅದಕ್ಕಿಂತಲೂ ಹೆಚ್ಚಿನ ನೆವನಗಳನ್ನು ಒಪ್ಪಿಕೊಳ್ಳುವೆನು ಎಂಬ- ಮಾತನ್ನು ಯಾವಾಗಲೂ ನೆನಪಿಡುತ್ತಾನೆ. ಏಕೆಂದರೆ ನನಗೆ ತಿಳಿದಿಲ್ಲದ ನನ್ನ ಸಹೋದರನ ಅಜ್ಞಾತ ಸ್ಥಿತಿಯು ಬಹುಶಃ ಹಾಗಿರಬಹುದೆಂದು ಅವನು ಭಾವಿಸುತ್ತಾನೆ.

ಅಲ್ಲಾಹನ ಮೇಲೂ ಆತನ ದಾಸರ ಮೇಲೂ ಉತ್ತಮ ಭಾವನೆಯಿರಿಸುವುದು

ಸತ್ಯವಿಶ್ವಾಸದ ಉನ್ನತ ಮಟ್ಟವಾಗಿದೆ. ಅಲ್ಲಾಹನ ಮೇಲೂ ಆತನ ದಾಸರ ಮೇಲೂ ಕೆಟ್ಟ ಭಾವನೆ ಯಿರಿಸುವುದು ಸತ್ಯವಿಶ್ವಾಸದ ಅತ್ಯಂತ ಕೆಳಮಟ್ಟವಾಗಿದೆ. ಕೆಟ್ಟ ಭಾವನೆಯೆಂದರೆ ತನ್ನ ಭಾವನೆಗಳಿಗೆ ಶರೀಅತ್ ಸಂಬಂಧವಾದ ಯಾವುದೇ ಪುರಾವೆಯಿಲ್ಲದಿರುವುದಾಗಿದೆ. ಅಲ್ಲಾಹನು ಈ ಕೆಟ್ಟ ಗುಣದ ಬಗ್ಗೆ ಈ ರೀತಿ ಎಚ್ಚರಿಸಿರುವನು-

"ಸತ್ಯವಿಶ್ವಾಸಿಗಳೇ! ಹೆಚ್ಚಿನ ಗುಮಾನಿಗಳಿಂದ ದೂರವಿರಿ. ನಿಶ್ಚಯವಾಗಿಯೂ ಕೆಲವು ಗುಮಾನಿಗಳು ಪಾಪವಾಗಿವೆ." (ಅಲ್ ಹುಜುರಾತ್: 12)

ಪ್ರವಾದಿ(ಸ) ಹೇಳಿದರು- ನೀವು ಕೆಟ್ಟ ಗುಮಾನಿಗಳಿಂದ ದೂರಿವಿರಿ. ಏಕೆಂದರೆ ಕೆಟ್ಟ ಗುಮಾನಿಯು ಅತಿ ದೊಡ್ಡ ಸುಳ್ಳಾಗಿದೆ. (ಬುಖಾರಿ, ಮುಸ್ಲಿಮ್)

ಆದುದರಿಂದ ಪ್ರತಿಯೊಬ್ಬ ಸತ್ಯವಿಶ್ವಾಸಿಯು ತನ್ನೋರ್ವ ಸಹೋದರನ ಕುರಿತು ತನ್ನನ್ನು ಕೆಟ್ಟ ಗುಮಾನಿಯಲ್ಲಿ ಸಿಲುಕಿಸಬಲ್ಲಂತಹ ವಿಷಯವೇನಾದರೂ ತಿಳಿದರೆ ಆಗಲೂ ಅವನು ಉತ್ತಮ ಭಾವನೆಯನ್ನಿರಿಸಬೇಕು. ಈ ಕುರಿತು ಸತ್ಯವಿಶ್ವಾಸಿಗಳಿಗೆ ಇಫ್ಕ್ (ಸುಳ್ಳಾರೋಪ)ನ ಘಟನೆಯಿಂದ ಮಾರ್ಗದರ್ಶನ ದೊರೆಯುತ್ತದೆ-

"ನೀವೆಲ್ಲರೂ ಅದನ್ನು ಕೇಳಿದಾಗ ಸತ್ಯವಿಶ್ವಾಸಿ ಸ್ತ್ರೀ-ಪುರುಷರು ತಮ್ಮ ಬಗ್ಗೆ ಸದ್ಗುಮಾನಿಯನ್ನೇಕೆ ತಾಳಲಿಲ್ಲ ಮತ್ತು ಇದು ಅಪ್ಪಟ ಸುಳ್ಳಾರೋಪವೆಂದೇಕೆ ಹೇಳಲಿಲ್ಲ." (ಅನ್ನೂರ್: 12)

ಒಬ್ಬ ಮುಸ್ಲಿಮನಿಂದ ಒಂದು ಕೆಲಸ ಸಂಭವಿಸಿರುತ್ತದೆ. ಅದರ ವಿವಿಧ ಕೋನಗಳಿಂದ ಅದು ಕೆಟ್ಟದೆಂದು ಸಾಬೀತಾಗುತ್ತದೆ. ಆದರೆ ಒಂದು ಕೋನವು ಅದು ಒಳ್ಳೆಯ ಕೆಲಸವಾಗಿತ್ತೆಂಬುದಕ್ಕೆ ಆಧಾರವಾಗಿದ್ದರೆ, ಆಗ ಆತನನ್ನು ಒಳ್ಳೆಯವನೆಂದೇ ಭಾವಿಸಬೇಕು. ಒಳಿತನ್ನು ತೋರಿಸ ಬಲ್ಲಂತಹ ಯಾವುದೇ ಸೂಚನೆ ಅದರಲ್ಲಿಲ್ಲದಿದ್ದರೆ, ಆಗಲೂ ಆರೋಪ ಹೊರಿಸುವಲ್ಲಿ ಅವಸರ ಪಡಬಾರದು. ಏಕೆಂದರೆ ಸದ್ಯೋಭವಿಷ್ಯದಲ್ಲಿ ಆತನ ಏನಾದರೂ ನೆವನ ಪ್ರಕಟವಾಗಿ ಆತ ಆ ಆರೋಪದಿಂದ ಮುಕ್ತನಾಗಲೂ ಬಹುದು. ಆಗ ನಿಮಗೆ ಅವಮಾನವಾದೀತು.

ಮುಸ್ಲಿಮ್ ಸಮಾಜದಲ್ಲಿ ಪರಸ್ಪರ ದೋಷಾನ್ವೇಷಣೆಯಲ್ಲಿ ತೊಡಗುವುದು ಅತ್ಯಂತ ಕೆಟ್ಟ ಗುಣವಾಗಿದೆ. ಹದೀಸ್‌ನಲ್ಲಿ ಈ ಬಗ್ಗೆ ತೀವ್ರ ಎಚ್ಚರಿಕೆ ನೀಡಲಾಗಿದೆ- ಮನುಷ್ಯನ ಯಾವ ಚಿಕ್ಕಪುಟ್ಟ ದೋಷವೂ ಮರೆಯಾಗಿಲ್ಲದ ಆ ದೇವನನ್ನು ಭಯಪಡಬೇಕು. ಆತನು ಯಾರನ್ನಾದರೂ ಅಪಮಾನಿಸ ಬಯಸಿದರೆ ಜನರ ಮುಂದೆಯೇ ಅಪಮಾನಿಸಬಲ್ಲನು.

ಈ ಉದ್ದೇಶಿತ ಚಾರಿತ್ರ್ಯವನ್ನು ಮುಸ್ಲಿಮರು ಪರಸ್ಪರ ಪ್ರದರ್ಶಿಸಬೇಕಾಗಿದೆ. ಇನ್ನು ಇಸ್ಲಾಮಿನ ಬಗ್ಗೆ ಪ್ರೀತ್ಯಾದರಗಳನ್ನು ಹೊಂದಿರುವ ಮತ್ತದರ ಸೇವೆಗಾಗಿ ತಮ್ಮನ್ನು ಮುಡಿಪಾಗಿಟ್ಟ ಸತ್ಯಪ್ರಚಾರಕರು, ಇಸ್ಲಾಮಿನ ರಕ್ಷಣೆಗಾಗಿ ಸದಾ ಕಾರ್ಯೋನ್ಮುಖರಾಗಿರುವ ಹಾಗೂ ಅದಕ್ಕಾಗಿ ತ್ಯಾಗಗಳನ್ನು ನೀಡುವ ಜನರು ಈ ವಿಷಯದಲ್ಲಿ ಆತ್ಮನಿಯಂತ್ರಣ, ಸಹನೆ, ಧರ್ಮನಿಷ್ಠೆಯ ಉನ್ನತ ಸ್ಥಾನದಲ್ಲಿರಬೇಕಾದುದು ಅವಶ್ಯಕ. ಇದನ್ನು ಪ್ರತಿಯೊಬ್ಬನೂ ಸ್ವಯಂ ಗ್ರಹಿಸಬಲ್ಲನು. ಅದರಂತೆಯೇ ತನ್ನ ಆತ್ಮಪರಿಶೋಧನೆ ನಡೆಸಬಲ್ಲನು.

ಇಸ್ಲಾಮಿಗಾಗಿ ಕೆಲಸ ಮಾಡುವವರು ಮತ್ತು ದೊಡ್ಡ ತ್ಯಾಗಬಲಿದಾನಗಳನ್ನು ನೀಡುವವರು ಪರಸ್ಪರರ ಮೇಲೆ ವಂಚನೆ ಹಾಗೂ ಕೆಲವು ಶಕ್ತಿಗಳ ಏಜಂಟ್‌ರೆಂಬ ಆರೋಪವನ್ನು ಹೊರಿಸುವುದು ಅತ್ಯಂತ ವಿಷಾದನೀಯ. ಇದು ಒಂದು ಗುಂಪು ಅಥವಾ ಸಂಘಟನೆಯು ಇಸ್ಲಾಮಿನ ಉತ್ಥಾನಕ್ಕಾಗಿ ಅನುಸರಿಸಿರುವ ಕಾರ್ಯನೀತಿಯನ್ನು ಇನ್ನೊಂದು ಸಂಘಟನೆಯು ವಿರೋಧಿಸುತ್ತಿದೆಯೆಂಬ ಕಾರಣಕ್ಕಾಗಿ ಮಾತ್ರ. ಸ್ವಲ್ಪವಾದರೂ ಧರ್ಮದ ತಿಳುವಳಿಕೆ ಇರುವವರು ಇಂತಹ ಚಟುವಟಿಕೆಗಳಲ್ಲಿ ನಿರತವಾಗಿರುವುದು ಯಾವ ರೀತಿಯಿಂದಲೂ ಸಮರ್ಥನೀಯವಲ್ಲ.

ಇಸ್ಲಾಮಿನ ಉತ್ಥಾನವು ರಾಜಕೀಯ ರಂಗದಲ್ಲೂ ಆಗಬೇಕಾಗಿದೆ. ಧರ್ಮ ಮತ್ತು ಶರೀಅತ್‌ನ ಬುನಾದಿಯಲ್ಲಿರುವ ರಾಜಕೀಯದಲ್ಲಿ ದೃಷ್ಟಿಕೋನ ಮತ್ತು ಕಾರ್ಯನೀತಿಯ ಭಿನ್ನತೆಗಳಿಗೆ ವ್ಯಾಪಕ ಅವಕಾಶವಿದೆ. ಆದುದರಿಂದ ಒಂದೇ ವಿಷಯದಲ್ಲಿ ಔಚಿತ್ಯ ಮತ್ತು ಅನೌಚಿತ್ಯದ ಅಂದಾಜು ಮತ್ತು ನಿರ್ಣಯದಲ್ಲಿ ಜನರಲ್ಲಿ ದೃಷ್ಟಿಕೋನ ಮತ್ತು ಕಾರ್ಯವಿಧಾನದಲ್ಲಿ ಬಹಳಷ್ಟು ಭಿನ್ನಾಭಿಪ್ರಾಯಗಳಿರುತ್ತವೆ. ಒಂದು ವರ್ಗವು ಆರಂಭಿಕ ಸಂದೇಶ ಪ್ರಚಾರದ ಹಂತದಲ್ಲಿ ಆಡಳಿತಗಾರರಲ್ಲಿ ಪ್ರಚಾರಕಾರ್ಯ ನಡೆಸುವುದು ಸರಿಯಲ್ಲವೆಂದು ಭಾವಿಸಿದರೆ, ಇನ್ನೊಂದು ವರ್ಗವು ಅದನ್ನು ಕಡ್ಡಾಯವೆಂದು ಬಗೆಯುತ್ತದೆ. ಒಂದು ವರ್ಗವು ಪ್ರಜಾಸತ್ತಾತ್ಮಕ ರಾಜಕೀಯ ವಿಧಾನದ ಮೂಲಕ ಕ್ರಾಂತಿ ತರಬಹುದೆಂದು ಭಾವಿಸಿದರೆ ಇನ್ನೊಂದು ವರ್ಗವು ಸೈನಿಕ ಕಾರ್ಯಾಚರಣೆಯಾಗಬೇಕೆಂದು ಭಾವಿಸುತ್ತದೆ. ಒಂದು ವರ್ಗವು ಉದ್ದೇಶಿತ ಬದಲಾವಣೆಗಾಗಿ ಪ್ರಜಾಸತ್ತಾತ್ಮಕ ಚುನಾವಣೆಯಲ್ಲಿ ಭಾಗವಹಿಸುವುದನ್ನು ಸರಿಯೆಂದು ಬಗೆದರೆ ಇನ್ನೊಂದು ವರ್ಗವು ಅದೊಂದು ವ್ಯರ್ಥ ಹಾಗೂ ಸಮಯ ಕೊಲ್ಲುವ ಕೃತ್ಯವೆಂದು ಭಾವಿಸುತ್ತದೆ.

ಭಿನ್ನಾಭಿಪ್ರಾಯಗಳಿರುವ ಹಾಗೂ ಇಜ್ತಿಹಾದ್ ಬಯಸುವ ವಿಷಯಗಳಲ್ಲಿ ಮುಜ್ತಹಿದ್‌ರ ಸಂಶೋಧನೆಯೇ ಜನರು ಅನುಸರಿಸುವಂತಹದ್ದಾಗಿರುತ್ತದೆ. ಇಜ್ತಿಹಾದ್ ಸರಿಯಾದರೆ ದುಪ್ಪಟ್ಟು ಪುಣ್ಯವಿದೆ. ಅದು ತಪ್ಪಾದರೂ ಮುಜ್ತಹಿದ್‌ಗೆ ಒಂದು ಪುಣ್ಯವಿದೆ, ಆದ್ದರಿಂದ ಇಜ್ತಿಹಾದ್‌ನಲ್ಲಿ ತಪ್ಪಾದರೆ ಆತನನ್ನೂ ಆತನ ಅನುಯಾಯಿಗಳನ್ನೂ ಆಕ್ಷೇಪಿಸುವಂತಿಲ್ಲ. ಅದೇ ರೀತಿ ಅದು ಸರಿಯಾದರೆ ಅವರ ಇಜ್ತಿಹಾದ್ ಕುರ್‌ಆನ್ ಮತ್ತು ಪ್ರವಾದಿಚರ್ಯೆಯಂತೆ ಅದು ಶಾಶ್ವತವೆಂದು ಪರಿಗಣಿಸುವಂತಿಲ್ಲ. ಈ ಕಾರಣಗಳಿಂದಾಗಿ ಯಾವುದೇ ವ್ಯಕ್ತಿ ಅಥವಾ ಸಂಘಟನೆಯ ಯಾವುದಾದರೂ ಇಜ್ತಿಹಾದ್‌ಗೆ ಕುರ್‌ಆನ್ ಮತ್ತು ಪ್ರವಾದಿಚರ್ಯೆಯ ಸ್ಥಾನ ಕೊಟ್ಟು, ಶಾಶ್ವತವಾಗಿ ಅದಕ್ಕೆ ಅಂಟಿಕೊಳ್ಳುವುದು ಯಾರಿಗೂ ಭೂಷಣವಲ್ಲ. ಸ್ಥಿತಿಗತಿಗಳು ಮತ್ತು ಔಚಿತ್ಯಗಳು ಈ ರಂಗದಲ್ಲಿ ಬದಲಾದಂತೆ ವಿಧಿಯೂ ಬದಲಾಗುತ್ತದೆ. ಎದುರಾಗುತ್ತಿರುವ ಹೊಸ ಪರಿಸ್ಥಿತಿಯಲ್ಲಿ ಒಂದು ಸಂಶೋಧಿತ ಹಲಾಲ್, ಹರಾಮ್ ಆಗಿಯೂ, ಹರಾಮ್ ಹಲಾಲ್ ಆಗಿಯೂ ಬದಲಾಗಬಹುದು. ಯಾವುದೇ ವಿಶಿಷ್ಟ ವ್ಯಕ್ತಿ ಅಥವಾ ಗುಂಪಿನ ಸಂಶೋಧನೆಗೆ ಎಲ್ಲ ಅವಸ್ಥೆಗಳಲ್ಲೂ ಅಂಟಿಕೊಂಡರೆ ಅದರೊಂದಿಗೆ ಕೆಟ್ಟಗುಮಾನಿ ಮತ್ತು ಸ್ವೇಚ್ಛೆಯೂ ಸೇರಿಕೊಂಡರೆ ಇಂತಹ ಸಂದರ್ಭಗಳಲ್ಲಿ ಅದು ಇನ್ನಷ್ಟು ಅಪಾಯಕಾರಿಯಾಗಿ

ಪರಿಣಮಿಸುತ್ತದೆ. ಈ ದೌರ್ಬಲ್ಯದಿಂದಾಗಿ ಅಲ್ಲಾಹನು ವಿದ್ವಾಂಸರ ಹೃದಯ ಮತ್ತು ಶ್ರವಣಕ್ಕೆ ಮುದ್ರೆಯೊತ್ತುತ್ತಾನೆ ಮತ್ತು ಅವರ ದೃಷ್ಟಿಗೆ ಪರದೆ ಹಾಕಿ ಬಿಡಲಾಗುತ್ತದೆ. ಅವರು ಜ್ಞಾನದ ಹೊರತಾಗಿಯೂ ಪಥಭ್ರಷ್ಟತೆಯ ಕೂಪಕ್ಕೆ ಬಿದ್ದು ಬಿಡುತ್ತಾರೆ. ಅಲ್ಲಾಹನು ಸತ್ಯವಿಶ್ವಾಸಿಗಳಿಗೆ ಈ ರೀತಿ ಎಚ್ಚರಿಕೆ ನೀಡುತ್ತಾನೆ.

"ವಾಸ್ತವದಲ್ಲಿ ಜನರು ಕೇವಲ ಊಹೆಯನ್ನು ಅನುಸರಿಸುತ್ತಾರೆ ಮತ್ತು ಸ್ವೇಚ್ಛೆಗಳ ದಾಸರಾಗಿ ಬಿಟ್ಟಿದ್ದಾರೆ." (ಅನ್ನಜ್ಮ್: 23)

"ದೇವ ಮಾರ್ಗದರ್ಶನದ ಹೊರತು ಕೇವಲ ತನ್ನ ಸ್ವೇಚ್ಛೆಗಳನ್ನು ಅನುಸರಿಸುವವನಿಗಿಂತ ಹೆಚ್ಚು ದಾರಿಗೆಟ್ಟವನು ಇನ್ನಾರಿರಬಹುದು" (ಅಲ್‌ಕಸಸ್: 50)

ವಾಸ್ತವವಾಗಿ ಅಲ್ಲಾಹನ ಸಂಪ್ರೀತಿಗಾಗಿ ಪ್ರಾಮಾಣಿಕತೆಯೊಂದಿಗೆ ಪ್ರಯತ್ನಿಸುವುದರಿಂದ ಏಕತೆ ಮತ್ತು ಒಗ್ಗಟ್ಟು ಉಂಟಾಗುತ್ತದೆ. ಅದಕ್ಕೆ ವ್ಯತಿರಿಕ್ತವಾಗಿ ಸ್ವೇಚ್ಛೆಯ ಅನುಸರಣೆಯಿಂದ ಒಡಕುಂಟಾಗುತ್ತದೆ. ಏಕೆಂದರೆ ಸತ್ಯವು ಒಂದೇ ಆಗಿದೆ. ಆದರೆ ಚಿತ್ತವು ಮನುಷ್ಯನಷ್ಟೇ ಸಂಖ್ಯೆಯಲ್ಲಿರುತ್ತದೆ. ಸ್ವೇಚ್ಛೆಯೂ ಅಗಣಿತವಾಗಿದೆ. ಸಮುದಾಯದೊಳಗೆ ನಿರಾಧಾರ ಮತ್ತು ಅವಾಸ್ತವಿಕ ಗುಂಪುಗಾರಿಕೆ ಹಾಗೂ ಭಿನ್ನಾಭಿಪ್ರಾಯಗಳು- ಅದು ಹಳತಾಗಿದ್ದರೂ ನವೀನವಾಗಿದ್ದರೂ- ಈ ಕೆಟ್ಟ ಗುಮಾನಿ ಮತ್ತು ಸ್ವೇಚ್ಛೆಯ ಅನುಸರಣೆಯಿಂದಲೇ ಅಪಾಯಕಾರಿ ಹಾಗೂ ಬಿಡಿಸಲಾಗದ ಕಗ್ಗಂಟಾಗಿ ಮಾರ್ಪಟ್ಟಿದೆ.

ಅಪವಾದ ಮತ್ತು ನಿಂದನೆ

ಆಂಶಿಕ ಭಿನ್ನಾಭಿಪ್ರಾಯಗಳಲ್ಲಿ ಪರಸ್ಪರ ನಿಂದನೆ ಮತ್ತು ಅಪವಾದದಿಂದ ದೂರವಿರುವುದು ಸಮುದಾಯದ ಒಗ್ಗಟ್ಟಿಗೆ ಅನಿವಾರ್ಯವಾಗಿದೆ. ಏಕೆಂದರೆ ಇಬ್ಬರು ಮುಜ್ತಹಿದ್‌ಗಳ ವಿಭಿನ್ನ ಸಂಶೋಧನೆಗಳ ಪೈಕಿ ಒಂದು ಖಂಡಿತ ಸರಿಯಾದುದೆಂದು ಹೇಳಲಾಗದು. ಹೆಚ್ಚೆಂದರೆ ಒಂದಕ್ಕೆ ಇನ್ನೊಂದಕ್ಕಿಂತ ಪ್ರಾಶಸ್ತ್ಯ ನೀಡಬಹುದು. ಅದು ಕೂಡಾ ಊಹೆಯನ್ನು ಆಧರಿಸಿಯೇ ಹೊರತು ನಿಖರ ಮತ್ತು ಸ್ಪಷ್ಟ ಆಧಾರದಿಂದಲ್ಲ.

ಆದುದರಿಂದ ಸಂಶೋಧನಾತ್ಮಕ ವಿಷಯಗಳಲ್ಲಿ ನಿಂದನೆ ಆರೋಪಗಳು ಯಾವ ಸ್ಥಿತಿಯಲ್ಲೂ ಸರಿಯಲ್ಲ. ಏಕೆಂದರೆ ಈ ರಂಗದಲ್ಲಿ ತಪ್ಪು ಮಾಡುವವನು ಅಸಹಾಯಕ ಮಾತ್ರವಲ್ಲ ಹದೀಸ್‌ನ ಪ್ರಮಾಣ ಪ್ರಕಾರ ಆತ ಒಂದು ಪುಣ್ಯಕ್ಕೆ ಅರ್ಹನೂ ಆಗಿದ್ದಾನೆ. ಹಾಗಿರುವಾಗ ತಪ್ಪಿನಿಂದಾಗಿ ಪುಣ್ಯ ಪಡೆಯುವವನನ್ನು ನಿಂದಿಸುವುದು ಹೇಗೆ ಸರಿಯಾದೀತು! ಹಿಂದಿನವರು ಇಂತಹ ಭಿನ್ನಾಭಿಪ್ರಾಯಗಳಿಗಾಗಿ ಪರಸ್ಪರರನ್ನು ನಿಂದಿಸುತ್ತಿರಲಿಲ್ಲ. ಬದಲಾಗಿ ಅಭಿಪ್ರಾಯ ಭಿನ್ನತೆಗಳ ಹೊರತಾಗಿಯೂ ಪರಸ್ಪರರ ಜ್ಞಾನ ಮತ್ತು ದೇವನಿಷ್ಠೆಯನ್ನು ಪ್ರಶಂಸಿಸುತ್ತಿದ್ದರು.

ಇಂದು ಒಂದೆಡೆ ಒಂದು ಮದ್‌ಹಬ್‌ನವರು ಇನ್ನೊಂದು ಮದ್‌ಹಬ್‌ನವರನ್ನೂ ಅವರ ಇಮಾಮರನ್ನೂ ನಿಂದಿಸುತ್ತಿದ್ದರೆ ಇನ್ನೊಂದೆಡೆ ಹದೀಸ್‌ನ ಅನುಯಾಯಿಗಳೆಂದು

ಹೇಳಿಕೊಳ್ಳುವವರು ನಾಲ್ವರು ಇಮಾಮರನ್ನೂ ಅವರ ಅನುಯಾಯಿಗಳನ್ನೂ ನಿಂದಿಸುವುದರ ಜೊತೆಗೆ ಅವರ ಮೇಲೆ ಅಪವಾದಗಳನ್ನು ಹೊರಿಸುತ್ತಾರೆ. ವಸ್ತುತಃ ನಾಲ್ವರು ಇಮಾಮರ ದೇವನಿಷ್ಠೆ, ಪ್ರಾಮಾಣಿಕತೆ, ಧರ್ಮಜ್ಞಾನ ಮತ್ತು ಪ್ರವಾದಿಚರ್ಯೆಯ ಅನುಸರಣೆಯನ್ನು ಕುರಿತು ಎಲ್ಲರೂ ಒಪ್ಪುತ್ತಾರೆ.

ಸಮುದಾಯದ ಕೆಲವು ಧಾರ್ಮಿಕ ವಲಯಗಳು, ಧರ್ಮಜ್ಞಾನ, ಪ್ರಾಮಾಣಿಕತೆ ಮತ್ತು ಸಂಶೋಧನಾ ಪ್ರತಿಭೆಯಲ್ಲಿ ನಂಬಲರ್ಹನಾದ ಒಬ್ಬ ವ್ಯಕ್ತಿಯಿಂದ ಸಾಮಾನ್ಯ ತಪ್ಪು ಸಂಭವಿಸಿದರೂ ಅವನ ಎಲ್ಲ ಒಳಿತುಗಳ ಮೇಲೆ ಮಸಿ ಬಳಿದು ಬಿಡುತ್ತವೆ. ಇವರು ಮಾಡುವಂತೆಯೇ ಅಲ್ಲಾಹನೂ ಮಾಡತೊಡಗಿದರೆ ಪ್ರವಾದಿಗಳ ಹೊರತು ಯಾವ ಮನುಷ್ಯನಿಗೂ ಇಹದಲ್ಲೂ ಪರದಲ್ಲೂ ಯಾತನೆಯಿಂದ ಮುಕ್ತಿ ದೊರೆಯಲಾರದು.

ಆದರೆ ಅಲ್ಲಾಹನು ಮಾನವನ ಪುರಸ್ಕಾರ ಅಥವಾ ಶಿಕ್ಷೆಯ ತೀರ್ಮಾನವನ್ನು ಅವರ ಕರ್ಮಗಳಿಗೆ ಅನುಸಾರವಾಗಿ ಮಾಡುತ್ತಾನೆ. ಯಾರ ಕರ್ಮದ ತಟ್ಟೆ ಭಾರವಾಗಿರುವುದೋ ಅವರು ವಿಜಯ ಹೊಂದುವರು ಮತ್ತು ಯಾರ ತೂಕದ ತಟ್ಟೆ ಹಗುರವಾಗಿರುವುದೋ ಅವರು ಸೋಲುಣ್ಣುವರು. ಅದಲ್ಲದೆ ಅಲ್ಲಾಹನ ಔದಾರ್ಯ ಎಷ್ಟು ಅಪಾರವೆಂದರೆ ಅವನು ತನ್ನ ಅನುಗ್ರಹದಿಂದ ದಾಸರ ಒಳಿತುಗಳನ್ನು ಹತ್ತುಪಟ್ಟು ಮತ್ತು ಅದಕ್ಕಿಂತಲೂ ಅಧಿಕ ಪಟ್ಟು ಹೆಚ್ಚಿಸುತ್ತಿರುತ್ತಾನೆ. ಆದರೆ ಪಾಪಗಳಿಗೆ ಅದರಷ್ಟೇ ಪ್ರತಿಫಲ ನೀಡುತ್ತಾನೆ. ಅವನ ದಾಸರು ಮಹಾ ಪಾಪಗಳಿಂದ ದೂರವಿದ್ದರೆ ಅವನು ಅವರ ಸಣ್ಣಪುಟ್ಟ ಪಾಪಗಳನ್ನು ಕ್ಷಮಿಸುತ್ತಿರುತ್ತಾನೆ.

ತಪ್ಪು ಮತ್ತು ಮರೆವು ಮಾನವನ ಸಹಜ ಗುಣವಾಗಿದೆ. ಅದರಿಂದ ಮಾನವನ ಕರ್ಮಗಳು ಹೊರತಲ್ಲ. ಇದನ್ನು ಪ್ರವಾದಿ(ಸ) ಹೀಗೆ ವಿವರಿಸಿದ್ದಾರೆ-

"ಮಾನವರೆಲ್ಲರೂ ಪಾಪಿಗಳು. ಅವರಲ್ಲಿ ಪಶ್ಚಾತ್ತಾಪ ಪಡುವವರೇ ಉತ್ತಮ ಪಾಪಿಗಳಾಗಿದ್ದಾರೆ" (ಅಹ್ಮದ್)

ಮಾನವನ ಕರ್ಮಗಳಲ್ಲಿ ಒಳಿತು-ಕೆಡುಕುಗಳ ಹೆಚ್ಚಳದನುಸಾರ ಅಲ್ಲಾಹನು ಪುರಸ್ಕಾರ ಅಥವಾ ಶಿಕ್ಷೆಯ ತೀರ್ಮಾನ ಕೈಗೊಳ್ಳುತ್ತಾನೆ. ಹಾಗಿರುವಾಗ ಮಾನವನನ್ನು ಒಳ್ಳೆಯವನು-ಕೆಟ್ಟವನು ಎಂದು ತೀರ್ಮಾನಿಸಲು ಅವನ ಹೆಚ್ಚಿನ ಕರ್ಮ ಯಾವುದು ಎಂದು ಪರಿಗಣಿಸಬೇಕಾದುದು ಅತ್ಯಗತ್ಯ. ಒಬ್ಬನ ಸಾಮಾನ್ಯ ತಪ್ಪುಗಳಿಗಾಗಿ ಆತನ ಎಲ್ಲ ಉತ್ತಮ ಕರ್ಮಗಳನ್ನು ವಿಶ್ವಾಸಾರ್ಹವಲ್ಲವೆಂದು ಸಾರಿ ಕಡೆಗಣಿಸುವುದು ನ್ಯಾಯವಲ್ಲ. ಪ್ರವಾದಿ(ಸ) ಹ. ಹಾತಿಬ್ ಬಿನ್ ಅಬೀ ಬಲ್‌ತಅ(ರ) ಅವರ ತಪ್ಪಿಗಾಗಿ ಅವರೊಂದಿಗೆ ವರ್ತಿಸಿದ ರೀತಿಯು ಅದನ್ನೇ ಸೂಚಿಸುತ್ತದೆ.

ಹಾತಿಬ್ ಬಿನ್ ಅಬೀ ಬಲ್‌ತಅ(ರ) ಅವರು, ಮಕ್ಕಾ ವಿಜಯಕ್ಕೆ ಮುಂಚೆ ತನ್ನ ಕುಟುಂಬದವರ ಹಿತದೃಷ್ಟಿಯಿಂದಾಗಿ ಪ್ರವಾದಿವರ್ಯರ ಯುದ್ಧ ರಹಸ್ಯವೊಂದನ್ನು ಓರ್ವ ಮಹಿಳೆಯ ಮೂಲಕ ಮಕ್ಕಾದವರಿಗೆ ಗುಪ್ತರೀತಿಯಲ್ಲಿ ತಲಪಿಸ ಬಯಸಿದಾಗ ಅಲ್ಲಾಹನು ದಿವ್ಯವಾಣಿಯ ಮೂಲಕ ಅದರ ಸುದ್ದಿಯನ್ನು ಪ್ರವಾದಿವರ್ಯರಿಗೆ ತಿಳಿಸಿದನು. ಪ್ರವಾದಿ(ಸ) ಆ ಮಹಿಳೆಯಿಂದ ಪತ್ರವನ್ನು ವಶಪಡಿಸಿ ತರುವಂತೆ ಹ.ಅಲೀಯವರನ್ನು ಕಳಿಸಿದರು.

ಅಲೀಯವರು ಅದನ್ನು ಮಹಿಳೆಯಿಂದ ವಶಪಡಿಸಿ ತಂದರು. ಹ. ಉಮರ್(ರ) ಈ ವಿಷಯ ತಿಳಿದಾಗ, ಅವರು ಪ್ರವಾದಿವರ್ಯರಲ್ಲಿ, ನನಗೆ ಈ ಮುನಾಫಿಕನ ರುಂಡ ಹಾರಿಸಲು ಅನುಮತಿ ನೀಡಿರಿ ಎಂದು ಕೇಳಿಕೊಂಡರು. ಪ್ರವಾದಿ(ಸ) ಈ ಮನವಿಯನ್ನು ತಿರಸ್ಕರಿಸುತ್ತಾ ಹೀಗೆಂದರು- ಉಮರ್! ಅಲ್ಲಾಹನು ಬದ್ರ್‌ನ ಯೋಧರೊಂದಿಗೆ ನಾನು ನಿಮ್ಮ ಪಾಪಗಳನ್ನು ಕ್ಷಮಿಸಿದ್ದೇನೆ ನೀವೇನು ಬೇಕಾದರೂ ಮಾಡಿರಿ ಎಂದು ಹೇಳಿಲ್ಲವೆ? (ಬುಖಾರಿ)

ಪ್ರವಾದಿ(ಸ) ಅವರ ಈ ಮಾತಿನ ಇಂಗಿತವು, ಮಹಾನ್ ವಂಚನೆಯಂತಹ ಪಾಪವನ್ನೂ, ಅಲ್ಲಾಹನು ಹಾತಿಬ್‌ರ ಈ ಮುಂಚಿನ ಒಳಿತುಗಳಿಂದಾಗಿ ಕ್ಷಮಿಸಲೂ ಬಹುದು ಎಂದಾಗಿತ್ತು.

ಇಂತಹದೇ ಯುಕ್ತಿ ಪೂರ್ಣ ಹದೀಸೊಂದು ಅಬೂ ದಾವೂದ್‌ನಲ್ಲಿ ಪ್ರಸಿದ್ಧ ಸಹಾಬಿ ಮುಆದ್ ಬಿನ್ ಜಬಲ್(ರ) ಅವರಿಂದ ಹೀಗೆ ಉಲ್ಲೇಖಗೊಂಡಿದೆ.

"ಎಚ್ಚರಿಕೆ! ಬಿದ್‌ಅತ್‌ನಿಂದ ದೂರವಿರಿ. ಏಕೆಂದರೆ ಬಿದ್‌ಅತ್ ಪಥಭ್ರಷ್ಟತೆಯಾಗಿದೆ. ನಾನು ನಿಮ್ಮನ್ನು ಯುಕ್ತಿಜ್ಞನ ತಪ್ಪು ಮತ್ತು ಪ್ರಮಾದದಿಂದ ಎಚ್ಚರಿಸುತ್ತಿದ್ದೇನೆ. ಏಕೆಂದರೆ ಕೆಲವು ಪಥಭ್ರಷ್ಟತೆಯ ಮಾತುಗಳನ್ನು ಶೈತಾನನು ಯುಕ್ತಿಜ್ಞನಿಂದಲೂ ಹೇಳಿಸುತ್ತಾನೆ ಮತ್ತು ಕೆಲವು ಸತ್ಯದ ಮಾತುಗಳನ್ನು ಮುನಾಫಿಕ್‌ನಿಂದಲೂ ಹೇಳಿಸುತ್ತಾನೆ."

ಅತಿ ದೊಡ್ಡ ಧರ್ಮನಿಷ್ಠ, ಯುಕ್ತಿಜ್ಞ ಮತ್ತು ಕರ್ಮಶಾಸ್ತ್ರಜ್ಞನನ್ನು ಕೂಡಾ ಕಣ್ಣು ಮುಚ್ಚಿ ಅನುಸರಿಸಬಾರದೆಂದು ಇದರಿಂದ ತಿಳಿದು ಬರುತ್ತದೆ. ಇದೇ ಮಾತನ್ನು ಹ. ಅಲೀ(ರ) ಈ ರೀತಿ ಹೇಳಿದ್ದಾರೆ- "ನೀವು ಹಿರಿಯರ ಕರ್ಮಗಳನ್ನು ಪ್ರವಾದಿಚರ್ಯೆಯಾಗಿ ಮಾಡಬೇಡಿರಿ."

ಮರವೆಯಂತೆಯೇ ಈ ಸಮುದಾಯದ ಪ್ರಮಾದಗಳಿಗೂ ಅಲ್ಲಾಹನ ಬಳಿ ಕ್ಷಮೆಯಿದೆ. ಸತ್ಯವಿಶ್ವಾಸಿಗಳಿಗೆ ಅಲ್ಲಾಹನೇ ಅದರ ಪ್ರಾರ್ಥನೆಯನ್ನು ಈ ರೀತಿ ಕಲಿಸಿದ್ದಾನೆ- ಓ ನಮ್ಮ ಪ್ರಭೂ, ನಮ್ಮಿಂದ ಪ್ರಮಾದವಶಾತ್ ಅಪರಾಧಗಳಾಗಿ ಬಿಟ್ಟರೆ ಅವುಗಳಿಗಾಗಿ ನಮ್ಮನ್ನು ಹಿಡಿಯಬೇಡ. (ಕುರ್‌ಆನ್, 2: 286)

ಸತ್ಯವಿಶ್ವಾಸಿಗಳ ಈ ಪ್ರಾರ್ಥನೆಗೆ 'ನಾನು ಕ್ಷಮಿಸಿದೆ' ಎನ್ನುವ ಮೂಲಕ ಅಲ್ಲಾಹನು ಅಂಗೀಕಾರ ನೀಡಿದ್ದಾನೆ. ಅದನ್ನೇ ಈ ಕೆಳಗಿನ ಪ್ರವಾದಿ ವಚನವು ಸ್ಪಷ್ಟಪಡಿಸುತ್ತದೆ.

ಅಲ್ಲಾಹನು ಈ ಸಮುದಾಯದ ಪ್ರಮಾದ, ಮರವೆ ಮತ್ತು ಬಲಾತ್ಕಾರಕ್ಕೊಳಗಾಗಿ ಮಾಡಿದ ಪಾಪಗಳನ್ನು ಕ್ಷಮಿಸಿದ್ದಾನೆ, ಕಡೆಗಣಿಸಿದ್ದಾನೆ ಮತ್ತು ಮನ್ನಾ ಮಾಡಿದ್ದಾನೆ.

(ಇಬ್ನು ಮಾಜಃ, ದಹಬೀ, ಬೈಹಕಿ)

ಭಿನ್ನಾಭಿಪ್ರಾಯಗಳಲ್ಲಿ ಮೃದು ನೀತಿ

ಇಸ್ಲಾಮಿನ ರಕ್ಷಣೆ ಮತ್ತು ಉತ್ಥಾನಕ್ಕಾಗಿ ಕೆಲಸ ಮಾಡುವವರು ವಿವಾದಾಸ್ಪದ ಭಿನ್ನಾಭಿಪ್ರಾಯಗಳಲ್ಲಿ ಪರಸ್ಪರ ಚರ್ಚಿಸುವ ವೇಳೆ ಜಗಳ ಮತ್ತು ಕಠೋರ ನಿಲುವನ್ನು ವರ್ಜಿಸಬೇಕು. ಏಕೆಂದರೆ ಇಸ್ಲಾಮ್ ವಿರೋಧಿಗಳೊಂದಿಗೆ ಅತ್ಯುತ್ತಮ ಚರ್ಚೆ ಮಾಡಬೇಕೆಂದು ಆದೇಶಿಸಿದೆ. ವಿರೋಧಿಯನ್ನು ಯಾವ ಬೆಲೆ ತೆತ್ತಾದರೂ ಸೋಲಿಸಬೇಕು ಮತ್ತು ತಾನು

ಗೆಲವು ಸಾಧಿಸಬೇಕು ಎಂಬ ಉದ್ದೇಶದ ಚರ್ಚೆಯನ್ನು ಇಸ್ಲಾಮ್ ಮೆಚ್ಚುವುದಿಲ್ಲ. ಇದು ಶಿರ್ಕ್ ಮತ್ತು ಕುಫ್ರ್‌ನ ವಾಹಕರ ವಿಧಾನವಾಗಿದ್ದು ಅಲ್ಲಾಹನು ಅದನ್ನು ಖಂಡಿಸಿದ್ದಾನೆ. "ಆದರೆ ಸತ್ಯನಿಷೇಧಿಗಳು ಮಿಥ್ಯದ ಅಸ್ತ್ರದೊಂದಿಗೆ ಸತ್ಯವನ್ನು ಸದೆಬಡಿಯಲು ಪ್ರಯತ್ನಿಸುತ್ತಾರೆ"

(ಕುರ್‌ಆನ್ - 18: 56)

ಪ್ರವಾದಿ(ಸ) ಕೂಡಾ ಈ ಅಪ್ರಿಯ ಕಾರ್ಯವನ್ನು ವರ್ಜಿಸುವವರಿಗೆ ಸ್ವರ್ಗದ ಭರವಸೆ ನೀಡಿದ್ದಾರೆ ಮತ್ತು ಗತ ಜನಾಂಗಗಳು ಪಥಭ್ರಷ್ಟರಾಗಲು ಅದುವೇ ಕಾರಣವೆಂದು ಸಾರಿದ್ದಾರೆ. ಪ್ರವಾದಿ(ಸ) ಹೇಳುತ್ತಾರೆ- ಸತ್ಯದಲ್ಲಿದ್ದೂ ತರ್ಕ-ವಿತರ್ಕಗಳಿಂದ ದೂರವಿರುವವನಿಗೆ ಸ್ವರ್ಗದ ಕೆಳಭಾಗದಲ್ಲಿ, ತಮಾಷೆಗಾಗಿಯೂ ಸುಳ್ಳು ಹೇಳದವನಿಗೆ ಸ್ವರ್ಗದ ಮಧ್ಯಭಾಗದಲ್ಲಿ ಹಾಗೂ ಅತ್ಯುನ್ನತ ಚಾರಿತ್ರ್ಯವನ್ನು ಹೊಂದಿದವನಿಗೆ ಸ್ವರ್ಗದ ಅತ್ಯುನ್ನತ ಭಾಗದಲ್ಲಿ ಭವನ ನೀಡುವ ಭರವಸೆ ಕೊಡುತ್ತೇನೆ. (ಅಬೂದಾವೂದ್)

ಯಾವುದೇ ಜನಾಂಗವು ಅಲ್ಲಾಹನ ಅನುಗ್ರಹದಿಂದ ವಂಚಿತವಾದಾಗ ಅದು ಕರ್ಮವನ್ನು ಬಿಟ್ಟು ಬೇಡದ ಜಗಳ-ತರ್ಕಗಳಲ್ಲಿ ಮುಳುಗಿ ಬಿಡುತ್ತದೆ. ಪ್ರತಿಯೊಬ್ಬ ಮಾನವನಲ್ಲೂ ಅಲ್ಲಾಹನು ಮೇಲ್ಮೆಯ ಭಾವನೆಯನ್ನಿರಿಸುತ್ತಾನೆ. ಸತ್ಯವಿಶ್ವಾಸ ಮತ್ತು ಸತ್ಕರ್ಮಗಳಿಂದ ಅವನ ಭಾವನೆಗಳನ್ನೂ ಅಭಿಲಾಷೆಗಳನ್ನೂ ನಿಯಂತ್ರಿಸಿ ಅವನನ್ನು ಸಭ್ಯನನ್ನಾಗಿ ಮಾಡದಿದ್ದರೆ ಮೇಲ್ಮೆಯ ವಿಕಾರವು ಜಗಳ- ತರ್ಕಗಳ ವರೆಗೂ ಅವನನ್ನು ಮುಟ್ಟಿಸುತ್ತದೆ.

"ಮಾನವನು ಮಹಾ ಜಗಳಗಂಟನಾಗಿದ್ದಾನೆ". (ಕುರ್‌ಆನ್- 18:54)

ಇಂದು ಇಸ್ಲಾಮಿನ ಸಂದೇಶ ಪ್ರಚಾರ ರಂಗದಲ್ಲಿ ಪ್ರತಿಯೊಂದು ವಿಷಯದಲ್ಲೂ ಕುತರ್ಕ ಮತ್ತು ಉಗ್ರ ನಿಲುವು ಅನುಸರಿಸುವವರನ್ನು ನಾವು ಕಾಣುತ್ತಿದ್ದೇವೆ. ಅವರಿಗೆ ವಿವಿಧ ಅಭಿಪ್ರಾಯ ಭಿನ್ನತೆಗಳ ಮತ್ತು ಸಂಶೋಧನೆಗಳ ಮಧ್ಯೆ ಸಂತುಲಿತ ಮಾರ್ಗವನ್ನು ಅವಲಂಬಿಸುವ ಸೌಭಾಗ್ಯವಂತೂ ಇಲ್ಲವೆನ್ನಿ, ಮೇಲಾಗಿ ಅವರು ತಾವು ಹೇಳುವ ಮಾತನ್ನು ಅಥವಾ ಯಾವುದೇ ಭಿನ್ನಾಭಿಪ್ರಾಯದ ವಿಷಯದಲ್ಲಿ ತಮ್ಮ ನಿಲುವನ್ನು ಎಲ್ಲರೂ ಅವಲಂಬಿಸಬೇಕೆಂದು ಬಯಸುತ್ತಾರೆ. ಏಕೆಂದರೆ ಈ ಮಂದಿ ತಾವು ಯಾವಾಗಲೂ ಸತ್ಯದಲ್ಲೇ ಇದ್ದೇವೆಂದೂ ಇತರೆಲ್ಲರೂ ಅಸತ್ಯ ಮಾರ್ಗದಲ್ಲಿರುವರೆಂದೂ ಭಾವಿಸುತ್ತಾರೆ.

ಅವರಲ್ಲಿ ಯಾವುದೇ ಒಂದು ಪದಕ್ಕೆ ಒಂದು ವಿಶಿಷ್ಟ ಅರ್ಥಕೊಡುವ ಮತ್ತು ಹಾಗೆ ಬರೆಯುವ ಜನರೂ ಇದ್ದಾರೆ. ಅದನ್ನು ಇತರ ವಿದ್ಯಾವಂತರು ಸರಿಯೆಂದು ಒಪ್ಪಿಕೊಳ್ಳುವುದಿಲ್ಲ. ಅದಕ್ಕಾಗಿ ಇವರು ಜಗಳ ಕಾಯುತ್ತಾರೆ. ಇತರರೂ ಅವರ ಅಭಿಪ್ರಾಯವನ್ನು ಒಪ್ಪಿಕೊಳ್ಳಬೇಕೆಂದು ಬಯಸುತ್ತಾರೆ. ಆದರೆ ವಿದ್ವಾಂಸರು ಪಾರಿಭಾಷಿಕಗಳ ಬಗ್ಗೆ ಕಲಹ ಸರಿಯಲ್ಲವೆಂದು ಹೇಳುತ್ತಾರೆ.

ಅವರಲ್ಲಿ ಕರ್ಮಶಾಸ್ತ್ರೀಯ ಪಂಥಗಳಲ್ಲಿ ಪಕ್ಷಪಾತವನ್ನು ಖಂಡಿಸುವವರೂ ಇದ್ದಾರೆ. ಆದರೆ ಅವರೇ ಹೊಸತೊಂದು ಪಂಥವನ್ನು ಆರಂಭಿಸಿ ಸಮುದಾಯದೊಳಗೆ ತರ್ಕ-ವಿತರ್ಕಗಳ ಬಿರುಗಾಳಿಯನ್ನೇ ಎಬ್ಬಿಸುತ್ತಾರೆ.

ಅವರಲ್ಲಿ ತಕ್ಲೀದನ್ನು (ಅನುಕರಣೆ) ಹರಾಮ್ ಎಂದು ಹೇಳುವವರೂ ಇದ್ದಾರೆ. ಆದರೆ ಜನರು ತಮ್ಮನ್ನು ತಕ್ಲೀದ್ ಮಾಡಬೇಕೆಂದು ಅವರು ಬಯಸುತ್ತಾರೆ. ಪೂರ್ವ ಕರ್ಮಶಾಸ್ತ್ರ ಪಂಡಿತರ ಅನುಕರಣೆಯನ್ನು ತಪ್ಪೆಂದು ಭಾವಿಸುವ ಈ ಮಂದಿ ಈ ವಿಷಯದಲ್ಲಿ ಜನರೊಂದಿಗೆ ವೃಥಾ ತರ್ಕಿಸುತ್ತಾರೆ. ಆದರೆ ಅವರೇ ಸಮಕಾಲೀನ ವಿದ್ವಾಂಸರ ಪೈಕಿ ಕೆಲವರನ್ನು ಅನುಕರಿಸುತ್ತಾರೆ. ಅವರಲ್ಲಿ ಸಹಾಬಿಗಳ ಮತ್ತು ಹಿಂದಿನ ವಿದ್ವಾಂಸರ ಮಧ್ಯೆ ಭಿನ್ನಾಭಿಪ್ರಾಯಗಳಿದ್ದಂತಹ ಆಂಶಿಕ ವಿಷಯಗಳಲ್ಲಿ ಜಗಳಾಡುವವರೂ ಇದ್ದಾರೆ.

ವಿರೋಧಿಗಳೊಂದಿಗೆ ವೃಥಾ ಜಗಳಾಡುವುದು ಮುಸ್ಲಿಮ್ ಸಮುದಾಯದ ಪಾಲಿಗೆ ಒಂದು ದುರಂತವಾಗಿದೆ. ಇದನ್ನು ಅಲ್ಲಾಹನೂ ಪ್ರವಾದಿಯೂ ಖಂಡಿಸಿದ್ದಾರೆ. ಆಯಿಶಾ(ರ) ಹೇಳುತ್ತಾರೆ-

"ಜಗಳಗಂಟನೇ ಅಲ್ಲಾಹನಿಗೆ ಅತ್ಯಂತ ಅಪ್ರಿಯ ವ್ಯಕ್ತಿಯಾಗಿದ್ದಾನೆ".

ಅಲ್ಲಾಹನು ಸತ್ಯನಿಷೇಧಿಗಳ ಜಗಳಗಂಟತನವನ್ನು ಖಂಡಿಸುತ್ತಾ ಈ ರೀತಿ ಹೇಳುತ್ತಾನೆ,

"ಆದುದರಿಂದ ಪೈಗಂಬರರೇ ನೀವು, ಭಯಭಕ್ತಿಯನ್ನಿರಿಸಿ ಕೊಂಡಿರುವವರಿಗೆ ಸುವಾರ್ತೆಯನ್ನೀಯಲಿಕ್ಕಾಗಿ ಹಾಗೂ ಹಠ ಸಾಧಕರಿಗೆ ಎಚ್ಚರಿಕೆ ಕೊಡಲಿಕ್ಕಾಗಿಯೇ ನಾವು ಈ ವಾಣಿಯನ್ನು ಸರಳಗೊಳಿಸಿ ನಿಮ್ಮ ಭಾಷೆಯಲ್ಲಿ ಅವತೀರ್ಣಗೊಳಿಸಿರುತ್ತೇವೆ."

(ಖುರ್‌ಆನ್, 19: 97)

ಅತ್ಯಂತ ಕೆಟ್ಟ, ಅಪಾಯಕಾರಿ ಹಾಗೂ ಅರೋಚಕ ತರ್ಕ ವಿತರ್ಕಗಳು ಮತ್ತು ಜಗಳವು ಕುರ್‌ಆನ್‌ನ ಬಗೆಗಿನದ್ದಾಗಿದೆ. ಅದು ವಿರೋಧಾಭಾಸ ಮತ್ತು ಭಿನ್ನತೆಗಳಿಂದ ಮುಕ್ತವಾದ ಗ್ರಂಥವಾಗಿದ್ದು ಅದನ್ನು ಅಲ್ಲಾಹನು ಮಾನವರ ಪರಸ್ಪರ ಭಿನ್ನಾಭಿಪ್ರಾಯಗಳನ್ನು ಅಳಿಸಿ ಹಾಕಲಿಕ್ಕಾಗಿ ತೀರ್ಪುಗಾರ ಎಂಬ ನೆಲೆಯಲ್ಲಿ ಅವತೀರ್ಣಗೊಳಿಸಿದ್ದಾನೆ. ಈ ಗ್ರಂಥವೇ ಭಿನ್ನಾಭಿಪ್ರಾಯಗಳಿಗೆ ಕಾರಣವಾದರೆ ಅವುಗಳನ್ನು ಅಳಿಸಲಿಕ್ಕಿರುವ ಮಾನದಂಡ ಬೇರೆ ಯಾವುದಿರಬಹುದು? ಬೇರಾವುದರ ಮೇಲೆ ಭರವಸೆಯಿರಿಸಬಹುದು. ಪ್ರವಾದಿ (ಸ) ಅವರು ಕುರ್‌ಆನ್‌ನಲ್ಲಿ ಅನಗತ್ಯ ತರ್ಕ–ವಿತರ್ಕಗಳನ್ನು ಮಾಡುತ್ತಿದ್ದ ಹಾಗೂ ಅದರ ಒಂದು ಸೂಕ್ತದ ವಿರುದ್ಧ ಇನ್ನೊಂದು ಸೂಕ್ತವನ್ನು ಆಧಾರವಾಗಿ ಮಾಡುತ್ತಿದ್ದವರ ಮೇಲೆ ತಮ್ಮ ತೀವ್ರ ಕೋಪವನ್ನು ವ್ಯಕ್ತಪಡಿಸಿದ್ದರು. ಪ್ರವಾದಿ(ಸ) ಹೇಳಿದರು-

"ಕುರ್‌ಆನ್‌ನಲ್ಲಿ ಜಗಳಾಡುವುದು ಕುಫ್ರ್ ಆಗಿದೆ. ಇದನ್ನು ಪ್ರವಾದಿ(ಸ) ಮೂರು ಬಾರಿ ಆವರ್ತಿಸಿ ಹೇಳಿದರು."

ಹ. ಅಬ್ದುಲ್ಲಾ ಬಿನ್ ಉಮರ್(ರ) ಹೇಳುತ್ತಾರೆ- ಕೆಲವು ಮಂದಿ ಕುರ್‌ಆನ್ ಪಠನಕಾರರು ಪ್ರವಾದಿ(ಸ) ಅವರ ನಿವಾಸದ ಬಾಗಿಲ ಬಳಿ ಕುಳಿತು ಚರ್ಚಿಸುತ್ತಿದ್ದರು. ಅವರ ಪೈಕಿ ಒಬ್ಬನು, ಅಲ್ಲಾಹನು ಹೀಗೆ ಹೇಳಿಲ್ಲವೆ? ಎಂದು ಕೇಳಿದನು. ಆಗ ಇನ್ನೊಬ್ಬನು ಅಲ್ಲಾಹನು ಹೀಗೆ ಹೇಳಿಲ್ಲವೆ ಎಂದು ಮರು ಪ್ರಶ್ನಿಸಿದನು. ಅವರ ಈ ಚರ್ಚೆಯನ್ನು ಕೇಳಿ ಪ್ರವಾದಿ(ಸ) ಹೊರಗೆ ಬಂದರು. ಅವರ ಮುಖ ದಾಳಿಂಬೆ ಹಣ್ಣಿನ ರಸ ಮುಖಕ್ಕೆ ಒರೆಸಲಾಗಿದೆಯೋ ಎಂಬಂತೆ ಕೆಂಪಗಾಗಿ ತೋರುತ್ತಿತ್ತು. ಪ್ರವಾದಿ(ಸ) ಹೇಳಿದರು- ಅಲ್ಲಾಹನ

ಗ್ರಂಥದ ಒಂದು ಭಾಗದಿಂದ ಇನ್ನೊಂದು ಭಾಗವನ್ನು ಅಳಿಸಿ ಹಾಕಬೇಕೆಂದು ನಿಮಗೆ ಆಜ್ಞಾಪಿಸಲಾಗಿದೆಯೇ? ನಿಮಗಿಂತ ಮುಂಚಿನ ಸಮುದಾಯಗಳು ಇದೇ ವ್ಯಾಧಿಯಿಂದ ಪಥಭ್ರಷ್ಟವಾದವು. ನೀವು ಈಗ ಮಾಡುತ್ತಿರುವ ಕೆಲಸವು ಸಂಪೂರ್ಣ ವ್ಯರ್ಥವಾಗಿದೆ. ಯಾವ ಕಾರ್ಯವನ್ನು ಮಾಡಲು ನಿಮಗೆ ಆಜ್ಞಾಪಿಸಲಾಗಿದೆಯೋ ಅದನ್ನು ಮಾಡುವುದು ಮತ್ತು ಯಾವ ಕಾರ್ಯದಿಂದ ನಿಮ್ಮನ್ನು ತಡೆಯಲಾಗಿದೆಯೋ ಅದನ್ನು ಮಾಡದಿರುವುದೇ ನಿಮ್ಮ ಮಟ್ಟಿಗೆ ಸರಿಯಾದ ಕ್ರಮವಾಗಿದೆ. (ಅಹ್ಮದ್)

ಚರ್ಚೆಯಲ್ಲಿ ಅತ್ಯುತ್ತಮ ವಿಧಾನ

ಪರಸ್ಪರ ಭಿನ್ನಾಭಿಪ್ರಾಯದ ವೇಳೆ ಪಾಲಿಸಬೇಕಾದ ಮೂಲಭೂತ ಶಿಷ್ಟಾಚಾರ ಮೃದು ನೀತಿ ಮತ್ತು ಉತ್ತಮ ವಿಧಾನದಿಂದ ಚರ್ಚೆ ನಡೆಸುವುದಾಗಿದೆ. ಇದನ್ನು ಕುರ್‌ಆನ್ ಅತ್ಯುತ್ತಮ ಸಂವಾದವೆಂದು ಬಣ್ಣಿಸಿದೆ.ಸತ್ಯವಿಶ್ವಾಸಿಗಳಿಗೆ ಇದರ ಆಜ್ಞೆಯನ್ನು ಅಲ್ಲಾಹನು ಹೀಗೆ ನೀಡಿದ್ದಾನೆ-

ಓ ಪೈಗಂಬರರೇ! ಯುಕ್ತಿ ಹಾಗೂ ಸದುಪದೇಶದ ಮೂಲಕ ನಿಮ್ಮ ಪ್ರಭುವಿನ ಮಾರ್ಗಕ್ಕೆ ಜನರನ್ನು ಆಹ್ವಾನಿಸಿರಿ ಮತ್ತು ಜನರೊಂದಿಗೆ ಅತ್ಯುತ್ತಮ ರೀತಿಯಿಂದ ವಾದಿಸಿರಿ. (ಕುರ್‌ಆನ್- 16: 125)

ಅಲ್ಲಾಹನ ಮಾರ್ಗದರ್ಶನ, ಸದುಪದೇಶ ಮತ್ತು ಸಂವಾದದ ನಡುವಿನ ಅಂತರವನ್ನು ನಾವು ಗಮನಿಸಬಹುದು. ಸದುಪದೇಶವು ಉತ್ತಮವಾದರೆ ಸಾಕು. ಆದರೆ ಸಂವಾದವು ಅತ್ಯುತ್ತಮವಾಗಿರಬೇಕು. ಈ ವ್ಯತ್ಯಾಸದಲ್ಲಿ ಅಡಗಿರುವ ರಹಸ್ಯವೇನೆಂದರೆ ಸದುಪದೇಶವು ಸಾಮಾನ್ಯವಾಗಿ ಧ್ಯೇಯೋದ್ದೇಶ ಮತ್ತು ಕಾರ್ಯ ವಿಧಾನದಲ್ಲಿ ಪರಸ್ಪರ ಒಮ್ಮತವಿರುವವರಿಗಾಗಿರುತ್ತದೆ. ಅವರಿಗೆ ಉತ್ತಮವಾದ ಹಾಗೂ ನೆನಪಿಸಲು ಪರ್ಯಾಪ್ತವಾದ, ಅವರ ಮನಸ್ಸನ್ನು ಮೃದುಗೊಳಿಸುವ, ಅವರ ಮನಸ್ಸಿಗೆ ಹಿಡಿದ ತುಕ್ಕನ್ನು ಹೋಗಲಾಡಿಸಿ ಅದನ್ನು ಶುಭ್ರಗೊಳಿಸುವ ಹಾಗೂ ಅವರ ನಿರ್ಧಾರ ಶಕ್ತಿಯನ್ನು ಬಲಪಡಿಸುವಂತಹ ಉದ್ಬೋಧನೆಯನ್ನು ಅವರು ಬಯಸುತ್ತಾರೆ.

ಇದಕ್ಕೆ ವ್ಯತಿರಿಕ್ತವಾಗಿ ತರ್ಕವು ಸಾಮಾನ್ಯವಾಗಿ ಇಬ್ಬರು ವಿರೋಧಿಗಳ ನಡುವೆ ಇರುತ್ತದೆ. ಇಂತಹ ಸಂದರ್ಭಗಳಲ್ಲಿ ಉಭಯತರರು ಭಿನ್ನಾಭಿಪ್ರಾಯದ ವಿಷಯದಲ್ಲಿ ಹಠಮಾರಿತನ ಮತ್ತು ಕಠೋರತೆಯ ಶೈಲಿಯನ್ನು ಅಳವಡಿಸಬಹುದು. ಪರಸ್ಪರರ ಮೇಲೆ ಅನ್ಯಾಯವೆಸಗಬಹುದು ಅಥವಾ ಚರ್ಚೆಯಲ್ಲಿ ದ್ವೇಷ ಮತ್ತು ಮನನೋಯಿಸುವಂತಹ ನೀತಿಯನ್ನು ಅಳವಡಿಸಬಹುದು. ಆದುದರಿಂದ ವಿರೋಧಿಗಳೊಂದಿಗೆ ತರ್ಕಿಸುವಾಗ ಚರ್ಚೆಯು ಪ್ರಭಾವಕಾರಿಯಾಗಲು ಮತ್ತು ಫಲ ನೀಡಲು ಮೃದು ನೀತಿಯ ಅತ್ಯುತ್ತಮ ಮಾದರಿಯನ್ನು ಪ್ರದರ್ಶಿಸಬೇಕೆಂಬುದು ಅಲ್ಲಾಹನ ಯುಕ್ತಿಯ ಬೇಡಿಕೆಯಾಗಿತ್ತು. ಯಹೂದಿಯರು ಮತ್ತು ಕ್ರೈಸ್ತರನ್ನು ಅಭಿಸಂಬೋಧಿಸುವಾಗ, ಓ ಗ್ರಂಥದವರೇ! ಎಂಬ ಪ್ರಭಾವ ಪೂರ್ಣ

ಶೈಲಿಯನ್ನು ಅಲ್ಲಾಹನು ಅಳವಡಿಸಿದ್ದಾನೆ. ಇದು ಅತ್ಯುತ್ತಮ ಸಂವಾದದ ಅತ್ಯುತ್ತಮ ಮಾದರಿಯಾಗಿದೆ.

ಕುರ್‌ಆನ್‌ನಲ್ಲಿ ಅಲ್‌ಕಾಫಿರೂನ್ ಅಧ್ಯಾಯದ ಹೊರತು ಬೇರೆಲ್ಲೂ ಮುಶ್ರಿಕರನ್ನೂ ಕಾಫಿರರನ್ನೂ ಮುಶ್ರಿಕರೆ, ಕಾಫಿರರೆ ಎಂದು ಅಭಿಸಂಬೋಧಿಸಲಾಗಿಲ್ಲ. ಒಂದು ವೇಳೆ ಹಾಗೆ ಕರೆದಿದ್ದರೂ ಅದೇನೂ ವಸ್ತುಸ್ಥಿತಿಗೆ ವಿರುದ್ಧವಾಗುತ್ತಿರಲಿಲ್ಲ. ಆದರೆ ಅವರನ್ನು 'ಯಾ ಅಯ್ಯುಹನ್ನಾಸ್' (ಓ ಮಾನವರೇ!) ಎಂದು ಅಭಿಸಂಬೋಧಿಸಲಾಗಿದೆ. ಅಲ್‌ಕಾಫಿರೂನ್ ಅಧ್ಯಾಯದಲ್ಲಿ 'ಓ ಸತ್ಯನಿಷೇಧಿಗಳೇ' ಎಂದು ಅಭಿಸಂಬೋಧಿಸಿರುವುದೂ ಅವರಿಗೆ ಧರ್ಮದ ಬೋಧನೆಯನ್ನು ಸಂಪೂರ್ಣವಾಗಿ ಮುಟ್ಟಿಸಿ ಹೊಣೆ ಮುಕ್ತವಾದ ಬಳಿಕವೇ ಆಗಿತ್ತು. ಅದು ಮಕ್ಕಾ ಜೀವನ ಕಾಲದ ಅಂತಿಮ ಘಟ್ಟವಾಗಿತ್ತು. ಆ ಸಂದರ್ಭದಲ್ಲಿ ಪ್ರಸ್ತುತ ಅಭಿಸಂಬೋಧನೆಗೂ ಒಂದು ವಿಶಿಷ್ಟ ಉದ್ದೇಶವಿತ್ತು. ಅದೆಂದರೆ ಮುಸ್ಲಿಮರು ಅವರ ಮೂಲಭೂತ ವಿಶ್ವಾಸವಾದ ತೌಹೀದ್‌ನಿಂದ ಕಿಂಚಿತ್ತೂ ಹಿಂದೆ ಸರಿಯುವವರಲ್ಲ ಅಥವಾ ಯಾವುದೇ ಸಂಧಾನ ಮಾಡುವವರಲ್ಲವೆಂದು ಸತ್ಯನಿಷೇಧಿಗಳ ಮೇಲೆ ಸ್ಪಷ್ಟ ಪಡಿಸುವುದಾಗಿತ್ತು. ಆದುದರಿಂದ ಒಂದೇ ವಿಷಯವನ್ನು ಪದೇ ಪದೇ ಒತ್ತು ಕೊಟ್ಟು ಆವರ್ತಿಸಿ ಕೊನೆಯಲ್ಲಿ 'ನಿಮಗೆ ನಿಮ್ಮ ಧರ್ಮ ಮತ್ತು ನನಗೆ ನನ್ನ ಧರ್ಮ' ಎಂದು ಘೋಷಿಸಲಾಯಿತು. ಇದೇ ರೀತಿಯ ಘೋಷಣೆಯನ್ನು ಯೂನುಸ್ ಅಧ್ಯಾಯದಲ್ಲಿ ಹೀಗೆ ಮಾಡಲಾಗಿದೆ-

"ಇವರು ನಿಮ್ಮನ್ನು ಸುಳ್ಳಾಗಿಸುತ್ತಿದ್ದರೆ, ಹೇಳಿರಿ, ನನ್ನ ಕರ್ಮ ನನಗೆ ಮತ್ತು ನಿಮ್ಮ ಕರ್ಮ ನಿಮಗೆ. ನಾನು ಮಾಡುತ್ತಿರುವ ಯಾವುದೇ ಕರ್ಮದ ಹೊಣೆಯಿಂದ ನೀವು ಮುಕ್ತರು. ನೀವು ಮಾಡುತ್ತಿರುವ ಯಾವುದೇ ಕರ್ಮದ ಹೊಣೆಯಿಂದ ನಾನು ಮುಕ್ತನು" (10: 41)

ನಮ್ಮ ದೃಷ್ಟಿಯು ಭಿನ್ನಾಭಿಪ್ರಾಯಗಳ ವಿಷಯಗಳಲ್ಲಿರುವ ಬದಲು ಒಮ್ಮತ ವಿಷಯಗಳಲ್ಲಿ ಕೇಂದ್ರೀಕೃತವಾಗಬೇಕಾದುದು, ಸಂದೇಶ ಪ್ರಚಾರ ಕಾರ್ಯದ ವೇಳೆ ಅದರಂತೆ ನಡೆಯಬೇಕಾದುದು, ಚರ್ಚೆ ಮತ್ತು ಉತ್ತಮ ಸಂವಾದದ ಶೈಲಿಯ ಬೇಡಿಕೆಯಾಗಿದೆ. ಗ್ರಂಥದವರೊಂದಿಗೆ ಅತ್ಯುತ್ತಮ ಸಂವಾದದ ರೀತಿಯನ್ನು ಬೋಧಿಸುತ್ತಾ ಅಲ್ಲಾಹನು ಹೀಗೆ ಹೇಳುತ್ತಾನೆ-

"ಗ್ರಂಥದವರೊಡನೆ ಉತ್ತಮ ರೀತಿಯಿಂದ ವಿನಾ ಚರ್ಚಿಸಬೇಡಿರಿ... ಮತ್ತು ಅವರೊಡನೆ ಹೇಳಿರಿ: ನಮ್ಮ ಕಡೆಗೆ ಅವತೀರ್ಣಗೊಳಿಸಲಾಗಿರುವುದರ ಮೇಲೂ ನಿಮ್ಮ ಕಡೆಗೆ ಕಳುಹಿಸಲಾಗಿದ್ದುದರ ಮೇಲೂ ನಾವು ವಿಶ್ವಾಸವಿರಿಸಿದ್ದೇವೆ. ನಮ್ಮ ದೇವನೂ ನಿಮ್ಮ ದೇವನೂ ಒಬ್ಬನೇ ಮತ್ತು ನಾವು ಅವನ ಮುಸ್ಲಿಮರೇ (ಆಜ್ಞಾನುಸಾರಿಗಳೇ) ಆಗಿರುತ್ತೇವೆ.

(ಕುರ್‌ಆನ್, 29: 46)

ಗ್ರಂಥದವರೊಡನೆ ಸಂವಾದ ಮತ್ತು ಚರ್ಚೆ ನಡೆಸಬೇಕೆಂಬ ಈ ಶಿಕ್ಷಣದಿಂದ, ಓರ್ವ ಮುಸ್ಲಿಮನು ಇನ್ನೋರ್ವ ಮುಸ್ಲಿಮನೊಂದಿಗೆ ಭಿನ್ನಾಭಿಪ್ರಾಯದ ವಿಷಯದಲ್ಲಿ ಚರ್ಚಿಸುವಾಗ ನ್ಯಾಯ, ಔದಾರ್ಯ ಮತ್ತು ಕ್ಷಮೆಯನ್ನು ಹೇಗೆ ಪಾಲಿಸಬೇಕೆಂದು ತಿಳಿಯಬಹುದು.

ಇಮಾಮ್ ರಾಝೀಯವರು 'ಅತ್ಯುತ್ತಮ ಸಂವಾದ'ವನ್ನು ಈ ರೀತಿ ಬಹಳ ಸುಂದರವಾಗಿ ವ್ಯಾಖ್ಯಾನಿಸಿದ್ದಾರೆ-

"ಪರಸ್ಪರ ಚರ್ಚೆ, ಸಂವಾದ ನಡೆಯುತ್ತಿರುವಾಗ ಒಬ್ಬನು ಇನ್ನೊಬ್ಬನೊಡನೆ ನೀನು ತಪ್ಪಿತಸ್ಥ, ನಿನ್ನ ಮಾತು ತಪ್ಪು ಎಂದು ಹೇಳಿದರೆ ಆತ ಕೂಡಲೇ ಕೆರಳಿ ಕೆಂಡವಾಗುತ್ತಾನೆ. ಆ ಸಂದರ್ಭದಲ್ಲಿ ಮಾನಸಿಕ ನೆಮ್ಮದಿ ಮತ್ತು ಬುದ್ಧಿ ಸ್ಥಿಮಿತ ಅಸ್ತವ್ಯಸ್ತವಾಗಿ ಬಿಡುತ್ತದೆ. ವೈಚಾರಿಕ ಅಸಂತುಲನೆಯ ವೇಳೆ ಬುದ್ಧಿಗೆ ಮತ್ತು ಸತ್ಯಕ್ಕೆ ಅನುಗುಣವಾದ ಮಾತನ್ನು ಸ್ವೀಕರಿಸಬಹುದೆಂಬ ನಿರೀಕ್ಷೆಯಿರುವುದಿಲ್ಲ. ಇದರಿಂದ ಸಂವಾದದ ಉದ್ದೇಶವೇ ನಿಷ್ಫಲವಾಗಿ ಬಿಡುತ್ತದೆ."

ಚರ್ಚಾಸ್ಪದ ವಿಷಯದಲ್ಲಿ ನಮ್ಮ ಪೈಕಿ ಒಬ್ಬನು ಖಂಡಿತ ತಪ್ಪುಗಾರನಾಗಿದ್ದಾನೆ. ತಪ್ಪು ವಿಷಯಕ್ಕೆ ಅಂಟಿಕೊಂಡಿರುವುದು ಸರಿಯಲ್ಲ. ಸತ್ಯದೆಡೆಗೆ ಮರಳುವುದು ಒಳ್ಳೆಯದು ಮತ್ತು ಪ್ರಶಂಸಾರ್ಹವಾಗಿದೆ. ಆದುದರಿಂದ ನಮ್ಮಲ್ಲಿ ಸತ್ಯದಲ್ಲಿರುವವರು ಯಾರು ಅಸತ್ಯದಲ್ಲಿರುವವರು ಯಾರೆಂಬ ಬಗ್ಗೆ ನಾವು ಒಟ್ಟಿಗೆ ಕುಳಿತು ಆಲೋಚಿಸೋಣ. ಇದರಿಂದ ತಪ್ಪು ಮಾಡುವವನಿಗೆ ಸತ್ಯ ಮನವರಿಕೆಯಾಗಿ ಹಠ ಸಾಧನೆಯನ್ನು ಬಿಟ್ಟು ಸತ್ಯಕ್ಕೆ ಒಲಿಯ ಬಹುದು. ಒಂದು ವೇಳೆ ಮಾತುಕತೆಯ ಶೈಲಿಯು ಈ ರೀತಿಯಿದ್ದರೆ ವಿರೋಧಿ ಬಣದವನ ಮನಸ್ಸು ಸತ್ಯವನ್ನು ಅಂಗೀಕರಿಸಲು ತಯಾರಾಗಬಹುದು.

ಪ್ರವಾದಿಯು ಪಾಪ ಮುಕ್ತ ಪ್ರಚಾರಕರಾಗಿರುತ್ತಾರೆ. ಅವರ ವಿರೋಧಿಗಳು ಪಥಭ್ರಷ್ಟರಾಗಿರುತ್ತಾರೆ. ಆದರೂ ಪಾಪ ಮುಕ್ತ ಪ್ರವಾದಿಯು ವಿರೋಧಿಗಳಂತೆಯೇ ತನ್ನಿಂದಲೂ ತಪ್ಪು ಸಂಭವಿಸಬಹುದೆಂದು ಹೇಳುವುದು, ತನ್ನ ತಪ್ಪನ್ನು ಒಪ್ಪಿಕೊಳ್ಳುವುದು ಸತ್ಯ ಪ್ರಚಾರದ ಯುಕ್ತಿ ಪೂರ್ಣ ಕಾರ್ಯವಿಧಾನವಾಗಿದೆ. ಇದರಿಂದ ವಿರೋಧಿ ಬಣದ ಮನಸ್ಸಿನಲ್ಲಿ ಪಕ್ಷಪಾತ ಮತ್ತು ಹಠಮಾರಿತನದ ತೀವ್ರತೆಯು ಕುಗ್ಗುವುದು. ಸತ್ಯಪ್ರಚಾರಕನ ಸ್ಥಾನಮಾನ ಹೆಚ್ಚುವುದು. ವಿರೋಧಿಯು ಶಾಂತ ಚಿತ್ತದೊಂದಿಗೆ ಸತ್ಯಪ್ರಚಾರಕನ ಮಾತನ್ನು ಕೇಳಲು ಸಿದ್ಧನಾಗುವನು. ತನ್ನ ಪ್ರವಾದಿಯ ಶಿಕ್ಷಣ ತರಬೇತಿಗಾಗಿ ನಮ್ಮ ಮತ್ತು ನಿಮ್ಮ ಪೈಕಿ ಒಬ್ಬರು ಸನ್ಮಾರ್ಗದಲ್ಲಿದ್ದಾರೆ ಅಥವಾ ಸ್ಪಷ್ಟ ದುರ್ಮಾರ್ಗದಲ್ಲಿದ್ದಾರೆ ಎಂಬ ಅಲ್ಲಾಹನ ಮಾತು ಅದೇ ಯುಕ್ತಿಯ ಕಡೆಗೆ ಬೆಟ್ಟು ಮಾಡುತ್ತದೆ.

ಅಷ್ಟೇ ಅಲ್ಲ, ಅಲ್ಲಾಹನು ಪ್ರವಾದಿ(ಸ) ಮತ್ತು ಅವರ ವಿರೋಧಿಗಳನ್ನು ಒಂದೇ ಮಟ್ಟದಲ್ಲಿರಿಸುವಷ್ಟಕ್ಕೆ ಸಾಕು ಮಾಡಲಿಲ್ಲ. ಅವನು ಪ್ರವಾದಿಗೆ ಹೀಗೆ ಆಜ್ಞಾಪಿಸಿದನು. ನೀವು ಸತ್ಯದಲ್ಲಿದ್ದರೂ ಅಪರಾಧಿ ನಾನೇ ಎಂದು ಹೇಳಿರಿ. ವಿರೋಧಿಗಳ ದ್ವೇಷ ಮತ್ತು ಅಪರಾಧ ಕೃತ್ಯಗಳನ್ನು ಕರ್ಮವೆಂದು ವರ್ಣಿಸಿರಿ. ಇದರಿಂದ ಅವರ ಮನಸ್ಸಿನಿಂದ ಸತ್ಯಧರ್ಮ ಸ್ವೀಕಾರಕ್ಕಿರುವ ತೊಡಕು ದೂರವಾದೀತು. ನೀವು ಈ ರೀತಿ ಘೋಷಿಸಿರಿ- "ನಾವು ಮಾಡುವ ಅಪರಾಧಕ್ಕಾಗಿ ನಿಮ್ಮನ್ನು ಪ್ರಶ್ನಿಸಲಾಗದು ಮತ್ತು ನೀವು ಮಾಡುವ ಕರ್ಮದ ಜವಾಬ್ದಾರಿಯು ನಮ್ಮ ಮೇಲಿಲ್ಲ."

ಈ ಘೋಷಣೆಯ ಹಿಂದೆ ಅಡಗಿದ ಯುಕ್ತಿಯೇನೆಂದರೆ ಸತ್ಯದ ಬಗ್ಗೆ ಚಿಂತನೆ ನಡೆಸಿ

ಅದನ್ನು ಸ್ವೀಕರಿಸುವಲ್ಲಿ ತೊಡಕಾಗಬಹುದಾದ ವೈರ- ದ್ವೇಷ ಮತ್ತು ಕ್ರೋಧಕ್ಕೆ ಅವಕಾಶವೇ ಇಲ್ಲದಂತೆ ಮಾಡುವುದಾಗಿದೆ. ಮನಸ್ಸು ಸತ್ಯವನ್ನು ಸ್ವೀಕರಿಸಲು ಒಲವು ತೋರುವಂತೆ ಮಾಡುವುದಾಗಿದೆ. ಅದರ ಇನ್ನೊಂದು ಯುಕ್ತಿಯೇನೆಂದರೆ ವಿರೋಧಿಗಳಿಗೆ ಒಂದು ದಿನ ಬರಲಿದ್ದು ಅಂದು ಪ್ರತಿಯೋರ್ವ ವ್ಯಕ್ತಿಯ ಒಳ್ಳೆಯ ಅಥವಾ ಕೆಟ್ಟ ಕರ್ಮಗಳ ವಿಚಾರಣೆ ನಡೆಸಲಾಗುವುದೆಂದೂ ಈ ಲೋಕದಲ್ಲಿ ಕೆಟ್ಟ ಕರ್ಮಗಳಿಂದ ಸುರಕ್ಷಿತನಾದವನು ಅಲ್ಲಿ ವಿಜಯ ಹೊಂದುವನೆಂದೂ ಅಪರಾಧದಲ್ಲಿ ನಿರತನಾದವನು ಅಲ್ಲಿ ನಾಶ ಹೊಂದುವನೆಂದೂ ಎಚ್ಚರಿಸುವುದಾಗಿದೆ.

ಇದೇ ವಿಷಯವನ್ನು ಎಚ್ಚರಿಸಲಿಕ್ಕಾಗಿ ಪ್ರವಾದಿ(ಸ) ಅವರಿಗೆ ಹೀಗೆ ಆದೇಶಿಸಲಾಯಿತು- "ನೀವು ಹೀಗೆ ಸಾರಿರಿ, ನಮ್ಮ ಪ್ರಭು ನಮ್ಮೆಲ್ಲರನ್ನೂ ಒಂದುಗೂಡಿಸಿ ನಮ್ಮ ನಡುವೆ ಸರಿಯಾದ ತೀರ್ಪು ನೀಡುವನು. ಅವನು ಎಲ್ಲವನ್ನೂ ಬಲ್ಲಂತಹ ಬಲಶಾಲಿ ತೀರ್ಪುಗಾರನಾಗಿದ್ದಾನೆ." ಈ ಘೋಷಣೆಯ ಯುಕ್ತಿಯೇನೆಂದರೆ ತಪ್ಪುಗಳಿಗೆ ವಿಚಾರಣೆ ನಡೆಯದಿದ್ದರೂ ಕೇವಲ ತಪ್ಪು ಮತ್ತು ಅಪರಾಧಗಳು ಕೂಡಾ ಪ್ರತಿಯೊಬ್ಬನು ವರ್ಜಿಸಬೇಕಾದಂತಹ ವಿಷಯವಾಗಿದೆ ಎಂಬುದನ್ನು ಅವರಿಗೆ ಸ್ಪಷ್ಟ ಪಡಿಸುವುದಾಗಿದೆ. ಆದರೆ ವಸ್ತುತಃ ಅದರ ವಿಚಾರಣೆ ನಡೆಯಲಿರುವುದೆಂಬುದೇ ಸರಿ. ಅದು ಆತ್ಮಸಾಕ್ಷಿಯ ಬೇಡಿಕೆಯೂ ಹೌದು. ವಿಚಾರಣೆ ಮಾಡುವವನೂ ಮನಸ್ಸಿನೊಳಗಿನ ರಹಸ್ಯಗಳನ್ನೂ ಇಂಗಿತವನ್ನೂ ಬಲ್ಲ ಸರ್ವಜ್ಞನಾದ ಪ್ರಭುವಾಗಿದ್ದಾನೆ. (ತಫ್ಸೀರ್ ಕಬೀರ್ ಭಾಗ: 25 ಪುಟ: 287)

ಪ್ರವಾದಿಗಳು ತಮ್ಮ ಜನಾಂಗಗಳೊಂದಿಗೆ ಅತ್ಯುತ್ತಮ ಸಂವಾದ ನಡೆಸಿದ್ದಾರೆ. ಇದರಿಂದ ತಿಳಿದು ಬರುವ ಅಂಶವೇನೆಂದರೆ ಈ ಪ್ರಚಾರಾರ್ಥ ನಡೆಸುವ ಸಂವಾದದಲ್ಲಿ ಪ್ರವಾದಿಗಳು ಅತ್ಯಂತ ಮೃದುವಾದ ಹಾಗೂ ಮನಸ್ಸಿಗೆ ನಾಟುವಂತಹ ಪದಗಳನ್ನೂ ಮಾತುಗಳನ್ನೂ ಬಳಸಿದ್ದಾರೆ.

ಅವರ ವಿರೋಧಿಗಳು ಅವರನ್ನು ವಿರೋಧಿಸಿದಾಗ, ತರತರವಾಗಿ ಪೀಡಿಸಿದಾಗ ಅವರನ್ನೂ ಅವರ ಸಂದೇಶವನ್ನೂ ಸುಳ್ಳಾಗಿಸಿದಾಗ, ಇಂತಹ ಯಾವ ಸಂದರ್ಭದಲ್ಲೂ ಪ್ರವಾದಿಗಳು ಅವರ ಮೇಲೆ ಕೋಪಗೊಳ್ಳಲಿಲ್ಲ. ಅವರನ್ನು ಪಥಭ್ರಷ್ಟರೆಂದೋ ನೀಚರೆಂದೋ ಅಜ್ಞಾನಿಗಳೆಂದೋ ನರಕವಾಸಿಗಳೆಂದೋ ಹೇಳಲಿಲ್ಲ. ಅವರಿಗಿಂತ ನಾವು ಮೇಲಾದವರೆಂದು ತೋರ್ಪಡಿಸಲಿಲ್ಲ. ಬದಲಾಗಿ ಅವರೊಂದಿಗೆ ನ್ಯಾಯದಿಂದ ವರ್ತಿಸುತ್ತಾ ದೈನ್ಯತೆಯೊಂದಿಗೆ ಹೀಗೆ ಹೇಳಿದರು- ಸತ್ಯವನ್ನು ತಿಳಿದೂ ನೀವು ನಮ್ಮನ್ನು ಸುಳ್ಳಾಗಿಸಿದ್ದೀರಿ. ಇನ್ನು ನಮಗೆ ನಮ್ಮ ಕರ್ಮ, ಅದಕ್ಕೆ ನಾವೇ ಜವಾಬ್ದಾರರು ಮತ್ತು ನಿಮಗೆ ನಿಮ್ಮ ಕರ್ಮ, ಅದಕ್ಕೆ ನೀವೇ ಹೊಣೆಗಾರರು. ಆದುದರಿಂದ ನೀವೂ ನಿರೀಕ್ಷಿಸಿರಿ. ನಾವೂ ನಿರೀಕ್ಷಿಸುತ್ತೇವೆ. ಯಾರ ಕರ್ಮ ಉತ್ತಮ ಫಲಿತಾಂಶ ನೀಡುವುದು ಮತ್ತು ಯಾರ ಕರ್ಮ ಅವರನ್ನು ವಿನಾಶಕ್ಕೆ ಒಡ್ಡುವುದು ಎಂದು ನೋಡೋಣ. ಈ ವಿಷಯವನ್ನು ಪ್ರವಾದಿ(ಸ) ಅವರಿಗೆ ಸಾಂತ್ವನ ಹಾಗೂ ಮನಶ್ಶಾಂತಿಗಾಗಿ ಹಾಗೂ ಸತ್ಯವಿಶ್ವಾಸಿಗಳಿಗೆ ಬೋಧನೆ, ಜಾಗೃತಿ ಮತ್ತು ಎಚ್ಚರಿಕೆಯಾಗಿ ಹೀಗೆ ಹೇಳಲಾಗಿದೆ-

"ಓ ಪೈಗಂಬರರೇ! ನಿಮಗೆ ಹೇಳಲಾಗುವ ಸಂದೇಶವಾಹಕರ ವೃತ್ತಾಂತಗಳಿವು. ನಾವು ಇವುಗಳ ಮೂಲಕ ನಿಮ್ಮ ಮನಸ್ಸನ್ನು ಬಲಪಡಿಸುತ್ತೇವೆ. ಇವುಗಳಿಂದ ನಿಮಗೆ ಪರಮಾರ್ಥ ಜ್ಞಾನ ಲಭಿಸಿತು. ಸತ್ಯವಿಶ್ವಾಸಿಗಳಿಗೆ ಉಪದೇಶ ಮತ್ತು ಜಾಗೃತಿ ಲಭಿಸಿದುವು. ಸತ್ಯ ವಿಶ್ವಾಸವನ್ನು ಸ್ವೀಕರಿಸದವರೊಡನೆ ಹೇಳಿರಿ. ನೀವು ನಿಮ್ಮ ಕ್ರಮದಂತೆ ಕಾರ್ಯವೆಸಗಿರಿ ಮತ್ತು ನಾವು ನಮ್ಮ ಕ್ರಮದಂತೆ ಕಾರ್ಯವೆಸಗುತ್ತೇವೆ." (11:120-21) ಇದು ಪ್ರವಾದಿಗಳನ್ನೂ ಅವರ ಸಂದೇಶವನ್ನೂ ಸುಳ್ಳಾಗಿಸಿದ್ದ ಸತ್ಯನಿಷೇಧಿಗಳೊಂದಿಗೆ ಪ್ರವಾದಿ ಗಳು ಮಾಡಿದ ಉತ್ತಮ ಸಂವಾದದ ಉತ್ಕೃಷ್ಟ ಮಾದರಿಯಾಗಿದೆ. ಆದರೆ ಅದಕ್ಕೆ ವ್ಯತಿರಿಕ್ತವಾಗಿ ಒಬ್ಬನೇ ಅಲ್ಲಾಹ್, ಒಂದೇ ಕುರ್‌ಆನ್ ಮತ್ತು ಒಬ್ಬನೇ ಪ್ರವಾದಿಯನ್ನು ನಂಬುವ ಸಮುದಾಯದ ಕೆಲವರು ಇಂದು ಆಂಶಿಕ ಮತ್ತು ಸಂಶೋಧನಾತ್ಮಕ ವಿಷಯಗಳಲ್ಲಿ ನಡೆಸುವ ಚರ್ಚೆಯನ್ನು ನೋಡುವಾಗ ಇದು ಜ್ಞಾನಕ್ಕೆ ಸಂಬಂಧಿಸಿದ ಚರ್ಚೆಯಾಗಿರದೆ ರಣ ರಂಗದ ಹೋರಾಟವೋ ಎಂಬಂತೆ ತೋರುತ್ತದೆ. ಅವರ ಕೈಯಲ್ಲಿರುವುದು ಲೇಖನಿಯಾಗಿರದೆ ಖಡ್ಗವಾಗಿದ್ದು ಅದರಿಂದ ಕೆಂಪು ರಕ್ತ ತೊಟ್ಟಿಕ್ಕುತ್ತಿರುವಂತೆ ಭಾಸವಾಗುತ್ತದೆ.

ಕೆಲವು ಸೂಕ್ತಪದಗಳನ್ನೂ ವಾಕ್ಯಗಳನ್ನೂ ಜಾಗರೂಕತೆಯೊಂದಿಗೆ ಮೃದು ಶೈಲಿಯಲ್ಲಿ ಬಳಸಿದರೆ ಅದರಿಂದ ಅಡೆತಡೆಗಳನ್ನು ದೂರಗೊಳಿಸಿ ಸಮಸ್ಯೆಗಳನ್ನು ಬಗೆಹರಿಸಬಹುದು. ಆದುದರಿಂದ ಇಸ್ಲಾಮಿನ ವಾಹಕರು ಮತ್ತು ಕಾರ್ಯಕರ್ತರು ಚರ್ಚೆ-ಸಂವಾದಗಳ ವೇಳೆ ಜನರನ್ನು ಹತ್ತಿರಗೊಳಿಸುವ ಬದಲು ದೂರಗೊಳಿಸುವಂತಹ ಮತ್ತು ಐಕ್ಯ ಸಾಧಿಸುವ ಬದಲು ಒಡಕುಂಟು ಮಾಡುವಂತಹ ಪದಗಳನ್ನೂ ವಾಕ್ಯಗಳನ್ನೂ ಉಪಯೋಗಿಸಬಾರದು.

ಈ ಕೆಳಗಿನ ಪ್ರವಾದಿವಚನವು ಅದರ ಕಡೆಗೇ ಸೂಚನೆ ನೀಡುತ್ತದೆ-

"ಸೌಲಭ್ಯ ಒದಗಿಸಿರಿ. ಸಂಕಷ್ಟದಲ್ಲಿ ಸಿಲುಕಿಸಬೇಡಿರಿ. ಶುಭವಾರ್ತೆ ನೀಡಿರಿ. ದ್ವೇಷಿಸುವಂತೆ ಮಾಡಬೇಡಿರಿ." (ಮುತ್ತಫಕ್ ಅಲೈಹಿ)

ಈ ಎಲ್ಲ ಚರ್ಚೆಯ ಉದ್ದೇಶ ಮತ್ತು ತಿರುಳು ಏನಾಗಿತ್ತೆಂದರೆ ಇಡೀ ಜಗತ್ತಿನಲ್ಲಿ ಇಸ್ಲಾಮಿನ ಸಂದೇಶ ಪ್ರಚಾರ ಮತ್ತು ಸತ್ಯಸಾಕ್ಷ್ಯದ ಉನ್ನತ ಉದ್ದೇಶ ಸಾಧನೆಯ ಮಾರ್ಗದಲ್ಲಿ ಇಂದು ಮುಸ್ಲಿಮ್ ಸಮುದಾಯವು ಎದುರಿಸುತ್ತಿರುವ ಆಂತರಿಕ ಮತ್ತು ಬಾಹ್ಯ ಸಮಸ್ಯೆಗಳು ಹಾಗೂ ಪಂಥಾಹ್ವಾನಗಳನ್ನು ಎದುರಿಸಲು ಮತ್ತು ಸಮುದಾಯವನ್ನು ರಕ್ಷಿಸಲು ಮುಸ್ಲಿಮ್ ಸಮುದಾಯ ಒಂದಾಗಿ ಭದ್ರಗೋಡೆಯಂತಾಗಬೇಕು. ಆಂಶಿಕ ಮತ್ತು ಸಂಶೋಧನಾತ್ಮಕ ವಿಷಯಗಳಲ್ಲಿರುವ ಭಿನ್ನತೆಗಳು ಏಕ ಸಮುದಾಯವಾಗುವ ಹಾಗೂ ಭದ್ರ ಗೋಡೆಯಂತಾಗುವ ಸುಂದರ ಕನಸಿಗೆ ಅಡ್ಡಿಯಾಗಬಾರದು. ಈ ಬಗ್ಗೆ ಇಡೀ ಸಮುದಾಯ ಒಮ್ಮತ ಹೊಂದಿದೆ.

ಆದರೆ ಇಂದು ಈ ಉನ್ನತ ಧ್ಯೇಯವನ್ನು ಸಾಧಿಸಬೇಕಾದರೆ ಸಮುದಾಯದ ಬಹುಸಂಖ್ಯೆಯ ಜನರು ಐಕ್ಯಕ್ಕೆ ಹೇತುವಾಗಿರುವಂತಹ ನೈತಿಕ ತತ್ವಸಿದ್ಧಾಂತಗಳನ್ನು ಚೆನ್ನಾಗಿ ಅರಿತು ಅದರಂತೆ ಪ್ರಾಮಾಣಿಕವಾಗಿ ತಮ್ಮ ಕರ್ಮವನ್ನು ರೂಪಿಸ ಬೇಕಾದುದು ಅಗತ್ಯ.

ಆದುದರಿಂದ ಅಲ್ಲಾಹನನ್ನು ತಮ್ಮ ಪ್ರಭುವೆಂದೂ ಇಸ್ಲಾಮನ್ನು ಸತ್ಯಧರ್ಮವೆಂದೂ

ಮುಹಮ್ಮದ್(ಸ) ಅವರನ್ನು ಅಲ್ಲಾಹನ ಸಂದೇಶವಾಹಕರೆಂದೂ ಕುರ್‌ಆನನ್ನು ತಮ್ಮ ಸಂವಿಧಾನವೆಂದೂ ಪ್ರಾಮಾಣಿಕವಾಗಿ ಅಂಗೀಕರಿಸಿರುವ ಸಮುದಾಯದ ಪ್ರತಿಯೊಬ್ಬ ಪ್ರೌಢನೂ ಆಂಶಿಕ ಮತ್ತು ಸಂಶೋಧನಾತ್ಮಕ ಭಿನ್ನತೆಗಳನ್ನು ಶರೀಅತ್‌ನ ಮೇರೆಯೊಳಗಿರಿಸಿ ಏಕ ಸಮುದಾಯವಾಗಿ ಮಾರ್ಪಡಬೇಕಾದುದು ಅತ್ಯಗತ್ಯವಾಗಿದೆ. ಇದು ಅವರ ಕಡ್ಡಾಯ ಕರ್ತವ್ಯವೂ ಹೌದು.

ಪತನೋನ್ಮುಖವಾಗಿರುವ ಈ ಕಾಲದಲ್ಲಿ ಏಕ ಸಮುದಾಯ ಹಾಗೂ ಭದ್ರ ಗೋಡೆಯಾಗಬೇಕೆಂಬ ಈ ಪ್ರಾಮಾಣಿಕ ಕರೆಯನ್ನು ಕಡೆಗಣಿಸುವುದು, ಅದರ ಬಗ್ಗೆ ಅನಾಸ್ಥೆ ತೋರುವುದು ಅಕ್ಷಮ್ಯವಾಗಿದೆ. ಇದು ಇಹಲೋಕದಲ್ಲೂ ಪರಲೋಕದಲ್ಲೂ ಅಪಮಾನಕ್ಕೀಡು ಮಾಡಬಲ್ಲುದು.